## ಕರ್ನಾಟಕದಲ್ಲೇ ಮೊಟ್ಟಮೊದಲ ಬಾರಿಗೆ UPSC/KAS ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ತಯಾರಿನಡೆಸಲು ರಚಿಸಿರುವಂತಹ ವೆಬ್ ಸೈಟ್

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

# UPSC/KAS ಪ್ರಚಲಿತ ವಿದ್ಯಮಾನಗಳ ಮಾಸಿಕ ಕೈಪಿಡಿ- ಸೆಪ್ಟೆಂಬರ್ -2017

## ನಮ್ಮ ಐಎಎಸ್ ಅಕಾಡೆಮಿ ಕೋರ್ಸ್ ಗಳು

- NIALP- ಕೋರ್ಸ್- ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಯ ಸಾಮಾನ್ಯ ಅಧ್ಯಯನ ಪತ್ರಿಕೆಯನ್ನು ಕನ್ನಡ ಮಾಧ್ಯಮದಲ್ಲಿ ತಯಾರಿನಡೆಸಲು
- ಐಚ್ಛಿಕ ಕನ್ನಡ ಸಾಹಿತ್ಯ
- KPSC-FDA EXAM PREPRATION

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

**http://www.nammaiasacademy.com**

**DOWNLOAD OUR ANDROID MOBILE APP**

http://www.nammaiasacademy.com/download-app

**2nd SEPTEMBER**

## 1.ಅಂತಾರಾಜ್ಯ ನದಿಗಳ ಜೋಡಣೆಗೆ ಮುಹೂರ್ತ

### ಪ್ರಮುಖ ಸುದ್ದಿ

- ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಕನಸಿನ ಕೂಸಾದ ಅಂತಾರಾಜ್ಯ ನದಿಗಳ ಜೋಡಣೆಗೆ ಕೊನೆಗೂ ಮುಹೂರ್ತ ಕೂಡಿ ಬಂದಿದೆ. ನೆರೆ ಕಾಡುವ ರಾಜ್ಯಗಳಲ್ಲಿ ಹರಿದು ಸಮುದ್ರ ಸೇರುವ ಹೆಚ್ಚುವರಿ ನೀರನ್ನು ಬರಪೀಡಿತ ಪ್ರದೇಶಗಳ ಜನ, ಜಾನುವಾರುಗಳ ದಾಹ ತಣಿಸುವ ಜತೆಗೆ ಕೃಷಿಗೆ ಬಳಸಿಕೊಳ್ಳುವ ಉದ್ದೇಶದಿಂದ ಕೇಂದ್ರ ಸರ್ಕಾರ ರೂಪಿಸಿರುವ ಈ ಮಹತ್ವಾಕಾಂಕ್ಷಿ ಯೋಜನೆಯ ಮೊದಲ ಹಂತದ ಕಾರ್ಯಕ್ಕೆ ಒಂದೆರಡು ವಾರದಲ್ಲಿ ಸಂಪುಟದ ಅನುಮೋದನೆ ನೀಡಲಿದೆ.

### ಏನಿದು ಅಟಲ್ ಯೋಜನೆ..?

- ನೆರೆಹಾವಳಿಗೆ ಕಾರಣವಾಗುವ ನದಿಗಳನ್ನು ಮಧ್ಯ ಭಾರತ, ಉತ್ತರ ಭಾರತ, ಪಶ್ಚಿಮ ಮತ್ತು ದಕ್ಷಿಣ ಭಾರತಗಳ ನದಿಗಳೊಂದಿಗೆ ಜೋಡಿಸುವ ಈ ಯೋಜನೆಗೆ 2002ರಲ್ಲಿ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಿಂದ ಅನುಮೋದನೆ ಸಿಕ್ಕಿತ್ತು
- ಆದರೆ ವಿವಿಧ ರಾಜ್ಯಗಳ ನಡುವೆ ನದಿ ನೀರು ಹಂಚಿಕೆ ವಿವಾದ ಸೃಷ್ಟಿಯಾಗುವ ಆತಂಕ ಹಾಗೂ ಕೆಂಪುಪಟ್ಟಿ ಬಾಧೆಯಿಂದಾಗಿ ಯೋಜನೆ ನನೆಗುದಿಗೆ ಬಿದ್ದಿತ್ತು.  ಮೊದಲ ಹಂತದಲ್ಲಿ ಯಶಸ್ಸು ದೊರೆತಲ್ಲಿ ದೇಶಾದ್ಯಂತ ಯೋಜನೆ ಅನುಷ್ಠಾನಕ್ಕೆ ವೇದಿಕೆ ನಿರ್ಮಾಣವಾಗುತ್ತದೆ ಎಂದು ಸರ್ಕಾರ ವಿಶ್ವಾಸ ವ್ಯಕ್ತಪಡಿಸಿದೆ.

### ಯಾವ್ಯಾವ ನದಿ ಜೋಡಣೆ :

- ಪಶ್ಚಿಮ ಭಾರತದ ನರ್ಮದಾ ನದಿಗೆ ಪಾರ್-ತಾಪಿ ನದಿಗಳನ್ನು ಜೋಡಿಸುವುದಕ್ಕೂ ನಿರ್ಧರಿಸಲಾಗಿದೆ. ಇದರಂತೆ, ದಮನ್ ಗಂಗಾ ಮತ್ತು ಪಿಂಜಾಲ್ ನದಿಗಳು ಜೋಡಣೆಗೊಳ್ಳಲಿವೆ. ಇವೆಲ್ಲವೂ ಗುಜರಾತ್ ಮತ್ತು ಮಹಾರಾಷ್ಟ್ರದ ಯೋಜನೆಗಳಾಗಿವೆ.
- ಇದಾದ ಬಳಿಕ ಗಂಗಾ, ಗೋದಾವರಿ ಮತ್ತು ಮಹಾನದಿಗೆ ಅಲ್ಲಲ್ಲಿ ಅಣೆಕಟ್ಟೆಗಳನ್ನು ನಿರ್ಮಿಸಿ, ಕಾಲುವೆಗಳ ಜಾಲದ ಮೂಲಕ ಇನ್ನಿತರ ನದಿಗಳಿಗೆ ನೀರು ಹರಿಸಿ, ನೆರೆಹಾವಳಿ ಮತ್ತು ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಕಾರ್ಯಯೋಜನೆ ರೂಪಿಸಲಾಗಿದೆ.

### ಆರಂಭಕ್ಕೂ ಮೊದಲೇ ವಿರೋಧ ..??

- ಕರ್ಣಾವತಿ ನದಿ ನಿತ್ಯಹರಿದ್ವರ್ಣ ಪನ್ನಾ ಸಂರಕ್ಷಿತ ಅರಣ್ಯ ಪ್ರದೇಶ ಹಾಗೂ ಹುಲಿ ಸಂರಕ್ಷಿತ ಪ್ರದೇಶವನ್ನು ಹಾದು 425 ಕಿ.ಮೀ. ದೂರದವರೆಗೆ ಹರಿಯುತ್ತದೆ. ದೌಧನ್ ಬಳಿಯ ಗಾಂಗಾಂವ್ ಎಂಬಲ್ಲಿ ಬ್ರಿಟಿಷರು 1915ರಲ್ಲಿ ನಿರ್ಮಿಸಿರುವ ಅಣೆಕಟ್ಟೆ ಇದೆ.
- ಇದಕ್ಕೆ ಅನತಿ ದೂರದಲ್ಲೇ ವಿಶ್ವ ಸಂರಕ್ಷಿತ ಸ್ಮಾರಕ ಎಂದು ಯುನೆಸ್ಕೋ ಘೋಷಿಸಿರುವ ಖಜುರಾಹೊ ದೇಗುಲವಿದೆ. ಇಲ್ಲಿಂದ ಸ್ವಲ್ಪ ದೂರದಲ್ಲಿ, ಅರಣ್ಯ ಪ್ರದೇಶದೊಳಗೆ 250 ಅಡಿ ಎತ್ತರ, 2 ಕಿ.ಮೀ. ಉದ್ದದ ಅಣೆಕಟ್ಟೆ ನಿರ್ಮಿಸಲು ಉದ್ದೇಶಿಸಲಾಗಿದೆ.
- ಅಣೆಕಟ್ಟೆ ನಿರ್ವಣವಾದರೆ, 9 ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶ ಹಿನ್ನೀರಿನಲ್ಲಿ ಮುಳುಗಡೆ ಯಾಗಲಿದೆ. 10ಕ್ಕೂ ಹೆಚ್ಚು ಕುಗ್ರಾಮದಲ್ಲಿರುವ 2 ಸಾವಿರಕ್ಕೂ ಹೆಚ್ಚು ಕುಟುಂಬಗಳನ್ನು ಬೇರೆಡೆಗೆ ಸ್ಥಳಾಂತರಿಸಬೇಕಾಗುತ್ತದೆ ಎಂಬ ಆಕ್ಷೇಪ ವ್ಯಕ್ತವಾಗಿದೆ.

### ಪರಿಸರವಾದಿಗಳು ಹೇಳೋದೇನು?

- ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಣೆಕಟ್ಟೆ ನಿರ್ಮಿಸುವು ದರಿಂದ ಪರಿಸರ ಮತ್ತು ವನ್ಯಜೀವಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ ಎಂದು ಪರಿಸರವಾದಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.
- ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಅಣೆಕಟ್ಟೆ ನಿರ್ಮಿಸುವುದು, ನೈಸರ್ಗಿಕ ವಿಪತ್ತಿಗೆ ಆಹ್ವಾನ ನೀಡಿದಂತೆ. ಇದರಿಂದ ಅರಣ್ಯದಲ್ಲಿ ಪ್ರವಾಹ ಉಕ್ಕಿ, ಬಯಲುಸೀಮೆಯಲ್ಲಿ ಬರ ಉಂಟಾಗಲಿದೆ ಎಂದು ಪನ್ನಾದ ರಾಜವಂಶಸ್ಥ ಶ್ಯಾಮೇಂದ್ರ ಸಿಂಗ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.
- ಆದರೆ, ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ 30-35 ಹುಲಿಗಳು ಮತ್ತು 500ಕ್ಕೂ ಹೆಚ್ಚು ರಣಹದ್ದುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗುವುದೆಂದು ಸರ್ಕಾರ ಸ್ಪಷ್ಟಪಡಿಸಿದೆ.

### ಇದರ ಮುಂದಿರುವ ಸವಾಲುಗಳು?

- ನದಿ ವಿಚಾರ ಕೋಟ್ಯಂತರ ಜೀವಗಳ ಜೀವನದ ಅಸ್ತಿತ್ವದ ಪ್ರಶ್ನೆಯಾಗಿರುವುದರಿಂದ ಯೋಜನೆ ಒಂದಿಂಚೂ ವಿಫಲವಾಗದಂತೆ ಮುಂಜಾಗ್ರತೆ ವಹಿಸಬೇಕು

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಯೋಜನೆ ಜಾರಿಗೆ ಮುನ್ನ ರಾಜ್ಯಗಳ ಸಂಪೂರ್ಣ ಸಹಕಾರ ಪಡೆಯಬೇಕು
- ಸರ್ಕಾರದ ಜತೆಗೆ ರೈತರು, ಜನಸಾಮಾನ್ಯರಿಗೆ ಯೋಜನೆಯ ಅರಿವು ಮೂಡಿಸಬೇಕು
- ಯಾವ್ಯಾವ ರಾಜ್ಯಗಳಿಗೆ ಎಷ್ಟು ನೀರು ಹಂಚಿಕೆಯಾಗುತ್ತದೆ ಎಂಬ ವಿಷಯವನ್ನು ಮೊದಲೇ ಇತ್ಯರ್ಥಪಡಿಸಿಕೊಳ್ಳಬೇಕು
- ನ್ಯಾಯಾಲಯದ ಮೆಟ್ಟಿಲೇರಿರುವ ಜಲವಿವಾದಗಳನ್ನು ಮೊದಲು ಇತ್ಯರ್ಥಪಡಿಸಿಕೊಳ್ಳಬೇಕು

- ಯೋಜನೆಯ ಮೊದಲ ಹಂತದಲ್ಲಿ ಉತ್ತರ- ಮಧ್ಯ ಭಾರತದಲ್ಲಿ ಹರಿಯುವ ಕರ್ಣಾವತಿ(ಕೆನ್)- ಬೆಟ್ವಾ ನದಿಗಳ ಜೋಡಣೆಗೆ ಚಾಲನೆ ಸಿಗಲಿದೆ. ಕರ್ಣಾವತಿ ನದಿಗೆ ಅಡ್ಡಲಾಗಿ 250 ಅಡಿ ಎತ್ತರ ಮತ್ತು 2 ಕಿಮೀ ಉದ್ದದ ಅಣೆಕಟ್ಟೆ ನಿರ್ಮಿಸಲು ಉದ್ದೇಶಿಸಲಾಗಿದೆ.
- ಜಲವಿದ್ಯುತ್ ಉತ್ಪಾದನಾ ಘಟಕದ ಮೂಲಕ ಸಹಸ್ರಾರು ಮೆಗಾವಾಟ್ ವಿದ್ಯುತ್ ಉತ್ಪಾದಿಸಿ, ವಿದ್ಯುತ್ ಸಂಪರ್ಕವೇ ಇಲ್ಲದಿರುವ ಗ್ರಾಮಗಳಿಗೆ ವಿದ್ಯುತ್ ಪೂರೈಸಲು ಉದ್ದೇಶಿಸಲಾಗಿದೆ.

ಇದರಿಂದ ಆಗುವ ಉಪಯೋಗಗಳೇನು..??

- ಪ್ರತಿ ವರ್ಷ ಬರದ ಬೇಗೆಯಲ್ಲಿ ಬೇಯುವ ರಾಜ್ಯಗಳಿಗೆ ಸಹಕಾರಿ
- ಮಳೆಯಾಶ್ರಿತ ಪ್ರದೇಶಗಳಲ್ಲಿ ಕೃಷಿ ಕ್ರಾಂತಿ ಸಾಧಿಸಲು ಉಪಯುಕ್ತ
- ವ್ಯರ್ಥವಾಗಿ ಸಮುದ್ರ ಸೇರುವ ನೀರನ್ನು ಕೃಷಿ, ಜನೋಪಯೋಗಿ ಬಳಕೆ ಜತೆಗೆ ವಿದ್ಯುತ್ ಉತ್ಪಾದನೆಗೂ ಬಳಸಿಕೊಳ್ಳಬಹುದು

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಕರ್ನಾಟಕ ರಾಜ್ಯಕ್ಕೇನು ಪರಿಣಾಮ?**

- ರಾಜ್ಯದ ನೈಜ ಸ್ಥಿತಿಯನ್ನು ಕೇಂದ್ರಕ್ಕೆ ಮನವರಿಕೆ ಮಾಡಿಕೊಟ್ಟು ಹೆಚ್ಚುವರಿಯಾಗಿ ಸಮುದ್ರ ಸೇರುತ್ತಿರುವ ತಮಿಳುನಾಡಿನ ಪಾಲಿನ ಕಾವೇರಿ ನೀರಿನ ಉಪಯೋಗ ಪಡೆಯಬಹುದು
- ಮಹದಾಯಿ ವಿಚಾರದಲ್ಲೂ ಇದೇ ವಾದ ಮುಂದಿಡಬಹುದು.
- ಸಮುದ್ರ ಸೇರುತ್ತಿರುವ ಈ ನದಿಯ ಹೆಚ್ಚುವರಿ ನೀರನ್ನು ಪಡೆಯುವ ಆಶಯ ಈಡೇರಬಹುದು.

- ಕಾವೇರಿ ವಿಚಾರ ಸದ್ಯ ಸುಪ್ರೀಂಕೋರ್ಟ್‌ನಲ್ಲಿರುವುದರಿಂದ ಈ ನದಿಯನ್ನು ಯೋಜನೆ ವ್ಯಾಪ್ತಿಗೆ ತರುವುದು ವಿಳಂಬವಾಗಬಹುದು.

## 2.ಹಾರ್ಟಿನೆಟ್

### ಪ್ರಮುಖ ಸುದ್ದಿ

- ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳು ರಫ್ತು ಅಭಿವೃದ್ಧಿ ಪ್ರಾಧಿಕಾರ(APEDA) ಹಾರ್ಟಿನೆಟ್ ಎಂಬ ಒಂದು ಮೊಬೈಲ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಿದೆ.ರೈತರಿಗೆ ಕೃಷಿ ಗೆ ಸಂಬಂದಿಸಿದ ಕಾರ್ಯಗಳಿಗಳನ್ನು ನೋಂದಣಿಗೆ ಅನುಕೂಲವಾಗುವಂತೆ ಆನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಲು ರಚಿಸಿದ್ದಾರೆ .
- ಅರ್ಜಿಗಳ ಸ್ಥಿತಿಯನ್ನು ರಾಜ್ಯ ಸರ್ಕಾರ ಮತ್ತು ಅನುಮೋದನೆ ಪಡೆದಿರುವ ಅಧಿಕೃತ ಲ್ಯಾಬೋರೇಟರೀಸ್ ಗಳು ಟ್ರ್ಯಾಕ್ ಮಾಡಲು ಅನುವು ಮಾಡಿಕೊಡುತ್ತದೆ.

### ಹಾರ್ಟಿನೆಟ್ ಬಗ್ಗೆ:

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಹಾರ್ಡಿನೆಟ್ ಎನ್ನುವುದು ಭಾರತದಿಂದ ಯುರೋಪಿಯನ್ ಒಕ್ಕೂಟಕ್ಕೆ ದ್ರಾಕ್ಷಿ,,ದಾಳಿಂಬೆ ಮತ್ತು ತರಕಾರಿಗಳನ್ನು ಗುಣಮಟ್ಟಕ್ಕೆ ಅನುಸಾರವಾಗಿ ರಫ್ತು ಮಾಡಲು ಕೃಷಿಗೆ ಸಂಬಂದಿಸಿದ ಮಾಹಿತಿಯನ್ನು ನೋಂದಣಿಮಾಡಲು , ಅದರ ಪರೀಕ್ಷೆ ಮತ್ತು ಪ್ರಮಾಣೀಕರಣಕ್ಕೆ ಅನುಕೂಲವಾಗುವಂತೆ ಪಾಲುದಾರರಿಗೆ ಇಂಟರ್ನೆಟ್ ಆಧಾರಿತ ಎಲೆಕ್ಟ್ರಾನಿಕ್ ಸೇವೆಗಳನ್ನು ಒದಗಿಸುವುದಕ್ಕಾಗಿ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳು ರಫ್ತು ಅಭಿವೃದ್ಧಿ ಪ್ರಾಧಿಕಾರ (ಎಪಿಇಡಿಎ )ಅಭಿವೃದ್ಧಿಪಡಿಸಿದ ಸಂಯೋಜಿತ ಪತ್ತೆಹಚ್ಚುವಿಕೆ ವ್ಯವಸ್ಥೆಯಾಗಿದೆ.
- ರೈತರ ಕೃಷಿ ಸ್ಥಳ, ಉತ್ಪನ್ನಗಳು ಮತ್ತು ತಪಾಸಣೆ ದಿನಾಂಕದಂತಹ ಪರಿಶೀಲನೆಗಳ ವಿವರಗಳನ್ನು, ಹಾಗು ತಮ್ಮ ಕ್ಷೇತ್ರದಿಂದ ನೇರವಾಗಿ ಪರಿಶೀಲಿಸುವ ನೈಜ ಸಮಯದ

ವಿವರಗಳನ್ನು ಸೆರೆಹಿಡಿಯಲು ಈ ಹೊಸ ಮೊಬೈಲ್ ಅಪ್ಲಿಕೇಶನ್ ರಾಜ್ಯ ತೋಟಗಾರಿಕೆ / ವ್ಯವಸಾಯ ಇಲಾಖೆಗೆ ಸಹಾಯ ಮಾಡುತ್ತದೆ.

**ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳು ರಫ್ತು ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ**(APEDA)

- ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳು ರಫ್ತು ಅಭಿವೃದ್ಧಿ ಪ್ರಾಧಿಕಾರ (ಎಪಿಇಡಿಎ) ವನ್ನು 1985 ರ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಕಾಯಿದೆ ಅಡಿಯಲ್ಲಿ ಭಾರತ ಸರ್ಕಾರವು ಸ್ಥಾಪಿಸಿತು.
- ಈ ಪ್ರಾಧಿಕಾರವನ್ನು ಸಂಸ್ಕರಿಸಿದ ಆಹಾರ ರಫ್ತು ಪ್ರಚಾರ ಮಂಡಳಿಯ (PFEPC) ಬದಲು ರಚಿಸಲಾಗಿದೆ.

**ಕೆಳಗಿನ ನಿಗದಿತ ಉತ್ಪನ್ನಗಳ ರಫ್ತು ಮತ್ತು ಅಭಿವೃದ್ಧಿಯ ಜವಾಬ್ದಾರಿಯನ್ನು APEDA ನಿರ್ವಹಿಸುತ್ತದೆ :**

- ಹಣ್ಣುಗಳು, ತರಕಾರಿಗಳು ಮತ್ತು ಅವುಗಳ ಉತ್ಪನ್ನಗಳು.
- ಮಾಂಸ ಮತ್ತು ಮಾಂಸ ಉತ್ಪನ್ನಗಳು.
- ಕೋಳಿ ಮತ್ತು ಕೋಳಿಯ ಉತ್ಪನ್ನಗಳು.
- ಹಾಲಿನ ಉತ್ಪನ್ನಗಳು.
- ಮಿಠಾಯಿ, ಬಿಸ್ಕಟ್ಗಳು ಮತ್ತು ಬೇಕರಿ ಉತ್ಪನ್ನಗಳು.
- ಬೆಲ್ಲ ಮತ್ತು ಸಕ್ಕರೆ ಉತ್ಪನ್ನಗಳು.
- ಕೊಕ್ ಮತ್ತು ಅದರ ಉತ್ಪನ್ನಗಳು, ಎಲ್ಲಾ ರೀತಿಯ ಚಾಕೊಲೇಟುಗಳು.

**ಆಡಳಿತದ ಬಗ್ಗೆ :**

- ಅಧ್ಯಕ್ಷರು - ಕೇಂದ್ರ ಸರ್ಕಾರದಿಂದ ನೇಮಕಗೊಳ್ಳುತ್ತಾರೆ .

- ನಿರ್ದೇಶಕ - APEDA ಯಿಂದ ನೇಮಕವಾಗುತ್ತಾರೆ .
- ಕಾರ್ಯದರ್ಶಿ - ಕೇಂದ್ರ ಸರ್ಕಾರದಿಂದ ನೇಮಕಗೊಳ್ಳುತ್ತಾರೆ .
- ಇತರ ಅಧಿಕಾರಿಗಳು ಮತ್ತು ಸಿಬ್ಬಂದಿ - ಪ್ರಾಧಿಕಾರ ದಿಂದ ನೇಮಕಗೊಳ್ಳುತ್ತಾರೆ .

## 3. ನ್ಯಾಯಾಂಗ ಕಾರ್ಯಕ್ಷಮತೆ ಸೂಚ್ಯಂಕ ಸ್ಥಾಪನೆಗೆ ಶಿಫಾರಸು.

**ಪ್ರಮುಖ ಸುದ್ದಿ**

- ದೇಶದ ಕೆಳಹಂತದ ನ್ಯಾಯಾಲಯಗಳಲ್ಲಿ 2-7 ಕೋಟಿ ಪ್ರಕರಣಗಳು ಬಾಕಿ ಉಳಿದಿರುವ ಹಿನ್ನೆಲೆಯಲ್ಲಿ ಬೃಹತ್ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವಂತೆ ಚಿಂತಕರು ಚಾವಡಿ ಎಂದೇ ಪ್ರಸಿದ್ಧವಾದ ನೀತಿ ಆಯೋಗ ಶಿಪಾರಸು ಮಾಡಿದೆ .
- ಈ ನ್ಯಾಯಾಲಯಗಳಲ್ಲಿ ಸುಮಾರು 5 ಸಾವಿರ ನ್ಯಾಯಧೀಶರ ಹುದ್ದೆಗಳು ಖಾಲಿ ಇರುವುದರಿಂದ ಸುಧಾರಣಾ ಕ್ರಮ ಕೈಗೊಳ್ಳುವುದು ಅಗತ್ಯವೆಂದು ಆಯೋಗ ಪ್ರತಿಪಾದಿಸಿದೆ. ಮೂರು ವರ್ಷಗಳ ಕಾರ್ಯನೀತಿಯ ಭಾಗವಾಗಿ ನ್ಯಾಯಾಂಗ ಕಾರ್ಯಕ್ಷಮತೆ ಸೂಚ್ಯಂಕ ಸ್ಥಾಪಿಸಲು ಶಿಫಾರಸು ಮಾಡಲಾಗಿದೆ
- ಈ ಸಂಬಂಧ, ದೇಶದ ಕೆಳಹಂತದಗಳ ನ್ಯಾಯಾಲಯಗಳಲ್ಲಿ ಹಲವು ವರ್ಷಗಳಿಂದ ಇತ್ಯರ್ಥವಾಗದಿರುವ ಪ್ರಕರಣಗಳು ಶೀಘ್ರ ಬಗೆಹರಿಯಬಹುದೆಂದು ನಿರೀಕ್ಷಿಸಲಾಗಿದೆ .

**ಪ್ರಮುಖ ಶಿಫಾರಸುಗಳು :**

- ನ್ಯಾಯಾಂಗ ಕಾರ್ಯಕ್ಷಮತೆ ಸೂಚ್ಯಂಕ ಸ್ಥಾಪಿಸುವುದರಿಂದ ಬಾಕಿ ಉಳಿದಿರುವ ಪ್ರಕರಣಗಳ ವಿಚಾರಣೆ ವಿಳಂಬವಾಗದಂತೆ ಜಿಲ್ಲಾ ಹಾಗೂ ಅಧೀನ ಹಂತದ ನ್ಯಾಯಾಲಯಗಳ ನಿರ್ವಹಣೆ ಮತ್ತು ಪ್ರಕ್ರಿಯೆಗಳ ಮೇಲೆ ಮುಖ್ಯ ನ್ಯಾಯಧೀಶರು ಕಣ್ಣಿಡಲು ಅನುಕೂಲವಾಗುತ್ತದೆ.
- ಅಲ್ಲದೆ ಪ್ರಕರಣಗಳು ಯಾವ ವೇಗದಲ್ಲಿ ಸಾಗುತ್ತಿದೆ ಎಂಬುದನ್ನು ಅಳೆಯಲು ಸಹ ಇದು ಅನುಕೂಲ ಮಾಡಿಕೊಡುತ್ತದೆ .

- ಪ್ರಕರಣಗಳ ಭಿನ್ನತೆ ಆದರಿಸಿ ವಿಚಾರಣಾ ಪ್ರಕ್ರಿಯೆಗೆ ಕಾಲಮಿತಿ ನಿಗದಿಪಡಿಸುವುದು. ಪ್ರಸ್ತುತ ಇರುವ ಮೂಲ ದತ್ತಾಂಶ ಮಾಹಿತಿಯೊಂದಿಗೆ ಕೇಸುಗಳು ಎಷ್ಟೋ ಕಾಲದಿಂದ ಬಾಕಿ ಉಳಿದಿವೆ ಎಂಬ ಮಾಹಿತಿ ,ವಿಳಂಬವಾದ ಪ್ರಕರಣಗಳ ಶೇಕಡಾವಾರು ಮಾಹಿತಿ .ಕಳೆದ ವರ್ಷ ಹಾಗೂ ಅದಕ್ಕೂ ಹಿಂದಿನ ವರ್ಷಗಳಲ್ಲಿ ಎಷ್ಟೋ ವಿಚಾರಣೆಗಳು ಇತ್ಯರ್ಥವಾಗಿವೆ ಎಂಬ ಮಾಹಿತಿ ದಾಖಲಿಸುವುದು. ಇದರಿಂದ ಪ್ರಕರಣಗಳ ನಿಖರ ದತ್ತಾಂಶ ಲಭ್ಯವಾಗುತ್ತದೆ.
- ಪ್ರಸ್ತುತ ನ್ಯಾಯಧೀಶರು ಕೆಲವು ಜವಾಬ್ದಾರಿಯನ್ನೂ ನಿಭಾಯಿಸುತ್ತಿರುವುದರಿಂದ,ಸಮಯ, ಶ್ರಮ ಹೆಚ್ಚು ಬೇಕಾಗುತ್ತದೆ .ಅದರಿಂದ ನ್ಯಾಯಾಂಗದ ಆಡಳಿತ ನಿರ್ವಹಣೆಗಾಗಿ ಪ್ರತ್ಯೇಕ ಆಡಳಿತ್ಮಕ ವ್ಯವಸ್ಥೆ ರಚಿಸುವುದು ಪ್ರಮುಖ ಶಿಫಾರಸುಗಳ್ಲೊಂದು ಎನ್ನಲಾಗಿದೆ.
- ಇದರಿಂದ ನ್ಯಾಯಧೀಶರ ಕೆಲಸದ ಭಾರ ಕಮ್ಮಿಯಾಗುತ್ತದೆ. ಈ ಆಡಳಿತ್ಮಕ ವ್ಯವಸ್ಥೆ ಆಯಾ ರಾಜ್ಯಗಳ ಮುಖ್ಯನ್ಯಾಯಧೀಶರಿ ಗೆ ನೇರವಾಗಿ ಜವಾಬ್ದಾರಿಯಾಗಿರಬೇಕು.ಜತೆಗೆ ಇದು ಹೈ ಕೋರ್ಟ್ ಗೆ ವರದಿ ಸಲ್ಲಿಸಬೇಕು .ನ್ಯಾಯಾಂಗದ ಸ್ವಾತಂತ್ರ್ಯ ರಕ್ಷಣೆಯಾಗಲು ಈ ಕ್ರಮ ಅನುಕೂಲ ಮಾಡಿಕೊಡುತ್ತದೆ .
- ಬಹು ದೊಡ್ಡ ಕ್ರಮ ಎಂದರೆ ನ್ಯಾಯಾಲಯದ ಕಾರ್ಯಕಲಾಪ ,ಸ್ವಯಂಚಾಲಿತ, ಮಾಹಿತಿದಾಯಕವಾಗಬೇಕು .ಹಾಗೂ ಸಂವಹನ ತಂತ್ರಜ್ಞಾನ ಬಳಸುವ ಮೂಲಕ ನಡೆಯಬೇಕು .ದೇಶದಲ್ಲಿ ಎಲೆಕ್ಟ್ರಾನಿಕ್ ಕೋರ್ಟ್ ಗಳ ಅಗತ್ಯವಿದೆ . ನ್ಯಾಯಾಲಯಗಳ ವೇಳಾಪಟ್ಟಿ ,ಕೇಸ್ ಗಳ ವಿಚಾರಣೆ ಸೇರಿದಂತೆ ಇ-ನಿರ್ವಹಣೆ ಏಕೀಕೃತ ರಾಷ್ಟ್ರೀಯ ನ್ಯಾಯಾಲಯ ಅಪ್ಲಿಕೇಶನ್ ಸಾಫ್ಟ್ವೇರ್ ಆರಂಭಬೇಕು .
- ಸರ್ಕಾರವು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭಿರುದ್ದಿಪಡಿಸಲಾಗದ ಕ್ರಮಗಳನ್ನು ಅನುಸರಿಸಬೇಕು ಉದಾಹರಣೆಗೆ :ನ್ಯಾಯಾಲಯದ ಕಾರ್ಯಕ್ಷಮತೆಯ ಜಾಗತಿಕ ಕ್ರಮಗಳನ್ನು ಆಸ್ಟ್ರೇಲಿಯಾದ ನ್ಯಾಯಾಂಗ ಆಡಳಿತ .
- ಅಮೇರಿಕಾದ ಫೆಡರಲ್ ನ್ಯಾಯಾಂಗ ಕೇಂದ್ರ ಹಾಗೂ ರಾಜ್ಯ ನ್ಯಾಯಾಲಯಗಳ ರಾಷ್ಟ್ರೀಯ ಕೇಂದ್ರ ,ಸಿಂಗಾಪುರ ಅಧೀನ ನ್ಯಾಯಾಲಯಗಳು ಜಂಟಿಯಾಗಿ ರಚಿಸಿವೆ. ಇದೇ ಮಾದರಿಯಲ್ಲಿ ಭಾರತ ಕೂಡ ಜಾಗತಿಕ ಮಟ್ಟದಲ್ಲಿ ಕಾನೂನಿನ ಸಮಸ್ಯೇಗಳನ್ನು ಬಗೆಹರಿಸಲು ಕ್ರಮ ಕೈಕೊಳ್ಳುವ ಅಗತ್ಯವಿದೆ .

**ONLY FOR PRELIMS**

4. ನೂತನ ಮಹಾಲೇಖಪಾಲ- ಮಹರ್ಷಿ

- ಕೇಂದ್ರ ಸರ್ಕಾರ 16 ಸಚಿವಾಲಯ ಕಾರ್ಯದರ್ಶಿಗಳ ಸ್ಥಾನವನ್ನು ಮರುರಚನೆ ಮಾಡಿದ್ದು ಕೇಂದ್ರ ಗೃಹ ಖಾತೆಯ ಮಾಜಿ ಕಾರ್ಯದರ್ಶಿ ರಾಜೀವ್ ಮಹರ್ಷಿ ಅವರನ್ನು ನೂತನ ಮಹಾಲೇಖಪಾಲರನ್ನಾಗಿ, ನೇಮಕ ಮಾಡಿದೆ.
- 1978 ನೇ ತಂಡದ ರಾಜಸ್ಥಾನ ಕೇಡರ್ ನ ಐಎಎಸ್ಅಧಿಕಾರಿಯಾಗಿದ್ದ ಮಹರ್ಷಿ ಬುಧವಾರವಷ್ಟೇ ನಿವೃತರಾದರು . ಸೆ 24 ರಂದು ನಿವೃತರಾಗಳಿರುವ ಸಿಎಜಿ ಎಸ್,ಕೆ. ಶರ್ಮ ಸ್ಥಾನವನ್ನು ಮಹರ್ಷಿ ತುಂಬಲಿದ್ದಾರೆ.
- ಇನ್ನುಳಿದಂತೆ ಹಣಕಾಸು ಸೇವೆ ಇಲಾಖೆಯ ಕಾರ್ಯದರ್ಶಿಯಾಗಿ ರಾಜೀವ್ ಕುಮಾರ್ .ಸಿಬಿಎಸ್ಇ ಅಧ್ಯಕ್ಷರಾಗಿ ಅನಿತಾ ಕರ್ವಲ್ ನೇಮಕಗೊಂದಿದ್ದಾರೆ .

**5. ಭೂಗತ ಪಟ್ಟಣ ಆಸ್ಟ್ರೇಲಿಯಾದ ಕೂಬರ್ ಪೆಡಿ..**

- ಜನರು ಸಾಮಾನ್ಯವಾಗಿ ಭೂಮಿಯ ಮೇಲೆ ವಾಸಿಸುತ್ತಾರೆ.ಆದರೆ ಆಸ್ಟ್ರೇಲಿಯಾದ ಕೂಬರ್ ಪೆಡಿ ಭೂಗತ ಪಟ್ಟಣವಾಗಿದ್ದು ,ಹಳೆಯ ಗಣಿ ಪ್ರದೇಶದಲ್ಲಿ ಜನರು ವಾಸಿಸುತ್ತಾರೆ.
  ಇಲ್ಲಿನ ಶೇ.60ರಷ್ಟು ಜನ ಭೂಮಿಯ ಅಡಿಯಲ್ಲಿಯೇ ವಾಸ ಮಾಡುತ್ತಾರೆ .
- ಬೇಸಿಗೆ ಕಾಲದಲ್ಲಿ ಬಿಸಲಿನ ಬೇಗೆಯಿಂದ ತಪ್ಪಿಸಿಕೊಳ್ಳುವುದಕ್ಕು ಇದು ಒಂದು ಕಾರಣ ಎನ್ನಲಾಗಿದೆ.ಭೂಗತ ಚರ್ಚ್ ,ಹೋಟೆಲ್,ಪಬ್ ಎಲ್ಲವು ನೆಲದಡಿಯಲ್ಲಿದೇ ಇದೇ ಎಂಬುವುದನ್ನು ಕೇಳಿದರೆ ಅಚ್ಚರಿಯಾಗದೆ ಇರದು ಕ್ಷೀರ ಸ್ಪಟಿಕಕ್ಕೆ ಈ ಪ್ರದೇಶವು ಹೆಸರಾಗಿದ್ದು,ವಿಶ್ವದಲ್ಲಿಯೇ ಕ್ಷೀರ ಸ್ಪಟಿಕವನ್ನು ಹೊಂದಿದ ಅತಿ ದೊಡ್ಡಪ್ರದೇಶವಾಗಿದೆ .ನೆಲದಡಿಯಲ್ಲಿರುವ ಎಲ್ಲ ಕಟ್ಟಡಗಳೂ ಉಷ್ಣಾಂಶವನ್ನು ನಿಯಂತ್ರಿಸುವಂತೆ ರೂಪಿಸಲಾಗಿದೆ.

**6. ರೈಲ್ವೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಭಾರತ- ಸ್ವಿಡ್ಜರ್ಲೆಂಡ್ ನಡುವೆ ಒಪ್ಪಂದ**

- ಭಾರತ ಹಾಗೂ ಸ್ವಿಡ್ಜರ್ಲೆಂಡ್ ಎರಡು ದೇಶಗಳು ರೈಲ್ವೆ ಕ್ಷೇತ್ರದಲ್ಲಿ ತಾಂತ್ರಿಕ ಸಹಕಾರವನ್ನು ವಿನಿಮಯ ಮಾಡಿಕೊಳ್ಳುವ ಸಂಬಂಧ ಒಪ್ಪಂದಗಳಿಗೆ ಸಹಿ ಮಾಡಿವೆ.

- **ಸಹಿ ಮಾಡಿದ ಒಪ್ಪಂದಗಳೆಂದರೆ** - ಕೊಂಕಣ ರೈಲ್ವೆ ಕಾರ್ಪೊರೇಷನ್ ಲಿಮಿಟೆಡ್ (ಕೆಆರ್‌ಸಿಎಲ್) ಹಾಗೂ ಸ್ವಿಸ್ ಫೆಡರಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಜಲಿ ಜ್ಯೂರಿಚ್ ನಡುವೆ ಒಡಂಬಡಿಕೆ.
  - ಭಾರತದ ರೈಲ್ವೆ ಸಚಿವಾಲಯ ಹಾಗೂ ಸ್ವಿಡ್ಜರ್‌ಲೆಂಡ್‌ನ ಫೆಡರಲ್ ಡಿಪಾರ್ಟ್‌ಮೆಂಟ್ ಆಫ್ ದ ಎನ್ವಿರಾನ್‌ಮೆಂಟ್, ಟ್ರಾನ್ಸ್ ಪೋರ್ಟ್, ಎನರ್ಜಿ ಅಂಡ್ ಕಮ್ಯುನಿಕೇಶನ್ ಸಂಸ್ಥೆಗಳು ರೈಲ್ವೆ ವಲಯದ ತಾಂತ್ರಿಕ ಸಹಕಾರಕ್ಕೆ ಸಂಬಂಧಿಸಿದಂತೆ ಮಾಡಿಕೊಂಡ ಒಡಂಬಡಿಕೆ.

**4Th SEPTEMBER**

**1.ಯುನೆಸ್ಕೋದಿಂದ ಭಾರತದ ಮೊದಲ ವಿಶ್ವ ಪರಂಪರೆಯ ನಗರ ಸ್ಥಾನ ಪಡೆದ ಅಹಮದಾಬಾದ್**

**priorioty(ಆದ್ಯತೆ)-ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ**

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಪ್ರಿಲಿಮ್ಸ್ ಗಾಗಿ:**

- ಗುಜರಾತ್ ರಾಜ್ಯದ ವಾಣಿಜ್ಯ ರಾಜಧಾನಿ ಎಂದೇ ಪ್ರಸಿದ್ಧಿ ಆಗಿರುವ ಅಹಮದಾಬಾದ್ ನಗರಕ್ಕೆ ಔಪಚಾರಿಕವಾಗಿ ಯುನೆಸ್ಕೋದಿಂದ ಭಾರತದ ಮೊದಲ ವಿಶ್ವ ಪರಂಪರೆ ನಗರದ ಸ್ಥಾನಮಾನವನ್ನು ಪಡೆದಿದೆ .
- ಜುಲೈನಲ್ಲಿ ಪೋಲೆಂಡ್ ನಲ್ಲಿ ನಡೆದ ಸಭೆಯಲ್ಲಿ ಯುಎನ್ ಏಜೆನ್ಸಿಯು ಅಹಮದಾಬಾದ್ ನಗರವನ್ನು ಭಾರತದ ಮೊದಲ ವಿಶ್ವ ಪರಂಪರೆ ನಗರ ಎಂದು ಹೇಳಿತ್ತು .

- ಅಹಮದಾಬಾದ್ ನಗರಕ್ಕೆ ದೊರೆತಿರುವ ಈ ಗೌರವವು ಭಾರತದ ಮೊದಲ ನಗರ ಮತ್ತು ಏಷ್ಯಾದಲ್ಲಿ ಮೂರನೇ ಸ್ಥಾನದಲ್ಲಿದೆ.ಏಷ್ಯಾದ ಇನ್ನೆರಡು ನಗರಗಳೆಂದರೆ - ಶ್ರೀಲಂಕಾದ ಗಲ್ಲೆ ಮತ್ತು ನೇಪಾಳದ ಭಕ್ತಪುರ ಎಂಬ ಎರಡು ಪ್ರದೇಶಗಳು

- ಏಷ್ಯಾ ಮತ್ತು ಪೆಸಿಫಿಕ್ ಪ್ರದೇಶದಲ್ಲಿನ ವಿಶ್ವ ಪರಂಪರೆಯ ಗುಣಲಕ್ಷಣಗಳ ಸಂಖ್ಯೆಯಲ್ಲಿ ಭಾರತವು ಚೀನಾ ನಂತರ ಎರಡನೆಯ ಸ್ಥಾನದಲ್ಲಿದೆ ಮತ್ತು ಪ್ರಪಂಚದಲ್ಲಿ ಏಳನೇ ಸ್ಥಾನದಲ್ಲಿದೆ.
- ಭಾರತವು ಒಟ್ಟು 36 ವಿಶ್ವ ಪರಂಪರೆಯ ಶಿಲಾಶಾಸನಗಳನ್ನೂ ಹೊಂದಿದೆ ಅದರಲ್ಲಿ 28 ಸಂಸ್ಕೃತಿ, 7 ನೈಸರ್ಗಿಕ ಮತ್ತು 1 ಮಿಶ್ರ ಪ್ರದೇಶ.

ಮುಖ್ಯ ಪರೀಕ್ಷೆಗಾಗಿ

**ಒಂದು ಪ್ರದೇಶವು ಯುನೆಸ್ಕೋದಿಂದ ವಿಶ್ವ ಪರಂಪರೆ ಸ್ಥಾನವನ್ನು ಪಡೆಯಬೇಕಾದರೆ ಅದಕ್ಕೆ ಬೇಕಾಗಿರುವ ಅರ್ಹತೆಗಳೇನು ??? ಯಾವ ರೀತಿ ನಾಮಕರಣ ಪ್ರಕ್ರಿಯೆ ನಡೆಯುತ್ತದೆ..??**

- ವಿಶ್ವ ಪರಂಪರೆಯ ತಾಣವಾಗಿ ಒಂದು ತಾಣವು ಘೋಷಿಸಲ್ಪಡಬೇಕಾದರೆ ಒಂದು ದೀರ್ಘ ಪ್ರಕ್ರಿಯೆಯಿದೆ. ಒಂದು ರಾಷ್ಟ್ರವು ತನ್ನ ಎಲ್ಲಾ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಆಸ್ತಿಗಳ ಪಟ್ಟಿಯೊಂದನ್ನು ತಯಾರಿಸಬೇಕಾಗುವುದು.
- ಇದನ್ನು ತಾತ್ಕಾಲಿಕ ( ಟೆಂಟೆಟಿವ್) ಪಟ್ಟಿಯೆನ್ನುವರು. ಮುಂದೆ ಈ ಪಟ್ಟಿಯೊಳಗಿನ ತಾಣಗಳನ್ನು ಮಾತ್ರ ವಿಶ್ವ ಪರಂಪರೆಯ ತಾಣವಾಗಿ ಘೋಷಿಸಲು ನಾಮಕರಣ ಸಲ್ಲಿಸಬಹುದಾಗಿರುತ್ತದೆ. ಈ ಪಟ್ಟಿಯೊಳಗಿನ ತಾಣವೊಂದನ್ನು ಆ ದೇಶವು ನಾಮಕರಣ ಕಡತಕ್ಕೆ ಸೇರಿಸುವುದು.
- ಈ ನಾಮಕರಣಕ್ಕೆ ಸಂಬಂಧಿಸಿದಂತೆ ಅವಶ್ಯವಾದ ದಾಖಲೆಗಳನ್ನು ಸಿದ್ಧಪಡಿಸುವಲ್ಲಿ ಯುನೆಸ್ಕೋ ನೆರವಾಗುತ್ತದೆ. ಈ ನಾಮಕರಣ ಕಡತವು ತಾಣದ ಬಗೆಗಿನ ಸಂಪೂರ್ಣ ಮಾಹಿತಿಯನ್ನು ಮತ್ತು ದಾಖಲೆಗಳನ್ನು ಒಳಗೊಂಡಿರಬೇಕಾಗಿರುತ್ತದೆ.

- ಈ ನಾಮಕರಣ ಕಡತವನ್ನು ಎರಡು ಬೇರೆಬೇರೆ ಸ್ವಾಯತ್ತ ಸಂಸ್ಥೆಗಳು ಅಧ್ಯಯನ ಮಾಡುವುವು. ಈ ಸಂಸ್ಥೆಗಳೆಂದರೆ - ಅಂತಾರಾಷ್ಟ್ರೀಯ ಸ್ಮಾರಕ ಮತ್ತು ತಾಣಗಳ ಸಮಿತಿ ಹಾಗೂ ವಿಶ್ವ ಸಂರಕ್ಷಣಾ ಸಂಘ. ಈ ಸಂಸ್ಥೆಗಳು ತಮ್ಮ ಅಧ್ಯಯನದ ವರದಿಯನ್ನು ಶಿಫಾರಸುಗಳೊಂದಿಗೆ ವಿಶ್ವ ಪರಂಪರಾ ಸಮಿತಿಗೆ ಸಲ್ಲಿಸುತ್ತವೆ.
- ವರ್ಷಕ್ಕೆ ಒಂದು ಬಾರಿ ಸಭೆ ಸೇರುವ ಈ ಸಮಿತಿಯು ನಾಮಕರಣಗೊಂಡ ತಾಣವನ್ನು ವಿಶ್ವ ಪರಂಪರಾ ಪಟ್ಟಿಗೆ ಸೇರಿಸಬೇಕೇ ಯಾ ಬೇಡವೇ ಎಂಬ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು.

ಕೆಲವೊಮ್ಮೆ ಈ ಬಗೆಗಿನ ನಿರ್ಧಾರವನ್ನು ಮುಂದೂಡಿ ತಾಣದ ಬಗ್ಗೆ ಇನ್ನೂ ಹೆಚ್ಚಿನ ಅಗತ್ಯ ಮಾಹಿತಿ ನೀಡುವಂತೆ ಆ ರಾಷ್ಟ್ರಕ್ಕೆ ತಿಳಿಸಲಾಗುತ್ತದೆ.

ಇಂದು ಯಾವುದೇ ತಾಣವು ವಿಶ್ವ ಪರಂಪರೆಯ ತಾಣವಾಗಿ ಘೋಷಿಸಲ್ಪಡಬೇಕಾದರೆ ಒಟ್ಟು ಹತ್ತು ಮಾನದಂಡಗಳಿಂದ ಪರೀಕ್ಷೆಗೊಳಪಡುವುದು.

2004ರ ಅಂತ್ಯದವರೆಗೆ ಸಾಂಸ್ಕೃತಿಕ ಪರಂಪರೆಯನ್ನು ಆರು ಮಾನದಂಡಗಳಿಂದ ಹಾಗೂ ಪ್ರಾಕೃತಿಕ ಪರಂಪರೆಯನ್ನು ನಾಲ್ಕು ಮಾನದಂಡಗಳಿಂದ ಅಳೆಯಲಾಗುತ್ತಿತ್ತು. 2005ರಲ್ಲಿ ಈ ಪದ್ಧತಿಯನ್ನು ಮಾರ್ಪಡಿಸಿ ಒಟ್ಟು ಹತ್ತು ಅಂಶಗಳ ಅರ್ಹತಾಪಟ್ಟಿಯನ್ನು ತಯಾರಿಸಲಾಯಿತು. ನಾಮಕರಣಗೊಂಡ ತಾಣವು ಈ ಹತ್ತರ ಪೈಕಿ ಕನಿಷ್ಠ ಒಂದಾದರೂ ಅರ್ಹತೆಯನ್ನು ಹೊಂದಿದ್ದು "ವಿಶ್ವದ ಅಮೂಲ್ಯ ಆಸ್ತಿ" ಯಾಗಿರಬೇಕಾಗಿರುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಸಾಂಸ್ಕೃತಿಕ ಮಾನದಂಡಗಳು (Cultural criteria)**

- ಮಾನವ ಸೃಷ್ಟಿಯ ಅದ್ಭುತ ಪ್ರತೀಕವಾಗಿರಬೇಕು.
- ವಾಸ್ತುಶಾಸ್ತ್ರ ಯಾ ತಂತ್ರಜ್ಞಾನ , ಸ್ಮಾರಕಗಳ ನಿರ್ಮಾಣ ಕಲೆ, ನಗರ ಯೋಜನೆ ಅಥವಾ ಭೂಪ್ರದೇಶವನ್ನು ಒಪ್ಪವಾಗಿ ಸಿಂಗರಿಸುವ ಕಲಾವಿನ್ಯಾಸಗಳಲ್ಲಿನ ಪ್ರಗತಿಯನ್ನು ಸಾರುವ ಪ್ರಮುಖ ಮಾನವ ಮೌಲ್ಯಗಳ ವಿನಿಮಯವು ಒಂದು ಕಾಲಾವಧಿಯಲ್ಲಿ ಅಥವಾ ವಿಶ್ವದ ಒಂದು ನಿರ್ದಿಷ್ಟ ಸಾಂಸ್ಕೃತಿಕ ಪ್ರದೇಶದಲ್ಲಿ ಜರುಗಿದುದರ ದ್ಯೋತಕವಾಗಿರಬೇಕು.
- ಒಂದು ಸಾಂಸ್ಕೃತಿಕ ಪರಂಪರೆಯ ಅಥವಾ ಇಂದು ಜೀವಂತವಾಗಿರುವ ಇಲ್ಲವೇ ನಶಿಸಿಹೋಗಿರುವ ನಾಗರಿಕತೆಯೊಂದರ ಅಪ್ರತಿಮ ದ್ಯೋತಕವಾಗಿರಬೇಕು.

- ಮಾನವ ಇತಿಹಾಸದಲ್ಲಿನ ಗಣನೀಯ ಹಂತವೊಂದನ್ನು(ಹಂತಗಳನ್ನು) ಪ್ರತಿಬಿಂಬಿಸುವ ಕಟ್ಟಡ , ವಾಸ್ತುಶಿಲ್ಪ ಯಾ ತಂತ್ರಜ್ಞಾನದ ಸೃಷ್ಟಿ ಅಥವಾ ಭೂವಿನ್ಯಾಸವಾಗಿರಬೇಕು.
- ಪರಂಪರಾಗತ ಮಾನವ ನೆಲೆ ಅಥವಾ ಭೂಮಿಯ ಉಪಯೋಗ ಅಥವಾ ಸಮುದ್ರದ ಉಪಯೋಗದ ಅತ್ಯದ್ಭುತ ಪ್ರತೀಕವಾಗಿರಬೇಕು. ಇಲ್ಲವೇ ತೀವ್ರವಾಗಿ ಬದಲಾವಣೆಗೊಂಡು ಅಪಾಯಕ್ಕೀಡಾಗಿರುವ ಪ್ರಕೃತಿಯೊಡನೆ ಮಾನವನ ಒಡನಾಟದ ಅತ್ಯುತ್ತಮ ದ್ಯೋತಕವಾಗಿರಬೇಕು.
- ಘಟನೆಗಳು, ಜೀವಂತವಿರುವ ಸಂಪ್ರದಾಯಗಳು, ಮಾನವನ ನಂಬಿಕೆಗಳು, ವಿಶ್ವಮಟ್ಟದಲ್ಲಿ ಪ್ರಾಮುಖ್ಯ ಹೊಂದಿರುವ ಕಲಾತ್ಮಕ ಕೃತಿಗಳು ಯಾ ಸಾಹಿತ್ಯ ಕೃತಿಗಳೊಡನೆ ನೇರವಾಗಿ ಅಥವಾ ಸಾಕಷ್ಟು ಮಟ್ಟದ ಸಂಬಂಧ ಹೊಂದಿರಬೇಕು. ( ಸಮಿತಿಯು ಈ ಮಾನದಂಡವನ್ನು ಇತರ ಮಾನದಂಡಗಳೊಡನೆ ಅಳವಡಿಸಿ ನೋಡಬೇಕೆಂದು ಅಭಿಪ್ರಾಯಪಡುತ್ತದೆ.)

**ಪ್ರಾಕೃತಿಕ (ನೈಸರ್ಗಿಕ) ಮಾನದಂಡಗಳು (Natural criteria)**

- ಅತಿ ವಿಶಿಷ್ಟ ನೈಸರ್ಗಿಕ ಕ್ರಿಯೆಗಳನ್ನು ಹೊಂದಿರಬೇಕು ಇಲ್ಲವೇ ಅದ್ಭುತ ಪ್ರಕೃತಿ ಸೌಂದರ್ಯದ ಪ್ರದೇಶಗಳನ್ನು ಹೊಂದಿರಬೇಕು.
- ಭೂರಚನನೆಯಲ್ಲಿ ಆಗುತ್ತಿರುವ ಪ್ರಗತಿಯ ಸೂಚಿಗಳು ಅಥವಾ ವಿಶಿಷ್ಟ ಭೂ ಮೇಲ್ಮೈ ಲಕ್ಷಣಗಳನ್ನು ಹೊಂದಿರಬೇಕು. ಇಲ್ಲವೇ ಜೀವಿಗಳ ಇತಿಹಾಸವನ್ನೊಳಗೊಂಡಂತೆ ಭೂಮಿಯ ಇತಿಹಾಸದ ಪ್ರಮುಖ ಘಟ್ಟಗಳ ಅತ್ಯುತ್ತಮ ಉದಾಹರಣೆಯಾಗಿರಬೇಕು.
- ನೆಲದ ಮೇಲಿನ, ಸಿಹಿನೀರಿನ, ಕಡಲತೀರದ ಮತ್ತು ಸಾಗರದ ಜೀವವ್ಯವಸ್ಥೆ, ಸಸ್ಯ ಮತ್ತು ಪ್ರಾಣಿ ಸಮುದಾಯಗಳ ವಿಕಾಸ ಮತ್ತು ಬೆಳವಣಿಗೆಯಲ್ಲಿನ ಗಣನೀಯ ಜೈವಿಕ ಕ್ರಿಯೆಗಳ ಅತ್ಯುತ್ತಮ ಉದಾಹರಣೆಯಾಗಿರಬೇಕು.
- ಅಳಿವಿನಂಚಿನಲ್ಲಿರುವ ಜೀವ ಸಂಕುಲವನ್ನೂ ಒಳಗೊಂಡಂತೆ ಜೀವವೈವಿಧ್ಯದ ರಕ್ಷಣೆಗೋಸುಗ ಇರುವ ಅತಿ ಪ್ರಮುಖ ಮತ್ತು ಮಹತ್ವದ ಪ್ರಾಕೃತಿಕ ನೆಲೆಗಳನ್ನೊಳಗೊಂಡಿರಬೇಕು.

**ಹಾಗಾದರೆ ಅಹಮದಬಾದ್ ನಗರವು ಯಾವ ಮಾನ ದಂಡದ ಆಧಾರದ ಮೇಲೆ ಆಯ್ಕೆಯಾಗಿದೆ ???**

ಇದನ್ನು ಸಾಂಸ್ಕೃತಿಕ ಮಾನದಂಡದ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ

ಪ್ರಮುಖ ವಾದವುಗಳೆಂದರೆ

- ಇದು ವ್ಯಾಪಾರ ಕ್ಷೇತ್ರ ದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಕೇಂದ್ರ
- ಇಲ್ಲಿ ಹಿಂದೂ-ಮುಸ್ಲಿಂ ಸಂಸ್ಕೃತಿಯ ವಾಸ್ತುಶಿಲ್ಪದ ಮಿಶ್ರಣ ಹೊಂದಿರುವ ಕಟ್ಟಡಗಳನ್ನು ಕಾಣಬಹುದು.
- ಗಾಂಧಿಜಿ ರವರ ಸ್ವಾತಂತ್ರ್ಯ ಹೋರಾಟದ ಕೇಂದ್ರ ಬಿಂದು ಆಗಿತ್ತು.
- ನಗರದೃಶ್ಯವನ್ನು ರೂಪಿಸುವಲ್ಲಿ ಯುರೋಪಿಯನ್ ಹಸ್ತಕ್ಷೇಪಕ್ಕೆ ವಿರೋಧ ವ್ಯಕ್ತ ಪಡಿಸಿದ್ದು.

**2. ಉತ್ತರ ಕೊರಿಯಾದಿಂದ ಹೈಡ್ರೋಜನ್ ಬಾಂಬ್ ಪರೀಕ್ಷೆ**

**priorioty(ಆದ್ಯತೆ)-ಪ್ರಿಲಿಮ್ಸ್ ಪರೀಕ್ಷೆಗಾಗಿ ಮಾತ್ರ**

**ಪ್ರಿಲಿಮ್ಸ್ ಗಾಗಿ:**

- ಉದ್ಧಟತನ ಪ್ರದರ್ಶಿಸಿರುವ ಉತ್ತರ ಕೊರಿಯಾ ಭಾರಿ ಪರಮಾಣು ಹೈಡ್ರೋಜನ್ ಬಾಂಬ್ ಪರೀಕ್ಷೆ ಮಾಡಿದೆ. ಉತ್ತರ ಕೊರಿಯಾದ ಪುಂಗ್ಯೆ – ರಿ ನ್ಯೂಕ್ಲಿಯರ್ ಸೈಟ್‌ನಲ್ಲಿ ಅವರೇ ತಯಾರು ಮಾಡಿದ ಹೈಡ್ರೋಜನ್ ಬಾಂಬ್ ಪರೀಕ್ಷೆ ಮಾಡಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಇದು ಉತ್ತರ ಕೊರಿಯಾದ 6ನೇ ಪರಮಾಣು ಪರೀಕ್ಷೆಯಾಗಿದ್ದು, 5ನೇ ಪರಮಾಣು ಪರೀಕ್ಷೆಗಿಂದ ಶೇಕಡ 10 ರಷ್ಟು ಪ್ರಬಲ ಎಂದೂ ಹೇಳಲಾಗುತ್ತಿದೆ. ಈ ಹಿನ್ನೆಲೆ, ಪರೀಕ್ಷೆ ನಡೆಸಿದ ಪ್ರದೇಶದ ಬಳಿಯಲ್ಲಿ ಶೇಕಡ 6.3ರಷ್ಟು ತೀವ್ರತೆಯಲ್ಲಿ ಪ್ರಬಲವಾದ ಭೂಕಂಪ ಸಂಭವಿಸಿದೆ.
- ಉತ್ತರ ಕೊರಿಯಾ ನಡವಳಿಕೆ ಬಗ್ಗೆ ವಿಶ್ವಸಂಸ್ಥೆ ಸಹ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಹಲವು ನಿಬಂಧನೆಗಳನ್ನ ಅಳವಡಿಸಿದೆ. ಆದರು ಉತ್ತರ ಕೊರಿಯಾ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಮಾತ್ರ ಅದನ್ನು ಪರಿಗಣಿಸುತ್ತಿಲ್ಲ.

## 3. ಅಪೌಷ್ಟಿಕತೆ ನಿರ್ಮೂಲನೆಗೆ ಸಪ್ತಾಹ

**priorioty(ಆದ್ಯತೆ)-ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ**

### ಪ್ರಿಲಿಮ್ಸ್ ಗಾಗಿ:

- ದೇಶಾದ್ಯಂತ ಸೆಪ್ಟೆಂಬರ್ 1 ರಿಂದ 7 ರವರೆಗೆ ಪೌಷ್ಟಿಕಾಂಶ ಸಪ್ತಾಹ ಆಚರಿಸಲಾಗುತ್ತಿದೆ. ''ಅತ್ಯುತ್ತಮ ಶಿಶು, ಸಣ್ಣ ಮಕ್ಕಳ ಆಹಾರ ಪದ್ಧತಿ :ಮಕ್ಕಳ ಉತ್ತಮ ಅರೋಗ್ಯ''(Optimal Infrant& Young Child Feeding practices;Better Child Health) ಎಂಬ ಘೋಷವಾಕ್ಯದೊಂದಿಗೆ ಈ ಬಾರಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.
- ಇದೊಂದು ವಾರ್ಷಿಕ ಆಚರನೆಯಗಿದ್ದು, ಅರೋಗ್ಯ ದೃಷ್ಟಿಯಿಂದ ಪೌಷ್ಟಿಕತೆಯ ಪ್ರಾಮುಕ್ಯತೆ,ಉತ್ಪಾದಕತೆ, ಅರ್ಥಿಕ ಬೆಳವಣಿಗೆ ಹಾಗು ದೇಶದ ಅಭಿವೃದ್ಧಿ ಮೇಲೆ ಅಪೌಷ್ಟಿಕತೆಯ ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಮೂಲ ಉದ್ದೇಶದಿಂದ ವರ್ಷಕ್ಕೊಮ್ಮೆ ಪೌಷ್ಟಿಕಾಂಶ ಸಪ್ತಾಹ ಆಯೋಜಿಸಲಾಗುತ್ತದೆ.

### ಮುಖ್ಯ ಪರೀಕ್ಷೆಗಾಗಿ

**ಈ ಸಪ್ತಾಹದ ಪ್ರಮುಖಾಂಶಗಳೇನು ?? ಹಾಗು ಪೌಷ್ಟಿಕತೆಯ ಪ್ರಾಮುಖ್ಯತೆತೆಯೇನು**

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಆಹಾರ ಮತ್ತು ಪೌಷ್ಟಿಕಾಂಶ ಮಂಡಳಿಯ ಆಯಾ ರಾಜ್ಯ /ಕೇಂದ್ರಾಡಳಿತ ಪ್ರದೇಶಗಳ ಸಂಭದಿಸಿದ ಸರ್ಕಾರಿ ಇಲಾಖೆಗಳು, ರಾಷ್ಟ್ರೀಯ ಸಂಸ್ಥೆಗಳು ಹಾಗು ಏನ್ ಜಿಓಗಳ ಸಹಯೋಗದಲ್ಲಿ ಸಪ್ತಾಹ ಆಯೋಜಿಸುತ್ತದೆ.
- ಕಾರ್ಯಗಾರ ಹಾಗು ತರಬೇತಿ ಕಾರ್ಯಕ್ರಮ,ಜಾಗೃತಿ ಮೂಡಿಸುವ ಕ್ಯಾಂಪು ಗಳೂ, ಸಮುದಾಯ ಸಭೆಗಳ ಮೂಲಕ ಜಾಗೃತಿ ಮುದುಸಲಾಗುತ್ತದೆ. ದೇಶ್ಯಾದ್ಯಂತ ಎಲ್ಲ ರಾಜ್ಯಗಳ ಎಲ್ಲ ಜಿಲ್ಲೆಗಳಲ್ಲೂ ಸಪ್ತಾಹದ ಅಂಗವಾಗಿ ಕಾರ್ಯಕ್ರಮ ಆಯೋಜಿಸಲಾಗುತ್ತದೆ.

**ಪೌಷ್ಟಿಕತೆಯ ಪ್ರಾಮುಖ್ಯತೆ**

- ಪ್ರಸ್ತುತ ಹಾಗು ಮುಂದಿನ ತಲೆಮಾರಿನ ಅರೋಗ್ಯ ಮತ್ತು ಅಭಿವೃದ್ಧಿ ದೃಷ್ಟಿಯಲ್ಲಿ ಪೌಷ್ಟಿಕತೆಯ ಪಾತ್ರ ಪ್ರಧನವಾದದು. ಹುಟ್ಟುವಾಗಲೇ ತೂಕ ಕಡಿಮೆ ಇರುತ್ತದೆ. ಇದರಿಂದ, ಭವಿಷ್ಯದಲ್ಲಿ ಮದುಮೇಹ ಅಥವಾ ಹೃದಯ ಸಂಬಧಿ ಕಾಯಿಲೆಗಳು ಬರಬಹುದಾದ ಸಾದ್ಯತೆ ಇರುತ್ತದೆ.
- ಪೌಷ್ಟಿಕಾಂಶ ಕೊರತೆ ಇರುವ (ಕುಪೋಷಿತ )ಮಕ್ಕಳ ಬುದ್ಧಿಮಟ್ಟ( ಐಕ್ಯೂ) ಮತ್ತು ಗ್ರಹಿಕೆ ಸಾಮರ್ಥ್ಯ ಕಡಿಮೆ ಇರುತ್ತದೆ. ಇದು ಮಕ್ಕಳ ಶಾಲಾ ಚಟುವಟಿಕೆಗಳಲ್ಲಿ ಹಾಗು ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣವಾಗುತ್ತದೆ.
- ಮುಂದಿನ ದಿನಗಳಲ್ಲೂ ಅವರ ಉತ್ಪಾದಕತೆ ಕಡಿಮೆ ಇರುತ್ತದೆ. ಎಲ್ಲ ವಯೋಮಾನದವರು ಉತ್ತಮ ಪೌಷ್ಟಿಕಾಂಶವುಳ್ಳವರಾಗಿದ್ದರೆ,ಅವರನ್ನು ರಾಷ್ಟ್ರೀಯ ಅರ್ಥಿಕ ಅಸ್ತಿ ಎಂದೇ ಹೇಳಬಹುದು ಜನರಲ್ಲಿ ಪೌಷ್ಟಿಕತೆಯ ಮಟ್ಟ ಹೆಚ್ಚಿಸಿದರೆ ರಾಷ್ಟೀಯ ಅಭಿವೃದ್ಧಿಗೆ ಪೋರಕವಾಗಲಿದೆ.
- ಸಣ್ಣ ಮಕ್ಕಳಲ್ಲಿ ಅಪೌಷ್ಟಿಕತೆ ದೊಡ್ಡ ಸಮಸ್ಯೆಯಾಗಿ ತಲೆದೋರಿದೆ  ಇನ್ನೊಂದು ಬೃಹತ್ ಅರೋಗ್ಯ ಸಮಸ್ಯೆಯು ಹೌದು. ನ್ಯಾಷನಲ್ ಫ್ಯಾಮಿಲಿ ಹೆಲ್ತ್ ಸರ್ವೇ -4 ರ (NFHS4)ಪ್ರಕಾರ ದೇಶದ ಪೌಷ್ಟಿಕ ಮಟ್ಟ ಉತ್ತಮ ಪ್ರಮಾಣದಲ್ಲಿಲ್ಲ. ವೇಷಶವಾಗಿ ಮಹಿಳೆಯರು ಮತ್ತು ಮಕ್ಕಳಲ್ಲಿ ಅಪೌಷ್ಟಿಕತೆ ಹೆಚ್ಚಿದೆ.
- ನ್ಯಾಷನಲ್ ಫ್ಯಾಮಿಲಿ ಸರ್ವೇ -3 (NFHS3)ಕ್ಕೆ ಹೋಲಿಸಿದರೆ ಶೇ. 9.6 ರಷ್ಟು ಕಡಿಮೆ ತೂಕದ ಮಕ್ಕಳ ಪ್ರಮಾಣ ಶೇ.6.8ಕ್ಕಿಳಿದಿದೆ. ರಕ್ತ ಹಿನತೆ ಯಿಂದ ಬಳಲುವವರ ಪ್ರಮಾಣ ಶೇ. 11ರಷ್ಟು ಕಡಿಮೆಯಾಗಿದೆ. ಅಪೌಷ್ಟಿಕತೆ ಬಡತನಕ್ಕೆ ಕಾರಣವಾಗುತ್ತದಲ್ಲದೆ ವೈಯಕ್ತಿಕ ಅರೋಗ್ಯ ಮತ್ತು ಅಭಿವೃದ್ಧಿಗೂ ಧಕ್ಕೆಯಾಗುತ್ತದೆ.
- ಅಲ್ಲದೆ ಇದು ರಾಷ್ಟೀಯ ಸಮಸ್ಯೆಗಳಲ್ಲಿ ಒಂದಾಗಿದ್ದು ಕಡಿಮೆ ಉತ್ಪಾದಕತೆ ಹಾಗು ಆರ್ಥಿಕವಾಗಿ ಹಿಂದುಳಿಯುವಿಕೆಗೆ ಕಾರಣವಾಗುತ್ತದೆ. ವೈಯಕ್ತಿವಾಗಿ ಪೌಷ್ಟಿಕತೆಯ ಮಟ್ಟ ಹೆಚ್ಚಿಸಲೇಬೇಕು. ಹಲವು ಕ್ಷೇತ್ರಗಳ ಸಹಯೋಗ ದೊಂದಿಗೆ ಅಪೌಷ್ಟಿಕತೆ ಯನ್ನು ನಿಯಂತ್ರಿಸಬೇಕಿದೆ.

**ಅಪೌಷ್ಟಿಕತೆಗೆ ಪ್ರಮುಖ ಕಾರಣಗಳಾವುವು ಹಾಗು ಅದನ್ನು ಯಾವ ರೀತಿ ನಿಯಂತ್ರಿಸಬಹುದು**

ಅಪೌಷ್ಟಿಕತೆ ಎಂದರೆ ಕೆಲವೊಂದು ಪೋಷಕಾಂಶಗಳ ಕೊರತೆ ಅಥವಾ ಅತಿಯಾದ ಬಳಕೆಯಿಂದ ಉಂಟಾಗುವ ಪೋಷಕಾಂಶಗಳ ಅಸಮತೋಲನ. ಅಸಮತೋಲನದಲ್ಲಿ ಕೊರತೆಯೇ ಹೆಚ್ಚು.

**ಅಪೌಷ್ಟಿಕತೆಗೆ ಕಾರಣಗಳು**

* ಅವಶ್ಯಕತೆಗಳಿಗಿಂತ ಕಡಿಮೆ ಆಹಾರ ಸೇವಿಸುವುದು
* ಮಕ್ಕಳ ಲಾಲನೆ ಪಾಲನೆಯಲ್ಲಿ ಗಮನವಿಲ್ಲವಿರುವುದು

* ರೋಗಗಳಿಂದ ನರಳುವುದು
* ಪೌಷ್ಟಿಕ ಅಭದ್ರತೆ
* ಆಹಾರದ ಪೋಷಕಾಂಶಗಳ ಬಗ್ಗೆ ಅರಿವಿಲ್ಲದಿರುವುದು
* ಸ್ವಚ್ಛತೆಯ ಕೊರತೆ
* ಗರ್ಭಾವಸ್ಥೆಯ ಸಮಯದಲ್ಲಿ ರಕ್ತಹೀನತೆ ಮತ್ತು ಪೋಷಕಾಂಶಗಳ ಕೊರತೆ
* ಅವಧಿ ಪೂರ್ಣವಾಗದೆ ಪ್ರಸವವಾಗುವುದು ಅಥವಾ ಕಡಿಮೆ ತೂಕದ ಮಗು ಜನಿಸುವುದು

**ನಿವಾರಣೆ**

* ಪೌಷ್ಟಿಕ ಆಹಾರದ ಬಗ್ಗೆ ತಾಯಂದಿರಿಗೆ ತರಬೇತಿ ನೀಡುವುದರ ಮೂಲಕ ವಿವಿಧ ಪೋಷಕಾಂಶಗಳ ಅವಶ್ಯಕತೆ ಮತ್ತು ಉಪಯೋಗಗಳನ್ನು ತಿಳಿಸಬೇಕು.
* ಮಕ್ಕಳು ಬೆಳೆಯುವ, ವಾಸಿಸುವ ಪರಿಸರದ ಸ್ವಚ್ಛತೆಯ ಬಗ್ಗೆ ಗಮನ ಕೊಡುವುದು
* ವಿವಿಧ ಪೂರಕ ಆಹಾರಗಳು ಮತ್ತು ಅದರಿಂದಾಗುವ ಉಪಯೋಗಗಳ ಬಗ್ಗೆ ಅರಿವು ಮೂಡಿಸುವುದು.
* ಮನೆಯಲ್ಲಿ ಸಿಗುವ ವಸ್ತುಗಳಲ್ಲೇ ಪೌಷ್ಟಿಕ ಆಹಾರ ತಯಾರಿಕೆ ಕ್ರಮ ತಿಳಿಸುವುದು
* ಜೀವನದ ವಿವಿಧ ಹಂತಗಳಲ್ಲಿ ಅಂದರೆ ಮಗು, ಪ್ರೌಢಾವಸ್ಥೆ, ವಯಸ್ಕರು, ಗರ್ಭಾವಸ್ಥೆ, ಬಾಣಂತಿ ಸಮಯ ಹೀಗೆ ಪ್ರತಿಯೊಂದು ಹಂತಗಳಲ್ಲಿ ಪೋಷಕಾಂಶಗಳ ಅವಶ್ಯಕತೆ ಮತ್ತು ಕೊರತೆಯಿಂದಾಗುವ ತೊಂದರೆಗಳ ಬಗ್ಗೆ ತಿಳಿಸುವುದು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 4. ಎರಡನೇ ಮಹಿಳಾ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್

**priorioty(ಆದ್ಯತೆ)-ಪ್ರಿಲಿಮ್ಸ್ ಪರೀಕ್ಷೆಗಾಗಿ ಮಾತ್ರ**

**ಪ್ರಿಲಿಮ್ಸ್ ಗಾಗಿ:**

- ದೇಶದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ನಂತರ, ಎರಡನೇ ಮಹಿಳಾ ರಕ್ಷಣಾ ಸಚಿವೆಯಾಗಿ ನಿರ್ಮಲಾ ಸೀತಾರಾಮನ್ ನೇಮಕಗೊಂಡರು. ಈ ಮೊದಲು ಇವರು ವಾಣಿಜ್ಯ ಸಚಿವೆ ಖಾತೆ ನಿಭಾಯಿಸುತ್ತಿದ್ದರು.

- 1982 ರ ವರೆಗೂ ಇಂದಿರಾ ಗಾಂಧಿ ರಕ್ಷಣಾ ಖಾತೆ ನಿಭಾಯಿಸಿದ್ದರು. ಪಕ್ಷದ ವಕ್ತಾರೆಯಾಗಿ ಕೇಂದ್ರ ಸರಕಾರದ ಹಲವು ನಿಲುವುಗಳನ್ನು ಸಮರ್ಥಿಸಿದ್ದರು.
- ಇವರು ಕರ್ನಾಟಕದಿಂದ ಸಂಸದೆಯಾಗಿ ಆಯ್ಕೆಯಾದವರು.

SOURCE- PRS/OTHER NEWS PAPERS

priorioty(ಆದ್ಯತೆ)-ಪ್ರಿಲಿಮ್ಸ್ ಪರೀಕ್ಷೆಗಾಗಿ ಮಾತ್ರ

**5. ಕೃಷಿ ಸಹಾಯಧನಕ್ಕೆ ಭಾರತ -ಚೀನಾ ವಿರೋಧ**

- ಮುಂದುವರಿದ ರಾಷ್ಟಗಳು ಅಧಿಕ ಪ್ರಮಾಣದ ಕೃಷಿ ಸಹಾಯಧನ ನಿಡುತ್ತಿರುವುದರಿಂದ ವಾಣಿಜ್ಯ ವ್ಯವಹಾಗಳಿಗೆ ತೊಂದಯಾಗುತ್ತಿದ್ದು, ಈ ರೀತಿಯ ಸಹಾಯಧನವನ್ನು ನಿಷೇದಿಸುವಂತೆ ಕೋರಿ ಭಾರತ-ಚೀನಾಗಳೆರಡು ಜಂಟಿಯಾಗಿ ವಿಶ್ವ ವಾಣಿಜ್ಯ ಸಂಘಟನೆ (WTO)ಯಲ್ಲಿ ಪ್ರಸ್ತಾಪ ಸಲ್ಲಿಸಿವೆ.
- ಅಮೇರಿಕ,ಯುರೋಪಿಯನ್ ಒಕ್ಕೂಟ,ಕೆನಡ ಸೇರಿದಂತೆ ಮುಂದುವರಿದ ರಾಷ್ಟ್ರಗಳು ಸ್ಥಿರವಾಗಿ ತಮ್ಮ ರೈತರಿಗೆ ಬೃಹತ್ ಮೊತ್ತದ ಸಹಾಯಧನ ನೀಡುತ್ತಿದೆ.ಈ ನೀತಿ ವಾಣಿಜ್ಯ ವ್ಯವಹಾರಕ್ಕೆ ತೊಂದರೆಯಾಗುತ್ತಿದೆ ಎಂದು ಭಾರತ ಚೀನಾಗಳೆರಡು ವಿರೋದಿಸುತ್ತಲೇ ಬಂದಿದ್ದು ಈಗ ಮತ್ತೊಮ್ಮೆ ವಿರೋಧ ವ್ಯಕ್ತಪಡಿಸಿದೆ.
- ಈ ರೀತಿಯ ಸಹಾಯಧನಕ್ಕೆ WTO ವಲಯದಲ್ಲಿ ಒಟ್ಟು ಮೊತ್ತದ ಬೆಂಬಲ (Aggregate Measurement of Support -AMS )ಅಥವಾ ಅಂಬರ್ ಬಾಕ್ಸ್ ಸಪೋರ್ಟ್ ಎಂದು ಕರೆಯಲಾಗುತ್ತದೆ.
- ಮುಂದುವರಿದ ರಾಷ್ಟ್ರಗಳಲ್ಲಿ ನಿರ್ದಿಷ್ಟ ಮೀತಿಗಿಂತಲೂ ಅಧಿಕ ಪ್ರಮಾಣದ ಸಹಾಯಧನ ನೀಡಲಾಗುತ್ತಿದೆ.
- ಮೂರೂ ವಿಧದ ಸಹಾಯಧನ –
  1. ಅಂಬರ್ -ವಾಣಿಜ್ಯ ವ್ಯವಹಾರಕ್ಕೆ ತೊಂದರೆ ಉಂಟುಮಾಡುವ ಪ್ರಮಾಣ
  2. ಬ್ಲೂ (ನೀಲಿ)-ಯಂತ್ರಿತ ಪ್ರಮಾಣದ ಸಹಾಯಧನ
  3. ಗ್ರೀನ್ (ಹಸಿರು)-ವಾಣಿಜ್ಯ ವ್ಯವಹಾರಗಳಿಗೆ ತೊಂದರೆ ಉಂಟುಮಾಡುವುದಿಲ್ಲ.

**6. ವಿಶ್ವದಲ್ಲಿಯೇ ಒಂಬತ್ತನೇ ಸ್ಥಾನ ಪಡೆದ ಸಿಎಸ್ಐ ಅರ್**

- ಭಾರತದ ಅತಿ ದೊಡ್ಡ ಸ್ವಾಯತ ಸಾರ್ವಜನಿಕ ಸಂಶೋದನೆ ಮತ್ತು ಅಭಿವೃದ್ಧಿ ಸಂಸ್ಥೆ ಸಿಎಸ್ಐ ಅರ್ (ಕೌನ್ಸಿಲ್ ಆಫ್ ಸೈತಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್) ವಿಶ್ವದ ಅತ್ಯುತ್ತಮ ಸಂಶೋಧನಾ ಸಂಸ್ಥೆಗಳಲ್ಲಿ 9 ನೇ ಸ್ಥಾನ ಪಡದಿದೆ.
- ರ್ಯಾಂಕ್ ಗಳನ್ನೂ ಸಂಸ್ಥೆಗಳ ಸಂಶೋಧನಾ ಕಾರ್ಯಕ್ಷಮತೆ,ನಾವೀನ್ಯತೆ,ವೈಜ್ಞಾನಿಕ,ಅರ್ಥಿಕ ಹಾಗು ಸಾಮಾಜಿಕ ಪರಿಣಾಮಗಳನ್ನು ಆಧರಿಸಿ ನೀಡಲಾಗಿದೆ.ಈ ಕುರಿತ 2017 ರ ವರದಿಯನ್ನು ಸಿಮಗೋ ಇನ್ಸ್ಟಿಟ್ಯೂಟ್ ಬಿಡುಗಡೆಗೊಳಿಸಿದ್ದು,ವಿಶ್ವದ 1207 ಸರ್ಕಾರಿ ಸಂಸ್ಥೆಗಳನ್ನು ಸಮೀಕ್ಷೆಗೆ ಒಲೆಪದಿಸಲಾಗಿತ್ತು.
- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಶೋದನೆ ಮತ್ತು ಅಭಿವೃದ್ಧಿಯ ,ಮೂಲಕವೇ ಹೆಸರಾಗಿರುವ ಸಿಎಸ್ಐಅರ್, ದೇಶಾದ್ಯಂತ 38 ರಾಷ್ಟ್ರೀಯ ಪ್ರಯೋಗಾಲಯಗಳು ಹಾಗು 38 ಸಂಪರ್ಕ ಕೇಂದ್ರಗಳನ್ನು ಹೊಂದಿದೆ

**7. ಶಿಕ್ಷಣ ಸಂಸ್ಥೆಗಳೊಂದಿಗೆ ಜಲ ಆಯೋಗ ಒಪ್ಪಂದ**

- ಆಣೆಕಟ್ಟು ಸಾಮರ್ಥ್ಯ ಹೆಚ್ಚಿಸಲು ಮತ್ತು ಪುನರ್ವಸತಿ ಕಲ್ಪಿಸಲು ಕೇಂದ್ರೀಯ ಜಲ ಆಯೋಗವು ಐಐಟಿ ಕ್ಯಾಲಿಕಟ್ ಹಾಗು ಐಐಟಿ ರೂರ್ಕೇಲಾದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಪ್ರಾಯೋಗಿಕ ಪರೀಕ್ಷಾ ವ್ಯವಸ್ಥೆ ಬಲಪಡಿಸುವುದು. ಅಣೆಕಟ್ಟಿನ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸುವುದು
- ಹಾಗು ಸಂಶೋದನೆಗೆ ಒತ್ತು ನೀಡುವುದು ಸೇರಿದಂತೆ ವಿವಿಧ ಉದ್ದೇಶಗಳನ್ನು ಒಪ್ಪಂದ ಹೊಂದಿದೆ.ಅಣೆಕಟ್ಟೆಯ ಸಾಮರ್ಥ್ಯ ಹಾಗು ಸುರಕ್ಷತೆ ಹೆಚ್ಚಿಸುವುದು ಒಪ್ಪಂದದ ಮೂಲ ಉದ್ದೇಶ. ನಿಗದಿತ ಪ್ರದೇಶಗಳಲ್ಲಿ ಆಯ್ಕೆ ಮಾಡಿದ ಶಿಕ್ಷಣ ಸಂಸ್ಥೆಗಳ ಅಣೆಕಟ್ಟೆಗೆ ಸಂಬಧಿಸಿದ ತನಿಖೆ,ಪರೀಕ್ಷೆ ನಡೆಸುತ್ತದೆ.

**8.ಮುಖ್ಯ ಚುನಾವಣಾ ಆಯುಕ್ತರಾಗಿ ಸುನಿಲ್ ಆರೋರಾ**

- ಮಾಹಿತಿ ಮತ್ತು ಪ್ರಸಾರ ಇಲಾಖೆಯ ಮಾಜಿ ಕಾರ್ಯದರ್ಶಿ ಸುನಿಲ್ ಆರೋರಾ ಅವರನ್ನು ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ.ಇವರು ಮುಂದಿನ ನಾಲ್ಕು ವರ್ಷಗಳ ಕಾಲ ಇವರು ಈ ಅತ್ಯುನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸಲಿದ್ದಾರೆ.

- 2016 ರಲ್ಲಿ ಮಾಹಿತಿ ಮತ್ತು ಪ್ರಸಾರ ಇಲಾಖೆಯ ಕಾರ್ಯದರ್ಶಿಯಾಗಿ ನಿವೃತ್ತಿ ಹೊಂದ್ದಿದರು.ಕೌಶಲ ಅಭಿವೃದ್ಧಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುವ ಇವರು, ಹಣಕಾಸು ನಾಗರಿಕ ವಿಮಾನಯಾನ ಇಲಾಖೆ, ಜವಳಿ ಸಚಿವಾಲಯ ದಲ್ಲಿ ಸೇವೆ ಸಲ್ಲಿಸಿದ್ದಾರೆ.ಅರೋಗ್ಯ ಇಲಾಖೆ ಮತ್ತು ಯೋಜನಾ ಅಯೋಗದಲ್ಲಿಯು ಉನ್ನತ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ.ಇವರು ರಾಜಸ್ಥಾನದ ರಾಜ್ಯ ಕೈಗಾರಿಕೆ ಅಭಿವೃದ್ಧಿ ಮತ್ತು ಹೂಡಿಕೆ ನಿಗಮ ಲಿಮಿಟೆಡ್ ನ ಅಧ್ಯಕ್ಷರೂ ಆಗಿದ್ದರು.

**5th SEPTEMBER**

**1. 'ಕ್ಸಿಯಾಮೆನ್' ಘೋಷಣೆ**

**ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ**

ಪ್ರಿಲಿಮ್ಸ್ ಗಾಗಿ

- ಇತ್ತೀಚೆಗೆ ಚೈನಾದ ಶಿಯಾಮೆನ್ ನಲ್ಲಿ ನಡೆದ ೯ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಬ್ರಿಕ್ಸ್ ನಾಯಕರ 'ಕ್ಸಿಯಾಮೆನ್' ಘೋಷಣೆಯು ಸದಸ್ಯ ರಾಷ್ಟ್ರಗಳ ಪರಸ್ಪರ ಸಹಕಾರವನ್ನು ಉತ್ತೇಜಿಸಲಿದೆ.
- ನ್ಯಾಯೋಚಿತ ಅಂತಾರಾಷ್ಟ್ರೀಯ ಆರ್ಥಿಕ ಆದೇಶಗಳನ್ನು ಮತ್ತು ಜಾಗತಿಕ ಆರ್ಥಿಕ ಆಡಳಿತವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಂವಹನ ಮತ್ತು ಸಹಕಾರಗಳನ್ನು ಹೆಚ್ಚಿಸುವ ವ್ಯವಸ್ಥೆಯನ್ನು ಘೋಷಣೆ ಒಳಗೊಂಡಿದೆ. ಘೋಷಣೆಯು ಅಂತಾರಾಷ್ಟ್ರೀಯ ಮತ್ತು ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಯನ್ನು ಒತ್ತಿಹೇಳುತ್ತದೆ.
- 2011 ರ ಶೃಂಗಸಭೆಯ ನಂತರ ಚೀನಾವು ಎರಡನೇ ಬಾರಿಗೆ ಶೃಂಗಸಭೆಯನ್ನು ಆಯೋಜಿಸಿತ್ತು .

ಮೇನ್ಸ್ ಪರೀಕ್ಷೆಗಾಗಿ

**ಈ ಸಭೆಯಲ್ಲಿ ಪ್ರಮುಖವಾಗಿ ಕೈಗೊಂಡ ನಿರ್ಣಯಗಳೇನು ?? ಭಾರತಕ್ಕೆ ಯಾವರೀತಿ ಅನುಕೂಲವಾಗುತ್ತದೆ ಸಂಕ್ಷಿಪ್ತವಾಗಿ ವಿಶ್ಲೇಷಿಸಿ??**

**ಬ್ರಿಕ್ಸ್ ನಿರ್ಣಯಗಳು**

1 ಒಳ್ಳೆಯದೇ ಆಗಿರಲಿ, ಕೆಟ್ಟದ್ದೇ ಆಗಿರಲಿ ಯಾವ ಭಯೋತ್ಪಾದನೆಗೂ ಸಮರ್ಥನೆ ಇಲ್ಲ

2 ಉಗ್ರವಾದ ನಿಗ್ರಹಕ್ಕೆ ಎಲ್ಲಾ ರಾಷ್ಟ್ರಗಳೂ ಪರಸ್ಪರ ಸಹಕಾರ ನೀತಿಯನ್ನು ಅನುಸರಿಸಬೇಕು

3 ಉಗ್ರ ಸಂಘಟಕರು, ಅವರ ಪೋಷಕರನ್ನು ಹೊಣೆಗಾರ ಮಾಡಬೇಕು

4 ಅಕ್ರಮ ಹಣ ವರ್ಗ, ಉಗ್ರರಿಗೆ ಹಣ ಪೂರೈಕೆ ತಡೆಗೆ ಎಲ್ಲಾ ರಾಷ್ಟ್ರಗಳು ಪರಸ್ಪರ ಸಹಕರಿಸಬೇಕು

5 ಮತೀಯವಾದ, ಉಗ್ರ ಸಂಘಟನೆಗೆ ಸೇರ್ಪಡೆ, ಶಸ್ತ್ರಾಸ್ತ್ರ ಪೂರೈಕೆ ತಡೆಗೆ ಎಲ್ಲರೂ ನಿ'ರ್ರಿಸಬೇಕು

6 ಪರಸ್ಪರರ ಆಂತರಿಕ ವಿಚಾರಗಳಲ್ಲಿ ಮೂಗು ತೂರಿಸದಂತೆ ಅಂತಾರಾಷ್ಟ್ರೀಯ ಸಹಕಾರ ಅಗತ್ಯ

**ಸಂಕ್ಷಿಪ್ತವಾಗಿ ವಿಶ್ಲೇಷಣೆ**

- ಡೋಕ್ಲಂ ವಿವಾದ ಕೆದಕಿ ಗಡಿಯಲ್ಲಿ ಕಿಡಿ ಹೊತ್ತಿಸಿದ್ದ ಚೀನಾವನ್ನು ಹಿಮ್ಮೆಟ್ಟಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ರಾಜತಾಂತ್ರಿಕ ದಿಗ್ವಿಜಯ ಸಾಧಿಸಿದ್ದ ಭಾರತದ ಯಶಸ್ಸಿನ ಅಭಿಯಾನ ಈಗ ಚೀನಾ ನೆಲದಲ್ಲೂ ವಿಸ್ತರಿಸಿದೆ.
- ಚೀನಾದ ಕ್ಸಿಯಾಮೆನ್‌ನಲ್ಲಿ ನಡೆದ ಬ್ರಿಕ್ಸ್ ಸಮಾವೇಶದಲ್ಲಿ ಪಾಕಿಸ್ತಾನ ಮೂಲದ ಉಗ್ರರು ಸೇರಿದಂತೆ ವಿವಿಧ ಭಯೋತ್ಪಾದನಾ ಸಂಘಟನೆಗಳ ವಿರುದ್ಧ ಒಗ್ಗಟ್ಟಿನ ಹೋರಾಟ ನಡೆಸುವ ಮಹತ್ವದ ನಿರ್ಣಯ ಹೊರಬಿದ್ದಿದೆ.
- ಬ್ರಿಕ್ಸ್ ನಲ್ಲಿ ಪಾಕಿಸ್ತಾನದ ವಿಚಾರವನ್ನು ಪ್ರಸ್ತಾಪಿಸಬಾರದೆಂದು ಭಾರತಕ್ಕೆ ಸಲಹೆ ನೀಡಿದ್ದ ಚೀನಾ, ಇದೇ ಶೃಂಗದಲ್ಲಿ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತದ ಬೆಂಬಲಕ್ಕೆ ನಿಂತಿದ್ದು ಮತ್ತೊಂದು ಜಗದಚ್ಚರಿ. ಮತ್ತೊಂದೆಡೆ ಜೈಶ್ ಇ ಮೊಹಮ್ಮದ್ ಉಗ್ರ ಸಂಘಟನೆ ಮುಖ್ಯಸ್ಥ ಮಸೂದ್ ಅಜರ್‌ನನ್ನು ಜಾಗತಿಕ ಉಗ್ರನೆಂದು ಘೋಷಿಸಲು ಅಡ್ಡಗಾಲು ಹಾಕುತ್ತಿರುವ

ಚೀನಾಗೆ ಕಿವಿ ಹಿಂಡಿದ ಭಾರತ, ಭಯೋತ್ಪಾದನೆ ವಿಚಾರದಲ್ಲಿ ದ್ವಿಮುಖ ಧೋರಣೆ ಸಲ್ಲದೆಂದು ವಾಗ್ದಾಳಿ ನಡೆಸಿತು.

- ಭೌಗೋಳಿಕವಾಗಿ, ಆರ್ಥಿಕವಾಗಿ ಭಾರತದ ಜತೆಗಿನ ಬಾಂಧವ್ಯ ಅನಿವಾರ್ಯವೆಂಬುದನ್ನು ಮನಗಂಡ ಬಳಿಕ ಡೋಕ್ಲಂನಿಂದ ಸೇನೆಯನ್ನು ಹಿಂದಕ್ಕೆ ಕರೆಸಿಕೊಂಡಿದ್ದ ಚೀನಾ, ಬ್ರಿಕ್ಸ್ ಸಮಾವೇಶದಲ್ಲೂ ಅಂಥದ್ದೇ ತಂತ್ರಗಾರಿಕೆ ಹೆಣೆದಿದೆ.
- ಪಾಕಿಸ್ತಾನವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿಯೇ ಉಗ್ರವಾದದ ವಿಚಾರದಲ್ಲಿ ಒಂದು ಹೆಜ್ಜೆ ಹಿಂದೆ ಇರುತ್ತಿದ್ದ ಚೀನಾ, ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಬಾಂಧವ್ಯ ಅನಿವಾರ್ಯವೆಂಬುದನ್ನು ಮನಗಂಡು ಭಯೋತ್ಪಾದನೆ ವಿರುದ್ಧದ ಹೋರಾಟಕ್ಕೆ ಜೈಹಾರ ಹಾಕಿದೆ. ಚೀನಾ ಬೆಂಬಲದೊಂದಿಗೆ ಗರ್ವದಿಂದ ಬೀಗುತ್ತಿದ್ದ ಪಾಕಿಸ್ತಾನಕ್ಕೆ ಬ್ರಿಕ್ಸ್ ಶೃಂಗದ ನಿರ್ಣಯ ಮರ್ಮಾಘಾತ ನೀಡಿದೆ.

ಬ್ರಿಕ್ಸ್‌ನಲ್ಲಿ ಉಗ್ರ ನಿಗ್ರಹಕ್ಕೆ ಒಗ್ಗಟ್ಟಿನ ಮಂತ್ರ

- ಭಾರತ, ರಷ್ಯಾ, ಬ್ರೆಜಿಲ್, ಚೀನಾ, ದ.ಆಫ್ರಿಕಾವನ್ನು ಒಳಗೊಂಡ ಬ್ರಿಕ್ಸ್ ರಾಷ್ಟ್ರಗಳು ಎಲ್ಲ ಬಗೆಯ ಉಗ್ರವಾದ, ಭಯೋತ್ಪಾದಕ ದಾಳಿಗಳನ್ನು ಕಟುವಾಗಿ ಖಂಡಿಸಿವೆ. ಈ ಕುರಿತು ಜಂಟಿ ಘೋಷಣಾ ಪತ್ರವನ್ನೂ ಬಿಡುಗಡೆ ಮಾಡಲಾಗಿದೆ.
- ಬ್ರಿಕ್ಸ್ ಕ್ಸಿಯಾಮೆನ್ ಜಂಟಿ ಘೋಷಣಾಪತ್ರದಲ್ಲಿ ಪಾಕಿಸ್ತಾನದ ಹೆಸರು ಹೇಳದೆ, ಅದರ ನೆಲದಲ್ಲಿ ಕಾರ್ಯಾಚರಿಸುತ್ತಿರುವ ಉಗ್ರ ಸಂಘಟನೆಗಳಾದ ಹಕ್ಕಾನಿ, ಲಷ್ಕರ್-ಎ-ತಯ್ಯಾಬ, ಜೈಶ್-ಎ- ಮೊಹಮ್ಮದ್, ತಾಲಿಬಾನ್, ಐಎಸ್ಐಎಲ್/ಡಿಎಐಎಸ್ಎಚ್ ಮತ್ತು ಆಲ್‌ಖೈದಾ ಹೆಸರನ್ನು ಪ್ರಸ್ತಾಪಿಸಿ, ಅದರ ನಿಲುವನ್ನು ಖಂಡಿಸಲಾಗಿದೆ.
- ಉಗ್ರ ಸಂಘಟನೆಗಳ ಉಪಟಳವನ್ನು ಬುಡ ಮಟ್ಟದಿಂದ ಕಿತ್ತೊಗೆಯಲು ಅಂತಾರಾಷ್ಟ್ರೀಯ ಸಹ ಯೋಗ ಅಗತ್ಯವಾಗಿದೆ. ಇಂತಹ ಸಂಘಟನೆಗಳಿಗೆ ಬೆಂಬಲ, ಪೋಷಣೆ ನೀಡುವ ರಾಷ್ಟ್ರಗಳನ್ನು ಖಂಡಿಸ ಬೇಕಿದೆ ಎಂದು ಹೇಳಲಾಗಿದೆ. ಭಯೋತ್ಪಾದಕ ದಾಳಿ ತಡೆಯುವುದು, ಮೂಲಭೂತ ವಾದ ಮತ್ತು ಉಗ್ರ ಸಂಘಟನೆಗಳಿಗೆ ಆರ್ಥಿಕ ನೆರವು ಸ್ಥಗಿತ ಗೊಳ್ಳುವಂತೆ ಮಾಡಲು ಸಮಗ್ರ ನೀತಿ ಅಳವಡಿಸಿಕೊಳ್ಳುವಂತೆ ಬ್ರಿಕ್ಸ್ ರಾಷ್ಟ್ರಗಳಿಗೆ ಸಲಹೆ ನೀಡಲಾಗಿದೆ.

- ಇದಕ್ಕೂ ಮುನ್ನ ಬ್ರಿಕ್ಸ್ ಸಮಾವೇಶದಲ್ಲಿ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿಯವರು , ಪಾಕಿ ಸ್ತಾನದ ಹೆಸರು ಪ್ರಸ್ತಾಪಿಸದೆ, ಭಯೋತ್ಪಾದನೆ ಎಂಬ ಪದ ಬಳಸದೆ, ಶಾಂತಿ ಮತ್ತು ಜಾಗತಿಕ ಸ್ಥಿರತೆ ಸಾಧಿಸಲು ಬ್ರಿಕ್ಸ್ ರಾಷ್ಟ್ರಗಳು ಪರಸ್ಪರ ಸಹಕಾರ ಮನೋಭಾವ ಹೊಂದಬೇಕು ಎಂದು ಕರೆ ನೀಡಿದ್ದರು. ಇದರ ಬೆನ್ನಲ್ಲೇ, ಉಗ್ರವಾದವನ್ನು ಖಂಡಿಸುವ ಜಂಟಿ ಘೋಷಣಾಪತ್ರ ಹೊರಬಿದ್ದಿತು.

**ಭಾರತಕ್ಕೆ ರಾಜತಾಂತ್ರಿಕ ಗೆಲುವು:**

- ಬ್ರಿಕ್ಸ್‌ನಂತಹ ಮಹತ್ವದ ವೇದಿಕೆಯಲ್ಲಿ ಪಾಕ್ ನೆಲದಲ್ಲಿ ಕಾರ್ಯಾಚರಿಸುತ್ತಿರುವ ಉಗ್ರ ಸಂಘಟನೆಗಳ ಹೆಸರನ್ನು ಪ್ರಸ್ತಾಪಿಸಿ, ಅವುಗಳನ್ನು ಮಟ್ಟ ಹಾಕುವ ಬಗ್ಗೆ ತೆಗೆದುಕೊಂಡಿರುವ ನಿರ್ಣಯ ಭಾರತದ ರಾಜತಾಂತ್ರಿಕ ಗೆಲುವು ಎನಿಸಿಕೊಂಡಿದೆ. ಬ್ರಿಕ್ಸ್ ಸಮಾವೇಶದಲ್ಲಿ ಪಾಲ್ಗೊಂಡಿರುವ ರಾಷ್ಟ್ರಗಳ ಎಲ್ಲ ನಾಯಕರ ಸಮ್ಮತಿಯ ಮೇರೆಗೆ ಇಂತಹ ನಿರ್ಣಯವನ್ನು ಕೈಗೊಳ್ಳಲಾಗುತ್ತದೆ. ಆದ್ದರಿಂದ, ಜಾಗತಿಕ ಅನ್ಯ ವೇದಿಕೆಗಳಲ್ಲಿ ಈ ನಿರ್ಣಯ ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ.
- ಭಾರತ ಮೊದಲಿನಿಂದಲೂ ಪಾಕ್ ನೆಲದಲ್ಲಿ ಉಗ್ರ ಸಂಘಟನೆಗಳಿಗೆ ಹೆಚ್ಚಿನ ನೆರವು, ಪೋಷಣೆ ದೊರೆಯುತ್ತಿದೆ ಎಂದು ಹೇಳುತ್ತಲೇ ಇತ್ತು. ಈಗ ಈ ವಾದಕ್ಕೆ ಜಾಗತಿಕ ಮಟ್ಟದ ವೇದಿಕೆಗಳಲ್ಲಿ ಭಾರತದ ಹೇಳಿಕೆಗೆ ಹೆಚ್ಚಿನ ಬಲ ದೊರೆಯಲಿದೆ.
- ಬ್ರಿಕ್ಸ್ ಜಂಟಿ ಘೋಷಣಾಪತ್ರದಲ್ಲಿ ಪಾಕ್ ಮೂಲದ ಉಗ್ರ ಸಂಘಟನೆಗಳ ಹೆಸರು ಪ್ರಸ್ತಾಪ ಮಾಡಿದ ಕ್ರಮವನ್ನು ಚೀನಾ ಸಮರ್ಥಿಸಿಕೊಂಡಿದೆ. ಈ ಸಂಘಟನೆಗಳ ವಿಧ್ವಂಸಕ ಕೃತ್ಯಗಳಿಂದ ಆಫ್ಘಾನಿಸ್ತಾನದ ಆಗುಹೋಗುಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇವುಗಳನ್ನು ವಿಶ್ವಸಂಸ್ಥೆ ನಿಷೇಧಿಸಿದೆ. ಆದ್ದರಿಂದ, ಬ್ರಿಕ್ಸ್ ಜಂಟಿ ಘೋಷಣಾಪತ್ರದಲ್ಲಿ ಈ ಸಂಘಟನೆಗಳ ಹೆಸರನ್ನು ಪ್ರಸ್ತಾಪಿಸಲು ಚೀನಾ ಸಮ್ಮತಿಸಿತು.
- ಆದರೆ, ಮಸೂದ್ ಅಜರ್‌ನನ್ನು ಜಾಗತಿಕ ಭಯೋತ್ಪಾದಕ ಎಂದು ಘೋಷಿಸಲು ಎರಡು ವರ್ಷಗಳಿಮದ ಅಡ್ಡಿಪಡಿಸುತ್ತಿರುವ ಬಗ್ಗೆ ಸ್ಪಷ್ಟ ಉತ್ತರ ನೀಡದೆ ಜಾರಿಕೊಂಡರು. ಈ ಬಾರಿ ಅದು

ಸಲ್ಲಿಸಿರುವ ಆಕ್ಷೇಪದ ಅವಧಿ ನವೆಂಬರ್‌ಗೆ ಮುಕ್ತಾಯವಾಗಲಿದೆ. ಆಗ ಅದು ಈ ವಿಷಯದಲ್ಲಿ ಹೇಗೆ ನಡೆದುಕೊಳ್ಳಲಿದೆ ಎಂಬುದು ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ.

## 2. ಮುಂಗಡ ಬೆಲೆ ನಿಗದಿ ಒಪ್ಪಂದಗಳು (APAs)

### ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ

### ಪ್ರಿಲಿಮ್ಸ್ ಗಾಗಿ

- ಆಗಸ್ಟ್, 2017 ರಲ್ಲಿ ಕೇಂದ್ರೀಯ ನೇರ ತೆರಿಗೆ ಮಂಡಳಿಯು (ಸಿಬಿಡಿಟಿ) 4 ಮುಂಗಡ ಬೆಲೆ ನಿಗದಿ ಒಪ್ಪಂದ ವನ್ನು (ಎಪಿಎ) ಮಾಡಿಕೊಂಡಿದೆ . ಈ 4 ಒಪ್ಪಂದಗಳಲ್ಲಿ 3 ಏಕಪಕ್ಷೀಯ ಮತ್ತು 1 ದ್ವಿಪಕ್ಷೀಯ ಒಪ್ಪಂದಗಳಿವೆ.
- ಈ 4 ಒಪ್ಪಂದಗಳನ್ನು ಸಹಿ ಮಾಡಿದ ನಂತರ, ಸಿಬಿಡಿಟಿಯ ಒಟ್ಟು ಮುಂಗಡ ಬೆಲೆ ನಿಗದಿ ಒಪ್ಪಂದವು 175 ಕ್ಕೆ ತಲುಪಿದೆ. ಇದರಲ್ಲಿ 162 ಏಕಪಕ್ಷೀಯ ಮತ್ತು 13 ದ್ವಿಪಕ್ಷೀಯ ಒಪ್ಪಂದಗಳು ಸೇರಿವೆ. ಪ್ರಸಕ್ತ ಹಣಕಾಸು ವರ್ಷದಲ್ಲಿ, ಒಟ್ಟು 23 ಮುಂಗಡ ಬೆಲೆ ನಿಗದಿ ಒಪ್ಪಂದವನ್ನು (2 ದ್ವಿಪಕ್ಷೀಯ ಮತ್ತು 21 ಏಕಪಕ್ಷೀಯ) ಇಲ್ಲಿಯವರೆಗೆ ಸಹಿ ಮಾಡಲಾಗಿದೆ.
- ಟೆಲಿಕಾಂ, ಬ್ಯಾಂಕಿಂಗ್, ಉತ್ಪಾದನೆ ಮತ್ತು ಶಿಕ್ಷಣದಂತಹ ಆರ್ಥಿಕತೆಯ ವಿವಿಧ ವಲಯಗಳಿಗೆ ಸಂಬಂಧಿಸಿದಂತೆ 4 ಮುಂಗಡ ಬೆಲೆ ನಿಗದಿ ಒಪ್ಪಂದಮಾಡಿಕೊಂಡಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮೇನ್ಸ್ ಪರೀಕ್ಷೆಗಾಗಿ

**ಮುಂಗಡ ಒಪ್ಪಂದ ಗಳೆಂದರೇನು .. ?? ಅದರ ಅವಶ್ಯಕತೆಗಳೇನು..??**

- ಮುಂಗಡ ಬೆಲೆನಿಗದಿ ಒಪ್ಪಂದವನ್ನು ಆದಾಯ ತೆರಿಗೆ ಕಾಯ್ದೆ- 2012ರ ಅನ್ವಯ ಪರಿಚಿಸಲಾಗಿದ್ದು 2014ರಲ್ಲಿ ಇದರ ರೋಲ್‌ಬ್ಯಾಕ್ ಅವಕಾಶವನ್ನು(Rollback" provisions) ಕಲ್ಪಿಸಲಾಗಿದೆ .
- ತೆರಿಗೆದಾರರಿಗೆ ತಾವು ಪಾವತಿಸಬೇಕಾದ ತೆರಿಗೆಯ ಬಗ್ಗೆ ಮುಂಗಡವಾಗಿಯೇ ನಿರ್ಧರಿಸಲಾಗುತ್ತದೆ. ಇದರ ಜತೆಗೆ ತೆರಿಗೆ ನಿರ್ಧರಿಸುವ ವಿಧಾನಗಳು ಮತ್ತು ಅಂತರರಾಷ್ಟ್ರೀಯ ವಹಿವಾಟಿಗೆ ಮುಂಗಡವಾಗಿಯೇ ತೆರಿಗೆ ನಿರ್ಧರಿಸಲಾಗುತ್ತದೆ.
- ಎಪಿಎ ಯೋಜನೆಯು ತೆರಿಗೆದಾರರಿಂದ ಉತ್ತಮವಾಗಿ ಸ್ವೀಕರಿಸಲ್ಪಟ್ಟಿದೆ ಮತ್ತು ಇಲ್ಲಿಯವರೆಗೆ ಐದು ವರ್ಷಗಳಲ್ಲಿ 800 ಅರ್ಜಿಗಳನ್ನು (ಏಕಪಕ್ಷೀಯ ಮತ್ತು ದ್ವಿಪಕ್ಷೀಯ) ಸಲ್ಲಿಸಿದ್ದಾರೆ .

ಇದರ ಮುಖ್ಯ ಅವಶ್ಯಕತೆಗಳು

- ಭಾರತದ ಎಪಿಎ ಯೋಜನೆಯನ್ನು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯವಾಗಿ ಶ್ಲಾಘಿಸಲಾಗಿದೆ.
- ಸರ್ಕಾರದ ತೆರಿಗೆ ವ್ಯವಸ್ಥೆಯಿಂದ ಯಾವುದೇ ವ್ಯತಿರಿಕ್ತ ಪರಿಣಾಮ ಆಗದಂತೆ ಮುನ್ನೆಚ್ಚರಿಕೆ ವಹಿಸುವುದು.
- ಇದು ಸಂಕೀರ್ಣವಾದ ವಹಿವಾಟು ಬೆಲೆ ನಿಗದಿ ವ್ಯವಸ್ಥೆಯನ್ನು ಮುಕ್ತ ಹಾಗೂ ಪಾರದರ್ಶಕವಾಗಿ ಮಾಡುವಲ್ಲಿ ಯಶಸ್ವಿಯಾಗಿದೆ.

**3. ರಾಷ್ಟ್ರ ನರ್ಮದಾ ಅವತಾರ ನೀರಾವರಿ ಯೋಜನೆ '(ಸೌನಿ).**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

- ಭಾರತದ ರಾಷ್ಟ್ರಪತಿ, ಶ್ರೀ ರಾಮ್ ನಾಥ್ ಕೋವಿಂದ್ ಇತ್ತೀಚೆಗೆ ಗುಜರಾತಿನ ರಾಜ್ ಕೋಟ್ ನಲ್ಲಿ ಸೌರಾಷ್ಟ್ರ ನರ್ಮದಾ ಅವತಾರ್ ನೀರಾವರಿ ಯೋಜನೆ (ಸೌನಿ) ಹಂತ-II ರ ಅಡಿಪಾಯವನ್ನು ಹಾಕಿದರು.
- ಸೌರಾಷ್ಟ್ರ ನರ್ಮದಾ ಅವತಾರ್ ನೀರಾವರಿ,ಯೋಜನೆಯನ್ನು ಸೆಪ್ಟೆಂಬರ್ 2012 ರಲ್ಲಿ ಪ್ರಾರಂಬಿಸಿದ್ದರು ದಕ್ಷಿಣ ಗುಜರಾತ್ ನ ಸರ್ದಾರ್ ಸರೋವರ್ ಅಣೆಕಟ್ಟೆನಿಂದ ಪ್ರವಾಹದ ಹರಿಯುತ್ತಿರುವ ನೀರನ್ನು ಶುಷ್ಕವಾದ ಸೌರಾಷ್ಟ್ರದ ಪ್ರದೇಶದ 115 ಪ್ರಮುಖ ಅಣೆಕಟ್ಟುಗಳನ್ನು ತುಂಬಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

- ಸಾಂಪ್ರದಾಯಿಕ ನೀರಾವರಿ ಯೋಜನೆಗಳಂತಲ್ಲದೆ, ಈ ಯೋಜನೆಯು ತಾಂತ್ರಿಕವಾಗಿ ' ನದಿಗಳ ನಡುವೆ ಸಂಪರ್ಕ ಕೊಂಡಿ ಕಲ್ಪಿಸಿಕೊಡುತ್ತದೆ . ಅಲ್ಲಿ ನೀರನ್ನು ಈಗಾಗಲೇ ಕಾಲುವೆ ಜಾಲವನ್ನು

ಹೊಂದಿರುವ ನೀರಾವರಿ ಅಣೆಕಟ್ಟುಗಳಲ್ಲಿ ತುಂಬಿಸಲಾಗುತ್ತದೆ, ಕಾಲುವೆಗಳ ಈ ಜಾಲವು ಚಾನಲ್ ನೀರನ್ನು ಸಾಕಣೆಗೆ ಸಹಾಯ ಮಾಡುತ್ತದೆ.

- ಅಲ್ಲದೆ, ಈ ಯೋಜನೆಯು ಸಾಂಪ್ರದಾಯಿಕ ತೆರೆದ ಕಾಲುವೆಯ ಬದಲು ಪೈಪ್ ಕಾಲುವೆಗಳನ್ನು ನಿರ್ಮಿಸುತ್ತದೆ . SAUNI ಯೋಜನೆಯ ಪೈಪ್ ಗಳನ್ನೂ ಭೂಗತವಾಗಿ ಕಲ್ಪಿಸುತ್ತದೆ. ಅಂದರೆ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಬೇಕಾಗಿಲ್ಲ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 4.ಭೌಗೋಳಿಕ ವೈಶಿಷ್ಟ್ಯಗಳನ್ನೂ (Geographical Indications) ಉತ್ತೇಜಿಸಲು ಸಾಮಾಜಿಕ ಜಾಲತಾಣ ಅಭಿಯಾನ

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ

ಪ್ರಿಲಿಮ್ಸ್ ಗಾಗಿ

- ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ನೇತೃತ್ವದಲ್ಲಿ ಬರುವ ಐಪಿಆರ್ ಉತ್ತೇಜನ ಹಾಗೂ ನಿರ್ವಹಣೆ ಕೋಶ (ಸಿಐಪಿಎಎಂ) ಹೊಸದಾಗಿ ಭಾರತದ ಭೌಗೋಳಿಕ ವೈಶಿಷ್ಟ್ಯ ಕುರಿತು ಜನಜಾಗೃತಿ ಮೂಡಿಸುವ ಸಾಮಾಜಿಕ ಜಾಲತಾಣ ಅಭಿಯಾನವನ್ನು ಪ್ರಾರಂಭಿಸಿದೆ .
- ಇದರ ಮುಖ್ಯ ಉದ್ದೇಶವೆಂದರೆ ಬೌದ್ಧಿಕ ಆಸ್ತಿ ಹಕ್ಕುಗಳ ಪ್ರಾಮುಖ್ಯತೆಯ ಬಗ್ಗೆ ಹೆಚ್ಚು ಜನರಿಗೆ ಅರಿವು ಮೂಡಿಸುವುದು.

ಮೇನ್ಸ್ ಪರೀಕ್ಷೆಗಾಗಿ

**ಭೌಗೋಳಿಕ ವೈಶಿಷ್ಟ್ಯಗಳೆಂದರೇನು ಮತ್ತು ಅವುಗಳ ಮಹತ್ವವೇನು ...??**

**ಭೌಗೋಳಿಕ ವೈಶಿಷ್ಟ್ಯ**

- ಭೌಗೋಳಿಕ ವೈಶಿಷ್ಟ್ಯ ಎನ್ನುವುದು ಆಯಾ ಭೌಗೋಳಿಕ ವೈಶಿಷ್ಟ್ಯಗಳನ್ನು ಹೊಂದಿರುವ ನಿಗದಿತ ಉತ್ಪನ್ನಗಳಿಗೆ ನೀಡುವ ಟ್ಯಾಗ್ ಆಯಾ ಪ್ರದೇಶದ ಮೂಲದಿಂದಲೇ ಇದು ವೈಶಿಷ್ಟ್ಯವನ್ನು ಗಳಿಸುವಂತೆ ಉತ್ಪನ್ನಗಳಿಗೆ ಇದು ಸೀಮಿತವಾಗಿರುತ್ತದೆ.
- ಇಂಥ ಹೆಸರು, ಸಂಕೇತ ಅಥವಾ ಸಂಜ್ಞೆಗಳು ಗುಣಮಟ್ಟ ಹಾಗೂ ವೈಶಿಷ್ಟ್ಯದ ಪ್ರತೀಕವಾಗಿವೆ. ಕೇವಲ ನೋಂದಾಯಿತ, ಅನುಮತಿ ಪಡೆದ ಬಳಕೆದಾರರಷ್ಟೇ ಇದನ್ನು ಬಳಸಲು ಅವಕಾಶವಿರುತ್ತದೆ.
- ಡಾರ್ಜಿಲಿಂಗ್ ಟೀ, ಮಹಾಬಲೇಶ್ವರ ಸ್ಟ್ರಾಬೆರಿ, , ಬನಾರಾಸಿ ಸೀರೆಗಳು ಮತ್ತು ತಿರುಪತಿ ಲಡ್ಡು ಕೆಲವು ಉತ್ತಮ ಉದಾಹರಣೆಗಳು

ದೇಶದ ಸಮೃದ್ಧ ಸಂಸ್ಕೃತಿ ಮತ್ತು ಸಾಮೂಹಿಕ ಬೌದ್ಧಿಕ ಪರಂಪರೆಯ ಅವಿಭಾಜ್ಯ ಭಾಗವಾಗಿರುವ ಕಾರಣ GI ಗಳು ದೇಶಕ್ಕೆ ಅತ್ಯಂತ ಮಹತ್ವದ್ದಾಗಿದೆ.

- GI ಗಳ ಪ್ರಚಾರವು ಸರ್ಕಾರದ ಮೇಕ್ ಇನ್ ಇಂಡಿಯಾ 'ಯಲ್ಲಿ ಬರುತ್ತದೆ. ಇಂಥ ಜಿಐ ಟ್ಯಾಗ್‌ನಿಂದಾಗಿ ಹಲವಾರು ವಿಶಿಷ್ಟ ಕರಕುಶಲ ಹಾಗೂ ವಸ್ತುಗಳು ಮತ್ತು ಉತ್ಪನ್ನಗಳಿಗೆ ವರದಾನವಾಗಲಿದೆ.
- ಅದರಲ್ಲೂ ಮುಖ್ಯವಾಗಿ ಅನೌಪಚಾರಿಕ ವಲಯದಲ್ಲಿ ಉತ್ಪಾದನೆಯಾಗುವ ಇಂಥ ಉತ್ಪನ್ನಗಳಿಗೆ ಮಾನ್ಯತೆ ಸಿಗಲಿದೆ. ಕೆಲವೊಂದು ಜಿಐ ಉತ್ಪನ್ನಗಳು ಗ್ರಾಮೀಣ ಹಾಗೂ ಗುಡ್ಡಗಾಡು ಪ್ರದೇಶಗಳ ಆರ್ಥಿಕತೆಯನ್ನು ಬೆಳೆಸುವಲ್ಲೂ ಸಹಕಾರಿಯಾಗಲಿವೆ.

- ಇದು ಸಾಮಾನ್ಯವಾಗಿ ಕರಕುಶಲ ಕಲಾವಿದರು, ರೈತರು, ನೇಕಾರರು ಮತ್ತಿತರಿಗೆ ಆದಾಯ ಹೆಚ್ಚಿಸಲು ಅನುಕೂಲವಾಗಲಿದೆ. ಅವರ ಕೌಶಲ ಹಾಗೂ ಜ್ಞಾನವನ್ನು, ವಿಧಾನಗಳನ್ನು ಒಂದು

ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುವಲ್ಲೂ ಇದು ಮಹತ್ವದ ಪಾತ್ರ ವಹಿಸುತ್ತದೆ. ಇದರಿಂದ ಇದನ್ನು ಸಂರಕ್ಷಿಸಿ ಉತ್ತೇಜಿಸುವ ಅಗತ್ಯವಿದೆ.

SOURCE-HINDU AND OTHER NEWS PAPERS

**5. ಭಾರತ-ನೇಪಾಳ ಸಮರಾಭ್ಯಾಸ 'ಸೂರ್ಯ ಕಿರಣ್'**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

- ಭಾರತ ಮತ್ತು ನೇಪಾಳ ನಡುವಿನ 12 ನೇ ಮಿಲಿಟರಿ ಸಮರಭ್ಯಾಸ ಸೂರ್ಯ ಕಿರಣ್-XII ಆರಂಭಗೊಂಡಿದೆ. ಉಭಯ ದೇಶಗಳ ಸೇನೆ ನಡುವೆ ಸುಮಾರು ೩೦೦ ಸೈನಿಕರು ಭಾಗವಹಿಸಲಿದ್ದಾರೆ
- ನೈಸರ್ಗಿಕ ವಿಪತ್ತು ನಿರ್ವಹಣೆ, ಒಳನಸುಳುವಿಕೆಯನ್ನು ತಡೆಯುವುದು ಹಾಗೂ ಅರಣ್ಯ ಸಮರಕ್ಕೆ ಅಗತ್ಯ ಕೌಶಲ್ಯಗಳ ಮೇಲೆ ಸಮರಭ್ಯಾಸದಲ್ಲಿ ಕೇಂದ್ರಿಕರಿಸಲಾಗುವುದು.
- The 11th edition of the joint exercise was held in Pithoragarh in Uttarakhand.
- ಸೂರ್ಯ ಕಿರಣ್-XII ಸಮರಭ್ಯಾಸದಲ್ಲಿ ಬಂಡುಕೋರರ ನಿಗ್ರಹ ಕಾರ್ಯಾಚರಣೆ ಬಗ್ಗೆ ವಿವಿಧ ಪ್ರದೇಶಗಳಲ್ಲಿ ಎರಡು ದೇಶದ ಸೇನಾ ಪಡೆಗಳಿಗೆ ತರಭೇತಿಯನ್ನು ನೀಡಲಾಗುವುದು.
- ನೈಸರ್ಗಿಕ ವಿಕೋಪ ಸಂದರ್ಭಗಳಲ್ಲಿ ಮಾನವೀಯ ನೆರವು ನೀಡುವುದು ಸೇರಿದಂತೆ ಪರಿಸರ ಸಂರಕ್ಷಣೆಗೂ ಈ ಸಮರಭ್ಯಾಸದಲ್ಲಿ ಒತ್ತು ನೀಡಲಾಗುವುದು.
- ಈ ಸಮರಭ್ಯಾಸದಲ್ಲಿ ಭಾರತೀಯ ಸೇನಾಪಡೆ ಅಧಿಕಾರಿಗಳು ಹಾಗೂ ಪಂಜಾಬ್ ಸೇನಾತುಕಡಿಯ ಎಕ್ತಾ ಶಕ್ತಿ ಬೆಟಾಲಿಯನ್ ಭಾಗವಹಿಸಲಿವೆ. ಇನ್ನು ನೇಪಾಳದ ಪರವಾಗಿ ದುರ್ಗ ಬಕ್ಷ್ ಬೆಟಾಲಿಯನ್ ಭಾಗವಹಿಸಲಿದೆ.
- ಸಮರಭ್ಯಾಸದಲ್ಲಿ ಉಭಯ ದೇಶಗಳ ಸೇನಾ ಪಡೆಗಳು ತಮ್ಮ ಅನುಭವ ಹಾಗೂ ಕೌಶಲ್ಯವನ್ನು ಹಂಚಿಕೊಳ್ಳುವ ಮೂಲಕ ಎರಡು ದೇಶಗಳ ನಡುವಿನ ಸ್ನೇಹ ಸಂಬಂದ ಬಲಗೊಳಿಸಲು ನೆರವಾಗಲಿವೆ.

**6.ಆಲಮಟ್ಟಿ ಆಣೆಕಟ್ಟೆ ಎತ್ತರಕ್ಕೆ ಹಸಿರು ನ್ಯಾಯಾಧಿಕರಣ ತಡೆ**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

- ಉತ್ತರ ಕರ್ನಾಟಕ ಭಾಗದ ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಆಲಮಟ್ಟಿ ಆಣೆಕಟ್ಟೆಯ ಎತ್ತರವನ್ನು ಇನ್ನಷ್ಟು ಹೆಚ್ಚಿಸುವ ಕರ್ನಾಟಕ ರಾಜ್ಯ ಸರಕಾರದ ಪ್ರಸ್ತಾವನೆಗೆ ಕೇಂದ್ರ ಹಸಿರು ನ್ಯಾಯಾಧಿಕರಣ ಅನುಮತಿ ಲಭಿಸದೇ ತಾತ್ಕಾಲಿಕ ಹಿನ್ನಡೆ ಉಂಟಾಗಿದೆ.
- ಆಲಮಟ್ಟಿ ಆಣೆಕಟ್ಟೆ ಎತ್ತರಿಸುವ ಕರ್ನಾಟಕದ ಪ್ರಸ್ತಾಪದ ವಿರುದ್ಧ ನೆರೆ ರಾಜ್ಯಗಳು ವಿರೋಧ ವ್ಯಕ್ತ ಪಡಿಸಿರುವ ಹಿನ್ನೆಲೆಯಲ್ಲಿ ಹಸಿರು ಸಮಿತಿ ಸಮ್ಮತಿ ನಿರಾಕರಿಸಿದ್ದು ಈ ವಿಷಯದಲ್ಲಿ ಮೊದಲು ಕೇಂದ್ರ ಜಲ ಆಯೋಗ (ಸಿಡಬ್ಲ್ಯು ಸಿ)ದ ಅನುಮತಿ ಪಡೆಯುವಂತೆ ಸೂಚಿಸಿದೆ.
- ರಾಜ್ಯದ ಪ್ರಸ್ತಾಪ ಕುರಿತು ನದಿ ಕಣಿವೆ ಮತ್ತು ಜಲವಿದ್ಯುತ್ ಯೋಜನೆಗಳ ಕುರಿತಾದ ತಜ್ಞರ ಪರಿಶೀಲನಾ ಸಮಿತಿ ಕಳೆದ ತಿಂಗಳು ಕೂಲಂಕಷ ಪರಿಶೀಲನೆ ನಡೆಸಿತ್ತು. "ಜಲವಿಜ್ಞಾನ ಮತ್ತು ಅಂತರ್‌ರಾಜ್ಯ ಅಂಶಗಳಿಗೆ ಸಂಬಂಧಿಸಿದಂತೆ ಸಿಡಬ್ಲ್ಯುಸಿಯಿಂದ ಅಗತ್ಯ ಪರಿಶೀಲನೆ ನಡೆಸಿ ಸಮ್ಮತಿ ಪಡೆಯದೇ ಅವಸರದಲ್ಲಿ ಆಣೆಕಟ್ಟು ಎತ್ತರಿಸಲು ಕರ್ನಾಟಕ ಮುಂದಾಗಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಸಮಿತಿ ಈ ಕುರಿತ ಅನುಮತಿ ನೀಡಿಕೆ ನಿರ್ಧಾರವನ್ನು ಮುಂದೂಡಿದೆ,"

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಸಾಮಾನ್ಯವಾಗಿ ಈ ವಿಷಯದಲ್ಲಿ ತಜ್ಞರ ಪರಿಶೀಲನಾ ಸಮಿತಿ(ಇಎಸಿ)ಯ ಅನುಮತಿ ಆಧರಿಸಿ ಸಚಿವಾಲಯ ಅಂತಿಮ ಮುದ್ರೆ ಹಾಕುತ್ತದೆ.

- ಆಣೆಕಟ್ಟೆ ಎತ್ತರ ಕುರಿತು ಕರ್ನಾಟಕ ಸರಕಾರ ಮೊದಲು ಸಿಡಬ್ಲ್ಯುಸಿಯಿಂದ ಅಗತ್ಯ ಅನುಮತಿ ಪಡೆಯಲಿ. ಆ ಬಳಿಕ ಮುಂದಿನ ಸಭೆಯಲ್ಲಿ ಈ ಪ್ರಸ್ತಾಪ ಕುರಿತು ಮರುಪರಿಶೀಲನೆ ನಡೆಸಲಾಗುವುದು ಎಂದು ಇಎಸಿ ಸ್ಪಷ್ಟ ಪಡಿಸಿದೆ.

- ಕರ್ನಾಟಕದ ಈ ಪ್ರಸ್ತಾಪದ ವಿರುದ್ಧ ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳು ತಕರಾರು ಎತ್ತಿದ್ದು ಹಲವು ಬಾರಿ ಕೇಂದ್ರದ ಬಳಿಗೆ ನಿಯೋಗ ಹೋಗಿವೆ.

- ಹಾಲಿ ಇರುವ 519.60 ಮೀಟರ್ ಆಲಮಟ್ಟಿ ಆಣೆಕಟ್ಟೆಯ ಎತ್ತರವನ್ನು 524.256 ಮೀಟರ್‌ಗೆ ಎತ್ತರಿಸುವುದು ಹಾಗೂ ನಾಲ್ಕು ಕಡೆ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದು ಕರ್ನಾಟಕದ ಉದ್ದೇಶವಾಗಿದ್ದು ಈ ಕುರಿತು ಹಲವು ಬಾರಿ ಕೇಂದ್ರದ ಜತೆ ಸಮಾಲೋಚನೆ ನಡೆಸಿದ್ದಾಗಿದೆ. ಈ ಯೋಜನೆ ಪೂರ್ಣಗೊಂಡರೆ ಉತ್ತರ ಕರ್ನಾಟಕದ ಏಳು ಜಿಲ್ಲೆಗಳ 5.3 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಸಲವತ್ತು ಲಭಿಸಲಿದೆ.

**7. RTI: ಹಾಗೆಲ್ಲಾ ಬ್ಯಾಂಕ್ ಸಿಬ್ಬಂದಿಯ ಖಾಸಗಿ ಮಾಹಿತಿ ಕೇಳ್ಬೇಡಿ**

**ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ**

- ಮಾಹಿತಿ ಹಕ್ಕು ಕಾಯಿದೆ ಅಸ್ತ್ರ ಝಳಪಿಸಿ ಇಂದು ಯಾವುದೇ ಸಾಮಾನ್ಯನಿಂದ ಹಿಡಿದು ಗಣ್ಯ ವ್ಯಕ್ತಿಯವರೆಗೂ ಮಾಹಿತಿ ಪಡೆಯಲು ಅವಕಾಶವಿದೆ. ಆದರೆ ಬ್ಯಾಂಕ್ ಸಿಬ್ಬಂದಿಗಳ ಮಾಹಿತಿ ಪಡೆಯಲು ಸ್ವಲ್ಪ ಕಷ್ಟಸಾಧ್ಯವಾಗಬಹುದು.

- ಸಾರ್ವಜನಿಕ ಹಿತಾಸಕ್ತಿ ಹೊರತುಪಡಿಸಿ ಬ್ಯಾಂಕ್ ಉದ್ಯೋಗಿಗಳ ಖಾಸಗಿ ಮಾಹಿತಿ ಪಡೆಯಲು RTIನಲ್ಲಿ ಅವಕಾಶವಿಲ್ಲ. ಬ್ಯಾಂಕ್ ನೌಕರನ ಮಾಹಿತಿ ಸಾರ್ವಜನಿಕವಾಗುವುದಕ್ಕೆ ಆರ್‌ಟಿಐ ಅಡಿ ವಿನಾಯಿತಿ ನೀಡಲಾಗಿದೆ.

- ಅಂದರೆ ಬ್ಯಾಂಕ್‌ನ ಗುಮಾಸ್ತನಿಂದ ಹಿಡಿದು ಉನ್ನತ ಸ್ಥಾನದ ಸಿಬ್ಬಂದಿಯ ಖಾಸಗಿ ಮಾಹಿತಿಯನ್ನು ನೀಡಲಾಗುವುದಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ.

- ಮಾಹಿತಿ ಹಕ್ಕು ಕಾಯ್ದೆಯಡಿ ಕೆನರಾ ಬ್ಯಾಂಕ್ ಪಾರದರ್ಶಕತೆ ಕಾಪಾಡುವ ದೃಷ್ಟಿಯಿಂದ ತನ್ನ 2002 ರಿಂದ 2006ರವರೆಗಿನ ಎಲ್ಲಾ ನೌಕರರ ಮಾಹಿತಿಯನ್ನು ಒದಗಿಸಬೇಕೆಂದು ಕೇರಳ ಹೈಕೋರ್ಟ್ ನಿರ್ದೇಶನ ನೀಡಿತ್ತು. ಇದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

**8. ಲಾಕಿ ರ್ಯಾನ್ಸಮ್‌ವೇರ್' ಇರಲಿ ಎಚ್ಚರ-CERT-In**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

- ಲಾಕಿ ರ್ಯಾನ್ಸಮ್‌ವೇರ್ ಎನ್ನುವ ಹೊಸ ವೈರಸ್ ಬಗ್ಗೆ ಎಚ್ಚರವಿರಲಿ. ಈ ವೈರಸ್ ನಿಮ್ಮ ಕಂಪ್ಯೂಟರ್‌ನ್ನು ಲಾಕ್ ಮಾಡಬಹುದು ಎಂದು ಭಾರತೀಯ ಕಂಪ್ಯೂಟರ್ ತುರ್ತು ಪ್ರತಿಕ್ರಿಯೆ ತಂಡ (CERT-In) ಎಚ್ಚರಿಕೆ ನೀಡಿದೆ.
- ದುಷ್ಕರ್ಮಿಗಳು ದುರುದ್ದೇಶದಿಂದ ಲಾಕಿ ರ್ಯಾನ್ಸಮ್‌ವೇರ್ ಹೆಸರಿನ ವೈರಸ್ ಹರಿಬಿಟ್ಟಿದ್ದಾರೆ. ಈ ಭಯಾನಕ ವೈರಸ್ ಅಟ್ಯಾಕ್ ಆಗಿರುವ ಸಿಸ್ಟಮ್‌ಗಳನ್ನು ಅನ್‌ಲಾಕ್ ಮಾಡಲು ಹಣದ ಬೇಡಿಕೆ ಇಡಲಾಗುತ್ತದೆ ಎಂದು ಸೈಬರ್ ಸುರಕ್ಷತಾ ಕೇಂದ್ರ ಎಚ್ಚರಿಸಿದೆ. ಸ್ಪ್ಯಾಮ್ ಮೇಲ್‌ಗಳ ಸಾಮಾನ್ಯ ವಿಷಯದ ಜತೆ ಈ ವೈರಸ್ ಹರಡುತ್ತದೆ ಎಂದು ತಿಳಿಸಲಾಗಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ಕಾರ್ಯಾಚರಣೆ ಕುರಿತು 23 ದಶಲಕ್ಷಕ್ಕೂ ಹೆಚ್ಚಿನ ಸಂದೇಶಗಳನ್ನು ಕಳುಹಿಸಲಾಗಿದೆ ಎಂದು ವರದಿಗಳು ಸೂಚಿಸುತ್ತಿದೆ. 'ಪ್ಲೀಸ್ ಪ್ರಿಂಟ್', 'ಡಾಕ್ಯುಮೆಂಟ್', ಫೋಟೋ ಇಮೇಜಸ್ ಸ್ಕ್ಯಾನ್ ಸೇರಿದಂತೆ ಸಾಮಾನ್ಯ ವಿಷಯ ಒಳಗೊಂಡ ಸಂದೇಶಗಳನ್ನು ಕಳುಹಿಸಲಾಗಿದೆ. ಈ ಬಗ್ಗೆ ಎಚ್ಚರವಾಗಿರಬೇಕು ಎಂದು CERT-In ಸೂಚಿಸಿದೆ.

**1. ತಿಂಗಳಿಗೆ ರೂ. 18,000 /- ರಾಷ್ಟ್ರೀಯ ಕನಿಷ್ಠ ವೇತನವನ್ನು ನಿಗದಿಯ ಬಗ್ಗೆ**

**ಯಾವುದೇ ಕ್ರಮವಿಲ್ಲ -ಕೇಂದ್ರ ಸರ್ಕಾರ**

**ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆ ಗಾಗಿ**

ಪ್ರಿಲಿಮ್ಸ್ ಪರೀಕ್ಷೆಗಾಗಿ

- ರಾಷ್ಟ್ರೀಯ ಕನಿಷ್ಟ ಮಾಸಿಕ ವೇತನವನ್ನು ಕಾರ್ಮಿಕ ಸಂಹಿತೆಯು ಕನಿಷ್ಠ ವೇತನ ಕಾಯ್ದೆ ಅಡಿಯಲ್ಲಿ 18,000 ರೂಪಾಯಿ ನಿಗದಿಪಡಿಸಿಲ್ಲವೆಂದು ಕಾರ್ಮಿಕ ಸಚಿವಾಲಯವು ಸ್ಪಷ್ಟಪಡಿಸಿದೆ.
- ಕಾರ್ಮಿಕ ಸಂಘಗಳ ಬೇಡಿಕೆಯಂತೆ ಕುಟುಂಬದ ಸದಸ್ಯರ ಸಂಖ್ಯೆಯನ್ನು 3 ರಿಂದ 6ಕ್ಕೆ ಹೆಚ್ಚಿಸುವ ಮೂಲಕ ವೇತನವನ್ನು ಸರಿಪಡಿಸುವ ಅಥವಾ ಪರಿಷ್ಕರಿಸುವ ಯಾವುದೇ ಕ್ರಮವಿಲ್ಲಾ ಎಂದು ತಿಳಿಸಿದೆ.

- ಈ ಹೇಳಿಕೆಯಿಂದ "ಆತಂಕಕಾರಿ" ಉದ್ಯೋಗಿಗಳಿಗೆ ದೊಡ್ಡ ಆಶಾದಾಯಕರವಾಗುವುದಲ್ಲದೆ ಇದರಿಂದ ಅವರಲ್ಲಿ ಸ್ಪರ್ಧಾತ್ಮಕತೆಯನ್ನು ಪರಿಣಾಮ ಬೀರುತ್ತದೆ ಮತ್ತು ಕನಿಷ್ಠ ವೇತನವನ್ನು ಬೇಡಿಕೆ ಮಾಡುತ್ತಿರುವ ಟ್ರೇಡ್ ಯೂನಿಯನಿಗಳಿಗೆ ಹಿನ್ನಡೆ ಯಾಗಿದೆ.

ಮೇನ್ಸ್ ಪರೀಕ್ಷೆ ಗಾಗಿ

**ಇದರ ಹಿನ್ನಲೆಯನ್ನು ಸಂಕ್ಷಿಪ್ತ ವಾಗಿ ತಿಳಿಸಿ ಮತ್ತು ಸುಪ್ರೀಂ ಕೋರ್ಟ್ ಸಮಾನ ಕೆಲಸ ಸಮಾನ ವೇತನ ಎಂಬ ಹೇಳಿಕೆ ನೀಡಿದ್ದರು ಸರ್ಕಾರ ಯಾಕೆ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಕ್ರಮ ಕೈಗೊಂಡಿಲ್ಲ ಯೋಚಿಸಿ..??**

- ಕನಿಷ್ಠ ವೇತನ ಮಸೂದೆಯನ್ನು ಕಳೆದ ತಿಂಗಳು ಲೋಕಸಭೆಯಲ್ಲಿ ಮಂಡಿಸಲಾಗಿತ್ತು . ಕೇಂದ್ರ ಸರಕಾರವು ಕನಿಷ್ಠ ವೇತನವನ್ನು ತಿಂಗಳಿಗೆ ರೂ 18,000 ರಂತೆ ನಿಗದಿಪಡಿಸಿದೆ ಎಂದು ಕೆಲವು ಮಾಧ್ಯಮಗಳು ವರದಿಮಾಡಿದ್ದವು..
- ಈ ಹಿನ್ನಲೆಯಲ್ಲಿ ಕೇಂದ್ರಸಚಿವಾಲಯ ಇದು ಕೇವಲ ಗಾಳಿ ಮಾತು ಕನಿಷ್ಠ ವೇತನದ ಬಗ್ಗೆ ನಾವು ಯಾವುದೇ ಪರಿಸ್ಕೃತ ಕ್ರಮ ಕೈಗೊಂಡಿಲ್ಲ ಎಂದು ತಿಳಿಸಿತು

**ವೇತನ ಸಂಹಿತೆ ಮಸೂದೆ- 2017**

- ಇದು (I) 1936ರ ವೇತನಗಳ ಕಾಯಿದೆ, , (ii)1949 ರ ಕನಿಷ್ಠ ವೇತನ ಕಾಯಿದೆ, (iii)1965 ರ ಬೋನಸ್ ಆಕ್ಟ್ ಮತ್ತು (iv) 1976 ರ ಸಮಾನ ಸಂಭಾವನೆ ವೇತನಕ್ಕೆ ಸಂಬಂಧಿಸಿದ ಎಲ್ಲಾ ಕಾನೂನುಗಳನ್ನು ಕ್ರೋಢೀಕರಿಸಲು ಪ್ರಯತ್ನಿಸುತ್ತದೆ.
- ಯಾವುದೇ ಉದ್ಯಮ, ವ್ಯಾಪಾರ, ವ್ಯಾಪಾರ, ಉತ್ಪಾದನೆ ಅಥವಾ ಉದ್ಯೋಗವನ್ನು ನಡೆಸುವ ಸಂಸ್ಥೆಗಳಿಗೆ ಈ ಕೋಡ್ ಅನ್ವಯಿಸುತ್ತದೆ. ಇದು ಸರ್ಕಾರಿ ಸಂಸ್ಥೆಗಳಿಗೂ ಸಹ ಒಳಗೊಳ್ಳುತ್ತದೆ.
- ಕೇಂದ್ರೀಯ ಸರ್ಕಾರಕ್ಕೆ ಸಂಬಂಧಿಸಿರುವ ಸಂಸ್ಥೆಗಳಾದ ರೈಲ್ವೇಗಳು, ಗಣಿಗಳು ಮತ್ತು ತೈಲ ಕ್ಷೇತ್ರಗಳಿಗೆ ವೇತನ-ಸಂಬಂಧಿತ ನಿರ್ಧಾರಗಳನ್ನು ಮಾಡುತ್ತದೆ. ಮತ್ತು ಯಾವುದೇ ಇತರ ಸಂಸ್ಥೆಗಳಿಗೆ ರಾಜ್ಯ ಸರ್ಕಾರಗಳು ನಿರ್ಧಾರ ತೆಗೆದುಕೊಳ್ಳುತ್ತವೆ.
- ವೇತನಗಳಲ್ಲಿ ಸಂಬಳ, ಭತ್ಯೆ ಅಥವಾ ವಿತ್ತೀಯ ನಿಯಮಗಳಲ್ಲಿ ವ್ಯಕ್ತಪಡಿಸಲಾಗುವ ಯಾವುದೇ ಇತರ ಅಂಶಗಳು ಸೇರಿವೆ. ಆದರೆ ನೌಕರರಿಗೆ ಪಾವತಿಸಬಹುದಾದ ಬೋನಸ್ ಅಥವಾ ಯಾವುದೇ ಪ್ರಯಾಣದ ಭತ್ಯೆಯನ್ನು ಇದರಲ್ಲಿ ಒಳಗೊಂಡಿರುವುದಿಲ್ಲ.

**ರಾಷ್ಟ್ರೀಯ ಕನಿಷ್ಠ ವೇತನ:**

- ದೇಶದ ರಾಷ್ಟ್ರೀಯ ಕನಿಷ್ಠ ವೇತನವನ್ನು ಕೇಂದ್ರ ಸರ್ಕಾರವು ಸೂಚಿಸಬಹುದು. ಇದು ವಿವಿಧ ರಾಜ್ಯಗಳು ಅಥವಾ ಭೌಗೋಳಿಕ ಪ್ರದೇಶಗಳಿಗೆ ವಿವಿಧ ರಾಷ್ಟ್ರೀಯ ಕನಿಷ್ಠ ವೇತನವನ್ನು ಸರಿಪಡಿಸಬಹುದು. ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ನಿರ್ಧರಿಸಿದ ಕನಿಷ್ಠ ವೇತನವು ರಾಷ್ಟ್ರೀಯ ಕನಿಷ್ಠ ವೇತನಕ್ಕಿಂತ ಕಡಿಮೆಯಿರುವುದಿಲ್ಲ.
- ಈ ವೇತನವು ರಾಷ್ಟ್ರೀಯ ಕನಿಷ್ಠ ವೇತನಕ್ಕಿಂತ ಹೆಚ್ಚಿನದಾದರೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಅವರಿಂದ ನಿಗದಿಪಡಿಸಲಾದ ಕನಿಷ್ಠ ವೇತನವನ್ನು ಕಡಿಮೆಗೊಳಿಸುವುದಿಲ್ಲ.

**ಕನಿಷ್ಠ ವೇತನವನ್ನು ನಿಗದಿಪಡಿಸುವುದು**

- ವೇತನ ಸಂಹಿತೆಯು ಉದ್ಯೋಗಿಗಳಿಗೆ ನೌಕರರಿಗೆ ಕನಿಷ್ಠ ವೇತನವನ್ನು ಪಾವತಿಸುವುದು ಅಗತ್ಯವಾಗಿರುತ್ತದೆ. ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಈ ವೇತನವನ್ನು ಸೂಚಿಸುತ್ತವೆ.ಕನಿಷ್ಠ ವೇತನವನ್ನು ಸಮಯ, ಅಥವಾ ತಯಾರಿಸಿದ ತುಣುಕುಗಳ ಸಂಖ್ಯೆ, ಇತರ ಆಧಾರದ ಮೇಲೆ ನಿಗದಿಯಾಡಿಸಲಿದೆ .
- ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಪ್ರತಿ ಐದು ವರ್ಷಗಳಿಗೂ ಕನಿಷ್ಠ ವೇತನವನ್ನು ಪರಿಶೀಲಿಸುತ್ತೇವೆ ಅಥವಾ ಪರಿಷ್ಕರಿಸುತ್ತವೆ ಎಂದು ವೇತನ ಸಂಹಿತೆಯವೇತನ ಸಂಹಿತೆಯು ಸೂಚಿಸುತ್ತದೆ.

**ಕೆಲಸದ ಸಮಯ**

- ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಕೆಲಸದ ದಿನದ ಅವಧಿಯನ್ನು ನಿಗದಿಪಡಿಸುತ್ತದೆ ಇದಲ್ಲದೆ, ಅವರು ಪ್ರತಿ ವಾರ ಉದ್ಯೋಗಿಗಳಿಗೆ ವಿಶ್ರಾಂತಿಗಾಗಿ ದಿನವನ್ನುನಿಗದಿಪಡಿಸುತ್ತದೆ . ಅವಧಿಗೆಗೆ ಮೀರಿ ಹೆಚ್ಚಿನ ಅವಧಿ ಕೆಲಸ ಮಾಡುವ ನೌಕರರಿಗೆ ಸಾಮಾನ್ಯ ವೇತನಕ್ಕಿಂತ ಕನಿಷ್ಠ ಎರಡು ಬಾರಿ ವೇತನ ನೀಡುವುದು.

ನಮ್ಮ ಐಎಎಸ್ ಅಕಾಡೆಮಿ
ನಮ್ಮ ಶಿಕ್ಷಣ.... ಮಸ್ಸೂರಿಗೆ/ಮೈಸೂರಿಗೆ

**ಕಾರ್ಮಿಕ ಕಾನೂನುಗಳಿಗೆ ನೂತನ ಸಂಹಿತೆ**

- ಕಾರ್ಮಿಕ ಕಾನೂನುಗಳ ಸುಧಾರಣೆ ಅಂಗವಾಗಿ 38 ವಿವಿಧ ಕಾರ್ಮಿಕ ಕಾನೂನುಗಳನ್ನು ತರ್ಕಬದ್ಧಗೊಳಿಸಿ ನಾಲ್ಕು ಕಾರ್ಮಿಕ ಸಂಹಿತೆಗಳ ರಚನೆಗೆ ಸರ್ಕಾರ ಮುಂದಾಗಿದೆ.38 ಕಾರ್ಮಿಕ ಕಾಯ್ದೆಗಳನ್ನು **ವೇತನ ಸಂಹಿತೆ, ಕೈಗಾರಿಕಾ ಸಂಬಂಧಗಳ ಸಂಹಿತೆ, ಸಾಮಾಜಿಕ ಭದ್ರತಾ ಸಂಹಿತೆ ಮತ್ತು ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ** ಎಂಬ ನಾಲ್ಕು ಭಾಗಗಳಲ್ಲಿ ವರ್ಗೀಕರಿಸಲಾಗುತ್ತದೆ.

**2. ದೀಕ್ಷಾ ಪೋರ್ಟಲ್**

**ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆ ಗಾಗಿ**

ಪ್ರಿಲಿಮ್ಸ್ ಪರೀಕ್ಷೆಗಾಗಿ

- ಸರ್ಕಾರವು ದಿಕ್ಷಾ ಪೋರ್ಟಲ್ ನ್ನು ಪ್ರಾರಂಭಿಸಿದೆ -ಇದರಿಂದ ಶಿಕ್ಷಕರಿಗೆ ರಾಷ್ಟ್ರೀಯ ಆಧುನಿಕ ಸಂಪನ್ಮೂಲಗಳನ್ನು ಒದಗಿಸುತ್ತದೆ. ದೇಶದ ಎಲ್ಲಾ ಶಿಕ್ಷಕರು ಈ ಪೋರ್ಟಲ್ ಮೂಲಕ ಸುಧಾರಿತ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಾರೆ.
- ಶಿಕ್ಷಕರಿಗೆ ತಮ್ಮ ಜೀವನಶೈಲಿಯನ್ನು ನವೀಕರಿಸಲು ಆಧುನಿಕ ವೇದಿಕೆಯೊಂದನ್ನು ಒದಗಿಸುವುದಕ್ಕಾಗಿ ದೀಕ್ಷಾ ಪೋರ್ಟಲ್ನ್ನು ಮಾನವ ಸಂಪನ್ಮೂಲ ಸಚಿವಾಲಯ ಪ್ರಾರಂಭಿಸಿದೆ .
- ದೀಕ್ಷಾ ಪೋರ್ಟಲ್ ನ್ನು ಶಿಕ್ಷಕರಿಗಾಗಿ ರಾಷ್ಟ್ರೀಯ ಆಧುನಿಕ ಮೂಲಭೂತ ಸೌಕರ್ಯ (National Digital Infrastructures for Our Teacher”.) ಎಂಬ ಅಡಿಬರಹದೊಂದಿಗೆ ಪ್ರಾರಂಬಿಸಲಾಗಿದೆ.
- ಈ ಪೋರ್ಟಲ್ ಶಿಕ್ಷಕ ಸಂಪೂರ್ಣ ಜೀವನ ಚರಿತ್ರೆಯನ್ನು ಒಳಗೊಂಡಿರುತ್ತದೆ - ಶಿಕ್ಷಕರಾಗಿ ಶಿಕ್ಷಕ ಸಂಸ್ಥೆಗಳಲ್ಲಿ(Teacher Education Institutes ) ಸೇರಿಕೊಂಡಿನಿಂದ ಹಿಡಿದು ನಿವೃತ್ತರಾಗುವವರೆಗೆ.
- ಶಿಕ್ಷಕರಿಗೆ ಕಲಿಯಲು ಮತ್ತು ತರಬೇತಿ ಪಡೆಯಲು ಬೇಕಾದಂಥ ಮೌಲ್ಯಮಾಪನ ಸಂಪನ್ಮೂಲಗಳು ದೊರಕುತ್ತವೆ.ಶಿಕ್ಷಕರು ಪ್ರಾರಂಭದಿಂದ ಅವರ ನಿವೃತ್ತಿಯವರೆಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಾಡಿದ ಸಂಪೂರ್ಣ ಕೆಲಸ ಮತ್ತು ಸಾಧನೆಯನ್ನು ದಾಖಲಾಗುವುದು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಮೇನ್ಸ್ ಪರೀಕ್ಷೆ ಗಾಗಿ

**ಈ ಪೋರ್ಟಲ್ ನಿಂದ ಆಗುವ ಪ್ರಯೋಜನಗಳೇನು ??? ಆಧುನಿಕ ತಂತ್ರಜ್ಞಾನದ ಅರಿವಿಲ್ಲದ ಶಿಕ್ಷಕರಿಗೆ ಸರ್ಕಾರ ಯಾವ ರೀತಿ ಕ್ರಮಕೈಗೊಳ್ಳಬಹುದು ಯೋಚಿಸಿ...??**

ಈ ಕೆಳಗಿನವುಗಳನ್ನು ಸೃಷ್ಟಿಸಲು ಶಿಕ್ಷಕನು ಪೋರ್ಟಲ್ ಅನ್ನು ಬಳಸಬಹುದು:

- ಶಿಕ್ಷಕರ ತರಬೇತಿ ವಿಷಯ.
- ಶಿಕ್ಷಕರ ಸಂಕ್ಷಿಪ್ತ ವ್ಯಕ್ತಿತ್ವ
- .
- ತರಗತಿಗೆ ಸಂಬಂಧಿಸಿದ ಸಂಪನ್ಮೂಲಗಳು

- ಮೌಲ್ಯಮಾಪನಗಳ ಸಹಾಯ
- ಸುದ್ದಿ ಮತ್ತು ಪ್ರಕಟಣೆಗಳು
- ಶಿಕ್ಷಕರ ಸಮುದಾಯದ ಬಗ್ಗೆ

**ಈ ಪೋರ್ಟಲ್ ನ ಪ್ರಯೋಜನಗಳು:**

- ಇದರಿಂದ ಶಿಕ್ಷಕರು ತಮ್ಮ ಬೋಧನಾ ಕೌಶಲ್ಯಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಮತ್ತು ತಮ್ಮ ಕೌಶಲ್ಯ ಮತ್ತು ಜ್ಞಾನದಿಂದತಮ್ಮದೇ ಪ್ರೊಫೈಲ್ ಅನ್ನು ರಚಿಸುಲು ಸಹಾಯ ಮಾಡುತ್ತದೆ.
- ಇತ್ತೀಚಿನ ತಂತ್ರಜ್ಞಾನಗಳ ಬಳಕೆಯೊಂದಿಗೆ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ದಿಕ್ಷಾ ಪೋರ್ಟಲ್ ಸಹಾಯ ಮಾಡುತ್ತದೆ. ಸರ್ಕಾರ ಸಂಸ್ಥೆಗಳ ಅಷ್ಟೇ ಅಲ್ಲದೆ , ಖಾಸಗಿ ಸಂಸ್ಥೆಗಳು ಮತ್ತು NGO ಗಳು ಕೂಡ ದಿಕ್ಷ ಪೋರ್ಟಲ್ ನಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ .

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮಿಂದ..... ಮಸ್ಸೂರಿಗೆ/ಮೈಸೂರಿಗೆ

**3. ಮಾತೃತ್ವ ವಂದನಾ ಮಾರ್ಗದರ್ಶಿ**

**ಪ್ರಾಮುಖ್ಯತೆ(PRIORITY) –ಪ್ರಿಲಿಮ್ಸ್  ಪರೀಕ್ಷೆ ಗಾಗಿ**

ಪ್ರಿಲಿಮ್ಸ್ ಪರೀಕ್ಷೆಗಾಗಿ

- ಪ್ರಧಾನಮಂತ್ರಿ ಮಾತೃತ್ವ ವಂದನಾ ಯೋಜನೆಯ (ಪಿಎಂಎಂವಿವೈ) ಮಾರ್ಗದರ್ಶಿ ಸೂತ್ರಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಈಯೋಜನೆಯ ಜಾರಿಯನ್ನು 2017ರ ಜನವರಿಯಲ್ಲಿ ಸ್ವತಃ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೇ ಪ್ರಕಟಿಸಿದ್ದರು.
- ನೇರ ಲಾಭ ವರ್ಗಾವಣೆ ಮಾದರಿಯಲ್ಲಿ ಅರ್ಹ ಫಲಾನುಭವಿಗಳಿಗೆ ನೆರವು ಲಭಿಸುವ ಯೋಜನೆ ಇದಾಗಿದ್ದು, **ಗರ್ಭಿಣಿಯರ ಪರೀಕ್ಷೆ, ಜನನ ನೋಂದಣಿ, ಮಗುವಿಗೆ ಮೊದಲ ಹಂತದ ಲಸಿಕೆ ನೀಡುವುದನ್ನು ಒಳಗೊಂಡಿದೆ**. ಯೋಜನೆಗೆ ಸೇರ್ಪಡೆಯಾಗಲು ಆಧಾರ್ ಲಿಂಕ್ ಮಾಡಬೇಕು.

- ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಆಯಾ ರಾಜ್ಯ ಸರ್ಕಾರಗಳ ಜತೆಗೂಡಿ ಈ ಯೋಜನೆ ಜಾರಿಗೊಳಿಸಿದೆ.
- ಇಂದಿರಾ ಗಾಂಧಿ ಮಾತೃತ್ವ ಸಹಯೋಗ ಯೋಜನೆ ಎನ್ನುವ ಹೆಸರನ್ನು ಪ್ರಧಾನಮಂತ್ರಿ ಮಾತೃತ್ವ ವಂದನಾ ಯೋಜನೆ ಎಂದು ಬದಲಾಯಿಸಲಾಗಿದೆ. 19 ವರ್ಷ ಮೇಲ್ಪಟ್ಟ ಗರ್ಭಿಣಿಯರಿಗೆ ಮೊದಲ ಎರಡು ಹೆರಿಗೆಯಲ್ಲಿ ಸಹಾಯ ನೀಡುವುದು ಯೋಜನೆ ಉದ್ದೇಶ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

SOURCE-THE HINDU/OTHER NEWS PAPER

**4. ಭ್ರಷ್ಟಾಚಾರದ ವಿರುದ್ಧ ಜಾಗೃತಿಗೆ ಸಿವಿಸಿ ಸೂಚನೆ**

ಪ್ರಾಮುಖ್ಯತೆ(PRIORITY) –ಪ್ರಿಲಿಮ್ಸ್ ಪರೀಕ್ಷೆ ಗಾಗಿ

ಪ್ರಿಲಿಮ್ಸ್ ಪರೀಕ್ಷೆಗಾಗಿ

- ಕೇಂದ್ರ ವಿಚಕ್ಷಣಾ ಆಯೋಗ (ಸಿವಿಸಿ)ವು ಸಾರ್ವಜನಿಕ ಕ್ಷೇತ್ರದ ಬ್ಯಾಂಕ್ ಗಳು , ಉದ್ದಿಮೆಗಳು ಮತ್ತು ಇನ್ಸೂರೆನ್ಸ್ ಕಂಪನಿಗಳಿಗೆ ಭ್ರಷ್ಟಾಚಾರದ ವಿರುದ್ಧ ದೇಶದ ಶಾಲಾ, ಕಾಲೇಜು, ಗ್ರಾಮಸಭೆಗಳಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಸೂಚಿಸಿದೆ.
- ಭ್ರಷ್ಟಾಚಾರ ನಿಗ್ರಹ ದಳ ಇತ್ತೀಚೆಗಷ್ಟೇ ಸಾರ್ವಜನಿಕ ವಲಯದ ಬ್ಯಾಂಕ್,ಇನ್ಸೂರೆನ್ಸ್ ಕಂಪನಿಗಳಿಗೆ ನಗರಗಳನ್ನು ವಿಭಾಗ ಮಾಡಿತ್ತು. ಒಟ್ಟು 163 ನಗರಗಳು ಹಾಗೂ 96 ಸಂಘ ಸಂಸ್ಥೆಗಳನ್ನು ಇದಕ್ಕಾಗಿ ಗೊತ್ತು ಮಾಡಲಾಗಿದೆ.

- ಶಾಲೆಕಾಲೇಜುಗಳಲ್ಲಿ ನಡೆಸುವ ಚಟುವಟಿಕೆಗಳು ಯಾವ ಪೀಳಿಗೆಯಲ್ಲಿ ನೈತಿಕ ಮೌಲ್ಯಗಳನ್ನು ಶಾಶ್ವತವಾಗಿಸುತ್ತವೆ, ಇಂಥ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಬೇಕು ಎಂದು ಆಯೋಗ ಅಭಿಪ್ರಾಯ ಪಟ್ಟಿದೆ.
- ಇದಕ್ಕಾಗಿ ಸಾಮಾಜಿಕ ಜಾಲತಾಣ, ಇ-ಮೇಲ್, ಎಸ್ಎಂಎಸ್, ವಾಟ್ಸ್ಆಪ್, ಎಲೆಕ್ಟ್ರಾನಿಕ್ ಮತ್ತು ಮುದ್ರಣ ಮಾಧ್ಯಮನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಂಘ ಸಂಸ್ಥೆಗಳಿಗೆ ಸೂಚಿಸಲಾಗಿದೆ. ಗ್ರಾಮೀಣ, ನಗರ ಪ್ರದೇಶಗಳಲ್ಲಿ ಸಾರ್ವಜನಿಕರು ಕೂಡ ಭ್ರಷ್ಟಾಚಾರ ನಿಗ್ರಹ ಜಾಗೃತಿ ಕಾರ್ಯಕ್ರಮ ಸೆಮಿನಾರ್, ಕಾರ್ಯಾಗಾರಗಳಲ್ಲಿ ಭಾಗವಹಿಸಲು ಮುಕ್ತ ಅವಕಾಶ ನೀಡಲಾಗಿದೆ.
- ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ದೆಹಲಿ, ಪಟನಾ, ಗಯಾ, ರಾಯಪುರ್, ಇಂದೋರ್, ಸೂರತ್ ಸೇರಿದಂತೆ 50 ಪ್ರಮುಖ ನಗರಗಳಲ್ಲಿ ಚಟುವಟಿಕೆ ಕೈಗೊಳ್ಳಲು ವಹಿಸಲಾಗಿದೆ. ಜತೆಗೆ, ಅಕ್ಟೋಬರ್ 30ರಿಂದ ನವೆಂಬರ್ 4ರವರೆಗೆ ಭ್ರಷ್ಟಾಚಾರ ಜಾಗೃತ ವಾರ ವಾಗಿ ಆಚರಣೆ ಮಾಡಲಿದೆ.

**5.ಡ್ರೋನ್ ಗಳಿಗೆ ಚೀನಾ ಪ್ರತ್ಯೇಕ ವಾಯುನೆಲೆ**

ಪ್ರಾಮುಖ್ಯತೆ(PRIORITY) –ಪ್ರಿಲಿಮ್ಸ್ ಪರೀಕ್ಷೆ ಗಾಗಿ

ಪ್ರಿಲಿಮ್ಸ್ ಪರೀಕ್ಷೆಗಾಗಿ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಇದೇ ಮೊದಲ ಬಾರಿಗೆ, ಚೀನಾದಲ್ಲಿ ನಾಗರೀಕ ಡ್ರೋನ್ ಗಳಿಗಾಗಿ ಪ್ರಾಯೋಗಿಕ ವಾಯುನೆಲೆ ತೆರೆಯುತ್ತಿರುವುದಾಗಿ ಅಲ್ಲಿನ ನಾಗರೀಕ ವಾಯುಮಾನ ಆಡಳಿತ ಘೋಷಿಸಿದೆ.
- ಶಾಂಘೈ ಪ್ರಾಂತ್ಯದ ಕ್ವಿಂಗ್ ಪು ಜಿಲ್ಲೆಯಲ್ಲಿ ಡ್ರೋನ್ ಗಳ ವಾಯುನೆಲೆ ತೆರೆಯಲಾಗಿದ್ದು, ಈ ಭಾಗದಲ್ಲಿ ಖಾಸಗಿ ಡ್ರೋನ್ ಗಳು ಹೆಚ್ಚು ಜನಪ್ರಿಯವಾಗಿವೆ. ಸಾವಿರಾರು ಮಾನವರಹಿತ ವಿಮಾನ ವಾಹಿನಿಗಳಿಗೆ ಈ ವಾಯುನೆಲೆ ಸೇವೆ ಒದಗಿಸಲಿದೆ ಎಂದು ಚೀನಾ ಮಾಧ್ಯಮ ವರದಿ ಮಾಡಿದೆ.
- 150 ಮೀಟರ್ ಎತ್ತರಕ್ಕಿಂತ ಕಡಿಮೆಎತ್ತರದಲ್ಲಿ ಹಾರಾಡುವ ಡ್ರೋನ್ ಗಳಿಂದ ಆಗಬಹುದಾದ ಅಪಘಾತಗಳನ್ನು ನಿಯಂತ್ರಿಸುವಲ್ಲಿ ವಾಯುನೆಲೆ ಸಹಾಯಕವಾಗಿದೆ.

- ಚೀನಾದ ವಿಮಾನಗಳ ಮಾಲೀಕರು ಮತ್ತು ಪೈಲಟ್ಸ್ ಅಸೋಸಿಯೇಷನ್ ಪ್ರಕಾರ, ಸುಮಾರು 1.2 ಲಕ್ಷ ನೋಂದಣಿಯಾಗಿರುವ ಡ್ರೋನ್ ಗಳಿವೆ. ಚೀನಾದಲ್ಲಿ 500 ಕ್ಕೂ ಹೆಚ್ಚು ಡ್ರೋನ್ ತಯಾರಿಕಾ ಕಂಪೆನಿಗಳಿದ್ದು, ಶೇ. 70 ರಷ್ಟು ಡ್ರೋನ್ ಮಾರುಕಟ್ಟೆಯನ್ನು ಆವರಿಸಿವೆ.
- ಡ್ರೋನ್ ಗಳನ್ನೂ ಆರಂಭದಲ್ಲಿ ವಿಡಿಯೋಗ್ರಫಿ ಮತ್ತು ಮನರಂಜನೆಗಾಗಿ ಬಳಸಲಾಗಿತ್ತು. ಕ್ರಮೇಣ ರಕ್ಷಣೆ ಮತ್ತು ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಮಹತ್ವ ಪಡೆದುಕೊಂಡಿದೆ.

**6.ಹೈದರಾಬಾದ್ ವಿಮಾನ ನಿಲ್ದಾಣಕ್ಕೆ ಇಂಧನ ದಕ್ಷತೆ ಪ್ರಶಸ್ತಿ**

**ಪ್ರಾಮುಖ್ಯತೆ(PRIORITY) –ಪ್ರಿಲಿಮ್ಸ್ ಪರೀಕ್ಷೆ ಗಾಗಿ**

ಪ್ರಿಲಿಮ್ಸ್ ಪರೀಕ್ಷೆಗಾಗಿ

- ರಾಷ್ಟ್ರೀಯ ಇಂಧನ ದಕ್ಷತೆ ಪ್ರಶಸ್ತಿಗೆ ಹೈದರಾಬಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಭಾಜನವಾಗಿದೆ. ಕಾನ್ಫಡೆರೇಶನ್ ಆಫ್ ಇಂಡಿಯನ್ ಇಂಡಸ್ಟ್ರಿ (ಸಿಐಐ) ಆಯೋಜಿಸಿದ್ದ ಇಂಧನ ನಿರ್ವಹಣೆ ಸಮ್ಮೇಳನದಲ್ಲಿ ಈ ಪ್ರಶಸ್ತಿ ನೀಡಲಾಯಿತು.
- ಇಂಧನ ಮಿತವ್ಯಯ ಉಪಕ್ರಮಗಳಲ್ಲಿ ತೊಡಗಿರುವ ಮತ್ತು ಇಂಧನ ಸುರಕ್ಷಣೆಗೆ ಬದ್ಧತೆ ಪ್ರದರ್ಶಿಸುತ್ತಿರುವ ಸಂಸ್ಥೆಗಳನ್ನು ಈ ಮೂಲಕ ಗುರುತಿಸಲಾಗಿದೆ. ಹೈದರಾಬಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ವಿದ್ಯುತ್ ಚಾಲಿಕ್ ಬಗ್ಗಿಗಳು, ಗ್ರೌಂಡ್ ಹ್ಯಾಂಡ್ಲರ್ ವಾಹನಗಳು, ಟ್ರಾಲಿ ಮೂವರ್ ಗಳು ಮತ್ತು ಇ- ಕಾರುಗಳನ್ನು ನಿಯೋಜಿಸುವ ಮೂಲಕ ಪರಿಸರ ಸ್ನೇಹಿ ಎನಿಸಿದೆ.
- ಕಳೆದ ಮೂರೂ ವರ್ಷಗಲ್ಲಿ ಸುಮಾರು 1.48 ಕೋಟಿ ಯುನಿಟಗಳಷ್ಟು ಇಂಧನ ಉಳಿತಾಯ ಮಾಡಿದ್ದು, ವಿವಿಧ ಕ್ರಮಗಳನ್ನು ಅಳವಡಿಸಿಕೊಳ್ಳುವ ಮೂಲಕ ಹಸಿರು ಮನೆ ಅನಿಲಗಳ ವಿಸರ್ಜನೆ ಪ್ರಮಾಣ ಸಹ ಕಡಿಮೆ ಮಾಡಿದೆ.

**7.ಭಾರತ-ಬ್ರೆಜಿಲ್ ಒಪ್ಪಂದಕ್ಕೆ ಅನುಮೋದನೆ**

ಪ್ರಾಮುಖ್ಯತೆ(PRIORITY) –ಪ್ರಿಲಿಮ್ಸ್ ಪರೀಕ್ಷೆ ಗಾಗಿ

ಪ್ರಿಲಿಮ್ಸ್ ಪರೀಕ್ಷೆಗಾಗಿ

- ಝುಬು( ಭಾರತೀಯ ತಳಿಗಳು) ಜಾನುವಾರುಗಳ ತಳಿ ಗುಣಮಟ್ಟ ಹಾಗೂ ಸಂತಾನೋತ್ಪತ್ತಿ ಕ್ಷಮತೆ ಸುಧಾರಣೆಗೆ ಸಂಬಧಿಸಿದ ಭಾರತ ಮತ್ತು ಬ್ರೆಜಿಲ್ ನಡುವಿನ ಒಪ್ಪಂದಕ್ಕೆ ಕೇಂದ್ರ ಸಂಸತ್ತು ಅನುಮೋದನೆ ನೀಡಿದೆ.
- ಅಕ್ಟೋಬರ್ ನಲ್ಲಿ ಮಾಡಿಕೊಂಡ ಒಪ್ಪಂದ ಇದಾಗಿದ್ದು, ತಳಿ - ತಂತ್ರಜ್ಞಾನವನ್ನು ಬಳಸಿಕೊಳ್ಳುವ ಮೂಲಕ ಭಾರತ ಮತ್ತು ಬ್ರೆಜಿಲ್ ನ ತಳಿ ಸಂಶೋಧಕರು ಪರಸ್ಪರ ಸಹಕಾರದೊಂದಿಗೆ ಅಭಿವೃದ್ಧಿಪಡಿಸುವ ಒಪ್ಪಂದ ಇದಾಗಿದೆ.
- ಇದಕ್ಕಾಗಿ, ಉಭಯ ದೇಶಗಳು ಜ್ಞಾನ ಹಾಗೂ ತಂತ್ರಜ್ಞಾನಗಳನ್ನು ಪರಸ್ಪರ ಹಂಚಿಕೊಳ್ಳಲಿದ್ದು, ಸಹಕಾರದಿಂದ ಸ್ಥಾಪಿಸಲಾದ ಸಂಶೋಧನಾ ಸಂಸ್ಥೆಯಲ್ಲಿ ಸುಧಾರಿತ
- ತಳಿಗಳನ್ನು ಅಭಿವೃದ್ಧಿ ಪಡಿಸಲಿದ್ದಾರೆ. ಇದರಿಂದ ಹೈನುಗಾರಿಕೆ ಕ್ಷೇತ್ರವನ್ನು ಸುಧಾರಿಸಬಹುದಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**8.ಸರ್ವರ ನ್ಯಾಯಕ್ಕೆ ನ್ಯಾಯ ಸಂಯೋಗ**

ಪ್ರಾಮುಖ್ಯತೆ(PRIORITY) –ಪ್ರಿಲಿಮ್ಸ್ ಪರೀಕ್ಷೆ ಗಾಗಿ

ಪ್ರಿಲಿಮ್ಸ್ ಪರೀಕ್ಷೆಗಾಗಿ

- ಸರ್ವರಿಗೂ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ನ್ಯಾಯ ಸಂಯೋಗ ಎನ್ನುವ ವಿನೂತನ ವಿಭಾಗವನ್ನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಆರಂಭಿಸಲಾಗಿದೆ. ಇದಕ್ಕೆ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸುಬ್ರೋ ಕಮಲ್ ಮುಖರ್ಜಿಹಾಗೂ ನ್ಯಾ. ಜಯಂತ್ ಪಾಟೀಲ್ ಚಾಲನೆ ನೀಡಿದ್ದಾರೆ.

- ಬಡ, ಕೆಳವರ್ಗದ ಜನರಿಗೆ ನ್ಯಾಯ ಒದಗಿಸುವಲ್ಲಿ ನ್ಯಾಯ ಸಂಯೋಗ ಕಾರ್ಯನಿರ್ವಹಿಸಲಿದ್ದು, ಬೆಳಿಗ್ಗೆ 10ರಿಂದ ಸಂಜೆ 5ವರೆಗೆ, ವಾರದ ಎಲ್ಲ ದಿನಗಳು ಲಭ್ಯವಿರಲಿದೆ.
- ಇಲ್ಲಿ ವಕೀಲರು, ಜೈಲು ಅಧಿಕಾರಿಗಳ ಜೊತೆಗೆ ವಿಡಿಯೋ ಕಾನ್ಫರೆನ್ಸ್ ಕೂಡ ನಡೆಸಲಾಗುವುದು. ಮಧ್ಯಸ್ಥಿಕೆ ಮೂಲಕ ಸಹ ಪ್ರಕರಣಗಳನ್ನು ಇತ್ಯರ್ಥ ಮಾಡಲಾಗುವುದು.

## 7th SEPTEMBER

IAS/KAS
ನಮ್ಮ ಐಎಎಸ್ ಅಕಾಡೆಮಿ

### 1. ಕುಟುಂಬ ಯೋಜನೆಗೆ ಸಹಾಯ ಮಾಡಲು ಆರೋಗ್ಯ ಸಚಿವಾಲಯವು ಎರಡು ಹೊಸ ಗರ್ಭನಿರೋಧಕ ಬಿಡುಗಡೆ

**ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ (ಪ್ರಬಂಧ ಬರವಣಿಗೆಗಾಗಿ)**

**ಪ್ರಿಲಿಮ್ಸ್ ಗಾಗಿ**

- ಜನಸಂಖ್ಯಾಸ್ಫೋಟ ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವಾಲಯ ಕುಟುಂಬ ಯೋಜನೆಯಡಿ ಎರಡು ಹೊಸ ಗರ್ಭನಿರೋಧಕ ಎಂಪಿಎ (MPA) ಮತ್ತು (ಛಯಾ.)ಎಂಬ ಔಷಧಗಳನ್ನು ಪರಿಚಯಿಸಿದೆ.

- ಮಾತ್ರೆ ಹಾಗೂ ಚುಚ್ಚುಮದ್ದನ್ನು ಸಚಿವಾಲಯ ಬಿಡುಗಡೆ ಮಾಡಿದ್ದು, ಮಾತ್ರೆಗೆ ಛಾಯಾ ಎಂದು ನಾಮಕರಣ ಮಾಡಲಾಗಿದೆ. ಎರಡೂ ಔಷಧಗಳು ಸಂಪೂರ್ಣವಾಗಿ ಸುರಕ್ಷಿತವಾಗಿದ್ದು, ಆರೋಗ್ಯದ ಮೇಲೆ ಯಾವುದೇ ಅಡ್ಡಪರಿಣಾಮ ಬೀರುವುದಿಲ್ಲ ಎಂದು ಸರ್ಕಾರ ಹೇಳಿದೆ.
- ಮಾತ್ರೆ ಒಂದು ವಾರದ ವರೆಗೆ ಹಾಗೂ ಚುಚ್ಚುಮದ್ದು ಮೂರು ವಾರಗಳ ವರೆಗೆ ಪ್ರಭಾವ ಹೊಂದಿರಲಿದೆ. ಮೆಡಿಕಲ್ ಕಾಲೇಜುಗಳು, ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಔಷಧ ಉಚಿತವಾಗಿ ಲಭ್ಯವಾಗಲಿದೆ.
- ಮೊದಲ ಹಂತವಾಗಿ ಕರ್ನಾಟಕ, ಮಹಾರಾಷ್ಟ್ರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಗೋವಾ, ರಾಜಸ್ಥಾನ ಸಹಿತ 10 ರಾಜ್ಯಗಳಲ್ಲಿ ಈಗಾಗಲೇ ಈ ಔಷಧ ಲಭ್ಯವಿದೆ. ಆಶಾ ಕಾರ್ಯಕರ್ತೆಯರ ಮೂಲಕ ಜನರಿಗೆ ಈ ಔಷಧಗಳನ್ನು ತಲುಪಿಸಲು ಯೋಜನೆ ರೂಪಿಸಲಾಗಿದ್ದು, ಇದಕ್ಕಾಗಿ ವಿಶೇಷ ಸಾಫ್ಟ್‌ವೇರ್ ತಯಾರಿಸಲಾಗುತ್ತಿದೆ .
- ಪರಿವಾರ್ ವಿಕಾಸ್ ಎಂಬ ಯೋಜನೆಯಡಿ ಈ ಔಷಧಗಳನ್ನು ಬಿಡುಗಡೆ ಮಾಡಲಾಗಿದೆ.

**ಮೇನ್ಸ್ ಪರೀಕ್ಷೆಗಾಗಿ & ಪ್ರಬಂಧ ಬರವಣಿಗೆಗಾಗಿ**

**ಇದರ ಪ್ರಮುಖ ಸಂಗತಿಗಳಾವುವು ?? ಮತ್ತು ಸಂತಾನನಿರೋಧಕ ಅಥವಾ ಗರ್ಭನಿರೋಧಕ ಕ್ರಮಗಳೆಂದರೇನು? ಇದರಿಂದ ಜನಸಂಖ್ಯೆ ನಿಯಂತ್ರಣವನ್ನು ತಡೆಯಲು ಪರಿಣಮಕಾರಿಯೇ ...???**

*'ಆಂಟಾರ' ಕಾರ್ಯಕ್ರಮದಡಿಯಲ್ಲಿ ಚುಚ್ಚುಮದ್ದು ಮಾಡಬಹುದಾದ ಗರ್ಭನಿರೋಧಕ MPA ಮತ್ತು 'ಛಯಾ' ಎಂಬ ಎರಡು ಹೊಸ ಗರ್ಭನಿರೋಧಕಗಳನ್ನು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ದಂಪತಿಗಳ ಉದಯೋನ್ಮುಖ ಅಗತ್ಯತೆಗಳನ್ನು ಪೂರೈಸಲು ತಯಾರಿಸಲಾಗಿದೆ

* ಕೇಂದ್ರೀಯ ಕುಟುಂಬ ಯೋಜನೆ " ಸರ್ಕಾರದ ಮಿಷನ್ ಪರಿವಾರ್ ವಿಕಾಸ್" ಅಡಿಯಲ್ಲಿ ಇದನ್ನು ಗರ್ಭನಿರೋಧಕಗಳನ್ನು ಪ್ರಾರಂಭಿಸಲಾಗುತ್ತಿದೆ.

* ಈ ಗರ್ಭನಿರೋಧಕಗಳು ಸುರಕ್ಷಿತ ಮತ್ತು ಹೆಚ್ಚು ಪರಿಣಾಮಕಾರಿಯಾಗಿದೆ, "ಅಂಟಾರ' ಚುಚ್ಚುಮದ್ದು ಮೂರು ತಿಂಗಳವರೆಗೆ ಪರಿಣಾಮಕಾರಿಯಾಗುತ್ತವೆ ಮತ್ತು ಒಂದು ವಾರದವರೆಗೆ ಛಯಾ' ಮಾತ್ರೆಗಳು ಪರಿಣಾಮಕಾರಿಯಾಗುತ್ತವೆ, ಮತ್ತು ದಂಪತಿಗಳ ಬದಲಾಗುತ್ತಿರುವ ಅಗತ್ಯತೆಗಳನ್ನು ಪೂರೈಸಲು ಸಹ ಸಹಾಯ ಮಾಡುತ್ತವೆ.

IAS/KAS

ಪ್ರಬಂಧ ಬರವಣಿಗೆಗಾಗಿ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮಿಂದ.... ಮಸೂರಿಗೆ/ಮೈಸೂರಿಗೆ

ಈ ಜೀವಜಗತ್ತಿನ ಪ್ರತಿಯೊಬ್ಬ ಜೀವಿಗೂ ಸೃಷ್ಟಿಕ್ರಿಯೆಯ ಮುಂದುವರಿಕೆ ಅನಿವಾರ್ಯ ಹಾಗೂ ಅತ್ಯಗತ್ಯ. ಆಹಾರ, ನಿದ್ರೆ, ಭಯ, ಮೈಥುನ ಸಕಲ ಪ್ರಾಣಿಗಳಂತೆಯೇ ಮನುಷ್ಯರಲ್ಲೂ ಸಹಜಗುಣವಾಗಿದೆ. ಸಂತಾನೋತ್ಪತ್ತಿ ವಯಸ್ಸಿನಲ್ಲಿ ಹೆಚ್ಚಿನ ಸಂದರ್ಭದಲ್ಲಿ ವಿವಾಹಬಂಧನಕ್ಕೊಳಗಾಗಿಯೇ ಸಂತಾನಕ್ರಿಯೆ ಮುಂದುವರಿಯುತ್ತಿರುತ್ತದೆ. ಆದ್ದರಿಂದಲೇ ವಿಶ್ವದಲ್ಲೂ, ಅದರಲ್ಲೂ ಮುಖ್ಯವಾಗಿ ನಮ್ಮ ಭಾರತದಲ್ಲಂತೂ ಶತಮಾನದ ಆರಂಭದಲ್ಲಿ 24 ಕೋಟಿಯಿದ್ದ ಜನಸಂಖ್ಯೆ ಇಂದು 130 ಕೋಟಿ ತಲುಪಿದೆ.

- ಬರಗಾಲ, ಸಾಂಕ್ರಾಮಿಕತೆ, ಯುದ್ಧದಂತಹ ಮನುಕುಲದ ಮುಖ್ಯ ಪೀಡೆಗಳಷ್ಟೇ ಜನಸಂಖ್ಯೆಯ ಅತಿರೇಕವೂ ಅಭಿವೃದ್ಧಿಯನ್ನು ತಪ್ಪಿಸುವಂಥವು. ಜೊತೆಗೆ ವೈದ್ಯಕೀಯ ಆವಿಷ್ಕಾರದ ಉಪಯೋಗವೂ ಆಗುತ್ತಾ, ಜನರ ಆರೋಗ್ಯ ಹೆಚ್ಚಾಗುತ್ತಾ ಮರಣ ಪ್ರಮಾಣ ತಗ್ಗುತ್ತಾ ಜನಸಂಖ್ಯಾ ಸ್ಫೋಟಕ್ಕೆಡೆಯಾಯಿತು.

- ಇದರಿಂದ ರಾಷ್ಟ್ರದ ಆರ್ಥಿಕ ಸ್ಥಿತಿಯ ಮೇಲೆ ಒತ್ತಡವುಂಟಾಗಿ ಜನರಿಗೆ ಅಶನ, ವಶನ, ಉದ್ಯೋಗ ದೊರಕಿಸುವ ಅನಿವಾರ್ಯತೆ ಉಂಟಾದಾಗ ಕುಟುಂಬಯೋಜನೆ ಅಥವಾ ಸಂತಾನನಿರೋಧಕ ಕ್ರಮಗಳನ್ನು ಅನುಸರಿಸಲೇಬೇಕಾದ ಅನಿವಾರ್ಯತೆ ಉಂಟಾಯಿತು.

- ಭಾರತದಲ್ಲೂ 1952ರಲ್ಲೇ ಕುಟುಂಬ ಯೋಜನಾ ವಿಧಾನಗಳು ಜಾರಿಗೆ ಬಂದವು. ಇದರ ಮುಖ್ಯ ಉದ್ದೇಶ 'ಹೆಣ್ಣಿರಲಿ, ಗಂಡಿರಲಿ, ಮಕ್ಕಳು ಎರಡೇ ಇರಲಿ', 'ಎರಡು ಮಕ್ಕಳ ನಡುವೆ ಅಂತರವಿರಲಿ', ಮತ್ತು 'ಸಾರ್ವತ್ರಿಕ ಲಸಿಕಾ ವಿತರಣೆ'.

**ಸಂತಾನನಿರೋಧಕ ಅಥವಾ ಗರ್ಭನಿರೋಧಕ ಕ್ರಮಗಳೆಂದರೇನು?**

- ಬೇಡದ ಜನನವನ್ನು ತಡೆಗಟ್ಟುತ್ತ ಎರಡು ಗರ್ಭಧಾರಣೆಗಳ ನಡುವೆ ಅಂತರ ಹೊಂದಿರುವುದಕ್ಕೆ, ಒಟ್ಟಾರೆ ಗಂಡು–ಹೆಣ್ಣಿನಲ್ಲಿ ಪರಸ್ಪರ ದೈಹಿಕ ಕ್ರಿಯೆ ನಡೆದರೂ ಮಕ್ಕಳಾಗದಿರುವ ಕ್ರಮಕ್ಕೆ ಗರ್ಭನಿರೋಧಕ ಕ್ರಮಗಳೂ (Contraceptive methods) ಎನ್ನುತ್ತಾರೆ.

- ಮನುಷ್ಯಸಹಜವಾದ ಉದ್ರೇಕದ ಕ್ಷಣಗಳಲ್ಲಿ ಸ್ತ್ರೀ-ಪುರುಷರಿಬ್ಬರ ಸಮಭಾಗಿತ್ವವಿದ್ದರೂ ಹೆಣ್ಣು ತನ್ನ ಜೈವಿಕ ರಚನೆಯಿಂದಾಗಿ ತಾಯ್ತನದ ಮಹತ್ತರ ಜವಾಬ್ದಾರಿ ಹೊಂದಿದ್ದಾಳೆ; ಅಲ್ಲದೆ, ಗರ್ಭನಿರೋಧಕ ಕ್ರಮಗಳನ್ನು ಅನುಸರಿಸಿ ಅನಗತ್ಯ ಗರ್ಭಧಾರಣೆಯನ್ನು ತಡೆಗಟ್ಟಲು ಹೆಣ್ಣೇ ಸದಾ ಹೆಚ್ಚಿನ ಕಾಳಜಿ ವಹಿಸಬೇಕಾದ ಅನಿವಾರ್ಯತೆ, ಅಗತ್ಯತೆ ಇಂದಿಗೂ ಇದೆ.
- ಇಲ್ಲದಿದ್ದಲ್ಲಿ ಮುಟ್ಟಿನ ಸಮಯದಲ್ಲಾಗುವ ದೈಹಿಕರೋಧನಗಳು, ಜೊತೆಗೆ ತಳುಕು ಹಾಕಿಕೊಂಡಿರುವ ಧಾರ್ಮಿಕ ಕಟ್ಟುಪಾಡು, ಇದರೊಂದಿಗೆ ಅನಗತ್ಯ ಗರ್ಭಧಾರಣೆಯಾದಾಗ ಅದರ ನಿವಾರಣೆಗೋಸ್ಕರ ಗರ್ಭಪಾತದ ಮೊರೆಹೋಗಿ ನಂತರ ಅದರಿಂದಾಗುವ ರಕ್ತಹೀನತೆ, ಗರ್ಭಕೋಶದ ಸೋಂಕು ಇತ್ಯಾದಿ ತೊಂದರೆಗಳನ್ನು ಅನುಭವಿಸಬೇಕು. ಇಲ್ಲವೇ ಸಾಲಾಗಿ ಮಕ್ಕಳನ್ನು ಹಡೆಯುತ್ತಾ ಗರ್ಭಾವಸ್ಥೆಯ ಸವಾಲುಗಳನ್ನು ಎದುರಿಸುತ್ತಾ, ಹೆರಿಗೆಯಲ್ಲಿ ಮರುಜನ್ಮ ಪಡೆಯುತ್ತಾ, ಆ ಮಕ್ಕಳ ಲಾಲನೆ-ಪಾಲನೆ ಜೀವನವನ್ನೇ ತೇಯಬೇಕು.
- ಇಷ್ಟಿದ್ದರೂ ಮಹಿಳೆಯೂ ಸೇರಿದಂತೆ ಹೆಚ್ಚಿನವರಿಗೆ – ಅದೂ ಹದಿಹರೆಯದವರಿಗೆ, ಸಂತಾನೋತ್ಪತ್ತಿ ವಯಸ್ಸಿನಲ್ಲಿರುವವರಿಗೆ ನಿರಂತರ ಗರ್ಭನಿರೋಧಕಗಳ ಬಳಕೆ ಅಥವಾ ತಾತ್ಕಾಲಿಕ ಶಾಶ್ವತ ಕುಟುಂಬಯೋಜನಾ ಸೌಲಭ್ಯಗಳ ಬಗ್ಗೆ ಮಾಹಿತಿ ದೊರಕಿಸುವ ಜ್ಞಾನವಾದ ಪ್ರಜನನ ಆರೋಗ್ಯದ ಪರಿಕಲ್ಪನೆಯೇ ಇಲ್ಲವಾಗಿದೆ.

- ಹಲವು ಅಂತರರಾಷ್ಟ್ರೀಯ ಮಟ್ಟದ ಮಹಿಳಾ ಸಮ್ಮೇಳನದಲ್ಲಿ (ಡೆಹರಾಡೂನ್, ಕೈರೋ, ಬೀಜಿಂಗ್, ಇತ್ಯಾದಿ) ಕುಟುಂಬಯೋಜನೆ ಮೂಲಹಕ್ಕು ಎನ್ನುವುದರ ಜೊತೆಗೆ ಸ್ತ್ರೀ–ಪುರುಷರಿಬ್ಬರಿಗೂ ಪರಸ್ಪರ ಒಪ್ಪಿಗೆ ಹಾಗೂ ಸಂಭವಿಸಬಹುದಾದ ಪರಿಣಾಮಗಳಿಗೆ ಸಮಾನವಾದ ಜವಾಬ್ದಾರಿಯನ್ನು ನೀಡಲಾಯಿತು. ಪ್ರತಿವರ್ಷ ವಿಶ್ವಜನಸಂಖ್ಯಾದಿನವನ್ನು ಜುಲೈ 11ರಂದು ಆಚರಿಸಿ ಅರಿವು ಹೆಚ್ಚಿಸಲಾಗುತ್ತಿದೆ.
- ಇಷ್ಟಾದರೂ ಭಾರತವೂ ಸೇರಿದಂತೆ ವಿಶ್ವದಾದ್ಯಂತ ಲಕ್ಷಗಟ್ಟಲೇ ಗರ್ಭಪಾತ ನಡೆಯುತ್ತಿವೆ. ಇಂದು 22 ಇಪ್ಪತ್ತೆರಡುವರೆ ಕೋಟಿಗೂ ಹೆಚ್ಚು ಹದಿವಯಸ್ಕರು ಮತ್ತು ಮಹಿಳೆಯರು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಗರ್ಭಧಾರಣೆಯನ್ನು ಬಯಸುವುದಿಲ್ಲ. ಆದರೆ ಅವರು ಸುರಕ್ಷಿತ ಹಾಗೂ ಪರಿಣಾಮಕಾರಿಯಾದ ಗರ್ಭನಿರೋಧಕ ಕ್ರಮಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇವೆಲ್ಲವನ್ನು ಮನಗಂಡೇ 2007ರಿಂದ ಪ್ರತಿವರ್ಷ ಸೆಪ್ಟೆಂಬರ್ 26ರಂದು ವಿಶ್ವದಾದ್ಯಂತ ವಿಶ್ವಸಂತಾನ ನಿಯಂತ್ರಣ ದಿನ ಅಥವಾ ಗರ್ಭನಿರೋಧಕ ದಿನವನ್ನು ಆಚರಿಸಲಾಗುತ್ತದೆ.

- ಇದರ ಮೂಲ ಉದ್ದೇಶ ಪ್ರತಿ ಗರ್ಭಧಾರಣೆಯೂ ಒಂದು ಅಪೇಕ್ಷಿತ ಅವಘಡವಾಗದ ಹಾಗೆ ಮುನ್ನೆಚ್ಚರಿಕೆ ವಹಿಸುವುದು ಮತ್ತು ಯುವಜನಾಂಗ ಮುಂದೊಂದು ಮಾಹಿತಿಯುಳ್ಳ ಆಯ್ಕೆಯನ್ನಿಡುವುದು.

ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಮಹಿಳೆಯರು ಇಂದು ಸುರಕ್ಷಿತ ಹಾಗೂ ಪರಿಣಾಮಕಾರೀ ಗರ್ಭನಿರೋಧಕ ಕ್ರಮಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾದರೆ ತನಗೆ, ಕುಟುಂಬಕ್ಕೆ ಯಾಕೆ? ಯಾವಾಗ? ಎಷ್ಟು ಮಕ್ಕಳನ್ನು ಪಡೆಯಬೇಕೆಂದು ನಿರ್ಣಯಿಸಿ, ಕಡಿಮೆ ಮಕ್ಕಳನ್ನು ಹಡೆಯಬಹುದು; ಎರಡು ಮಕ್ಕಳ ನಡುವೆ ಅಂತರ ಕಾಯ್ದುಕೊಂಡರೆ ಮಕ್ಕಳಿಗೂ ಪ್ರೀತಿ, ಪೋಷಣೆ ದೊರೆತು ತಾಯಿಯ ಆರೋಗ್ಯವೂ ಸುಧಾರಿಸಿ, ಬಡತನ ನಿರ್ಮೂಲನೆಯೂ ಆಗಿ ಕುಟುಂಬ, ಸಮಾಜ, ಅಷ್ಟೇ ಏಕೆ ಇಡೀ ರಾಷ್ಟ್ರವೇ ಅಭಿವೃದ್ಧಿ ಪಥದತ್ತ ಸಾಗಬಲ್ಲದು ಎಂಬ ಸತ್ಯವನ್ನು ಇಂದು ಅರಿಯಬೇಕಾದ ಅನಿವಾರ್ಯತೆಯ ಅಗತ್ಯತೆ ಇದೆ.

- ನಮ್ಮ ಭಾರತದಲ್ಲಂತೂ ಹೆಚ್ಚಿನ ಹಳ್ಳಿಯ ಜನ, ಬಡಜನರು ಹೆರಿಗೆಯ ನಂತರ ತಪಾಸಣೆಗೆಂದು ಬರುವುದೇ ಇಲ್ಲ. ಆದ್ದರಿಂದ ಗರ್ಭಿಣಿಯಾಗಿದ್ದಾಗಲೇ ಈ ಸಂತಾನನಿಯಂತ್ರಣ ಬಗ್ಗೆ ಮಹಿಳೆಯರಿಗೆ, ಪತಿ ಹಾಗೂ ಕುಟುಂಬದವರಿಗೆ ಆಪ್ತಸಮಾಲೋಚನೆ ನಡೆಸಿ, ಚರ್ಚಿಸಿ ಹೆರಿಗೆಗೂ ಮುನ್ನ ಕಾಪರ್ಟಿ ಅಳವಡಿಕೆಗೆ ಒಪ್ಪಿಗೆ ಪಡೆದುಕೊಳ್ಳುವುದು ಈ ನಿಟ್ಟಿನಲ್ಲಿ ಅತ್ಯುತ್ತಮ.

- ಈ ಕಾರ್ಯ ವೈದ್ಯರು ಆರೋಗ್ಯ ಸಹಾಯಕರು, ಕಾರ್ಯಕರ್ತರೂ ಎಲ್ಲರಿಂದಲೂ ಆಗಬೇಕು. ಸಾಧ್ಯವಾದಗಲೆಲ್ಲಾ, ಸಂದರ್ಭ ಸಿಕ್ಕಾಗೆಲ್ಲಾ ಈ ಬಗ್ಗೆ ಮಾಹಿತಿಯನ್ನು ಬಿತ್ತರಿಸುವ ಕೆಲಸವಾಗಬೇಕು. ಮಾಧ್ಯಮಗಳಲ್ಲೂ ಈ ಬಗ್ಗೆ ಉತ್ತೇಜನ ಸಿಗಬೇಕು. ಕಾಪರ್ಟಿ ಅಳವಡಿಸಿಕೊಳ್ಳುವ ಬಗೆಗಿರುವ ಅಳುಕು ಹೋಗಲಾಡಿಸಿ ಅದರಿಂದಾಗುವ ಬಾಧಕಗಳಿಗಿಂತ ಸಾಧಕವೇ ಹೆಚ್ಚೆಂದು ಮನಸ್ಸು ಮಾಡಬೇಕು.

- ಮಹಿಳೆಯೇ ಶೇ. 98ರಷ್ಟು ಸಂದರ್ಭಗಳಲ್ಲಿ ಆರೋಗ್ಯ ಸರಿಯಿಲ್ಲದಿದ್ದರೂ – ರಕ್ತಹೀನತೆ ಇನ್ನಿತರ ಸಮಸ್ಯೆಗಳಿದ್ದರೂ – ಸಂತಾನಹರಣ ಚಿಕಿತ್ಸೆಗೆ ಒಳಗಾಗಬೇಕಾದ ಅನಿವಾರ್ಯತೆ ಇದೆ. ಮಹಿಳೆಯರಲ್ಲಿ, ಯುವಜನತೆಯಲ್ಲಿ ಸಂತಾನನಿಯಂತ್ರಣ ಕ್ರಮಗಳ ಬಗ್ಗೆ ಅರಿವು ಮೂಡಿ ಅವರ ಆರೋಗ್ಯ ಕಾಪಾಡಬೇಕು

**ಮಿಷನ್ ಪರಿವಾರ್ ವಿಕಾಸ್ ಬಗ್ಗೆ:**

- ಸುಧಾರಿತ ಕುಟುಂಬ ಯೋಜನೆ ಸೇವೆಗಳಿಗೆ ಕೇಂದ್ರ ಸರ್ಕಾರದಿಂದ "ಮಿಷನ್ ಪರಿವಾರ್ ವಿಕಾಸ್" ಯೋಜನೆಯನ್ನು ಪ್ರಾರಂಭಿಸಿದೆ.
- ಮಾಹಿತಿ ಆಧಾರದ ಮೇಲೆ ಉತ್ತಮ ಗುಣಮಟ್ಟದ ಕುಟುಂಬ ಯೋಜನೆಗಳನ್ನು ಮತ್ತು ವಿಶ್ವಾಸರ್ಹ ಸೇವೆಗಳನ್ನು ನೀಡುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ.
- ಮಿಷನ್ ಪರಿವಾರ್ ವಿಕಾಸ್ ಅಭಿಯಾನವನ್ನು ಏಳು ರಾಜ್ಯಗಳಲ್ಲಿ ಅಂದರೆ ಉತ್ತರ ಪ್ರದೇಶ, ಬಿಹಾರ್, ರಾಜಸ್ತಾನ, ಮಧ್ಯ ಪ್ರದೇಶ, ಛತ್ತೀಚ್ ಗರ್, ಜಾರ್ಖಂಡ್ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಜಾರಿಗೊಳಿಸಲಾಗಿದೆ .
- ಈ ಏಳು ರಾಜ್ಯಗಳು ದೇಶದಲ್ಲೇ ಅತಿ ಹೆಚ್ಚು ಫಲವತತ್ತೆ ದರ (Fertility Rate) ಹೊಂದಿದ್ದು, ದೇಶದ ಶೇ 44% ಜನಸಂಖ್ಯೆ ಹೊಂದಿವೆ.
- ಅಲ್ಲದೇ, ತಾಯಿ ಮತ್ತು ಮಕ್ಕಳ ಆರೋಗ್ಯ ಸೂಚಕಗಳ ಮೇಲೆ ಪ್ರಬಲ ಪರಿಣಾಮ ರಾಜ್ಯಗಳು ಇವಾಗಿವೆ. ದೇಶದ ಶೇ 25-30% ತಾಯಿ ಮರಣ ಪ್ರಕರಣ ಮತ್ತು ಶೇ 50% ಶಿಶು ಮರಣ ಪ್ರಕರಣಗಳು ಈ ಜಿಲ್ಲೆಗಳಿಂದ ವರದಿಯಾಗುತ್ತಿವೆ.

- ಗರ್ಭ ನಿರೋಧಕ ವಿಧಾನಗಳ ಬಗ್ಗೆ ಸೂಕ್ತ ಮಾಹಿತಿ ನೀಡುವುದು ಹಾಗೂ ಸೇವೆಗಳು ಸುಲಭವಾಗಿ ದೊರೆಯುವಂತೆ ಮಾಡುವುದು ಮಿಷನ್ ಪರಿವಾರ್ ವಿಕಾಸ್ ನ ಮುಖ್ಯ ಉದ್ದೇಶವಾಗಿದೆ.

2. **ನೆಲದಾಳದಲ್ಲಿ ಇಸ್ರೇಲ್ ಸ್ಮಾರ್ಟ್ ಗೋಡೆ**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ

ಪ್ರಿಲಿಮ್ಸ್ ಗಾಗಿ

- ಸುರಂಗ ಕೊರೆದು ನುಸುಳುವ ಹಾಮಾಸ್ ಉಗ್ರರ ಉಪಟಳ ತಡೆಗೆ ಆಧುನಿಕ ತಂತ್ರಜ್ಞಾನ ಬಳಕೆ ಭದ್ರತಾ ತಂತ್ರಜ್ಞಾನದಲ್ಲಿ ಮುಂಚಣಿಯಲ್ಲಿರುವ ಇಸ್ರೇಲ್ ಹಾಮಾಸ್ ಉಗ್ರರನ್ನು ಮಟ್ಟ ಹಾಕಲು ಹೊಸ ತಂತ್ರ ರೂಪಿಸಿದೆ.
- ಗಡಿಯಲ್ಲಿ ಸಾಕಷ್ಟು ಭದ್ರತೆ ಒದಗಿಸಿದ್ದರೂ ಸುರಂಗ ಕೊರೆದು ಒಳನುಗ್ಗುವ ಉಗ್ರರ ನಿಯಂತ್ರಣಕ್ಕೆ ಭೂಮಿಯ ಅಡಿಯಲ್ಲಿ ಸ್ಮಾರ್ಟ್ ಗೋಡೆ ನಿರ್ಮಿಸಲು ಮುಂದಾಗಿದೆ. ಗಡಿಯಲ್ಲಿ ಈಗಾಗಲೇ ವಿದ್ಯುತ್ ತಂತಿ ಬೇಲಿ, ಲೇಸರ್ ವಾಲ್ ಮತ್ತಿತರ ಕ್ರಮಗಳನ್ನು ಅನೇಕ ದೇಶಗಳ ಕೈಗೊಂಡಿವೆ. ಆದರೆ ನೆಲದಾಳದಲ್ಲಿ ಇದೇ ಮೊದಲ ಬಾರಿಗೆ ಗೋಡೆ ನಿರ್ಮಿಸಲು ಮುಂದಾಗಿದೆ.

ಮೇನ್ಸ್ ಪರೀಕ್ಷೆಗಾಗಿ

**ಸ್ಮಾರ್ಟ್ ತಂತ್ರಜ್ಞಾನ**

- ಇಸ್ರೇಲ್ ಗಡಿಯಲ್ಲಿ ಭಾರಿ ಭದ್ರತೆ ಇರುವ ಕಾರಣ ಹಾಮಾಸ್ ಉಗ್ರರು ಒಳ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ ಅದಕ್ಕಾಗಿ ಅವರು ಗಡಿಭಾಗದಲ್ಲಿ ಸುರಂಗ ಕೊರೆದು ಒಳನುಸುಳುತ್ತಿದ್ದಾರೆ. ಇಸ್ರೇಲ್ ನ ವಿವಿಧೆಡೆ ಉಗ್ರಕೃತ್ಯ ಎಸಗುತ್ತಿದ್ದಾರೆ.
- 2014ರ ಇಸ್ರೇಲ್ - ಗಾಜಾ ಕಲಹದ ಸಂದರ್ಭ ಹಾಮಾಸ್ ಉಗ್ರರು ಗಾಡಿಯಲ್ಲಿ ವ್ಯಾಪಕ ಸುರಂಗ ನಿರ್ಮಿಸಿ, ಈ ಮೂಲಕ ಇಸ್ರೇಲ್ ಪ್ರವೇಶಿಸುವಲ್ಲಿ ಯಶಸ್ವೀಯಾಗಿದ್ದರು. ಈಗ ಈ ಸುರಂಗ ಮಾರ್ಗಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವ ಜತೆಗೆ ನೆಲದ ಆಳದಲ್ಲಿ ನಡೆಯುವ

ಉಗ್ರರ ಚಟುವಟಿಕೆ ಮೇಲೆ ನಿಗಾ ಇಡಲು ಇಸ್ರೇಲ್ ಸ್ಮಾರ್ಟ್ ಗೋಡೆ ನಿರ್ಮಾಣಕ್ಕೆ ಮುಂದಾಗಿದೆ.

**ಹೇಗಿರುತ್ತೆ ಈ ವಾಲ್...?**

- ಅತ್ಯಾಧುನಿಕ ತಂತ್ರಜ್ಞಾನ ಬಳಿಸಿ ನಿರ್ಮಿಸಲಾಗುವ ಸ್ಮಾರ್ಟ್ ವಾಲ್ ಭೂಮಿಯಾಳದಲ್ಲಿ 130 ಅಡಿಯವರೆಗೆ ನಿಗಾ ಇಡಲಿದೆ. ಇಲ್ಲಿ ಸುರಂಗ ನಿರ್ಮಾಣ ಅಥವಾ ಯಾವುದೇ ಬೆಳವಣಿಗೆ ಕಂಡುಬಂದರೂ ಮಾಹಿತಿ ನೀಡಲಿದೆ. ಭೂಮಿಯ ಮೇಲ್ಭಾಗದಲ್ಲಿ 20 ಅಡಿ ಎತ್ತರವಿರುತ್ತದೆ. ಒಟ್ಟು 64 ಕಿ.ಮೀ. ಉದ್ದದ ಗೋಡೆ ಇದಾಗಿರಲಿದ್ದು, ಅಂದಾಜು 53 ಸಾವಿರ ಕೋಟಿ ರೂ. ವೆಚ್ಚವಾಗಲಿದೆ. ಮುಂದಿನ ಎರಡು ವರ್ಷದೊಳಗಾಗಿ ಗೋಡೆ ನಿರ್ಮಾಣ ಪೂರ್ಣವಾಗಲಿದೆ.

**ಸೆನ್ಸರ್ ಮೂಲಕ ಕಾರ್ಯ**

- ಇಸ್ರೇಲ್ ನಿರ್ಮಿಸಲು ಉದ್ದೇಶಿಸಿರುವ ಸ್ಮಾರ್ಟ್ ಗೋಡೆ ಸೆನ್ಸರ್ ಮೂಲಕ ಕಾರ್ಯನಿರ್ವಹಿಸಲಿದೆ. ಉಗ್ರರು ಗೋಡೆಗೆ ಹಾನಿ ಮಾಡಿದರೆ, ಸುರಂಗ ಕೊರೆದರೆ ಅಥವಾ ಪ್ರಾಕೃತಿಕ ವಿಕೋಪಕ್ಕೆ ತುತ್ತಾದರೆ ಭೂಮಿಯಾಳದ ಚಟುವಟಿಕೆಗಳ ಕುರಿತು ಸೇನೆಗೆ ಮಾಹಿತಿ ದೊರೆಯಲಿದೆ. ಹೀಗೆ ಉಗ್ರರ ಯತ್ನವನ್ನು ಹಿಮ್ಮೆಟ್ಟಿಸಲು ಸೇನೆ ಯೋಜನೆ ರೂಪಿಸಿದೆ.
- ಆದರೆ ಇಸ್ರೇಲ್ ಪ್ರಯತ್ನ ಯಶಸ್ವಿಯಾಗದು ಎಂದು ಹಾಮಾಸ್ ಉಗ್ರರು ಪ್ರತಿಕ್ರಿಯಿಸಿದ್ದಾರೆ. ಮೆಡಿಟರೇನಿಯನ್ ಸಮುದ್ರ, ಗಾಜಾ ಮೂಲಕ ಇಸ್ರೇಲ್ ಪ್ರವೇಶಿಸುವ ಉಗ್ರರನ್ನು ತಡೆಗೋಡೆ ನಿರ್ಮಾಣ ಮಾಡಲೂ ಇಸ್ರೇಲ್ ನಿರ್ಧರಿಸಿದೆ.

**ತಡೆಗೋಡೆ ವಿಶೇಷತೆಗಳು :**

- 20 ಅಡಿ ನೆಲದಿಂದ ಎತ್ತರ
- 130 ಅಡಿ ನೆಲದಡಿಯಲ್ಲಿ ಆಳ
- 64 ಕಿ. ಮೀ. ಗೋಡೆಯ ಒಟ್ಟು ಉದ್ದ
- 53 ಸಾವಿರ ಕೋಟಿ ಯೋಜನೆಯ ಅಂದಾಜು ವೆಚ್ಚ
- 2 ವರ್ಷ - ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಅವಧಿ

**ಗೋಡೆ ನಿರ್ಮಾಣ ಹೊಸದಲ್ಲ**

- ಅಮೇರಿಕ ಅಧ್ಯಕ್ಷರಾಗಿ ಆಯ್ಕೆಯಾದ ಕೆಲವೇ ದಿನಗಳಲ್ಲಿ ಡೊನಾಲ್ಡ್ ಟ್ರಂಪ್, ಅಕ್ರಮ ವಲಸಿಗರನ್ನು ತಡೆಯಲು ಕಠಿಣ ವಲಸೆ ನೀತಿ ಮತ್ತು ಕೆಲರಾಷ್ಟ್ರಗಳ ಜನರಿಗೆ ಪ್ರವೇಶ ನಿರ್ಬಂಧ ವಿಧಿಸಿದ್ದರು. ಜತೆಗೆ ಮೆಕ್ಸಿಕೋ ಗಡಿಯುದ್ದಕ್ಕೂ ಗೋಡೆ ನಿರ್ಮಿಸಿ ಅಕ್ರಮ ವಲಸಿಗರನ್ನು ತಡೆಯಲು ನಿರ್ಧರಿಸಿದ್ದರು.

**3. ರೊಹಿಂಗ್ಯಾ ಆಶ್ರಯಕ್ಕೆ ಮುಂದಾದ ಪ್ರಧಾನಿ**

**ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ**

ಪ್ರಿಲಿಮ್ಸ್ ಗಾಗಿ

- ಚೀನಾದ ಕ್ಸಿಯಾಮಿನ್ ನಲ್ಲಿ ಮಂಗಳವಾರ 'ಬ್ರಿಕ್ಸ್' ಸಮ್ಮೇಳನ ಮುಕ್ತಾಯದ ಬಳಿಕ ಪ್ರಧಾನಿ ಮೋದಿ ಮ್ಯಾನ್ಮಾರ್ ಭೇಟಿ ನೀಡಿದ್ದಾರೆ. ಮ್ಯಾನ್ಮಾರ್ ಅಧ್ಯಕ್ಷ ಟಿನ್ ಕ್ಯಾವ್ ಅವರನ್ನು ಭೇಟಿಯಾಗಿ, ರಾಖಿನೆ ಪ್ರಾಂತ್ಯದಲ್ಲಿ ರೋಹಿಂಗ್ಯ ಉಗ್ರರ ಹಿಂಸಾಚಾರದ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ.
- ಸ್ಟೇಟ್ ಕೌನ್ಸಿಲರ್ ಆಂಗ್ ಸಾನ್ ಸೂಕಿ ಅವರನ್ನು ಭೇಟಿಟಾಗಿ ಅಭಿವೃದ್ಧಿ ಮತ್ತು ಉಗ್ರರ ದಮನದ ಕುರಿತು ಚರ್ಚೆ ನಡೆಸಿದ್ದಾರೆ. 'ಭಾರತಕ್ಕೆ ವಲಸೆ ಬಂದಿರುವ ಮ್ಯಾನ್ಮಾರ್ ಪ್ರಜೆಗಳಿಗೆ ಉಚಿತವಾಗಿ ವೀಸಾ ನೀಡಲಾಗುವುದು, ಭಾರತದ ಜೈಲಿನಲ್ಲಿರುವ 40 ಮ್ಯಾನ್ಮಾರ್ ಪ್ರಜೆಗಳನ್ನು ಶೀಘ್ರದಲ್ಲಿ ಬಿಡುಗಡೆ ಮಾಡಲಾಗುವುದು. ನೆರೆ ರಾಷ್ಟ್ರಗಳಾದ ನಾವು ಭದ್ರತೆ ವಿಚಾರದಲ್ಲಿ ಪರಸ್ಪರ ಸಹಕಾರದಿಂದಿರಬೇಕು' ಎಂದು ಹೇಳಿದ್ದಾರೆ .

### ಮೇನ್ಸ್ ಪರೀಕ್ಷೆಗಾಗಿ

- ನರೇಂದ್ರ ಮೋದಿ ಮ್ಯಾನ್ಮಾರಗೆ ನೀಡುತ್ತಿರುವ ಮೊದಲ ದ್ವಿಪಕ್ಷೀಯ ಭೇಟಿ ಇದಾಗಿದೆ. ಈ ಮೊದಲು 2014 ರಲ್ಲಿ ಮ್ಯಾನ್ಮಾರದಲ್ಲಿ ನಡೆದ ಆಸಿಯಾನ್ - ಭಾರತ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಮ್ಯಾನ್ಮಾರ್ ಭಾರತದೊಂದಿಗೆ 1640 ಕಿಮೀ. (ಈಶಾನ್ಯ ರಾಜ್ಯಗಳ ಭಾಗದಲ್ಲಿ) ಗಡಿರೇಖೆ ಹೊಂದಿದೆ.

### ರೋಹಿಂಗ್ಯರು ಯಾರು?:

- ರೋಹಿಂಗ್ಯ ಎಂಬುದು ಮ್ಯಾನ್ಮಾರ್ ನ್ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಹೆಸರು. ಈ ಸಮುದಾಯವನ್ನು ಮ್ಯಾನ್ಮಾರ್ ನ 1982ರ ಪೌರಾತ್ಯ ಕಾಯ್ದೆಯಲ್ಲಿ ಗುರುತಿಸಲಾಗಿರುವ 135 ಸಾಂಪ್ರದಾಯಿಕ ಗುಂಪುಗಳ ಪಟ್ಟಿಯಲ್ಲಿ ಸೇರಿಸಿಲ್ಲ. ಬಾಂಗ್ಲಾಕ್ಕೆ ವಲಸೆ ಹೋಗಿರುವ ಮುಸ್ಲಿಂ ಸಮುದಾಯವನ್ನು 'ಬೆಂಗಾಲಿ' ಎಂದೇ ಗುರುತಿಸಲಾಗುತ್ತದೆ.
- ಮ್ಯಾನ್ಮಾರ್ ಭಾಷೆಯಲ್ಲಿ ರೋಹಿಂಗ್ಯ ಪದವು 'ನಿಷೇಧ' ಎಂಬ ಅರ್ಥ ನೀಡುತ್ತದೆ. ಮ್ಯಾನ್ಮಾರ್ ನಲ್ಲಿ 10 ಲಕ್ಷಕ್ಕೂ ಹೆಚ್ಚು ರೋಹಿಂಗ್ಯ ಸಮುದಾಯದವರಿದ್ದಾರೆ. ಆಗಸ್ಟ್ ನಿಂದೀಚೆಗೆ 1.23 ಲಕ್ಷಕ್ಕೂ ಹೆಚ್ಚು ರೋಹಿಂಗ್ಯಗಳು ಬಾಂಗ್ಲಾದೇಶಕ್ಕೆ ವಲಸೆ ಬಂದಿದ್ದಾರೆ. 40 ಸಾವಿರಕ್ಕೂ ಹೆಚ್ಚು ಜನ ಭಾರತದ ಜಮ್ಮು-ಕಾಶ್ಮೀರ್, ಹೈದೆರಾಬಾದ್, ದೆಹಲಿ, ಹರಿಯಾಣ, ಉತ್ತರ ಪ್ರದೇಶ ಹಾಗೂ ರಾಜಸ್ಥಾನಗಳಲ್ಲಿ ನೆಲೆಸಿದ್ದಾರೆ. ವಿಶ್ವಸಂಸ್ಥೆ ಸಹ ರೋಹಿಂಗ್ಯ ಸಮುದಾಯವನ್ನು ಅಧಿಕೃತವಾಗಿ ಗುರುತಿಸಲು ಮ್ಯಾನ್ಮಾರ್ ಗೆ ಸೂಚಿಸಿದೆ.

### ಭಾರತದಲ್ಲಿ ನಿರಾಶ್ರಿತರ ಕಾನೂನುಗಳಿಲ್ಲ

- ವಿಶ್ವಸಂಸ್ಥೆಯ 1951ರ ನಿರಾಶ್ರಿತರ ಒಪ್ಪಂದ ಹಾಗೂ 1967ರ ಪ್ರೋಟೋಕಾಲ್ ಗೆ ಭಾರತ ಸಹಿ ಹಾಕಿಲ್ಲ. ಆದರೂ, ಭಾರತ ಮೊದಲಿನಿಂದಲೂ ನಿರಾಶ್ರಿತರಿಗೆ ಆಶ್ರಯ ಒದಗಿಸುತ್ತಲೇ ಬಂದಿದೆ. ಟಿಬೆಟಿಯನ್ನರು, ಬಾಂಗ್ಲಾದ ಚಕ್ಮಾಗಳು, ಆಫ್ಘನ್ನರು ಹಾಗೂ ಶ್ರೀಲಂಕಾದ ತಮಿಳು ಜನಾಂಗದ ನಿರಾಶ್ರಿತರಿಗೆ ಭಾರತ ಆಶ್ರಯ ನೀಡಿದೆ. 2016ರಲ್ಲಿ ಮೋದಿ ಸರ್ಕಾರ ಅಫ್ಘಾನಿಸ್ತಾನ್, ಪಾಕಿಸ್ತಾನ,ಹಾಗೂ ಬಾಂಗ್ಲಾದೇಶಗಲ್ಲಿ ನೆಲೆಸಿರುವ ಹಿಂದೂ, ಸಿಖ್, ಬೌದ್ಧ, ಜೈನ್, ಪಾರ್ಸಿ ಹಾಗೂ ಕ್ರೈಸ್ತರಿಗೆ ಭಾರತಕ್ಕೆ ಬರಲು ಅವಕಾಶ ನೀಡಿತ್ತು.

ಗಡೀಪಾರಿಗೆ ಮುಂದಾಗಿತ್ತು ಭಾರತ

- ಗೃಹ ಖಾತೆಯ ಸಚಿವ ಕಿರಣ್ ರಿಜಿಜು ಇತ್ತೀಚೆಗಷ್ಟೇ ರೋಹಿಂಗ್ಯ ವಲಸಿಗರನ್ನು ಗಡೀಪಾರು ಮಾಡುವುದಾಗಿ ಹೇಳಿದ್ದರು. ಕಾರಣ, ವಲಸಿಗರು ಭಯೋತ್ಪಾದಕ ಗುಂಪುಗಳಿಗೆ ಸೇರುತ್ತಿರುವ ಅನುಮಾನ ಮೂಡಿತ್ತು. ಸರ್ಕಾರದ ಈ ನಿರ್ಧಾರವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಗೆ ಅರ್ಜಿ ಸಲ್ಲಿಸಲಾಗಿತ್ತು.
- ಇದೀಗ, ಈ ಕುರಿತು ಸುಪ್ರೀಂ ಸರ್ಕಾರದ ನಿಲುವನ್ನು ಕೇಳಿದೆ. ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ಮತ್ತು ನ್ಯಾ. ಎ. ಎಂ. ಖಾನ್ವಿಲ್ಕರ್, ಡಿ. ವೈ. ಚಂದ್ರ ಚೂಡ್ ಅವರನ್ನೊಳಗೊಂಡ ನ್ಯಾಯಪೀಠ ಅರ್ಜಿ ವಿಚಾರಣೆ ಕೈಗೆತ್ತಿಕೊಂಡಿದೆ. ಈ ಕುರಿತು ಕೇಂದ್ರದ ಪ್ರತಿಕ್ರಿಯೆ ಪಡೆಯಲು ಹೆಚ್ಚುವರಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ನ್ಯಾಯಪೀಠ ಸೂಚನೆ ನೀಡಿದೆ.
- ಕೇಂದ್ರದ ಈ ನಿರ್ಧಾರ ಅಂತಾರಾಷ್ಟ್ರೀಯ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಅರ್ಜಿಯಲ್ಲಿ ಆಕ್ಷೇಪ ವ್ಯಕ್ತಪಡಿಸಲಾಗಿದೆ. ನ್ಯಾಯಪೀಠ ವಿಚಾರಣೆಯನ್ನು ಇದೇ ತಿಂಗಳ 11 ಕ್ಕೆ ಮುಂದೂಡಲಾಗಿದೆ.

ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**4. ಉದ್ಯೋಗ ಮತ್ತು ರಫ್ತುಗಳ ಮೇಲೆ ಕಾರ್ಯಪಡೆ ರಚನೆ**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ (ಪ್ರಬಂಧ ಬರವಣಿಗೆಗಾಗಿ)

ಪ್ರಿಲಿಮ್ಸ್ ಗಾಗಿ

- ಭಾರತದ ರಫ್ತುಗಳನ್ನು ಹೆಚ್ಚಿಸುವ ಮೂಲಕ ಉದ್ಯೋಗಾವಕಾಶಕ್ಕೆ "ಪ್ರಮುಖ" ವೇದಿಕೆ ಒದಗಿಸುವ ಪ್ರಯತ್ನದಲ್ಲಿ, ನೀತಿ ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್ ನೇತೃತ್ವದ ಕಾರ್ಯಪಡೆಗಳನ್ನು ರಚಿಸಿದೆ . ಸರಕಾರ ಮತ್ತು ಖಾಸಗಿ ವಲಯದ ಪ್ರತಿನಿಧಿಗಳನ್ನು ಒಳಗೊಂಡಿರುವ ಕಾರ್ಯಪಡೆಯು ನವಂಬರ್ ನಿಂದ ತನ್ನ ವರದಿಯನ್ನು ಸಲ್ಲಿಸಲಿದೆ.

ಮೇನ್ಸ್ ಗಾಗಿ

**ಉತ್ತಮ ಹಣ, ಔದ್ಯೋಗಿಕ ವಲಯ ಉದ್ಯೋಗಗಳನ್ನು ಸೃಷ್ಟಿಸುವ ಈ ಸವಾಲನ್ನು ಪರಿಹರಿಸಲು ಕಾರ್ಯಪಡೆಯಿಂದ ಸೂಚಿಸಲಾದ ಹಂತಗಳು:**

*ಉದ್ಯೋಗದ ಉತ್ಪಾದನೆ ಮತ್ತು ಸರಕು ಮತ್ತು ಸೇವೆಗಳ ಕ್ಷೇತ್ರಗಳಲ್ಲಿ ಉದ್ಯೋಗವನ್ನು ಕಡಿಮೆ ಮಾಡಲು ಮತ್ತು ಪ್ರಮುಖ ಕಾರ್ಮಿಕ-ತೀವ್ರ ಉದ್ಯಮಗಳಲ್ಲಿ ಭಾರತದ ರಫ್ತುಗಳನ್ನು ಹೆಚ್ಚಿಸುವ ಮೂಲಕ ಕಡಿಮೆ ವೇತನವನ್ನು ಮಾಡಲು ಒಂದು ಸಮಗ್ರ ಯೋಜನೆಯ ಕಾರ್ಯಸೂಚಿಯನ್ನು ಪ್ರಸ್ತಾಪಿಸುವುದು

* ಪ್ರಮುಖ ಉದ್ಯೋಗದ ಕ್ಷೇತ್ರಗಳಲ್ಲಿ ವಲಯ-ನಿರ್ದಿಷ್ಟ ನೀತಿ ಮಧ್ಯಸ್ಥಿಕೆಗಳನ್ನು ಶಿಫಾರಸ್ಸು ಮಾಡಲಾಗುತ್ತಿದೆ.

* ಹೆಚ್ಚಿನ ಉದ್ಯೋಗದ ಸಾಮರ್ಥ್ಯದೊಂದಿಗೆ ,ಸೇವೆಗಳಲ್ಲಿ ವ್ಯಾಪಾರವನ್ನು ಹೆಚ್ಚಿಸವ ಕ್ರಮಗಳನ್ನು ಶಿಫಾರಸು ಮಾಡಲಾಗುತ್ತಿದೆ.

* ರಫ್ತುಗಳನ್ನು ನಿರ್ಬಂಧಿಸುವ ಪ್ರಮುಖ ಸ್ಥೂಲ ಆರ್ಥಿಕ ಅಂಶಗಳನ್ನು ಗುರುತಿಸುವುದು ಮತ್ತು ಈ ನಿರ್ಬಂಧಗಳನ್ನು ಪರಿಹರಿಸಲು ವಿಧಾನಗಳನ್ನು ಸೂಚಿಸುತ್ತದೆ.

* ರಫ್ತುಗಳನ್ನು ಉತ್ತೇಜಿಸಲು ಅಸ್ತಿತ್ವದಲ್ಲಿರುವ ಯೋಜನೆಗಳ ಪರಿಣಾಮಕಾರಿತ್ವವನ್ನು ನಿರ್ಣಯಿಸುವುದು

* ಜಾರಿ, ರಫ್ತು ಸಾಲಗಳು ಮತ್ತು ವ್ಯಾಪಾರ ಸೌಕರ್ಯಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತಿಳಿಸುತ್ತದೆ .

**ಇದರ ಹಿನ್ನೆಲೆ:**

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

➢ ಪ್ರಾಸಂಗಿಕವಾಗಿ, ಹಣಕಾಸು ಮಂತ್ರಿ ಅರುಣ್ ಜೇಟ್ಲಿ ಅನಾವರಣಗೊಳಿಸಿದ "ಮೂರು ವರ್ಷಗಳ ಆಕ್ಷನ್ ಅಜೆಂಡಾ" ,ಇತ್ತೀಚೆಗೆ ರಫ್ತಿನಲ್ಲಿನ ಸಾಮರ್ಥ್ಯಗಳನ್ನು ಬಳಸಿಕೊಳ್ಳುವ ಮೂಲಕ ಉತ್ತಮ-ಸಂಭಾವನೆ ಪಡೆಯುವ ಉದ್ಯೋಗಗಳ ಸೃಷ್ಟಿಗೆ ಒತ್ತು ನೀಡಿತು. ಔಪಚಾರಿಕ ವಲಯವನ್ನು ವಿಸ್ತರಿಸುವ ಮೂಲಕ ಉದ್ಯೋಗಗಳ ಸೃಷ್ಟಿಗೆ ಕೂಡಾ ಕಾರ್ಯಸೂಚಿಯು ಒತ್ತು ನೀಡಿತು.

**ಮುಂದಿನ ನಡೆ:**

➢ ಭಾರತೀಯ ಉದ್ಯೋಗಿಗಳು ಹೆಚ್ಚಿನ ಆಕಾಂಕ್ಷೆಗಳನ್ನು ಹೊಂದಿದ್ದರೂ, ಬಹುಪಾಲು ಕಾರ್ಮಿಕರು ಕಡಿಮೆ-ಉತ್ಪಾದಕತೆ, ಕಡಿಮೆ-ವೇತನದ ಉದ್ಯೋಗಗಳು ಸಣ್ಣ, ಸೂಕ್ಷ್ಮ ಮತ್ತು ಸ್ವಂತ ಉದ್ಯಮಗಳಲ್ಲಿ ಕೆಲಸ ಮಾಡುತ್ತಾರೆ.

➢ ಭಾರತದ ನಿರುದ್ಯೋಗ ಮತ್ತು ಕಡಿಮೆ-ಕೆಲಸದ ಸಮಸ್ಯೆಯನ್ನು ಬಗೆಹರಿಸಲು ಸಂಘಟಿತ ಕ್ಷೇತ್ರದ ತುರ್ತು ಮತ್ತು ನಿರಂತರ ವಿಸ್ತರಣೆ ಅತ್ಯಗತ್ಯ. ರಫ್ತುಗಳಿಗೆ ಉದ್ದೇಶಿಸಲಾಗಿದ್ದ ಕಾರ್ಮಿಕ-ತೀವ್ರ ಸರಕು ಮತ್ತು ಸೇವೆಗಳ ಕಡೆಗೆ ಒಂದು ಬದಲಾವಣೆಯನ್ನು ಸಕ್ರಿಯಗೊಳಿಸುವ ಒಂದು ಪ್ರಮುಖ ಕಾರ್ಯತಂತ್ರವೂ ಸಹ ಆಗಿದೆ.

➢ ಉದ್ಯೋಗಗಳನ್ನು ಉತ್ಪಾದಿಸುವಲ್ಲಿ ರಫ್ತುಗಳ ಪ್ರಾಮುಖ್ಯತೆಯಿಂದಾಗಿ, ಜಾಗತಿಕವಾಗಿ ಸ್ಪರ್ಧಾತ್ಮಕವಾದ ರಫ್ತುದಾರರು ಹೊರಹೊಮ್ಮಲು ಮತ್ತು ಏಳಿಗೆ ಮಾಡುವ ವಾತಾವರಣವನ್ನು ಭಾರತ ರಚಿಸಬೇಕಾಗಿದೆ.

5. **ಭಾರತ - ಮ್ಯಾನ್ಮಾರ್ 11 ಒಪ್ಪಂದ**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಿಲಿಮ್ಸ್ ಗಾಗಿ

- ಕಡಲ ಭದ್ರತೆಯ ಸಹಕಾರ ಸೇರಿದಂತೆ ವಿವಿಧ ಹನ್ನೊಂದು ಒಪ್ಪಂದಗಳಿಗೆ ಭಾರತ ಮತ್ತು ಮ್ಯಾನ್ಮಾರ್ ಸಹಿ ಹಾಕಿವೆ. ಮ್ಯಾನ್ಮಾರ್ ಗೆ ಭೇಟಿ ನೀಡಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಮ್ಯಾನ್ಮಾರ್ ಸ್ಟೇಟ್ ಕೌನ್ಸಿಲರ್ ಆಂಗ್ ಸಾನ್ ಸೂಕಿ ನಡುವೆ ಮಾತುಕತೆಯ ಬಳಿಕ ಒಪ್ಪಂದಕ್ಕೆ ಸಹಿ ಹಾಕಲಾಯಿತು.
- ಎರಡೂ ದೇಶಗಳ ಅವರ್ಗೀಕೃತ ವ್ಯಾಪಾರಿ ನೌಕಾ ಹಡಗುಗಳ ಅಥವಾ ಸರಕು ಹಡಗುಗಳ ದತ್ತಾಂಶ ಹಂಚಿಕೆ ಸುಧಾರಿಸಲು ಮಾಹಿತಿ ಹಂಚಿಕೊಳ್ಳುವುದರ ಕುರಿತು ಸಹಿ ಹಾಕಲಾಯಿತು. ಇದರೊಂದಿಗೆ, ಭಾರತೀಯ ಚುನಾವಣಾ ಆಯೋಗ ಹಾಗೂ ಮ್ಯಾನ್ಮಾರ್ ಚುನಾವಣಾ ಆಯೋಗದ ನಡುವೆ ಒಪ್ಪಂದ ಏರ್ಪಟ್ಟಿದೆ.
- 2017 - 2020ರ ಅವಧಿಯಲ್ಲಿ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ ಏರ್ಪಡಿಸಲು ಉಭಯ ದೇಶಗಳು ಸಹಿ ಹಾಕಿವೆ. ಮ್ಯಾನ್ಮಾರ್ ಪ್ರೆಸ್ ಕೌನ್ಸಿಲ್ ಹಾಗೂ ಭಾರತೀಯ ಪ್ರೆಸ್ ಕೌನ್ಸಿಲ್ ನಡುವೆಯೂ ಸಹಕಾರ ಒಪ್ಪಂದ ಮಾಡಿಕೊಳ್ಳಲಾಗಿದೆ.
- ಐಟಿ ಕೌಶಲ್ಯ ಹೆಚ್ಚಿಸಲು ಭಾರತ - ಮ್ಯಾನ್ಮಾರ್ ಕೇಂದ್ರ ಸ್ಥಾಪನೆಯ ಒಪ್ಪಂದವನ್ನು ವಿಸ್ತರಿಸಿವೆ. ವೈದ್ಯಕೀಯ ನಿಯಂತ್ರಣ ಹಾಗೂ ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿನ ಸಹಕಾರ, ಮ್ಯಾನ್ಮಾರ್ ನ ಯಮೆಥಿನ್ ನಲ್ಲಿ ಮಹಿಳಾ ಪೊಲೀಸ್ ಅಭಿವೃದ್ಧಿಯ ಸಹಕಾರ ಹೆಚ್ಚಿಸುವ ಕುರಿತು ಸಹಿ ಹಾಕಲಾಗಿದೆ.

SOURCE-INDIAN EXPRESS AND OTHER NEWS PAPERS

## 6.ಹಿಂಸಾಚಾರ ನಿಯಂತ್ರಣಕ್ಕೆ ನೋಡೆಲ್ ಅಧಿಕಾರಿ

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಿಲಿಮ್ಸ್ ಗಾಗಿ

- ಗೋರಕ್ಷಣೆ ಹೆಸರಲ್ಲಿ ಹಿಂಸಾರಕ್ಕಿಳಿಯುವ ಗುಂಪುಗಳನ್ನು ನಿಯಂತ್ರಿಸಲು ಪ್ರತಿ ಜಿಲ್ಲೆಗೆ ಓರ್ವ ಹಿರಿಯ ಪೊಲೀಸ್ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಿಸುವಂತೆ ಸುಪ್ರೀಂ ಕೋರ್ಟ್ ಎಲ್ಲಾ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ.
- ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ಪೀಠವು ಪ್ರತಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಈ ಕುರಿತು ಆದೇಶಿಸಿದ್ದು, ಗೋರಕ್ಷಣೆ ಹೆಸರಲ್ಲಿ ಹಿಂಸಾಚಾರ ತಡೆಗಟ್ಟಲು ರಾಜ್ಯ ಸರ್ಕಾರಗಳು ತಗೆದುಕೊಂಡಿರುವ ಕ್ರಮಗಳನ್ನು ವರದಿ ಮೂಡುವಂತೆಯೂ ಆದೇಶಿಸಿದೆ.
- ಸಂವಿಧಾನದ 256 ನೇ ವಿಧಿಯಡಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನಿರ್ದೇಶನ ನೀಡಬೇಕೆಂದು ನ್ಯಾಯಮೂರ್ತಿಗಳಾದ ಅಮಿತವರಾಯ್ ಮತ್ತು ಎ.ಎಂ.ಖಾನ್ವಿಲ್ಕರ್ ಅವರನ್ನೊಳಗೊಂಡ ಪೀಠ ಹೇಳಿದೆ.

**7. ಕುಪೋಷಣಾಮುಕ್ತ ದೇಶಕ್ಕೆ ನೀತಿ ಆಯೋಗದ ಮಾರ್ಗಸೂಚಿ**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಿಲಿಮ್ಸ್ ಗಾಗಿ

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಭಾರತವನ್ನು ಕುಪೋಷಣಾಮುಕ್ತ ದೇಶವನ್ನಾಗಿ ಮಾಡಲು ನೀತಿ ಆಯೋಗವು ರಾಷ್ಟ್ರೀಯ ಪೌಷ್ಟಿಕಾಂಶ ತಂತ್ರವನ್ನು ಆರಂಭಿಸಿದೆ. ಇದು, ಭಾರತದಲ್ಲಿ ಪೌಷ್ಟಿಕಾಂಶಗಳ ಅಗತ್ಯತೆ ನೀಗಿಸಲು ಮಾರ್ಗಸೂಚಿ ರೂಪಿಸುತ್ತದೆ. ರಾಷ್ಟ್ರೀಯ ಪೌಷ್ಟಿಕಾಂಶ ತಂತ್ರವು ಆರೋಗ್ಯ ಸೇವೆ,ಆಹಾರ, ಕುಡಿಯುವ ನೀರಿನ ನೈರ್ಮಲ್ಯ, ಆದಾಯ ಮತ್ತು ಜೀವನೋಪಾಯಗಳೆಂಬ ನಾಲ್ಕು ಅಂಶಗಳನ್ನು ಏಕೀಕರಿಸುತ್ತದೆ.
- ಪೌಷ್ಟಿಕಾಂಶದ ಕುರಿತು ಜಾಗೃತಿ ಮೂಡಿಸುವುದು, ನಾವೀನ್ಯ ಕಾರ್ಯಕ್ರಮಗಳನ್ನು ರೂಪಿಸುವುದು ಮುಂತಾದವುಗಳನ್ನು ಒಳಗೊಂಡಿದೆ. ಭಾರತದಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ. ೨೦ರಷ್ಟು ಮಕ್ಕಳು ಪೋಷಣೆ ಇಲ್ಲದೆ ಬಳಲುತ್ತಿದ್ದರೆ. ರಾಷ್ಟ್ರೀಯ ಕುಟುಂಬ ಆರೋಗ್ಯ ವರದಿ ಸಹ ಮಹಿಳೆ, ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆ ಇದೆ ಎಂದು ಹೇಳಿದೆ.

**8.ಯುನೆಸ್ಕೊ ಅಂತಾರಾಷ್ಟ್ರೀಯ ಸಾಕ್ಷರತಾ ಪ್ರಶಸ್ತಿ ಪ್ರಕಟ**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಿಲಿಮ್ಸ್ ಗಾಗಿ

- ಯುನಿಸ್ಕೊ ೨೦೧೭ರ ಅಂತಾರಾಷ್ಟ್ರೀಯ ಸಾಕ್ಷರತಾ ಪ್ರಶಿಸ್ತಿಗಳನ್ನು ಪ್ರಕಟಿಸಿದೆ. ಈ ಪ್ರಶಸ್ತಿಯನ್ನು ಜಾಗತಿಕ ಸಾಕ್ಷರತೆ ಕ್ಷೇತ್ರದ ಶ್ರೇಷ್ಠ ವಿಧಾನಗಳು ಹಾಗೂ ನಾವಿನ್ಯತೆ ಗುರುತಿಸಿ ನೀಡಲಾಗುತ್ತದೆ.
- ಕೆನಡಾ, ಕೊಲಂಬಿಯಾ, ಜೊರ್ಡಾನ್, ಪಾಕಿಸ್ತಾನ ಮತ್ತು ದಕ್ಷಿಣ ಆಫ್ರಿಕಾ ಈ ಪ್ರಶಸ್ತಿಯನ್ನು ಗೆದ್ದಿದ್ದು, ಸೆ. ೮ರಂದು ಅಂತಾರಾಷ್ಟ್ರೀಯ ಸಾಕ್ಷರತಾ ದಿನದ ಅಂಗವಾಗಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಯುನೆಸ್ಕೋ ತಿಳಿಸಿದೆ.
- ಪ್ರಶಸ್ತಿಯನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗಿದ್ದು, **ಚೀನಾ ಪ್ರಾಯೋಜಿತ ಯುನೆಸ್ಕೊ ಸಾಕ್ಷರತೆಯ ಕನ್ ಫ್ಯೂಷಿಯಸ್ ಪ್ರಶಸ್ತಿ ಹಾಗೂ ದಕ್ಷಿಣ ಕೊರಿಯಾ ಪ್ರಾಯೋಜಿತ ಕಿಂಗ್ ಸೇಜಾಂಗ್ ಸಾಕ್ಷರತೆ ಪ್ರಶಸ್ತಿಗಳಿವೆ.** ಈ ವರ್ಷದ ಯುನೆಸ್ಕೋ ಕನ್ ಫ್ಯೂಷಿಯಸ್ ಪ್ರಶಸ್ತಿಗೆ **ಕೊಲಂಬಿಯಾದ ಅಡಲ್ಟಿ ಕೋ ಪ್ರೋಗ್ರಾಮ್, ಪಾಕ್ ನ ಸಿಟಿಜನ್ ಫೌಂಡೇಶನ್ ಹಾಗೂ ದಕ್ಷಿಣ ಆಫ್ರಿಕಾದ ಫಂಡ್ಜಾ ಪ್ರಾಜೆಕ್ಟ್ ಆಯ್ಕೆಯಾಗಿವೆ.**
- ಕೆನಡಾದ ಸೆಂಟರ್ ಫಾರ್ ಲರ್ನಿಂಗ್ & ಪರ್ಫಾರ್ಮೆನ್ಸ್, ಜೋರ್ಡನ್ ನ ವಿ ಲವ್ ರೀಡಿಂಗ್ ಪ್ರೋಗ್ರಾಮ್ ಅನ್ನು ಕಿಂಗ್ ಸೇಜಾಂಗ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

**9.ಡಿಜಿಟಲ್ ಕರನ್ಸಿ ಮೂಲಕ ಹಣ ಸಂಗ್ರಹಣಕ್ಕೆ ಚೀನಾ ನಿಷೇಧ**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಿಲಿಮ್ಸ್ ಗಾಗಿ

- ಡಿಜಿಟಲ್ ಕರೆನ್ಸಿ ಹಾಗೂ ಆರಂಭಿಕ ಪ್ರಸ್ತಾವನೆ ( ಐಸಿಓ) ಗಳ ಮೂಲಕ ಹಣ ಸಂಗ್ರಹಿಸುವುದನ್ನು ಚೀನಾ ನಿಷೇಧಿಸಿದೆ. ಸಂವಿಧಾನಕವಾಗಿ, ಈ ಮಾದರಿಯಯಲ್ಲಿ ಹಣ ಸಂಗ್ರಹಿಸುವುದು ಅಕ್ರಮ ಎಂದು ಚೀನಾ ಹೇಳಿದೆ.
- ಇಂದು ಜಾಗತಿಕವಾಗಿಯೂ ಡಿಜಿಟಲ್ ಕರೆನ್ಸಿ ಉದ್ಯಮಗಳು ಐಸಿಓಗಳ ಮೂಲಕ ಅಪಾರ ಹಣ ಸಂಗ್ರಹಿಸುತ್ತಿವೆ. ಚೀನಾದಲ್ಲೂ ಇದು ಬೆಳವಣಿಗೆಯಾಗಿದ್ದು, ಹಣದ ವಹಿವಾಟಿನ ಮೇಲೆ ಯಾವುದೇ ನಿಯಂತ್ರಣ ಹಾಗೂ ಮೇಲ್ವಿಚಾರಣೆ ಇರುವುದಿಲ್ಲ. ಈ ಹಿನ್ನಲೆಯಲ್ಲಿ, ಪೀಪಲ್ಸ್ ಬ್ಯಾಂಕ್ ಆಫ್ ಚೀನಾ ನಿಷೇಧ ಹೇರಿದೆ.

**10.ಅದಾನಿ - ಎಸ್‌ಎಎಬಿ ಜಂಟಿ ಹೂಡಿಕೆ**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್  ಪರೀಕ್ಷೆಗಾಗಿ

ಪ್ರಿಲಿಮ್ಸ್ ಗಾಗಿ

- ಭಾರತದ ಪ್ರಮುಖ ವಾಣಿಜ್ಯ ಸಂಸ್ಥೆಗಳಲ್ಲಿ ಒಂದಾಗಿರುವ ಅದಾನಿ ಗ್ರೂಪ್ ಹಾಗೂ ಸ್ವೀಡನ್ ದೇಶದ ರಕ್ಷಣಾ ಕಂಪನಿ ಎಸ್‌ಎಎಬಿ ರಕ್ಷಣಾ ಉತ್ಪನ್ನಗಳ ತಯಾರಿಕೆಯಲ್ಲಿ ಜಂಟಿ ಹೂಡಿಕೆ ಮಾಡಲು ಸಹಿ ಹಾಕಿವೆ.
- ಮೇಕ್ ಇನ್ ಇಂಡಿಯಾ ಅಡಿ, ಸರ್ಕಾರಿ ಗುತ್ತಿಗೆ ದೊರೆತಲ್ಲಿ ಸಿಂಗಲ್ ಇಂಜಿನ್ ಗ್ರಿಪೆನ್ ಫೈಟರ್ ಜೆಟ್ ವಿಮಾನಗಳ ವಿನ್ಯಾಸ, ಅಭಿವೃದ್ಧಿ ಹಾಗೂ ಉತ್ಪಾದನೆಗಳಲ್ಲಿ ೬೦ ಸಾವಿರ ಕೋಟಿ ರೂ. ಜಂಟಿ ಹೂಡಿಕೆ ಮಾಡಲಿವೆ
- ಈಗಾಗಲೇ ಭಾರತದ ಟಾಟಾ ಅಡ್ವಾನ್ಸಡ್ ಸಿಸ್ಟಮ್ಸ್ ಲಿಮಿಟೆಡ್ ಹಾಗೂ ಅಮೇರಿಕಾದ ಲಾಕ್ ಹೀಡ್ ಮಾರ್ಟಿನ್ ಸಂಸ್ಥೆಗಳ ನಡುವೆ ಇದೇ ಮಾದರಿಯ ಒಪ್ಪಂದವೇರ್ಪಟ್ಟಿದೆ.

8th SEPTEMBER

## 1. ಅಮರಾವತಿ-ವಿಜಯವಾಡ ನಡುವೆ ಹೈಪರ್‌ಲೂಪ್

### ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮೇನ್ಸ್ ಗಾಗಿ

### ಪ್ರಿಲಿಮ್ಸ್ ಗಾಗಿ

- ಆಂಧ್ರ ಪ್ರದೇಶದ ರಾಜಧಾನಿ ಅಮರಾವತಿ ಮತ್ತು ವಿಜಯವಾಡ ನಡುವಿನ ಮೆಟ್ರೋ ಯೋಜನೆಯನ್ನು ಕೈಬಿಟ್ಟಿರುವ ರಾಜ್ಯ ಸರ್ಕಾರ ಅದರ ಬದಲು ಅತ್ಯಾಧುನಿಕ 'ಹೈಪರ್‌ಲೂಪ್' ಸಂಚಾರ ವ್ಯವಸ್ಥೆ ಜಾರಿಗೆ ಮುಂದಾಗಿದೆ. ಹೈಪರ್‌ಲೂಪ್ ಅನುಷ್ಠಾನಗೊಂಡರೆ ಅಮರಾವತಿ ಮತ್ತು ವಿಜಯವಾಡ ಮಧ್ಯದ 35 ಕಿ.ಮೀ. ದೂರವನ್ನು 5 ನಿಮಿಷದಲ್ಲೇ ಕ್ರಮಿಸಬಹುದಾಗಿದೆ.
- ಅಮೆರಿಕದ ಟೆಸ್ಲಾ ಮತ್ತು ಸ್ಪೇಸ್‌ಎಕ್ಸ್‌ನ ಸ್ಥಾಪಕ ಎಲೊನ್ ಮಸ್ಕ್ ಹೈಪರ್‌ಲೂಪ್ ಪ್ರಾಜೆಕ್ಟ್ ಪರಿಚಯಿಸಿದ್ದು, ಈಗಾಗಲೇ ಕೆಲ ದೇಶಗಳಲ್ಲಿ ಪ್ರಾಯೋಗಿಕ ಪರೀಕ್ಷೆಗೊಳಪಡುತ್ತಿದೆ. ಆದರೆ ಎಲ್ಲಿಯೂ ಯೋಜನೆ ಜಾರಿಯಾಗಿಲ್ಲ. ಹೈಪರ್‌ಲೂಪ್ ಯೋಜನೆ ಸಂಬಂಧ ಆಂಧ್ರ ಪ್ರದೇಶದ ಚಂದ್ರಬಾಬು ನಾಯ್ಡು ಸರ್ಕಾರ ಅಮೆರಿಕ ಕಂಪನಿ ಹೈಪರ್‌ಲೂಪ್ ಟ್ರಾನ್ಸ್‌ಪೋರ್ಟೆಶನ್ ಟೆಕ್ನಾಲಜೀಸ್ ಜತೆ ಆಂಧ್ರ ಪ್ರದೇಶದ ಎಕನಾಮಿಕ್ ಡೆವಲಪ್‌ಮೆಂಟ್ ಬೋರ್ಡ್ ಮಾತುಕತೆ ನಡೆಸಿದೆ. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ ಜಾರಿಯಾಗಲಿದ್ದು, ಹಾಗಾದಲ್ಲಿ ಭಾರತದ ಮೊದಲ ಹೈಪರ್‌ಲೂಪ್ ಪ್ರಾಜೆಕ್ಟ್ ಇದಾಗಿರಲಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮುಖ್ಯ ಪರೀಕ್ಷೆಗಾಗಿ

**ಭಾರತಕ್ಕೆ ಇನ್ನೂ ಬುಲೆಟ್ ರೈಲೇ ಬಂದಿಲ್ಲ. ಆದರೆ ಬುಲೆಟ್ ರೈಲಿನ ಮೂರು ಪಟ್ಟು ವೇಗದ "ಹೈಪರ್ ಲೂಪ್' ಭವಿಷ್ಯದ ಸಾರಿಗೆ ವ್ಯವಸ್ಥೆ ಅಳವಡಿಸಿಕೊಳ್ಳಲು ಕೇಂದ್ರ ಸರ್ಕಾರ ಉತ್ಸುಕವಾಗಿದೆ. ಶಬ್ದಕ್ಕಿಂತಲೂ ವೇಗವಾಗಿ ಚಲಿಸುವ ಈ ಸಾರಿಗೆ ತಂತ್ರಜ್ಞಾನವೇನು?**

### ಏನಿದು ಹೈಪರ್ ಲೂಪ್?

- ಹೈಪರ್‌ಲೂಪ್ ಎನ್ನುವುದು ಭವಿಷ್ಯದ ಸಾರಿಗೆ ತಂತ್ರಜ್ಞಾನ. ಗಂಟೆಗೆ 1,200 ಕಿ.ಮೀ. ವೇಗದಲ್ಲಿ ಚಲಿಸುವ ತಂತ್ರಜ್ಞಾನವಿದು. ಎಲೋನ್ ಮಸ್ಕ್ ಎನ್ನುವವರ ಚಿಂತನೆ ಇದು. ಇದನ್ನು 2013ರಲ್ಲಿ ಅವರು ಜಗತ್ತಿಗೆ ಪ್ರಕಟಪಡಿಸಿದ್ದರು.

- ಈ ಹೈಪರ್‌ಲೂಪ್ ಎನ್ನುವುದು ದೊಡ್ಡ ವಾಯುಚಾಲಿತ ಕೊಳವೆ ಒಳಗೆ ವೃತ್ತಾಕಾರದ ಕ್ಯಾಪ್ಸೂಲ್ ರೀತಿಯ ವಾಹನವನ್ನು ಓಡಿಸುವುದು. ಒಂದನೆಯದು ಭಾರೀ ಶಕ್ತಿಯ ಫ್ಯಾನ್ ಗಳನ್ನು ಬಳಸಿ ಒತ್ತಡ ಉಂಟುಮಾಡಿ ಓಡಿಸುವುದು, ಇನ್ನೊಂದು ನಿರ್ವಾತ ಪ್ರದೇಶ ಉಂಟು ಮಾಡಿ ಎಲೆಕ್ಟ್ರೋ ಮ್ಯಾಗ್ನೆಟಿಕ್ ಸಸ್ಪೆನ್ಷನ್ (ಮ್ಯಾಗ್ಲೆವ್ ರೈಲುಗಳಂತೆ) ಸಂಚರಿಸುವ ವಿಧಾನ ಬಗ್ಗೆ ಸಂಶೋಧನೆ ನಡೆಯುತ್ತಿದೆ.
- ಭೂಕಂಪ, ಇತರ ಪ್ರಾಕೃತಿಕ ವಿಕೋಪದಿಂದ ರಕ್ಷಿಸಲು ಈ ಕೊಳವೆಗಳನ್ನು ಗಟ್ಟಿಮುಟ್ಟಾದ ಕಾಂಕ್ರೀಟ್ ಕಂಬಗಳಲ್ಲಿ ಇರಿಸುವ ಪ್ಲಾನ್ ಇದೆ. ಜೊತೆಗೆ ನೀರಿನೊಳಗೆ ಕೂಡ ಕೊಳವೆ ಹಾಕಿ ಕ್ಯಾಪ್ಸೂಲ್‌ಗಳನ್ನು ಓಡಿಸುವ ಇರಾದೆ .

### ಎಲೋನ್ ಮಸ್ಕ್ ಪ್ಲಾನ್ ಏನು?

- ಎಲೋನ್ ಮಸ್ಕ್ ಜಗತ್ತಿನ ಪ್ರಸಿದ್ಧ ಬಾಹ್ಯಾಕಾಶ ಕಂಪನಿ, ಅಮೆರಿಕದ ಸ್ಪೇಸ್ ಎಕ್ಸ್ ಮತ್ತು ಬ್ಯಾಟರಿ ಕಾರುಗಳ ಪ್ರಸಿದ್ಧ ಕಂಪನಿ ಟೆಸ್ಲಾ ಮೋಟಾರ್ನ ಮುಖ್ಯಸ್ಥರು. ನವೀನ ಸಾರಿಗೆ ವ್ಯವಸ್ಥೆಯೊಂದನ್ನು ಶೋಧಿಸಬೇಕು ಎಂಬುದು ಇವರ ಉದ್ದೇಶ. ವಾಹನ ಚಾಲನೆ, ವಿಮಾನ ಹಾರಾಟಕ್ಕೆ ಹೊರತಾದ ವ್ಯವಸ್ಥೆಯೊಂದನ್ನು ತರಬೇಕು ಎಂಬುದು ಇವರ ಉದ್ದೇಶವಾಗಿತ್ತು.
- ರೈಲ್ವೇ ಉತ್ತಮವಾದರೂ, ಇದರ ನಿರ್ಮಾಣ ಅತ್ಯಂತ ದುಬಾರಿ ಮತ್ತು ನಿರ್ವಹಣೆಗಳೂ ಹೆಚ್ಚು ಆದ್ದರಿಂದ ಭವಿಷ್ಯದ ಸಾರಿಗೆ ವ್ಯವಸ್ಥೆ ಶೋಧಿಸಬೇಕೆಂದು ಉದ್ದೇಶಿಸಿದ್ದರು. ಪ್ರಾಯೋಗಿಕವಾಗಿ ಇದರ ಪರೀಕ್ಷೆಯನ್ನು ಜುಲೈನಲ್ಲಿ ನಡೆಸಲಾಗಿದ್ದು, 2020ರವೇಳೆಗೆ ಹೈಪರ್‌ಲೂಪ್ ಅನ್ನು ಜಗತ್ತಿಗೆ ಪರಿಚಯಿಸುವ ಉದ್ದೇಶವಿದೆ.
- ಅಮೆರಿಕದ ಲಾಸ್‌ಏಂಜಲೀಸ್-ಸ್ಯಾನ್ ಫ್ರಾನ್ಸಿಸ್ಕೋ ನಡುವಿನ ದೂರ ಸುಮಾರು 610 ಕಿ.ಮೀ. ಸಂಚಾರ ದಟ್ಟಣೆಯ ಪ್ರದೇಶವೂ ಹೌದು. ಈ ಎರಡೂ ನಗರಗಳ ನಡುವೆ ಹೈಪರ್ ಲೂಪ್ ಓಡಿಸುವುದು ಎಲೋನ್ ಮಸ್ಕ್ ಅವರ ಮೂಲ ಐಡಿಯಾ. ಕೇವಲ 30 ನಿಮಿಷದಲ್ಲಿ ಹೈಪರ್‌ಲೂಪ್ ಓಡಿಸಬಹುದು ಎಂಬ ಲೆಕ್ಕಾಚಾರವಿದೆ. ಪ್ರತಿ ಕ್ಯಾಪ್ಸೂಲ್‌ನಲ್ಲಿ 7ರಿಂದ 8 ಮಂದಿ ಕೂರಬಹುದಾಗಿದ್ದು, ನಿರಂತರ ಸಂಚಾರ ನಡೆಸುವುದು ಗುರಿ. ಕ್ಯಾಪ್ಸೂಲ್ ದೊಡ್ಡದಾದಷ್ಟು ವೇಗಕ್ಕೆ ಶಕ್ತಿಯ ಬೇಡಿಕೆ ಹೆಚ್ಚಾಗುತ್ತದೆ.

### ಹೈಪರ್‌ಲೂಪ್ ಎಲ್ಲಿ ಬಳಕೆಯಾಗುತ್ತೆ?

- ಹೆಚ್ಚು ದಟ್ಟಣೆ ಇರುವ ನಗರಗಳ ಮಧ್ಯೆ ಹೈಪರ್‌ಲೂಪ್ ಸಾರಿಗೆ ಹೇಳಿ ಮಾಡಿಸಿದ್ದು ಎಂಬುದು ಎಲೋನ್ ಮಸ್ಕ್ ಅವರ ಅಭಿಪ್ರಾಯ. 1500 ಕಿ.ಮೀ. ಒಳಗಿನ ಸಂಚಾರಕ್ಕೆ ಇದು ಉತ್ತಮ. ಶಬ್ದದ ವೇಗಕ್ಕೂ ಮೀರಿದ ವೇಗದ ವ್ಯವಸ್ಥೆ ಇದಾಗಿದ್ದು ವಿಮಾನಕ್ಕಿಂತಲೂ ಕಡಿಮೆ ಅವಧಿ ಸಾಕಾಗುತ್ತದೆ. ರನ್‌ವೇಯಿಂದ ಟೇಕಾಫ್-ಲ್ಯಾಂಡಿಂಗ್ ಸಮಯವೂ ಉಳಿತಾಯ ಎಂದು ಹೇಳಲಾಗಿದೆ.

### ಹೈಪರ್‌ಲೂಪ್‌ಗೆ ಶಕ್ತಿ ಎಲ್ಲಿಂದ?

- ಹೈಪರ್‌ಲೂಪ್‌ನ ಪೈಪ್‌ಗಳ ಮೇಲ್ಭಾಗದಲ್ಲಿ ಸೋಲಾರ್ ಪ್ಯಾನೆಲ್ ಗಳನ್ನು ಅಳವಡಿಸುವುದು. ರೀಚಾರ್ಜ್ ಆಗುವ ಬ್ಯಾಟರಿಗಳು ಕ್ಯಾಪ್ಸೂಲ್ ಗಳಲ್ಲಿದ್ದು ಅದಕ್ಕೆ ಸೋಲಾರ್ ಶಕ್ತಿಯನ್ನು ನೀಡುವುದು. ಜೊತೆಗೆ ಸಂಚಾರದ ವೇಳೆ ಚಾರ್ಜ್ ಆಗುವ ವ್ಯವಸ್ಥೆಯನ್ನು ರೂಪಿಸುವ ಇರಾದೆಯನ್ನೂ ಹೊಂದಲಾಗಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಹೈಪರ್‌ಲೂಪ್ ವ್ಯವಸ್ಥೆ ತೀರಾ ಅಗ್ಗದ್ದೇ?

- ಹೈಪರ್‌ಲೂಪ್ ವ್ಯವಸ್ಥೆ ಅಗ್ಗದ್ದೇನೂ ಅಲ್ಲ. ಎಲೋನ್ ಮಸ್ಕ್ ಅವರೇ ಹೇಳುವಂತೆ ಇದಕ್ಕೆ ಹಲವು ಕೋಟಿ ರೂ.ಗಳ ವೆಚ್ಚವಾಗಬಹುದು. ಆದರೆ ಇದು ಅತ್ಯಾಧುನಿಕ ಬುಲೆಟ್/ವೇಗದ ರೈಲುಗಳಿಗಿಂತ ಅಗ್ಗದ್ದು ಎಂಬುದು ಅವರ ವಾದ. ಹೈಪರ್‌ಲೂಪ್‌ನ ಪ್ರತಿ ಕ್ಯಾಪ್ಸೂಲ್ ಗೆ ನೂರು ಕೋಟಿ ರೂ.ಗಳಿಗೂ ಮಿಕ್ಕಿ ವೆಚ್ಚವಾಗುತ್ತದೆ. ಜೊತೆಗೆ ದೊಡ್ಡ ಕೊಳವೆ ನಿರ್ಮಿಸಬೇಕು.
- ಈ ಕೊಳವೆ ಒಳಗೆ ಜನ ಸಂಚರಿಸುವ, ಸರಕು ಸಾಗಣೆಗೆ ಕ್ಯಾಪ್ಸೂಲ್ ಗಳನ್ನು ಅಳವಡಿಸಬಹುದಾಗಿದೆ. ಹೈಪರ್ ಲೂಪ್‌ನಲ್ಲಿ ಹೆಚ್ಚು ಶಬ್ದವೇ ಬರುವುದಿಲ್ಲ. ಜೊತೆಗೆ

ಹೈಸ್ಪೀಡ್ ರೈಲು ಟ್ರ್ಯಾಕ್‌ಗಳಿಗೆ ಹಾಕುವಂತೆ ಎರಡೂ ಬದಿ ಬೇಲಿಗಳನ್ನು ನಿರ್ಮಿಸಬೇಕಾಗಿಯೂ ಇಲ್ಲ.

**ಭಾರತದ ಮೊದಲ ಅತಿ ವೇಗದ ರೈಲು ತೇಜಸ್ ಇತ್ತೀಚೆಗೆ ಸಂಚಾರ ಆರಂಭಿಸಿದೆ. ಅತಿ ವೇಗದ ರೈಲುಗಳ ಆರಂಭಕ್ಕೆ ಅಂತೂ ಪ್ರಯತ್ನ ಆರಂಭವಾಗಿರುವುದು ಹೊಸ ಹೆಜ್ಜೆ. ಇದಕ್ಕೆ ಆಗಬೇಕಿರುವ ಕಾರ್ಯಗಳೇನು?**

- ಹಿಂದಿನ ಸರ್ಕಾರಗಳು ಭಾರತೀಯ ರೈಲ್ವೆ ಆಧುನೀಕರಿಸುವ 'ಪ್ರಯತ್ನ'ಮಾಡಿವೆ. ಆದರೆ ಭಾರತದಲ್ಲಿ ಇನ್ನೂ ಅತಿ ವೇಗದ ರೈಲು ವ್ಯವಸ್ಥೆ ಬಂದಿಲ್ಲ. ಭಾರತವು ವಿಶ್ವದ ನಾಲ್ಕನೇ ಅತಿ ಉದ್ದದ ರೈಲ್ವೆ ಜಾಲ (ಅಮೆರಿಕ, ಚೀನಾ ಮತ್ತು ರಷ್ಯಾ ಮೊದಲ ಮೂರು ಸ್ಥಾನದಲ್ಲಿವೆ) ಹೊಂದಿದೆ.
- ಸುಮಾರು 30 ವರ್ಷಗಳ ಹಿಂದೆ ಆರಂಭವಾದ ಶತಾಬ್ದಿ ಎಕ್ಸ್‌ಪ್ರೆಸ್, ಈಗಲೂ ಗರಿಷ್ಠ 150 ಕಿ.ಮೀ. ವೇಗದಲ್ಲಿ ಓಡುತ್ತಿದೆ. ವಿಷಾದದ ವಿಷಯವೆಂದರೆ, ಯಾವುದೇ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಉಪಯೋಗಿಸದೆ ಇದ್ದುದರಿಂದ ನಮ್ಮ ರೈಲುಗಳ ವೇಗ ಹೆಚ್ಚಲಿಲ್ಲ. ಈಗ ಭಾರತದಲ್ಲಿ ಬಳಕೆಯಲ್ಲಿರುವ ಅತಿ ವೇಗದ ರೈಲುಗಳೆಂದರೆ 160 ಕಿ.ಮೀ. ವೇಗದಲ್ಲಿ ಚಲಿಸುವ ಗತಿಮಾನ್ ಎಕ್ಸ್‌ಪ್ರೆಸ್ ಹಾಗೂ ಇತ್ತೀಚೆಗೆ ಪ್ರಾರಂಭವಾದ ತೇಜಸ್ ಎಕ್ಸ್‌ಪ್ರೆಸ್.
- ಭಾರತದಲ್ಲಿ ಅತಿ ವೇಗದ ರೈಲನ್ನು ಅಳವಡಿಸುವುದಾದರೆ, 180-200 ಕಿ.ಮೀ. ವೇಗದ ಟಾಲ್ಗೊ ರೈಲು ಉತ್ತಮ ಆಯ್ಕೆ ಆಗಬಲ್ಲದು. ಭಾರತ ಸರ್ಕಾರವು ಇತ್ತೀಚೆಗೆ ಟಾಲ್ಗೊ ರೈಲಿನ ಪ್ರಯೋಗಾತ್ಮಕ ಚಾಲನೆ (ಟ್ರಯಲ್ ರನ್) ಮಾಡಿತು. ಇದು ಈಗಿರುವ ರೈಲ್ವೆ ಹಳಿಯನ್ನೇ ಬಳಸಿಕೊಂಡು ಪ್ರಯಾಣದ ಸಮಯವನ್ನು ಶೇ 25ರಷ್ಟು ಕಡಿಮೆಗೊಳಿಸುತ್ತದೆ.
- ಆದರೆ ಸರ್ಕಾರಿ ಕಾರ್ಯ ವೈಖರಿ ಆಧಾರದಲ್ಲಿ ಹೇಳುವುದಾದರೆ ಭಾರತದಲ್ಲಿ ಇದು ಜಾರಿಗೆ ಬರಲು ಕನಿಷ್ಠ 1ರಿಂದ 2 ವರ್ಷ ತೆಗೆದುಕೊಳ್ಳಬಹುದು. ಲಭ್ಯವಿರುವ ವರದಿಗಳ ಪ್ರಕಾರ ಶತಾಬ್ದಿ ಮತ್ತು ರಾಜಧಾನಿ ರೈಲುಗಳ ಸ್ಥಾನದಲ್ಲಿ ಟಾಲ್ಗೊ ರೈಲನ್ನು ಬಳಸಲು ಸರ್ಕಾರ ಯೋಚಿಸಿದೆ. ಮುಂಬೈ ಮತ್ತು ಅಹಮದಾಬಾದ್ ನಡುವಿನ ಬುಲೆಟ್ ರೈಲು (320 ಕಿ.ಮೀ. ವೇಗ) ಒಂದು ದಿಟ್ಟ ಹೆಜ್ಜೆಯೇ ಸರಿ, ಆದರೆ ಇದು ಪೂರ್ಣಗೊಳ್ಳಲು ಕನಿಷ್ಠ ಏಳೆಂಟು ವರ್ಷಗಳು ಬೇಕಾಗಬಹುದು.

- ಒಂದು ಕಡೆ ಭಾರತವು 320 ಕಿ.ಮೀ. ವೇಗದ ರೈಲು ಆರಂಭಿಸಲು ಯತ್ನಿಸಿದರೆ, ಮತ್ತೊಂದು ಕಡೆ ಜಪಾನ್ ಮತ್ತು ಚೀನಾ ದೇಶಗಳು ಹುರುಪಿನಿಂದ 500 ಕಿ.ಮೀ.ನ ಸೂಪರ್ ವೇಗದ ರೈಲು ವಿನ್ಯಾಸಗೊಳಿಸಲು ಹೊರಟಿವೆ. ಅಲ್ಲದೆ, ಹೈಪರ್ ಲೂಪ್ (Hyperloop- ವಿಶೇಷವಾಗಿ ನಿರ್ಮಿಸಿದ ಕೊಳವೆಗಳನ್ನು ಅಳವಡಿಸಿದ ತಂತ್ರಜ್ಞಾನ) ಗಂಟೆಗೆ 900 ಕಿ.ಮೀ. ವೇಗದಲ್ಲಿ ಪ್ರಯಾಣಿಸಬಹುದಾದ ಒಂದು ಅದ್ಭುತ ಸಂಗತಿಯೇ ಹೌದು.
- ವಿಶ್ವದಲ್ಲಿ ಮೊದಲನೆಯ ಹೈಪರ್ ಲೂಪ್ ರೈಲು 2020ರೊಳಗೆ ಯುಎಇಯ ರಾಜಧಾನಿ ದುಬೈಯಲ್ಲಿ ಓಡುವ ನಿರೀಕ್ಷೆಯಿದೆ. ಇದು ಪ್ರಯಾಣ ಸಮಯವನ್ನು 90 ನಿಮಿಷಗಳಿಂದ (ಬಸ್ ಮೂಲಕ) ಕೇವಲ 12 ನಿಮಿಷಕ್ಕೆ ಕಡಿತಗೊಳಿಸಲಿದೆ.ಸರ್ಕಾರ ಬೆಂಬಲ ಕೊಟ್ಟರೆ ಭಾರತದಲ್ಲಿ 38 ತಿಂಗಳಲ್ಲಿ ಹೈಪರ್ ಲೂಪ್ ರೈಲು ಆರಂಭಿಸಬಹುದು

**ಸುರಕ್ಷತೆ ಸುಧಾರಿಸಲು ತಂತ್ರಜ್ಞಾನ:**

- ವೇಗದ ರೈಲು ಎಷ್ಟು ಮುಖ್ಯವೋ, ಸುರಕ್ಷತೆಯೂ ಅಷ್ಟೇ ಮುಖ್ಯ. ಕಳೆದ 4 ತಿಂಗಳಲ್ಲಿ ರೈಲ್ವೆ ಅಪಘಾತಗಳು ಹೆಚ್ಚು ಜನರ ಸಾವಿಗೆ ಕಾರಣವಾಗಿವೆ. ಭಾರತೀಯ ರೈಲ್ವೆ ವೆಬ್ ಸೈಟ್‌ನ ಅಂಕಿಅಂಶ ಹೇಳುವ ಪ್ರಕಾರ ರೈಲ್ವೆ ವ್ಯವಸ್ಥೆಯಲ್ಲಿ ಬೇರೆ- ಬೇರೆ ಕಾರಣಗಳಿಂದ ಪ್ರತಿ ವರ್ಷ ಸಾವಿರಾರು ಜನರು ಸಾವನ್ನಪ್ಪುತ್ತಾರೆ.
- ರೈಲುಗಳಲ್ಲಿ ಅತಿಯಾದ ದಟ್ಟಣೆ, ಕ್ರಾಸಿಂಗ್‌ನಲ್ಲಿ ಸುರಕ್ಷತೆಯ ಅಭಾವ ಇತ್ಯಾದಿ ಪ್ರಮುಖ ಕಾರಣಗಳು. ಇತ್ತೀಚೆಗೆ ಬಿಡುಗಡೆಯಾದ ನೀತಿ ಆಯೋಗದ ವರದಿ ಪ್ರಕಾರ ಭಾರತದಲ್ಲಿ ಸಂಭವಿಸುವ ರೈಲ್ವೆ ಅಪಘಾತಗಳಲ್ಲಿ ಶೇ 87ರಷ್ಟು ಮನುಷ್ಯನ ತಪ್ಪಿನಿಂದಾಗುವಂಥವು.
- ಸುರಕ್ಷತೆಯ ಸವಾಲುಗಳನ್ನು ಪರಿಗಣಿಸಿ, ತಮ್ಮ ಬಜೆಟ್ ಭಾಷಣದಲ್ಲಿ ಹಣಕಾಸು ಮಂತ್ರಿಗಳು 1 ಲಕ್ಷ ಕೋಟಿ ನಿಧಿಯಲ್ಲಿ ರಾಷ್ಟ್ರೀಯ ರೈಲು ಸಂರಕ್ಷಾ ಕೋಶ್ ರಚನೆಯನ್ನು ಪ್ರಕಟಿಸಿದರು. ಒಳ್ಳೆಯ ವಿಷಯವೇ ಹೌದು, ಆದರೆ ಕಾಲಮಿತಿಯೊಂದಿಗೆ ಯೋಜನೆ ಕಾರ್ಯಗತಗೊಳಿಸುವುದು ಮುಖ್ಯ.
- 2015ರಲ್ಲಿ ರೈಲು ಅಪಘಾತ ಹಾಗೂ ರೈಲ್ವೆ ಸಲಕರಣೆಗಳ ವಿಫಲತೆಯಿಂದ ರೈಲ್ವೆ ಜಾಲದಲ್ಲಿ ಒಟ್ಟು 1,281 ಗಂಟೆಗಳ ಸಂಚಾರ ಅಡಚಣೆ ಉಂಟಾಯಿತು. ಇದನ್ನು ಜಪಾನ್ ಜೊತೆ ಹೋಲಿಸಿ. ಶಿಂಕಾನ್ಸೆನ್ ಜಾಲದಲ್ಲಿ ದಿನಕ್ಕೆ ಕೇವಲ 35 ಸೆಕೆಂಡು ವಿಳಂಬ, ಅಂದರೆ

ಸುಮಾರು ನಾಲ್ಕು ನಿಮಿಷಗಳ ವಾರ್ಷಿಕ ವಿಳಂಬ. 53 ವರ್ಷದ ಶಿಂಕಾನ್ಸೆನ್ ಜಾಲ ಶೂನ್ಯ ಅಪಘಾತಗಳ ಒಂದು ಅದ್ಭುತ ದಾಖಲೆಯನ್ನು ಹೊಂದಿದೆ.

- ಯುರೋಪಿನ ರೈಲ್ವೆ ಸುರಕ್ಷತಾ ಕಾರ್ಯಕ್ಷಮತೆಯ ವರದಿ 2016ರ ಪ್ರಕಾರ, ಜರ್ಮನಿ ಮತ್ತು ಇಟಲಿಯಲ್ಲಿ ಇತ್ತೀಚಿನ ಅಪಘಾತಗಳ ಹೊರತಾಗಿಯೂ, ರೈಲ್ವೆಗಳು ಅತಿ ಹೆಚ್ಚು ಸುರಕ್ಷಿತವಾದ ಸಾರಿಗೆ ವ್ಯವಸ್ಥೆಯಾಗಿದೆ. ವಾಸ್ತವವಾಗಿ, ಬಲವಾದ ತಂತ್ರಜ್ಞಾನ ಅಳವಡಿಕೆಯಿಂದಾಗಿ ಸುರಕ್ಷತೆಯು ಹೆಚ್ಚು ಸುಧಾರಣೆಯಾಗಿದೆ ಎಂದು ಈ ವರದಿ ಹೇಳುತ್ತದೆ.
- ಮೂಲಭೂತವಾಗಿ ನಾವು ಭಾರತೀಯ ರೈಲ್ವೆಯಲ್ಲಿ ಸಿಗ್ನಲಿಂಗ್ ಮತ್ತು ಸಂವಹನ ವ್ಯವಸ್ಥೆಯನ್ನು ಆಧುನೀಕರಿಸಬೇಕು, ನಾವು ಇನ್ನೂ ಅನೇಕ ಸ್ಥಳಗಳಲ್ಲಿ ಕೈ (ಮಾನವ) ಸಿಗ್ನಲಿಂಗ್ ಅನ್ನು ಬಳಸುತ್ತೇವೆ. ವೈರ್‌ಲೆಸ್ ತಂತ್ರಜ್ಞಾನಗಳು, ಜಿ.ಎಸ್.ಎಮ್ ರೈಲ್ವೇಸ್ (GSM-R) ಅಂಥವುಗಳನ್ನು ಕೆಲವು ಸ್ಥಳಗಳಲ್ಲಿ ಅಳವಡಿಸಲು ಪ್ರಯತ್ನಿಸಿದರೂ ಕಳಪೆ ಅನುಷ್ಠಾನದ ಕಾರಣಗಳಿಂದಾಗಿ ಅದರ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಮತ್ತೊಂದೆಡೆ, ಮುಂದುವರಿದ ರಾಷ್ಟ್ರಗಳು ಈಗ ರೈಲ್ವೆ ಸಂವಹನಕ್ಕಾಗಿ ಉನ್ನತ-ವೇಗದ 4ಜಿ ವೈರ್‌ಲೆಸ್ ತಂತ್ರಜ್ಞಾನ ಬಳಸಲು ಸನ್ನದ್ಧವಾಗಿವೆ.
- ಯುರೋಪಿನಲ್ಲಿ ರೈಲುಗಳ ವೇಗವನ್ನು ನಿರ್ಬಂಧಿಸಲು ಮತ್ತು ಹಳಿತಪ್ಪುವುದನ್ನು ಕಡಿಮೆ ಮಾಡಲು ಸ್ವಯಂಚಾಲಿತ ರೈಲು ರಕ್ಷಣೆ ವ್ಯವಸ್ಥೆ (ATP)ಯನ್ನು ಬಳಸಲಾಗುತ್ತದೆ. ಭಾರತದಲ್ಲೂ ರೈಲು ರಕ್ಷಣೆ ಮತ್ತು ಎಚ್ಚರಿಕೆ ವ್ಯವಸ್ಥೆ (TPWS) ಅನೇಕ ವರ್ಷಗಳಿಂದ ಕೇವಲ ಪ್ರಾಯೋಗಿಕ ರೂಪದಲ್ಲಿದೆ. ಅಂತಹ ಒಂದು ವ್ಯವಸ್ಥೆಯನ್ನು ಇತ್ತೀಚೆಗೆ ಚೆನ್ನೈ ಸಮೀಪ ಪ್ರಾಯೋಗಿಕ ಜಾರಿ ಮಾಡಲಾಯಿತು. ದೇಶದಾದ್ಯಂತ ಇದರ ಪೂರ್ಣ ಅನುಷ್ಠಾನವನ್ನು ಯಾವಾಗ ನೋಡಬಹುದು ಎಂಬುದು ಪ್ರಶ್ನೆ.

- ಮುಂದುವರಿದ ದೇಶಗಳು ಭದ್ರತೆ ಮತ್ತು ಸುರಕ್ಷತೆಯನ್ನು ಮತ್ತಷ್ಟು ಸುಧಾರಿಸಲು ಸಂಶೋಧನೆ ಹಾಗೂ ಅಭಿವೃದ್ಧಿ (R&D)ಯಲ್ಲಿ ಹೆಚ್ಚಾಗಿ ಹೂಡಿಕೆ ಮಾಡುತ್ತವೆ. ಉದಾಹರಣೆಗೆ, ಬ್ರಿಟನ್‌ನಲ್ಲಿ, ರೈಲುಗಳನ್ನು ಸಂವೇದಕ (Sensor) ವ್ಯವಸ್ಥೆಯನ್ನು ಬಳಸಿ

ಟ್ರ್ಯಾಕ್ ಮಾನಿಟರ್ ಮಾಡಲು ಅಭಿವೃದ್ಧಿಪಡಿಸಲಾಗಿದೆ, ಅದು ರೈಲುಗಳ ಸ್ಥಿತಿಯನ್ನು ಪರಿಶೀಲಿಸುತ್ತದೆ. ಇದು ಟ್ರ್ಯಾಕ್ ಕುರಿತು ನಿರಂತರ ಡೇಟಾವನ್ನು ಒದಗಿಸುತ್ತದೆ.

- ಧ್ವನಿ ತರಂಗ ಮತ್ತು ತಾಪಮಾನ ಆಧಾರಿತ ಸಂವೇದಕಗಳು ಸೇರಿದಂತೆ ಎಲೆಕ್ಟ್ರಾನಿಕ್ ಸಂವೇದಕಗಳ ಯಾವುದೇ ತಾಂತ್ರಿಕ ವೈಫಲ್ಯ ಅಥವಾ ರೈಲ್ವೆ ಟ್ರ್ಯಾಕ್ ಮತ್ತು ಚಕ್ರದ ಹಾನಿ ಬಗ್ಗೆ ಮುಂಚಿತವಾಗಿ ಮಾಹಿತಿಯನ್ನು ಒದಗಿಸುತ್ತವೆ. ಇಂತಹ ತಂತ್ರಜ್ಞಾನದ ವ್ಯವಸ್ಥೆ ಭಾರತದಲ್ಲಿ ಅತಿ ಅವಶ್ಯ, ಏಕೆಂದರೆ ಹಳಿಯ ನ್ಯೂನತೆಯಿಂದಾಗಿ ಶೇ 15 ಕ್ಕಿಂತ ಹೆಚ್ಚಿನ ಅಪಘಾತಗಳು ಸಂಭವಿಸುತ್ತವೆ. 2016-17ರಲ್ಲಿ ಹಳಿ ತಪ್ಪುವಿಕೆಯಿಂದಾಗುವ ರೈಲ್ವೆ ಅಪಘಾತಗಳು ಹಾಗೂ ಅದರಿಂದ ಸಂಭವಿಸುವ ಸಾವಿನ ಸಂಖ್ಯೆ ಐದು ಪಟ್ಟು ಹೆಚ್ಚಾಗಿದೆ.
- ತಂತ್ರಜ್ಞಾನದ ಪರಿಣಾಮಕಾರಿ ಅಳವಡಿಕೆಯಿಂದ ಖಂಡಿತವಾಗಿ ಸುರಕ್ಷತೆಯನ್ನು ಸುಧಾರಿಸಬಹುದು, ಆದರೆ ರೈಲ್ವೆ ಸಿಬ್ಬಂದಿಗೆ ಉನ್ನತ ತರಬೇತಿ ನೀಡಬೇಕು. ಇತ್ತೀಚೆಗೆ, ಭಾರತೀಯ ರೈಲ್ವೆಯು ಸುರಕ್ಷತಾ ಆಡಿಟ್ ನಡೆಸಲು ಇಟಾಲಿಯನ್ ರೈಲ್ವೆಯೊಂದಿಗೆ ಒಪ್ಪಂದ ಮಾಡಿಕೊಂಡಿತ್ತು.
- ಒಪ್ಪಂದದ ಪ್ರಕಾರ, ಇಟಲಿಯ ತಾಂತ್ರಿಕತೆಯಿಂದ ಭಾರತ ಗಮನಾರ್ಹವಾಗಿ ಪ್ರಯೋಜನವನ್ನು ಪಡೆಯಬಹುದು. ಅಲ್ಲದೆ, ನೀತಿ ಆಯೋಗವು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಸುರಕ್ಷತಾ ಸಂಸ್ಥೆಯೊಂದರ ರಚನೆಯನ್ನು ಸೂಚಿಸಿದೆ. ಸಮಗ್ರವಾಗಿ, ವಿಶ್ವಾಸಾರ್ಹ, ಸುರಕ್ಷಿತ ಮತ್ತು ಅತಿ ವೇಗದ ರೈಲ್ವೆ ಭಾರತದಲ್ಲಿ ಹೆಚ್ಚು ಅಗತ್ಯವಾಗಿದೆ. ಭಾರತೀಯ ರೈಲ್ವೆ ಶೀಘ್ರವಾಗಿ ಇತ್ತೀಚಿನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಅದರ ಉಪಯೋಗವನ್ನು ಪಡೆಯುವಂತಾಗಲಿ.

## 2.ಟೈಮ್ಸ್ ಹೈಯರ್ ಎಜುಕೇಷನ್ ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕ ಪಟ್ಟಿ 2018

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಿಲಿಮ್ಸ್ ಗಾಗಿ

- ದಿ ಟೈಮ್ಸ್ ಹೈಯರ್ ಎಜುಕೇಷನ್ ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕ ಪಟ್ಟಿ 2018 ರ ವಿಶ್ವದ 1,000 ಉನ್ನತ ವಿಶ್ವವಿದ್ಯಾಲಯಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.
- ಯುಕೆಯ ಆಕ್ಸ್ ಪರ್ಡ್ ಯೂನಿವರ್ಸಿಟಿ ಮೊದಲ ಸ್ಥಾನವನ್ನು ಉಳಿಸಿಕೊಂಡಿದೆ ಕೇಂಬ್ರಿಜ್ ವಿಶ್ವವಿದ್ಯಾನಿಲಯವು ಎರಡು ಸ್ತಾನಗಳನ್ನು ಜಿಗಿದು ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಸ್ಟ್ಯಾನ್ಫೋರ್ಡ್ ವಿಶ್ವವಿದ್ಯಾನಿಲಯವನ್ನು ಹಿಂದಿಕ್ಕಿ ಎರಡನೆಯ ಸ್ಥಾನ ಪಡೆದಿದೆ.
- ಈ ಎರಡು ವಿಶ್ವ ವಿದ್ಯಾಲಯಗಳು ಜಂಟಿಯಾಗಿ ಮೂರನೇ ಸ್ಥಾನದಲ್ಲಿದು . ಯುನೈಟೆಡ್ ಸ್ಟೇಟ್ಸ್ ಶ್ರೇಯಾಂಕಗಳಲ್ಲಿ ತನ್ನ ಪ್ರಾಬಲ್ಯವನ್ನು ಮುಂದುವರೆಸಿದೇ.
- ಆಶ್ಚರ್ಯದ ಸಂಗತಿಯಂದರೆ ಪಟ್ಟಿಯಲ್ಲಿ ಮುಂಬಡ್ತಿ ಪಡೆದ ಏಕೈಕ ಬ್ರಿಕ್ಸ್ ರಾಷ್ಟ್ರಗಳಲ್ಲಿ ಚೀನಾ ಮಾತ್ರ .

ಭಾರತೀಯ ಸಂಸ್ಥೆಗಳ ಸಾಧನೆ:

- ಭಾರತೀಯ ಪ್ರಮುಖ ಸಂಸ್ಥೆಗಳಾದ ಐಐಟಿ ದೆಹಲಿ ಮತ್ತು ಐಐಎಸ್ಸಿ ಬೆಂಗಳೂರು ಹಾಗೂ ಇನ್ನು ಕೆಲವು ಸಂಸ್ಥೆಗಳು ಶ್ರೇಯಾಂಕದಲ್ಲಿ ಕುಸಿದಿವೆ. ಭಾರತದಿಂದ ಯಾವುದೊ ಒಂದು ವಿಶ್ವ ವಿದ್ಯಾಲಯವು ಸಹ ಟಾಪ್ 100 ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಸಾಧ್ಯವಾಗಿಲ್ಲ.ಈ ವರ್ಷ ಭಾರತದ ವಿಶ್ವವಿದ್ಯಾಲಯದ ಪ್ರಗತಿ ತುಂಬ ಕುಸಿದಿದೆ .
- ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (IISc) ಯು 251-300 ಸ್ಥಾನ ಪಡೆದಿದೆ. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಬಾಂಬೆ 351-400 ಸ್ಥಾನ ಪಡೆದಿದೆ.

ಭಾರತದ ಪ್ರಮುಖ ವಿಶ್ವವಿದ್ಯಾಲಯಗಳಾದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ದೆಹಲಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಕಾನ್ಪುರ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಖರಗ್ಪುರ್ ಮತ್ತು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ರೂರ್ಕಿ 501-600 ಕ್ರಮಾಂಕದಲ್ಲಿ ಸ್ಥಾನ ಪಡೆದಿದೆ

ಅಲಿಗರ್ ಮುಸ್ಲಿಂ ವಿಶ್ವವಿದ್ಯಾಲಯ, ಬನಾರಸ್ ಹಿಂದೂ ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯ ಮತ್ತು ಭಾರತೀಯ ಶಿಕ್ಷಣ ಸಂಸ್ಥೆ ಗುವಾಹಾಟಿ ಇವುಗಳು 601-800 ದಲ್ಲಿ ಸ್ಥಾನ ಪಡೆದಿವೆ.

**3.ಹೆಚ್ಚು ಆದಾಯದ ಉದ್ಯೋಗ ಸೃಷ್ಟಿಗೆ ಕಾರ್ಯಪಡೆ ರಚನೆ**

**ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ**

ಪ್ರಿಲಿಮ್ಸ್ ಗಾಗಿ

- ರಫ್ತು ಉತ್ತೇಜಿಸುವ ಮೂಲಕ ಹೊಸ ಉದ್ಯೋಗಗಳ ಸೃಷ್ಟಿಗೆ ನೀತಿ ಆಯೋಗ ಯೋಜನೆ ರೂಪಿಸಿದ್ದು, ಕಾರ್ಯಪಡೆ ರಚಿಸಿದೆ. ದೇಶದಲ್ಲಿ ಉತ್ತಮ ಆದಾಯದ ಉದ್ಯೋಗಗಳನ್ನು ಸೃಷ್ಟಿಸುವ ಉದ್ದೇಶದಿಂದ ಕಾರ್ಯಪಡೆ ರಚಿಸಲಾಗಿದ್ದು, ಇದು ಉದ್ಯಮ್ ಕ್ಷೇತ್ರದ ಪ್ರತಿನಿಧಿಗಳು, ವಿವಿಧ ಇಲಾಖೆಗಳ ಸಚಿವರು, ಅಧಿಕಾರಿಗಳನ್ನು ಒಳಗೊಂಡಿದೆ.
- ಸಾಂಪ್ರದಾಯಿಕ ಕ್ಷೇತ್ರಗಳಲ್ಲಿ ಅತ್ಯುತ್ತಮ ಆದಾಯದ ಉದ್ಯೋಗಗಳನ್ನು ಸೃಷ್ಟಿಸುವುದು, ಇದಕ್ಕಾಗಿ ಸಮಗ್ರ ಯೋಜನೆ ಸಿದ್ಧಪಡಿಸುವುದು, ಸರಕು ಮತ್ತು ಸೇವಾ ಕ್ಷೇತ್ರದಲ್ಲಿರುವ ಅರ್ಹತೆಗಿಂತ ಕಡಿಮೆ ಮಟ್ಟದ ಉದ್ಯೋಗ ಮಾಡುವ ಸ್ಥಿತಿಯನ್ನು ಬದಲಾಯಿಸುವುದು, ಕಾರ್ಮಿಕ ಪ್ರಾಧಾನ್ಯ ಉದ್ಯಮಗಳಲ್ಲಿ ರಫ್ತು ಹಾಗೂ ವ್ಯಾಪಾರ ಉತ್ತೇಜಿಸುವುದು ಮುಂತಾದ ಉದ್ದೇಶಗಳನ್ನು ಇಟ್ಟುಕೊಂಡು ಕಾರ್ಯಪಡೆ ಕೆಲಸ ಮಾಡಲಿದೆ.
- 'ಆದ್ಯತೆಯ ಔದ್ಯೋಗಿಕ ವಲಯದಲ್ಲಿ ಅಳವಡಿಸಿಕೊಳ್ಳಬೇಕಾದ ನೀತಿನಿಯಮಗಳ ಕುರಿತು ಸಹ ಕಾರ್ಯಪಡೆ ಶಿಫಾರಸು ಮಾಡಲಿದೆ' ಎಂದು ನೀತಿ ಆಯೋಗದ ಪ್ರಸ್ತುತ ಉಪಾಧ್ಯಕ್ಷರಾಗಿರುವ ರಾಜೀವ್ ಕುಮಾರ ಹೇಳಿದ್ದಾರೆ. 15 ದಿನಗಳ ಹಿಂದೆ ನೀತಿ ಆಯೋಗ ಬಿಡುಗಡೆ ಮಾಡಿರುವ 3 ವರ್ಷಗಳ ಕಾರ್ಯಯೋಜನೆಯಲ್ಲಿಯೂ ಸಹ ಉತ್ತಮ ಆದಾಯದ ಉದ್ಯೋಗಗಳನ್ನು ಹೆಚ್ಚು ಸೃಷ್ಟಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಲಾಗಿತ್ತು.

**4. ಬಾಹ್ಯಾಕಾಶದಲ್ಲಿ ದಾಖಲೆ ನಿರ್ಮಿಸಿದ ಪೆಗ್ಗಿ**

ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಿಲಿಮ್ಸ್ ಗಾಗಿ

- ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 226 ದಿನಗಳನ್ನು ನೆಲೆಸಿ ನಾಸಾ ಗಗನಯಾತ್ರಿ ಪೆಗ್ಗಿ ವಿಟ್ಸನ್ ದಾಖಲೆ ನಿರ್ಮಿಸಿದ್ದಾರೆ. ವಿಟ್ಸನ್ ಬಾಹ್ಯಾಕಾಶ ನೌಕೆ ಸೊಯುಜ್ ಎಂಎಸ್- 04ನಲ್ಲಿ ಪ್ರಯಾಣ ಬೆಳೆಸಿ ಸುರಕ್ಷಿತವಾಗಿ ಕಜಕಿಸ್ತಾನದಲ್ಲಿ ಇಳಿದಿದ್ದಾರೆ. ತಮ್ಮ ವೃತ್ತಿ ಜೀವನದಲ್ಲಿ 665 ದಿನಗಳನ್ನು ಬಾಹ್ಯಾಕಾಶದಲ್ಲಿ ಕಳೆದ ಹೆಗ್ಗಳಿಕೆ ಇವರದ್ದು.
- ಗಗನಯಾನಿಗಳ ಪಟ್ಟಿಯಲ್ಲಿ ಇವರು ಎಂಟನೇ ಸ್ಥಾನ ಪಡೆದಿದ್ದಾರೆ. ಪೆಗ್ಗಿ ಜನಿಸಿದ್ದು 1960ರ ಫೆಬ್ರುವರಿ 9ರಂದು ಅಮೇರಿಕದ ಲೊವಾದಲ್ಲಿ. 2002ರಲ್ಲಿ ಅಂತರಾಷ್ಟ್ರೀಯ ಬಾಹ್ಯಾಕಾಶ ನೌಕೆಯಲ್ಲಿ ಪ್ರಯಾಣ ಮಾಡಿದ ಇವರು, 2007ರ ಅಕ್ಟೋಬರ್ ನಲ್ಲಿ ಎರಡನೇ ಯೋಜನೆಯಲ್ಲಿ ಪಾಲ್ಗೊಂಡರು.
- ಎಕ್ಸ್ ಪೆಡಿಷನ್ -16ರಲ್ಲಿ ಮಹಿಳಾ ಕಮಾಂಡರ್ ಆಗಿ ಕಾರ್ಯನಿರ್ವಹಿಸಿದ ಮೊದಲಿಗರು ಎಂಬ ಹೆಗ್ಗಳಿಕೆ ಪೆಗ್ಗಿಗಿದೆ. ಬಾಹ್ಯಾಕಾಶದಲ್ಲಿ ಹೆಚ್ಚು ದಿನ ನೆಲೆಸಿದ ಅತಿ ಹಿರಿಯ ಮಹಿಳೆಯೂ ಇವರೇ ಆಗಿದ್ದಾರೆ. ಪೇಟೆಂಟ್ಸ್ ಪ್ರಶಸ್ತಿ, ನಾಸಾ ಸ್ಪೇಸ್ ಫ್ಲೈಟ್ ಪದಕ, ನಾಸಾ ಅತ್ಯುತ್ತಮ ನಾಯಕತ್ವ ಪ್ರಶಸ್ತಿ ಸೇರಿದಂತೆ ಅನೇಕ ಗೌರವಗಳು ಸಂದಿವೆ.

**5. ಮತ್ತೆ ಕುಲಾಂತರಿ ಸದ್ದು**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮೇನ್ಸ್ ಗಾಗಿ

ಪ್ರಿಲಿಮ್ಸ್ ಗಾಗಿ

- ಕುಲಾಂತರಿ ತಳಿ, ಬೆಳೆಗಳನ್ನು ಭಾರತದಲ್ಲಿ ಪರಿಚಯಿಸಬೇಕು ಎಂಬ ಪ್ರಯತ್ನ ಇನ್ನಿಲ್ಲದಂತೆ ನಡೆಯುತ್ತಿದೆ. ಇದಕ್ಕೆ ಪೂರಕವಾಗಿ ಹಲವು ಬೆಳವಣಿಗೆಗಳಾದರೆ, ವಿರೋಧವೂ ಅಷ್ಟೇ ಇದೆ ಎಂಬುದು ಗಮನಾರ್ಹ. ಏತನ್ಮಧ್ಯೆ, ವಿಜ್ಞಾನ ಮತ್ತು ತಂತ್ರಜ್ಞಾನ,ಪರಿಸರ ಮತ್ತು ಅರಣ್ಯ ಸಚಿವಾಲಯಕ್ಕೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿ ಸಲ್ಲಿಸಿದ ವರದಿ ಹಲವು ಪ್ರಮುಖ ವಿಚಾರಗಳತ್ತ ಬೆಳಕು ಚೆಲ್ಲಿದೆ.

- ದೇಶ ಪಾರಂಪರಿಕ ಹಾಗೂ ಸಹಜವಾದ ಸಾವಯವ ಕೃಷಿಯತ್ತ ಮುಖಮಾಡಿದೆ. ಈ ಸಂಬಂಧ ಹಲವು ಯೋಜನೆಗಳನ್ನು ಸರ್ಕಾರವೇ ಜಾರಿಗೊಳಿಸಿ, ಉತ್ತೇಜನವನ್ನೂ ನೀಡುತ್ತಿದೆ. ಈಗಾಗಲೇ ರಾಸಾಯನಿಕ ಗೊಬ್ಬರ ಬಳಸಿದ ಕೃಷಿಯಿಂದಾದ ಹಾನಿ ಅಪಾರ ಪ್ರಮಾಣದ್ದು ಎಂಬುದು ಹಲವು ಕೃಷಿಕರ ಅನುಭವ. ಹಾಗೆಯೇ ಬಿಟಿ ಹತ್ತಿ ಬೆಳೆದು ನಷ್ಟ ಅನುಭವಿಸಿದ ರೈತರ ಕಥೆ-ವ್ಯಥೆ ಬೇರೆ ರೀತಿಯದ್ದು. ಹೀಗಿದ್ದಾಗ್ಯೂ, ಕುಲಾಂತರಿ ತಳಿ, ಬೆಳೆಗಳ ಪ್ರಯೋಗ ಮುಂದುವರಿದಿರುವುದು ಸಹಜವಾಗಿಯೇ ಹಲವರ ಆತಂಕಕ್ಕೆ ಕಾರಣವಾಗಿದೆ.
- ಇತ್ತೀಚೆಗೆ ಭಾರತದ ಕುಲಾಂತರಿ ಬೆಳೆ ನಿಯಂತ್ರಕ ಸಂಸ್ಥೆ ಜೆನಿಟಿಕ್ ಇಂಜಿನಿಯರಿಂಗ್ ಅಪ್ರ್ಯ ಸಲ್ ಕಮಿಟಿ(ಜಿಇಎಸಿ) ಕುಲಾಂತರಿ ಸಾಸಿವೆಯನ್ನು ವಾಣಿಜ್ಯ ಬಳಕೆಗೆ ಬೆಳೆಯುವುದಕ್ಕೆ ಶಿಫಾರಸು ಮಾಡಿ ಪರಿಸರ ಸಚಿವಾಲಯಕ್ಕೆ ವರದಿ ಸಲ್ಲಿಸಿದ್ದು ಕೂಡ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ.
- ಈ ನಡುವೆ, ವಿಜ್ಞಾನ ಮತ್ತು ತಂತ್ರಜ್ಞಾನ,ಪರಿಸರ ಮತ್ತು ಅರಣ್ಯಕ್ಕೆ ಸಂಬಂಧಿಸಿದ ಇಲಾಖಾವಾರು ಸಂಸದೀಯ ಸ್ಥಾಯಿ ಸಮಿತಿ 'ಕುಲಾಂತರಿ ಬೆಳೆಗಳು ಮತ್ತು ಪರಿಸರದ ಮೇಲೆ ಅವುಗಳ ಪರಿಣಾಮ' ಎಂಬ ಶೀರ್ಷಿಕೆ ವರದಿ ಯನ್ನು ಸಂಸತ್ತಿನಲ್ಲಿ ಮಂಡಿಸಿದೆ.

### ಮುಖ್ಯ ಪರೀಕ್ಷೆಗಾಗಿ

- ಕುಲಾಂತರಿ ಬೆಳೆಯಿಂದ ಜೈವಿಕಸುರಕ್ಷತೆ ಮತ್ತು ಸಾಮಾಜಿಕ-ಆರ್ಥಿಕವಾಗಿ ಕುಲಾಂತರಿ ಬೆಳೆ ಎಷ್ಟು ಅಪೇಕ್ಷಣೀಯ ಎಂಬುದನ್ನು 'ಪಾರದರ್ಶಕ' ಪ್ರಕ್ರಿಯೆ ಮತ್ತು ಬದ್ಧತೆಯ ಮೂಲಕ ಮೌಲ್ಯಮಾಪನ ನಡೆಸಬೇಕು. ಇದರ ಸಾಧಕ-ಬಾಧಕ ಪರಿಶೀಲಿಸದೆ ಯಾವುದೇ ಕುಲಾಂತರಿ ಬೆಳೆಯನ್ನು ಭಾರತದಲ್ಲಿ ಪರಿಚಯಿಸಬಾರದು. ಈ ವಿಷಯದಲ್ಲಿ ಇದಕ್ಕೆ ಸಂಬಂಧಪಟ್ಟ ಎಲ್ಲ ಭಾಗಿದಾರರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು ಎಂಬುದು ವರದಿಯ ತಿರುಳು.

### ಸಮಿತಿಯ ಪ್ರಮುಖ ಶಿಫಾರಸುಗಳು

- ರಾಜ್ಯಗಳು ಮತ್ತು ವಿಶ್ವವಿದ್ಯಾಲಯಗಳ ಸಹಕಾರದೊಂದಿಗೆ ಕುಲಾಂತರಿ ಬೆಳೆಗಳನ್ನು ಪ್ರಾಯೋಗಿಕವಾಗಿ ಬೆಳೆದು ಅದರಿಂದ ಪರಿಸರ ಜೀವವೈವಿಧ್ಯದ ಮೇಲಾಗುವ ಪರಿಣಾಮ ಹಾಗೂ ಆರೋಗ್ಯ ಸುರಕ್ಷತೆ ವಿಚಾರಕ್ಕೆ ಸಂಬಂಧಿಸಿದ ಡೇಟಾ ಸಂಗ್ರಹಿಸಿ ವಿಶ್ಲೇಷಿಸಬೇಕು.

- ದೀರ್ಘಾವಧಿ ಪರಿಣಾಮದ ಮೌಲ್ಯಮಾಪನವನ್ನೂ ಮಾಡಬೇಕಾಗಿದ್ದು, ಇದರ ಅನುಷ್ಠಾನಕ್ಕೆ ಸಂಬಂಧಿಸಿ ಹೊಣೆಗಾರಿಕೆಯನ್ನೂ ನಿಗದಿ ಮಾಡಬೇಕು. ಕುಲಾಂತರಿ ಬೆಳೆಯನ್ನು ಸಾರ್ವತ್ರಿಕವಾಗಿ ಪರಿಚಯಿಸುವ ಮುನ್ನವೇ ಇದಾಗಬೇಕು.
- ಜಿಇಎಸಿಯ ಉಸ್ತುವಾರಿ ಗಮನಿಸುವುದಕ್ಕೆ ಒಬ್ಬ ತಜ್ಞನನ್ನು ನೇಮಕ ಮಾಡಬೇಕು. ಕುಲಾಂತರಿ ಬೆಳೆಯಿಂದ ಮಾನವ ಆರೋಗ್ಯದ ಮೇಲಾಗುತ್ತಿರುವ ಪರಿಣಾಮದ ಬಗ್ಗೆ ವಿದೇಶಗಳಲ್ಲಿ ಅಧ್ಯಯನ ಮಾಡಲಾಗಿದೆ. ಆದರೆ, ನಮ್ಮ ದೇಶದಲ್ಲೂ ಅದೇ ಅಧ್ಯಯನವನ್ನು ಅನ್ವಯಿಸಲಾಗದು. ಇಲ್ಲಿನ ಭೌಗೋಳಿಕ ಹಾಗೂ ಹವಾಮಾನ ಪರಿಸ್ಥಿತಿ ಬೇರೆಯೇ ಆಗಿರುವ ಕಾರಣ ಇಲ್ಲೂ ಅಂತಹ ಅಧ್ಯಯನವನ್ನು ಆರೋಗ್ಯ ಸಂಶೋಧನಾ ಇಲಾಖೆ ಮಾಡಬೇಕು.

## ಕುಲಾಂತರಿ ಆಹಾರಗಳಿಗೆ ಲೇಬಲಿಂಗ್

- ಸಂಸದೀಯ ಸ್ಥಾಯಿ ಸಮಿತಿಯ ವರದಿ ಪ್ರಕಾರ, ಫುಡ್ ಸೇಫ್ಟಿ ಆಂಡ್ ಸ್ಟ್ಯಾಂಡರ್ಡ್ ಅಥಾರಿಟಿ ಆಫ್ ಇಂಡಿಯಾ(ಎಫ್‌ಎಸ್‌ಎಸ್‌ಎಐ) ಕಾಯ್ದೆಯಂತೆ ಕುಲಾಂತರಿ ಆಹಾರ ಉತ್ಪನ್ನಗಳ ಮೇಲೆ ಅದನ್ನು ಬಿಂಬಿಸುವ ಲೇಬಲಿಂಗ್ ಕಡ್ಡಾಯ ಮಾಡಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮುಂದಾಗಿದೆ.
- ಯಾವುದೇ ಆಹಾರ ಉತ್ಪನ್ನದಲ್ಲಿ ಕುಲಾಂತರಿ ಅಂಶ ಶೇಕಡ 5ಕ್ಕಿಂತ ಹೆಚ್ಚಿದ್ದರೆ ಅದನ್ನು ಲೇಬಲ್ ನಲ್ಲಿ ಉಲ್ಲೇಖಿಸಬೇಕಾಗುತ್ತದೆ. ಕುಲಾಂತರಿ ಆಹಾರ ಉತ್ಪನ್ನಗಳ ಸೇವನೆಯಿಂದ ಮನುಷ್ಯರ ಆರೋಗ್ಯದ ಮೇಲಾಗುವ ಪರಿಣಾಮ ಸಾಕ್ಷ್ಯ ಸಹಿತ ಸಂಶೋಧನೆಗೊಳಪಡಿಸುವಂತೆ ಇಂಡಿಯನ್ ಕೌನ್ಸಿಲ್ ಫಾರ್ ಮೆಡಿಕಲ್ ರಿಸರ್ಚ್‌ಗೆ ಸಮಿತಿ ಸಲಹೆ ನೀಡಿದೆ.

## ಕುಲಾಂತರಿ ಆಹಾರದ ಸುರಕ್ಷತೆ

ಸಾಮಾನ್ಯವಾಗಿ ಕುಲಾಂತರಿ ಆಹಾರದ ಸುರಕ್ಷತೆಯನ್ನು ಪರಿಶೀಲಿಸುವಾಗ ಕೆಲವು ಅಂಶಗಳನ್ನು ಗಮನಿಸಲಾಗುತ್ತದೆ –

- ನೇರವಾಗಿ ಆರೋಗ್ಯದ ಮೇಲೆ ಬೀರುವ ಪರಿಣಾಮ
- ಅಲರ್ಜಿ ಉಂಟಾಗಬಲ್ಲ ಸಂಭಾವ್ಯತೆ
- ಪೌಷ್ಟಿಕಾಂಶಗಳ ಮೂಲಕ ಅಥವಾ ವಿಷಯುಕ್ತ ಕಣಗಳ ಮೂಲಕ ಉಂಟಾಗಬಲ್ಲ ಪರಿಣಾಮ
- ಶರೀರಕ್ಕೆ ಸೇರಿಸಿದ ವಂಶವಾಹಿಯ ಸ್ಥಿರತೆ
- ವಂಶವಾಹಿ ಪರಿಷ್ಕರಣೆಯಿಂದಾಗಿ ಪೌಷ್ಟಿಕಾಂಶದ ಮೇಲಾಗುವ ಪರಿಣಾಮ

- ವಂಶವಾಹಿ ಸೇರ್ಪಡೆಯಿಂದಾಗುವ ಪ್ರತಿಕೂಲ ಪರಿಣಾಮಗಳು

**6. ರಾಜ್ಯದ ಮೊದಲ ಗ್ರಾಂಡ್ ಮಾಸ್ಟರ್ ತೇಜಕುಮಾರ್**

**ಪ್ರಾಮುಖ್ಯತೆ(PRIORITY) -ಪ್ರಿಲಿಮ್ಸ್  ಪರೀಕ್ಷೆಗಾಗಿ**

**ಪ್ರಿಲಿಮ್ಸ್ ಗಾಗಿ**

- ಸಾಂಸ್ಕೃತಿಕ ನಗರಿಯ ಚೆಸ್ ಆಟಗಾರ ಎಂ.ಎಸ್. ತೇಜಕುಮಾರ್ ಕರ್ನಾಟಕದ ಮೊದಲ ಗ್ರಾಂಡ್ ಮಾಸ್ಟರ್ ಪಟ್ಟ ಗಳಿಸಿದ್ದಾರೆ. ಗೋವಾದಲ್ಲಿ ನಡೆಯುತ್ತಿರುವ ಎಫ್ಐಟಿಇ ರೇಟಿಂಗ್ ಚೆಸ್ ಟೂರ್ನಿಯಲ್ಲಿ ತೇಜಕುಮಾರ್ ಈ ಸಾಧನೆ ಮಾಡಿದ್ದಾರೆ.
- ಟೂರ್ನಿಯ ಮೊದಲ ಸುತ್ತಿನಲ್ಲಿ ಗೋವಾದ ಸಂಜೀವ್ ಹಾಗೂ ಎರಡನೇ ಸುತ್ತಿನಲ್ಲಿ ಮಹಾರಾಷ್ಟ್ರದ ಅತಾಲೆ ವರದ್ ಅವರನ್ನು ಸೋಲಿಸಿ ೨೫೦೦ ರೇಟಿಂಗ್ ಮೂಲಕ ದೇಶದ ೫೦ನೇ ಗ್ರಾಂಡ್ ಮಾಸ್ಟರ್ ಆಗಿ ಹೊರಹೊಮ್ಮಿದ್ದಾರೆ.
- ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ೧೯೮೮ರಲ್ಲಿ ದೇಶದ ಮೊದಲ ಗ್ರಾಂಡ್ ಮಾಸ್ಟರ್ ಆಗಿದ್ದರೆ, ತೇಜಕುಮಾರ್ ಅವರೀಗ ಕರ್ನಾಟಕ ಚೆಸ್ ಕ್ಷೇತ್ರದಲ್ಲಿ ಹೊಸ ಮುನ್ನುಡಿ ಬರೆದಿದ್ದಾರೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**9th SEPTEMBER**

**1.ಮಿಲಿಟರಿ ಪೊಲೀಸ್‌ಗೆ ಶೀಘ್ರದಲ್ಲಿ ಸ್ತ್ರೀಶಕ್ತಿ ಪ್ರವೇಶ**

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ (ಪ್ರಬಂಧ ಬರವಣಿಗೆಗಾಗಿ )**

**ಪ್ರಿಲಿಮ್ಸ್ ಗಾಗಿ**

- ಲಿಂಗ ತಾರತಮ್ಯಕ್ಕೆ ತೆರೆ ಎಳೆಯುವ ಮಹತ್ವದ ಕ್ರಮವಾಗಿ ಪ್ರತಿವರ್ಷ 52 ಸಿಬ್ಬಂದಿಯಂತೆ 800 ಮಹಿಳೆಯರನ್ನು ಮಿಲಿಟರಿ ಪೊಲೀಸ್ ಪಡೆಗೆ ಸೇರಿಸಿಕೊಳ್ಳುವ ಪ್ರಕ್ರಿಯೆಗೆ ಭಾರತೀಯ ಸೇನಾಪಡೆಯಲ್ಲಿ ಶೀಘ್ರ ಚಾಲನೆ ಸಿಗಲಿದೆ.
- ದೇಶದ 2ನೇ ಮಹಿಳಾ ರಕ್ಷಣಾ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೇ ನಿರ್ಮಲಾ ಸೀತಾರಾಮನ್ ದೇಶದ ಮಹಿಳೆಯರಿಗೆ ಈ ಮಹತ್ವದ ಕೊಡುಗೆ ಘೋಷಿಸಿದ್ದಾರೆ. ಬಹು ದಿನಗಳಿಂದ ಚರ್ಚೆಗೊಳಪಟ್ಟಿದ್ದ ಮಹಿಳಾ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದ ಯೋಜನೆ ಅಂತಿಮಗೊಂಡಿದೆ. ಸೇನೆಯಲ್ಲಿ ಮಹಿಳೆಯರಿಗೂ ಕೂಡ ಸಮಾನ ಪ್ರಾತಿನಿಧ್ಯ ಕೊಡುವಲ್ಲಿ ಇದು ಬಹುದೊಡ್ಡ ಕ್ರಮವಾಗಿದೆ .
- ಸೇನೆಯ ಮುಂಚೂಣಿ ಘಟಕದಲ್ಲಿ ಮಹಿಳೆಯರಿಗೆ ಆದ್ಯತೆ ನೀಡುವ ವಿಚಾರವಾಗಿ ಜನರಲ್ ಬಿಪಿನ್ ರಾವತ್ ಜೂನ್‌ನಲ್ಲೇ ಸುಳಿವು ನೀಡಿದ್ದರು. ಮಹಿಳೆಯರು ಸೈನಿಕರಾಗುವುದನ್ನು ಎದುರು ನೋಡುತ್ತಿದ್ದು, ಶೀಘ್ರದಲ್ಲೇ ಈ ಪ್ರಕ್ರಿಯೆ ಆರಂಭವಾಗಲಿದೆ.
- ಮೊದಲಿಗೆ ಮಹಿಳೆಯರನ್ನು ಸೇನಾ ಪೊಲೀಸರನ್ನಾಗಿ ನೇಮಿಸಲಾಗುವುದು. ಮಹಿಳಾ ಸೈನಿಕರನ್ನು ಮುಂಚೂಣಿ ಘಟಕಕ್ಕೆ ತರುವ ಕುರಿತು ಕೇಂದ್ರದ ಜತೆ ಮಾತುಕತೆಗೆ ಸಿದ್ಧತೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದ್ದರು.

**ಮೇನ್ಸ್ ಪರೀಕ್ಷೆಗಾಗಿ**

**ಯಾವ ಯಾವ ದೇಶದ ಸೇನೆಯಲ್ಲಿ ಮಹಿಳೆಯರಿದ್ದಾರೆ ??**

- ಜರ್ಮನಿ, ಆಸ್ಟ್ರೇಲಿಯಾ, ಕೆನಡಾ, ಅಮೆರಿಕ, ಬ್ರಿಟನ್, ಡೆನ್ಮಾರ್ಕ್, ಫಿನ್ಲೆಂಡ್, ಫ್ರಾನ್ಸ್, ನಾರ್ವೆ, ಸ್ವೀಡನ್ ಮತ್ತು ಇಸ್ರೇಲ್‌ನಲ್ಲಿ ಮಹಿಳಾ ಸೈನಿಕರನ್ನು ಸೇನೆಯ ಮುಂಚೂಣಿ ಘಟಕದಲ್ಲಿ ನಿಯೋಜಿಸಲಾಗುತ್ತಿದೆ.
- ಸದ್ಯ ಭಾರತೀಯ ಸೇನೆಯ ವೈದ್ಯಕೀಯ, ಕಾನೂನು, ಶಿಕ್ಷಣ, ಸೂಚನೆ, ಇಂಜಿನಿಯರಿಂಗ್ ವಿಭಾಗಗಳಲ್ಲಿ ಮಹಿಳಾ ಸಿಬ್ಬಂದಿ ಇರುವರಾದರೂ, ಪೊಲೀಸ್ ವಿಭಾಗದಲ್ಲಿ ಮಹಿಳಾ ಸಿಬ್ಬಂದಿ ನೇಮಕ ಇದೇ ಮೊದಲು.

**ಉದ್ದೇಶ**

- ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯ ಕೊಡುವುದು
- ಲಿಂಗ ಆಧಾರಿತ ಅಪರಾಧಗಳ ತನಿಖೆಗೆ ನೆರವಾಗುವುದು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಮಹಿಳೆಯರಿಗೆ ಏನೆಲ್ಲಾ ಹೊಣೆ?**

- ವೈದ್ಯಕೀಯ, ಎಂಜಿನಿಯರಿಂಗ್ ಮತ್ತಿತರ ಸೇವೆಗಳಿಗೆ ಹೊರತಾಗಿ ಯುದ್ಧ ಕೈದಿಗಳನ್ನು ನಿರ್ವಹಿಸುವ ಹೊಣೆಯನ್ನು ಮಹಿಳಾ ಮಿಲಿಟರಿ ಪೊಲೀಸರಿಗೆ ನೀಡಲಾಗುತ್ತದೆ. ಈ ಸಂಬಂಧ ಅಗತ್ಯ ತರಬೇತಿಯನ್ನೂ ಸೇನೆ ನೀಡಲಿದೆ.
- ಇದರೊಂದಿಗೆ ಕಂಟೋನ್ಮೆಂಟ್ ಮತ್ತು ಸೇನಾ ನೆಲೆಗಳ ಕಾವಲು ಕಾಯುವುದು, ಸೇನಾ ನಿಯಮಗಳಿಗೆ ಸಂಬಂಧಿಸಿದ ಶಿಸ್ತು ಪಾಲನೆ, ಲಾಜಿಸ್ಟಿಕ್ಸ್, ಸೈನಿಕರು ಮತ್ತು ವಾಹನಗಳ ಸಂಚಾರ ನಿಯಂತ್ರಣ, ರೆಜಿಮೆಂಟ್‌ಗಳು ಮತ್ತು ಸೈನಿಕರ ಕುಟುಂಬಗಳಿಗೆ ಸಹಾಯ ಮಾಡುವುದು, ಭಾರತೀಯ ಸೇನೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆ, ಟೆಲಿಫೋನ್

ಎಕ್ಸ್‌ಚೇಂಜ್ ರೀತಿಯ ಮೂಲ ಟೆಲಿಸಂವಹನ ಸಾಧನಗಳ ನಿರ್ವಹಣೆ ಸೇರಿದಂತೆ ಇನ್ನೂ ಹಲವು ಮಹತ್ವದ ಹೊಣೆಗಳನ್ನು ಮಹಿಳಾ ಸಿಬಂದಿ ನಿಭಾಯಿಸಲಿದ್ದಾರೆ.

ಪ್ರಬಂಧ ಬರವಣಿಗೆಗಾಗಿ

**ತೊಟ್ಟಿಲು ತೂಗುವ ಕೈ ಗನ್ ಹಿಡಿಯಲಾರದೆ?**

- ಭಾರತದ ಸೇನೆ ಜಗತ್ತಿನ ನಾಲ್ಕನೇ ಬಲಾಢ್ಯ ಮತ್ತು ದಕ್ಷ ಸೇನೆಗಳಲ್ಲಿ ಒಂದು. ನರೇಂದ್ರ ಮೋದಿ ಸರಕಾರ ಭಾರತದ ಸೈನ್ಯವನ್ನು ಸಾಕಷ್ಟು ಬಲಗೊಳಿಸಿದ್ದಾರೆ.ಇದಕ್ಕೆ ಮುಖ್ಯ ಸಾಕ್ಷಿ ಇತ್ತೀಚೆಗೆ ದೋಕಲಂ ಗಡಿ ವಿಚಾರದಲ್ಲಿ ಭಾರತದ ಜೊತೆ ಕಾಲ್ಕೆರೆದು ಯುದ್ಧಕ್ಕೆ ಬಂದಿದ್ದ ಚೀನಾ ಸೇನೆ ಬಾಲಮುದುರಿಕೊಂಡು ವಾಪಸ್ತೆರಳಿರುವುದೇ ಸಾಕ್ಷಿ.
- ಇಂದು ಚೀನಾ ಮತ್ತು ಪಾಕಿಸ್ತಾನದ ಎರಡೂ ದೇಶಗಳ ವಿರುದ್ಧ ಏಕಕಾಲದಲ್ಲಿ ಯುದ್ಧ ಮಾಡುವ ಸಾಮಥ್ಯ್ರವನ್ನು ಭಾರತ ಹೊಂದಿದೆ. ಭೂ, ನೌಕಾ, ಹಾಗೂ ವಾಯು ಕ್ಷೇತ್ರದಲ್ಲಿ ಭಾರತದ ಸೇನೆ ದಕ್ಷ ಹಾಗೂ ಅತ್ಯಂತ ಬಲಯುತವಾಗಿದೆ. ಈ ಸೇನೆಯಲ್ಲಿ ಮಹಿಳೆಯರನ್ನೂ ಸೇರಿಸಬೇಕು, ಜಗತ್ತಿಗೆ ನಾರಿ ಶಕ್ತಿ ಅನಾವರಣಗೊಳ್ಳಬೇಕೆಂಬುವುದು ಪ್ರಧಾನಿಯವರ ಕನಸಾಗಿತ್ತು. ಆ ಕನಸನ್ನು ನೂತನ ರಕ್ಷಣಾ ಮಂತ್ರಿ ನಿರ್ಮಲಾ ಸೀತಾರಾಮನ್ ಸಾಕಾರಗೊಳಿಸಿದ್ದಾರೆ.

- 1857ರಲ್ಲಿ ಪ್ರಾರಂಭವಾದ ಭಾರತದ ಸ್ವಾತಂತ್ರ ಹೋರಾಟವನ್ನು ನಾವು ಪ್ರಥಮ ಸ್ವಾತಂತ್ರ ಸಂಗ್ರಾಮವೆಂದು ಕರೆದರೆ, ಬ್ರಿಟಿಷರು ಇದನ್ನು ಸಿಪಾಯಿ ದಂಗೆ ಎಂದು ಕರೆದರು. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರೂ ಬ್ರಿಟಿಷರ ಜೊತೆ

ಕಾದಾಡಿದರು. ಈ ರೀತಿಯಾಗಿ ಸ್ವಾತಂತ್ರ ಸಂಗ್ರಾಮದಲ್ಲಿ ಧುಮುಕಿದ ಪ್ರಥಮ ಮಹಿಳೆಯೆಂದರೆ ಝಾನ್ಸಿರಾಣಿ ಲಕ್ಷ್ಮೀ ಬಾಯಿ.

- 1857ರ ಸಂಗ್ರಾಮದಲ್ಲಿ ಯಾವ ನಾಯಕರಿಗೂ ಕಡಿಮೆಯಿಲ್ಲದೇ ಬ್ರಿಟಿಷರ ವಿರುದ್ಧ ಹೋರಾಡಿದಳು. ಬ್ರಿಟಿಷರನ್ನು ಪಣತೊಟ್ಟು ಎದುರಿಸಿದ ಕಾರಣ ಇವಳ ಹೋರಾಟದ ಕಿಚ್ಚನ್ನು ನೋಡಿ ಅನೇಕ ಮಹಿಳೆಯರು ಆ ಸಂಗ್ರಾಮದಲ್ಲಿ ಭಾಗವಹಿಸಿದರು.

- ಆಮೇಲೆ ಕಿತ್ತೂರು ರಾಣಿ ಚೆನ್ನಮ್ಮ, ವೀರರಾಣಿ ಅಬ್ಬಕ್ಕ ಮುಂತಾದವರು ಬ್ರಿಟಿಷರ ಜೊತೆ ವೀರಾವೇಶದಿಂದ ಕಾದಾಡಿ ಪ್ರಾಣವನ್ನೇ ಅರ್ಪಿಸಿದ್ದಾರೆ. ಭಾರತದಇತಿಹಾಸವನ್ನು ಗಮನಿಸಿದಾಗ ಮಹಿಳೆಯರಿಗೂ ಶಶಸ್ತ್ರ ತರಬೇತಿಯನ್ನು ನೀಡುತ್ತಿರುವುದು ಕಂಡುಕೊಳ್ಳಬಹುದು. ಮಹಾಭಾರತ, ರಾಮಾಯಣ ಕಾಲದಲ್ಲೂ ಮಹಿಳೆಯರು ಶಶಸ್ತ್ರ ತರಬೇತಿ ಪಡೆಯುತ್ತಿದ್ದರು. ಪಾಂಡವರ ಪತ್ನಿ ದ್ರೌಪದಿ ಶತ್ರುಗಳ ಜೊತೆ ಬಿಲ್ವಿದ್ಯೆಯಲ್ಲಿ ಹೋರಾಡಬಲ್ಲ ಸಾಮಥ್ರ್ಯ ಹೊಂದಿದ್ದಳು

- ಹೀಗೆ ಐತಿಹಾಸವಾಗಿ ನೋಡಿದರೆ ಭಾರತ ಮಹಿಳಾ ಪಡೆಗಳನ್ನು ಹೊಂದಿರುವ ದೇಶವಾಗಿತ್ತು.ಭಾರತದಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಸುಭಾಷ್ ಚಂದ್ರ ಬೋಸ್ ಅವರು ತನ್ನ ಇಂಡಿಯನ್ ನ್ಯಾಷನಲ್ ಆರ್ಮಿಯಲ್ಲಿ ಮಹಿಳೆಯರನ್ನು ನಿಯೋಜಿಸಿದ್ದರು. ಝಾನ್ಸಿ ರಾಣಿ ರೆಜಿಮೆಂಟ್', ನೇತಾಜಿಯವರ ಇಂಡಿಯನ್ ನ್ಯಾಷನಲ್ ಆರ್ಮಿಯ ಮಹಿಳಾ ಘಟಕವಾಗಿತ್ತು.

- ಇದರ ಸದಸ್ಯೆಯಾಗಿದ್ದ ಪೆಮಾ ಪಾಲ್ 1944ರಲ್ಲಿ ಇಂಡಿಯನ್ ನ್ಯಾಷನಲ್ ಆರ್ಮಿ ಹೆಡ್ ಕ್ವಾರ್ಟರ್ಸ್‌ನ ಬ್ರಾಡ್‌ಕಾಸ್ಟಿಂಗ್ ಸ್ಟೇಷನ್‌ನಿಂದ ಮಾಡಿದ ಭಾಷಣ ಹೀಗಿತ್ತು: `ನಾನು ಝಾನ್ಸಿ ರಾಣಿ ರೆಜಿಮೆಂಟಿನ ಸಾಧಾರಣ ಸೈನಿಕಳು. ಆದರೆ ಬರೀ ನೆಪಮಾತ್ರದ ಬೊಂಬೆ ಸೈನಿಕಳಲ್ಲ. ನಿಜವಾದ ಅರ್ಥದಲ್ಲಿ ಸೈನಿಕಳು. ಭಾರತದ ಶತ್ರುವನ್ನು ಕೊಲ್ಲಲು ಆಧುನಿಕ

ಶಸ್ತ್ರಾಸ್ತ್ರಗಳಿಂದ ಸಜ್ಜುಗೊಂಡ ಮಿಲಿಟರಿ ಬೂಟು ಹಾಗೂ ಸಮವಸ್ತ್ರ ಧರಿಸಿದ ಸೈನಿಕಳು ಎಂದು ಗುಡುಗಿದ್ದಳು. ಇವರ ಮಹಿಳಾ ಸೈನಿಕರು ಪುರುಷರಷ್ಟೇ ಸರಿಸಮಾನರಾಗಿ ಯದ್ಧ ಮಾಡಿ ಬ್ರಿಟಿಷರನ್ನು ಬೆದರಿಸಿದ್ದರು.

- ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮರಂತಹ ಮಹಿಳಾ ಸೇನಾನಿಗಳ ಪರಂಪರೆಯನ್ನು ಹೊಂದಿರುವ ಭಾರತದ ಮಿಲಿಟರಿಗೆ ಮಹಿಳೆಯರನ್ನು ಸೇರಿಸಬೇಕೆನ್ನುವ ಕೂಗು ಹೊಸತಲ್ಲ. ಆದರೆ ಹಿಂದಿನ ಕಾಂಗ್ರೆಸ್ ಸರಕಾರ ಮನಸ್ಸು ಮಾಡಿರಲಿಲ್ಲ.
- ಮಹಿಳಾ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಆರಂಭ ಮಾಡಿದ್ದು ಇತ್ತೀಚಿಗೆ, ಎಂದರೆ ತೊಂಬತ್ತರ ದಶಕದಲ್ಲಿ ಎಂಬುದು ವಿಪರ್ಯಾಸದ ಸಂಗತಿ. ಅದರಲ್ಲೂ ಈ ಮಹಿಳಾ ಅಧಿಕಾರಿಗಳು ಅಲ್ಪಾವಧಿಗೆ ನೇಮಕಗೊಂಡವರಾಗಿ ಕೇವಲ 14 ವರ್ಷಗಳವರೆಗೆ ಮಾತ್ರ ಸೇವೆ ಸಲ್ಲಿಸುವ ಅವಕಾಶ ಇದೆ.
- ನಿವೃತ್ತಿಯಾಗುವ ತನಕ ಕಾಯಂ ಸೇವೆ ಸಲ್ಲಿಸುವ ಅವಕಾಶಮಹಿಳೆಯರಿಗೆ ಇಲ್ಲ. ಇಂತಹ ತಾರತಮ್ಯದ ವಿರುದ್ಧ ಮೂರು ದಶಕಗಳ ಹೋರಾಟದ ನಂತರ, 2009ರಲ್ಲಿ ಭಾರತೀಯ ಸಶಸ್ತ್ರ ಸೇನಾಪಡೆಗಳ ಶಿಕ್ಷಣ, ಕಾನೂನುಗಳಂತಹ ವಿಭಾಗಗಳಲ್ಲಿ ಕಾಯಂ ನೇಮಕಾತಿಗೆ ಅವಕಾಶಗಳನ್ನು ಮಹಿಳೆಯರು ಪಡೆದುಕೊಂಡಿದ್ದಾರೆ.
- ಈಗ ಭೂಸೇನೆ, ನೌಕಾಪಡೆ ಹಾಗೂ ವಾಯುಪಡೆಯ ಇನ್ನೂ ಹಲವು ವಿಭಾಗಗಳಲ್ಲಿ ಮಹಿಳಾ ಅಧಿಕಾರಿಗಳ ಕಾಯಂ ನೇಮಕಾತಿಗೆ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಿರುವುದು ಹೊಸ ಬೆಳವಣಿಗೆ.
- ರಣರಂಗದ ಮುಂಚೂಣಿಯ ಕಾದಾಟದ ಕ್ಷೇತ್ರಗಳಲ್ಲೂ ಇನ್ನು ಮಹಿಳೆಯರು ಅವಕಾಶಗಳನ್ನು ಪಡೆದುಕೊಳ್ಳಲಿದ್ದಾರೆ ಎಂಬುವುದು ಒಂದು ಹೊಸ ಬೆಳವಣಿಗೆ. ಪುರುಷ ಸೈನಿಕರ ಜೊತೆ ಮಹಿಳಾ ಸೈನಿಕರ ಹೊಂದಾಣಿಕೆ ಸಮಸ್ಯೆ ಆಗುತ್ತದೆ ಎಂಬ ಆರೋಪವಿದೆ.
- ಶತ್ರುಗಳ ಜೊತೆ ಮುಖಾಮುಖಿ ಹೋರಾಟ ನಡೆಸುವಾಗ, ಅಥವಾ ಶತ್ರುಗಳ ಕೈಗೆ ಮಹಿಳಾ ಸೈನಿಕರು ಸಿಕ್ಕಿಬಿದ್ದರೆ ಸಮಸ್ಯೆಯಾಗಬಹುದು ಎಂಬ ಆರೋಪವಿದೆ. ಆದರೆ

ಇಂದು ಶಶಸ್ತ್ರ ಯುದ್ಧಗಳಾಗಿರುವುದರಿಂದ ಈ ಸಮಸ್ಯೆ ಬರುವುದು ಕಡಿಮೆ ಎಂಬುವುದು ಸರಕಾರದ ವಾದವಾಗಿದೆ. `ಪುರುಷ ಮತ್ತು ಮಹಿಳಾ ಅಧಿಕಾರಿಗಳು ಒಂದೇ ಬಗೆಯ ಕೆಲಸ ಮಾಡುತ್ತಾರೆ. ಹೀಗಿದ್ದಾಗ ಮಹಿಳಾ ಅಧಿಕಾರಿಗಳಿಗೇಕೆ ಕಾಯಂ ನೇಮಕಾತಿಯ ಅವಕಾಶ ಇಲ್ಲ? ಎಂದು ಕೋರ್ಟ್ ಕೂಡಾ ಪ್ರಶ್ನಿಸಿತ್ತು. ಆದರೆ ಇದೀಗ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಎಂಬಂತೆ ಮಹಿಳೆಯರನ್ನೂ ಮೂರೂ ಪಡೆಗಳಲ್ಲಿ ನಿಯೋಜಿಸಲು ಸರಕಾರ ನಿರ್ಧರಿಸಿದೆ.

- ಮಹಿಳೆಯರಿಗೆ ಪುರುಷರಷ್ಟೇ ಸಮಾನ ಅವಕಾಶ ಸಿಕ್ಕರೆ ಮಾತ್ರ ಅವರು ಪುರುಷರಿಗೆ ಸರಿಸಮಾನರಾಗಿ ನಿಲ್ಲಬಲ್ಲರು. ಇಂದು ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆ ಸಬಲೆ ಎಂಬುವುದನ್ನು ತೋರಿಸಿದ್ದಾಳೆ. ಇದೀಗ ಮಿಲಿಟರಿಯಲ್ಲೂ ಪುರುಷನಂತೆಯೇ ಬಂದೂಕು ಹಿಡಿದು ಶತ್ರುಗಳೊಂದಿಗೆ ಹೋರಾಟ ನಡೆಸಲಿದ್ದಾಳೆ. ಇದರಿಂದ ಭಾರತದ ಸೇನೆ ಇನ್ನಷ್ಟು ಬಲಗೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ.

IAS/KAS
ನಮ್ಮ ಐಎಎಸ್ ಅಕಾಡೆಮಿ

**2. ಎಚ್ ಡಿಎಫ್ ಸಿ ದೇಶಿಯ ಮಹತ್ವದ ಬ್ಯಾಂಕ್**

ಮಸ್ಸೂರಿಗೆ/ಮೈಸೂರಿಗೆ

**ಪ್ರಾಮುಖ್ಯತೆ - ಪ್ರಿಲಿಮ್ಸ್ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- ಖಾಸಗಿ ವಲಯದ ಪ್ರಮುಖ ಬ್ಯಾಂಕ್ ಆಗಿರುವ ಎಚ್ ಡಿಎಫ್ ಸಿ ಅನ್ನು ದೇಶಿಯ ಮಹತ್ವದ ಬ್ಯಾಂಕ್ (ಡಿ-ಸಿಬ್ )ಎಂದು ಅರ್ ಬಿ ಐ ಪರಿಗಣಿಸಿದೆ.ಈ ಮೂಲಕ,ಎಸ್ ಬಿ ಐ, ಐಸಿಐಸಿಐ ಬಳಿಕ ಡಿ-ಸಿಬ್ ಪಟ್ಟಿಗೆ ಸೇರ್ಪಡೆಯಾಗುತ್ತಿರುವ ಮೂರನೇ ಬ್ಯಾಂಕ್ hdfc ಅಗಿದೆ 2016 ರಲ್ಲಿ ಇವುಗಳನ್ನು ಸಿಬ್ ಪಟ್ಟಿಗೆ ಸೇರ್ಪಡೆ ಮಾಡಲಾಗಿತ್ತು.

- ಸಿಸ್ಟ ಮ್ಯಾಟಿಕಲಿ ಇಂಪಾರ್ಟೆಂಟ್ ಬ್ಯಾಂಕ್ (ಎಸ್ಐಬಿ )ಎನ್ನುವ ಮಾನ್ಯತೆಯನ್ನು ದೇಶದ ಪ್ರಮುಖ ಬ್ಯಾಂಕ್ ಗಳಿಗೆ ಮಾತ್ರ ನೀಡಲಾಗುತ್ತದೆ.ದೇಶದ ಅರ್ಥವ್ಯವಸ್ಥೆ ಈ ಬ್ಯಾಂಕುಗಳ ಮೇಲೆ ಅವಲಂಬಿತವಾಗಿದ್ದಾಗ "ಟೂ ಬಿಗ್ ಟು ಫೇಲ್ (ಟಿಬಿಟಿಎಫ್) ಮಾನ್ಯತೆ ನಿಡಲಾಗುತ್ತದೆ.
- ಪ್ರಸ್ತುತ, ಎರಡು ಮಾದರಿಯ ಸಿಬ್ ವ್ಯವಸ್ಥೆಗಳಿವೆ. ಅವು ಜಾಗತಿಕ ಸಿಬ್ ಹಾಗು ದೇಶಿಯ ಸಿಬ್. ಜಾಗತಿಕ ಪ್ರಮುಖ ಬ್ಯಾಂಕುಗಳನ್ನು ಬಾಸೆಲ್ ಕಮಿಟಿ ಅನ್ ಬ್ಯಾಂಕಿಂಗ್ ಸೂಪರ್ ಮಿಷನ್( ಬಿಸಿಬಿಎಸ್) ಗುರುತಿಸುತ್ತದೆ.ದೇಶಿಯ ಸಿಬ್ ಅನ್ನು ಆಯಾ ದೇಶದ ಕೇಂದ್ರ ಬ್ಯಾಂಕಗಳು ಗುರುತಿಸುತ್ತದೆ.
- 2008 ರಲ್ಲಿ ಜಾಗತಿಕ ಅರ್ಥಿಕ ವ್ಯವಸ್ಥೆ ಕುಸಿದಾಗ ಅಂತರ್ ಸಂಪರ್ಕ ಹೊಂದಿರುವ ಹಣಕಾಸು ಸಂಸ್ಥೆಗಳಲ್ಲಿ ತೀವ್ರ ಬಿಕ್ಕಟು ಸೃಷ್ಟಿ ಯಾಗಿತ್ತು. ಆದರೆ, ಟಿಬಿಟಿಎಫ್ ಗುರುತಿಗೆ ಒಳಪಟ್ಟ ಬ್ಯಾಂಕುಗಳು ಮಾತ್ರ ಅರ್ಥಿಕ ಕುಸಿತವನ್ನೆದಿರಿಸಲು ಅಪಾರ ಶ್ರಮ ಹಾಕಿದ್ದವು.
- ಮಾರುಕಟ್ಟೆ ಶಿಸ್ತು, ಸ್ವರ್ಧಾತ್ಮಕ ಅಸ್ಪಷ್ಟತೆ ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು.ಈ ಹಿನ್ನಲೆಯಲ್ಲಿ ಟಿಬಿಟಿಎಫ್ ಎನ್ನುವ ಗರುತಿಸುವಿಕೆ ಮಹತ್ವ ಬಂದಿದೆ.2015ರ ಅಗಸ್ಟ್ ನಿಂದ ಭಾರತದ ಕೇಂದ್ರ ಬ್ಯಾಕ್ ಆಗಿರುವ ಅರ್ ಬಿ ಐ ಸಹ ದೇಶಿಯ ಸಿಬ್ ಗಳನ್ನು ಗುರಿತಿಸಲು ಆರಂಭಿಸಿದೆ.

**3. ಲಕ್ಷದ್ವೀಪದ ಪರಾಲಿ-1 ಸಂಪೂರ್ಣ ನಾಶ**

**ಪ್ರಾಮುಖ್ಯತೆ - ಪ್ರಿಲಿಮ್ಸ್ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- ಲಕ್ಷದ್ವೀಪದ ಪರಾಲಿ-1 ಕಿರುದ್ವೀಪ ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿಹೊಗಿದ್ದು,ನಾಶವಾಗಿದೆ ಎಂದು ಅಧ್ಯಯನವೊಂದು ಬಹಿರಂಗಪಡಿಸಿದೆ.ಅಷ್ಟೇ ಅಲ್ಲ ಜೀವ ವೈವಿಧ್ಯದ ನೆಲೆಯಾಗಿರುವ ಲಕ್ಷದ್ವೀಪದ ಇಂಥ ನಾಲ್ಕು ಕಿರುದ್ವೀಪಗಳು

ಮುಳುಗುವ ಭೀತಿ ಎದುರಿಸುತ್ತಿವೆ.ಪರಾಲಿ-1, ಪರಾಲಿ-2, ಪರಾಲಿ-3,ಬಂಗಾರಾಂ, ಥಿನ್ನಕರ ಕಿರುದ್ವೀಪಗಳು ಅಪಾಯದ ಅಂಚಿನಲ್ಲಿವೆ ಎಂದುಲಕ್ಷದ್ವೀಪದ ಆಂಡ್ರಾಥ್ ಮೂಲದ ಸಂಶೋಧಕ

ಅರ್ .ಎಮ್ ಹಿದಾಯತುಲ್ಲಾ ನೇತೃತ್ವದ ಅಧ್ಯಯನ ವರದಿ ಹೇಳಿದೆ.

- ಲಕ್ಷದ್ವೀಪದ ಆಡಳಿತಕ್ಕೆ ಒಳಪಟ್ಟಿರುವ ಈ ಕಿರಿದ್ವೀಪಗಳಲ್ಲಿ ಜನವಸತಿ ಇಲ್ಲ. 45 ವರ್ಷಗಳ ಅವಧಿಯ ಭೂ-ಆಕೃತಿ ವಿಜ್ಞಾನದ ಸಮಗ್ರ ದಾಖಲೆಗಳನ್ನು ಕಲೆಹಾಕಲಾಗಿದ್ದು, ಈ ಅಧ್ಯಯನಕ್ಕೆ ರಿಮೋಟ್ ಸೆನ್ಸಿಂಗ್,ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್ )ಗಳನ್ನು ಬಳಸಿಕೊಳ್ಳಲಾಗಿದೆ.
- ಇದರ ಪ್ರಕಾರ, ಬಂಗಾರಾಂ ಅಟೋಲ್ ಭಾಗವಾಗಿರುವ 0.032 ಚದರ ಕಿಮೀ ವ್ಯಾಪ್ತಿಯ ಪರಾಲಿ-1 ದ್ವೀಪ ಶೇ. 100 ರಷ್ಟು ಮುಳುಗಡೆಯಾಗಿದೆ.ಪರಾಲಿ-2 ದ್ವೀಪ ಶೇ.80, ಥಿನ್ನಕರ ಶೇ.14.38, ಪರಾಲಿ-3 ಶೇ.11.42, ಬಂಗಾರಾಂಶೇ.9.968 ರಷ್ಟು ಭಾಗ ನೀರಿನಲ್ಲಿ ಸೇರಿಕೊಂಡಿವೆ.ಈ ಪ್ರದೇಶಗಳಲ್ಲಿ ಸಮುದ್ರ ಕೊರತೆ ತಪ್ಪಿಸಲು ಮ್ಯಾಂಗ್ರೋವ್ ಆರಣ್ಯ ಬೆಳೆಸುವುದು ಸೇರಿದಂತೆ ಸಾಂಪ್ರದಾಯಿಕ ಪದ್ಧತಿಗಳನ್ನು ತ್ವರವಾಗಿ ಕೈಗೊಳ್ಳಬೇಕೆಂದು ವರದಿ ಶಿಫಾರಸು ಮಾಡಿದೆ.

**4. ಅಮೆರಿಕದಲ್ಲಿ ಪಾಕ್ ಬ್ಯಾಂಕ್‌ಗೆ ಬೀಗ**

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ**

**ಪ್ರಿಲಿಮ್ಸ್ ಗಾಗಿ**

- ಭಯೋತ್ಪಾದನೆಗೆ ಹಣಕಾಸು ನೆರವು ಹಾಗೂ ಹಣ ಅಕ್ರಮ ವರ್ಗಾವಣೆ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲು ವಿಫಲವಾದ ಪಾಕಿಸ್ತಾನದ ಹಬಿಬ್ ಬ್ಯಾಂಕ್‌ನ ನ್ಯೂಯಾರ್ಕ್ ಶಾಖೆ ಮುಚ್ಚಲು ಆದೇಶಿಸಲಾಗಿದೆ. ಈ ಮೂಲಕ ಪಾಕಿಸ್ತಾನಕ್ಕೆ ಮತ್ತೊಂದು ಮುಖಭಂಗವಾಗಿದೆ.
- ಪಾಕಿಸ್ತಾನದ ಖಾಸಗಿ ವಲಯದ ಅತಿ ದೊಡ್ಡ ಬ್ಯಾಂಕ್ ಆಗಿರುವ ಹಬಿಬ್, ಭಯೋತ್ಪಾದನೆಗೆ ಆರ್ಥಿಕ ಕುಮ್ಮಕ್ಕು ನೀಡುವ ವ್ಯವಹಾರಗಳ ಮೇಲೆ ನಿಗಾ ಇಡಲು ವಿಫಲವಾಗಿದೆ. ಜತೆಗೆ ಅಕ್ರಮ ಹಣ ವಹಿವಾಟನ್ನು ತಡೆಯಲು ಉದಾಸೀನ ತೋರಿದೆ. ಹೀಗಾಗಿ ಬ್ಯಾಂಕ್ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

**ಮೇನ್ಸ್ ಪರೀಕ್ಷೆಗಾಗಿ**

- ಹಬಿಬ್ ಬ್ಯಾಂಕ್ 1978ರಿಂದ ಅಮೆರಿಕದಲ್ಲಿ ಬ್ಯಾಂಕಿಂಗ್ ವ್ಯವಹಾರದಲ್ಲಿ ನಿರತವಾಗಿದೆ.ಸಂಭಾವ್ಯ ಕಾನೂನುಬಾಹಿರ ವ್ಯವಹಾರಗಳ ಮೇಲ್ವಿಚಾರಣೆಯನ್ನು ಬಿಗಿಗೊಳಿಸುವಂತೆ 2006 ರಲ್ಲಿ ಈ ಬ್ಯಾಂಕ್‌ಗೆ ಆದೇಶಿಸಲಾಗಿತ್ತು. ಈ ಕಟ್ಟುನಿಟ್ಟಿನ ಆದೇಶವನ್ನು ಬ್ಯಾಂಕ್ ಗಾಳಿಗೆ ತೂರಿತ್ತು.

**ಅಕ್ರಮ ವ್ಯವಹಾರ ನಡೆಸದವರ ಪಟ್ಟಿಯಲ್ಲಿ ಭಯೋತ್ಪಾದಕರು**

- ಹಬಿಬ್ ಬ್ಯಾಂಕ್ ಮೂಲಕ ನಡೆದ ಕನಿಷ್ಠ 13 ಸಾವಿರ ವಹಿವಾಟಿನ ಬಗ್ಗೆ ಪರಿಶೀಲನೆ ನಡೆದಿಲ್ಲ ಎನ್ನಲಾಗಿದೆ. ಇದರ ಜತೆಗೆ ಅಕ್ರಮ ವ್ಯವಹಾರ ನಡೆಸದೆ ಇರುವವರ ಪಟ್ಟಿಯಲ್ಲಿ ಭಯೋತ್ಪಾದಕರು ಹಾಗೂ ಅಂತಾರಾಷ್ಟ್ರೀಯ ಶಸ್ತ್ರಾಸ್ತ್ರ ವ್ಯಾಪಾರಿಗಳೂ ಇದ್ದಾರೆ. ಇಂಥವರನ್ನು ಗುರುತಿಸುವ ಕಾರ್ಯ ಬ್ಯಾಂಕ್ ಮಾಡಿಲ್ಲ ಎಂದು ದೂರಲಾಗಿತ್ತು.

**ಭಾರತದಲ್ಲೂ ಡಿಸಿಬಿ ಬ್ಯಾಂಕ್ ಮೇಲೆ ಆರ್‌ಬಿಐ ನಿಗಾ**

- ಹಬಿಬ್ ಬ್ಯಾಂಕ್ ವಿಚಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದ ಬೆನ್ನಲ್ಲೇ, ಆ ಬ್ಯಾಂಕಿನ ಬಹುಮುಖ್ಯ ಪ್ರಮೋಟರ್ ಅಗಾ ಖಾನ್ ಫೌಂಡೇಷನ್ ಫಾರ್ ಎಕನಾಮಿಕ್ ಡೆವಲಪ್‌ಮೆಂಟ್ ಮೇಲೆ ಇದೀಗ ನಿಗಾ ಹೆಚ್ಚಾಗಿದೆ.
- ಭಾರತದಲ್ಲಿ ಡಿಸಿಬಿ ಬ್ಯಾಂಕ್ ಪಾಲುದಾರರ ಪೈಕಿ ಅಗಾ ಖಾನ್ ಫೌಂಡೇಷನ್ ಪಾಲು ಶೇಕಡ 51. ಹೀಗಾಗಿ ಡಿಸಿಬಿ ಬ್ಯಾಂಕ್ ವಹಿವಾಟಿನ ಮೇಲೆ ಆರ್‌ಬಿಐ ನಿಗಾವಹಿಸಿದೆ ಎಂದು ಆಂಗ್ಲ ಪತ್ರಿಕೆ ವರದಿ ಮಾಡಿತ್ತು.

- ಈ ಮೊದಲು ತನ್ನ ತಪ್ಪನ್ನು ತಿದ್ದುಕೊಳ್ಳಲು ಬ್ಯಾಂಕ್‌ಗೆ ಅನೇಕ ಅವಕಾಶ ನೀಡಲಾಗಿತ್ತು. ಆದಾಗ್ಯೂ ಬ್ಯಾಂಕ್ ತನ್ನ ನಡೆಯನ್ನು ಬದಲಾಯಿಸಿಕೊಳ್ಳಲಿಲ್ಲ. ಹೀಗಾಗಿ ನ್ಯೂಯಾರ್ಕ್ ಶಾಖೆ ಮುಚ್ಚುವಂತೆ ಆದೇಶಿಸಲಾಗಿದೆ .

- ಅಲ್ ಖೈದಾ ಜತೆ ಸಂಬಂಧ ಹೊಂದಿರುವ ಸೌದಿ ಅರೇಬಿಯಾದ ಅಲ್ ರಾಝಿ ಬ್ಯಾಂಕ್ ಗೆಹಬಿಬ್ ಬ್ಯಾಂಕ್‌ನಿಂದ ಕೋಟ್ಯಂತರ ರೂಪಾಯಿ ಹಣ ವರ್ಗಾವಣೆಯಾಗಿತ್ತು. ಈ ಹಣ ಅಕ್ರಮವಾಗಿ ವರ್ಗಾವಣೆಯಾಗಿಲ್ಲ ಮತ್ತು ಭಯೋತ್ಪಾದನಾ ಚಟುವಟಿಕೆಗೆ ಬಳಕೆಯಾಗಿಲ್ಲ ಎಂಬುದನ್ನು ವಿಚಾರಣೆ ವೇಳೆ ಸಾಬೀತು ಮಾಡಲು ಹಬಿಬ್ ಬ್ಯಾಂಕ್ ವಿಫಲವಾಗಿತ್ತು.

**5. ಸಹಾರಾ ಫಾರೆಸ್ಟ್ ಪ್ರಾಜೆಕ್ಟ್**

**ಪ್ರಾಮುಖ್ಯತೆ - ಪ್ರಿಲಿಮ್ಸ್ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- "ಸಹಾರಾ ಫಾರೆಸ್ಟ್ ಪ್ರಾಜೆಕ್ಟ್" ಎಂಬ ಹೊಸ ಯೋಜನೆಯೊಂದನ್ನು ಜೋರ್ಡಾನ್ನಲ್ಲಿ ಪ್ರಾರಂಭಿಸಲಾಗಿದೆ. ಸೂರ್ಯನ ಕಿರಣಗಳನ್ನು ಮತ್ತು ಸಮುದ್ರದ ನೀರನ್ನು ಬಳಸಿ

ಆಹಾರವನ್ನು ಉತ್ಪಾದಿಸಲು ಜೋರ್ಡಾನ್ನ ಮರಳಿನ ದಿಬ್ಬಗಳನ್ನು ಕೃಷಿ ಭೂಮಿಯಾಗಿ ಪರಿವರ್ತಿಸುವುದು ಇದರ ಉದ್ದೇಶವಾಗಿದೆ

**ಯೋಜನೆಯ ವಿವರಗಳು:**

- ಮೊದಲ ಹಂತದಲ್ಲಿ, ಯೋಜನೆಯು ಫುಟ್ಬಾಲ್ ಮೈದಾನಕಕ್ಕಿಂತ ನಾಲ್ಕು ಪಟ್ಟು ಹೆಚ್ಚು ಗಾತ್ರದ ಪ್ರದೇಶದಿಂದ ವರ್ಷಕ್ಕೆ 130 ಟನ್ ಸಾವಯವ ತರಕಾರಿಗಳನ್ನು ಉತ್ಪಾದಿಸುವ ಗುರಿ ಹೊಂದಿದೆ.
- ವಿದ್ಯುತ್ ಒದಗಿಸಲು ಇದು ಸೌರ ಫಲಕಗಳನ್ನು ಬಳಸುತ್ತದೆ
- ನಾರ್ವೆ ಮತ್ತು ಯುರೋಪಿಯನ್ ಒಕ್ಕೂಟವನ್ನು ಒಳಗೊಂಡಿರುವ ಈ ಯೋಜನೆಯು ಮೂರು ಹೆಕ್ಟೇರ್ಗಳಿಂದ ಸುಮಾರು 200 ಹೆಕ್ಟೇರ್ ಮರುಭೂಮಿವರೆಗೆ ವಿಸ್ತರಿಸುತ್ತದೆ .

## 6. ಸ್ಪೆಕ್ಟ್ರಮ್ ಲೈಸೆನ್ಸ್ ಹಿಂಪಡೆಯಲು ಶಿಫಾರಸು

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ**

**ಪ್ರಿಲಿಮ್ಸ್ ಗಾಗಿ**

- ಮಷಿನ್ -ಟು ಮಷಿನ್ (M2M ) ಸಂವಹನ ಪ್ರಕ್ರಿಯೆಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (Telecom Regulatory Authority of india (Trai ) ಕೆಲವು ಬ್ಯಾಂಡ್ ಗಳ ನಿಗದಿತ ಸ್ಪೆಕ್ಟ್ರಮ್ ಗಳಿಗೆ ನೀಡಲಾಗಿರುವ ಪರವಾನಗಿಯನ್ನು ಹಿಂಪಡೆಯುವಂತೆ ಶಿಫಾರಸು ಮಾಡಿದೆ. ಇದಕ್ಕೆ ದೂರಸಂಪರ್ಕ ಕಂಪನಿಗಳಿಂದ ವಿರೋಧ ವ್ಯಕ್ತವಾಗಿದೆ.

**ಮೇನ್ಸ್ ಪರೀಕ್ಷೆಗಾಗಿ**

**ಟ್ರಾಯನ ಪ್ರಮುಖ ಶಿಫಾರಸುಗಳು :**

- ಸ್ಪೆಕ್ಟ್ರಮ್ ಹಂಚಿಕೆ: ತಾಂತ್ರಿಕ ಹಾಗು ಸೇವಾ ತಟಸ್ಥ ನೀತಿ ಅನುಸರಿಸಿ ಸ್ಪೆಕ್ಟ್ರಮ್ ಹಂಚಿಕೆ ಮಾಡಬೇಕು. ಪ್ರತ್ಯೇಕ ಸ್ಪೆಕ್ಟ್ರಮ್ ಗಳನ್ನು ಹಂಚಿಕೆ ಮಾಡಬಾರದು. ಅದರಲ್ಲೂ ಮಷಿನ್ -ಟು-ಮಷಿನ್ ಸಂವಹನಕ್ಕೆ ಯಾವ ಕಾರಣಕ್ಕೂ ಪ್ರತ್ಯೇಕ ಸ್ಪೆಕ್ಟ್ರಮ್ ಹಂಚಿಕೆ ಮಾಡಬಾರದು.
- ಎಮ2ಎಮ್ ಸೇವೆಗೆ ಪರವಾನಗಿ ವಿನಾಯಿತಿ ನೀಡಲಾಗಿರುವ ಸ್ಪೆಕ್ಟ್ರಮ್ ಗಳನ್ನು ಬಳಸಿಕೊಳ್ಳುವಂತೆ ಮಾಡುವುದು. ಜೊತೆಗೆ,868 MHz (867868 ),915935 MHz, V-band (5764 ಎHz)ಸ್ಪೆಕ್ಟ್ರಮ್ ಗಳ ಪರವಾನಗಿ ಹಿಂಪಡೆಯಲು ಶಿಫಾರಸು ಮಾಡಲಾಗಿದೆ .
- ಎಮ್2ಎಮ್ ಉಚ್ಚ ಸಂಸ್ಥೆಯ ರಚನೆ :ದೂರಸಂಪರ್ಕ ಸಚಿವಾಲಯ ಎಂ2ಎಂ ಸಂವಹನಕ್ಕೆ ಸಂಭದಿಸಿದಂತೆ ಅತ್ಯುಚ್ಚ ಸಂಸ್ಥೆಯನ್ನು ಸ್ಥಾಪಿಸಬೇಕು.ಈ ಸಂಸ್ಥೆಯಲ್ಲಿ ಎಂ2ಎಂ ಸಂವಹನ ಪ್ರಭಾವಕ್ಕೆ ಒಳಗಾಗಿರುವ ನಿಯಂತ್ರಕ ಸಂಸ್ಥೆಗಳಾದ ಟ್ರಾಯ್, ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ,ಕೇಂದ್ರೀಯ ವಿದ್ಯುತ್ ನಿಯಂತ್ರಣ ಆಯೋಗ, ಕಾನೂನು ಮತ್ತು ನ್ಯಾಯ ಸಚಿವಾಲಯ ಸದಸ್ಯರಾಗಿ ಸೇರಬೇಕು.
- ಎಂ2ಎಂ ಸೇವಾದಾರರು ಕಡ್ಡಾಯವಾಗಿ ದೂರಸಂಪರ್ಕ ಸಚಿವಾಲಯದಡಿ ನೋಂದಣಿ ಮಾಡಿಸಿಕೊಂಡಿರಬೇಕು. ಎಂ2ಎಂ ಸೇವೆಗೆ ಸಂಭಂಧಿಸಿದ ಎಲ್ಲ ಸೇವದಾರರನ್ನು ಒಳಗೊಂಡಂತೆ ಏಕೀಕೃತ ಪರವಾನಗಿ ಹೊಂದಿದ್ದರಷ್ಟೇ ಎಂ2ಎಂ ಸೇವೆ ನೀಡಲು ಅನುಮತಿ ನೀಡಬೇಕು.ಏಕೀಕೃತ ಪರವಾನಗಿ ಪಡೆದ ಎಲ್ಲ ವರ್ಚುಯಲ್ ನೆಟ್ ವರ್ಕ್ ಅಪರೇಟರ್ ಗಳಿಗೆ ಎಂ2ಎಂ ಸಂಪರ್ಕ ನೀಡಲು ಅನುಮತಿ ನೀಡಬೇಕು. ದೂರಸಂಪರ್ಕ ಸಚಿವಾಲಯ ಪರವಾನಗಿ ನೀಡಲು ಇರಬೇಕಾದ ಷರತ್ತುಗಳಿಗೆ ತಿದ್ದುಪಡಿ ತರಬೇಕು

**ಎಂ2ಎಂ ಸಂವಹನ ಎಂದರೇನು ?**

- ಎಂ2ಎಂ ಸಂವಹನ (machine-to- machine ( M2M) communication ) ಎಂದರೆ ಮಷಿನ್ ಗಳ ನಡುವೆ ನಡೆಯುವ ಸ್ವಯಂಚಾಲಿತ ಸಂವಹನ ಕ್ರಿಯೆ. ಸ್ಮಾರ್ಟ್ ಸಿಟಿ, ಸ್ಮಾರ್ಟ್ ಗ್ರಿಡ್, ಸ್ಮಾರ್ಟ್ ವಾಟರ್ ಪ್ಲಾಂಟ್ಸ್,ಸ್ಮಾರ್ಟ್ ಟ್ರಾನ್ಸ್ ಪೋಟೆಷನ್, ಸ್ಮಾರ್ಟ್ ಅರೋಗ್ಯ ಸೇವೆ ಮೊದಲಾದ ಪ್ರಮುಖ ಉದ್ಯಮಗಳಿಗೆ ಎಂ2ಎಂ ಸಂವಹನ ಅತ್ಯವಷ್ಯವಿದ್ದು,ಹೆಚ್ಚು ಪ್ರಭಾವಯುತವಾದುದು.
- ಇದನ್ನು ಮನಗಂಡ ಸರ್ಕಾರ 2012ರ ರಾಷ್ಟ್ರೀಯ ದೂರಸಂಪರ್ಕ ನೀತಿಯಲ್ಲಿ ಎಂ2ಎಂ ಸೇವೆಗೆ ಮಹತ್ವವನ್ನು ಒತ್ತಿ ಹೇಳಿದೆ.

## ಸ್ಪೆಕ್ಟ್ರಮ್ ಎಂದರೇನು?:

- ಟೆಲಿಫೋನ್, ದೂರದರ್ಶನ,ಅಂತರ್ಜಾಲ ಸೇವೆ ಒದಗಿಸಲು ಸಂವಹನ ಉಪಗ್ರಹಗಳೇ ಆಧಾರ.ಈ ಉಪಗ್ರಹಗಳು ಭೂಮಿಯಿಂದ ಪ್ರಸಾರ ಮಾಡಿದ ಸಂದೇಶಗಳನ್ನು ನಿರ್ಧಿಷ್ಟ ತರಂಗಾಂತರಗಳಲ್ಲಿ ಭೂಮಿಗೆ ಪ್ರತಿಫಲಿಸುತ್ತದೆ.ಈ ತರಂಗಾಂತರಗಳನ್ನೇ ಸ್ಪೆಕ್ಟ್ರಮ್ ಎನ್ನುವರು.
- ಸ್ಪೆಕ್ಟ್ರಮ್ ಗಳನ್ನು ಕೇಂದ್ರ ಸರ್ಕಾರ ಹರಾಜಿನ ಮೂಲಕ ನಿಗದಿತ ಅವಧಿಗೆ ದೂರಸಂಪರ್ಕ ಸೇವಾದರರಿಗೆ ಮಾರಾಟ ಮಾಡುತ್ತದೆ.ಇದರಿಂದ ಸರ್ಕಾರಕ್ಕೆ ಲಕ್ಷಾಂತರ ಕೋಟಿ ರೂಪಾಯಿ ಅದಾಯವಿದೆ.ಭಾರತದ ಸಂವಹನ ಕ್ರಾಂತಿಗೆ ಇಸ್ರೋದ ಇನ್ಸಾಟ್ ಸರಣಿ ಉಪಗ್ರಹಗಳ ಕೊಡುಗೆ ಹೆಚ್ಚು. ಇದುವರೆಗೆ 24 ಉಪಗ್ರಹಗಳನ್ನು ಉದಯಿಸಿದ್ದು, 11 ಉಪಗ್ರಹಗಳು ಕರ್ಯಚರನೆಯಲ್ಲಿವೆ.

11th SEPTEMBER

## 1.ತುರ್ತು ರಾಷ್ಟ್ರೀಯ ಅರಣ್ಯ ನೀತಿ ಪರಿಶೀಲನೆಯ ಅಗತ್ಯತೆಯಿದೆ

**ಪ್ರಸಂಗ:**

- ರಾಷ್ಟ್ರೀಯ ಅರಣ್ಯ ನೀತಿ ಪರಿಶೀಲನೆ ಮಾಡಬೇಕಾದ ಅಗತ್ಯವಿದೆ, ಏಕೆಂದರೆ ಇದು ತಿರಸ್ಕರಿಸಲ್ಪಟ್ಟ ಪರಿಕಲ್ಪನೆಗಳನ್ನು ಒಳಗೊಂಡಿದೆ.

**ಭಾರತದಲ್ಲಿ ಅರಣ್ಯ ವಿಸ್ತರಣ ಸ್ಥಿತಿ:**

**2015ರ ರಾಜ್ಯ ಅರಣ್ಯ ವರದಿ ಪ್ರಕಾರ**

- 2013 ಮತ್ತು 2015 ರ ನಡುವಿನ ಅವಧಿಯಲ್ಲಿ ಭಾರತದಲ್ಲಿ ಅರಣ್ಯ ಪ್ರದೇಶವು 5,081 ಸ.ಕಿ.ಮೀ.ಗಳಷ್ಟು ಹೆಚ್ಚಾಗಿದೆ- 2013 ಮತ್ತು 2015 ರ ನಡುವೆ ಶೇ 21.34% ರಷ್ಟು ಹೆಚ್ಚಳ ಕಂಡು ಬಂದಿದೆ.
- ದೇಶದಲ್ಲಿ ಕಾರ್ಬನ್ ಸಂಗ್ರಹವು ಸಹ 103 ಮಿಲಿಯನ್ ಟನ್ನಳಷ್ಟು ಹೆಚ್ಚಾಗಿದೆ.
- ಭಾರತದ ಅತ್ಯಂತ ದಟ್ಟವಾದ ಕಾಡುಗಳು ಒಟ್ಟು ಅರಣ್ಯ ಪ್ರದೇಶದ 2.61 ಪ್ರತಿಶತವನ್ನು ಒಳಗೊಂಡಿದೆ.ಮಧ್ಯಮ ದಟ್ಟವಾದ ಕಾಡುಗಳುಶೇ. 9.59 ರಷ್ಟು ಪ್ರಮಾಣವನ್ನು ಹೊಂದಿವೆ
- ತೆರೆದ ಕಾಡುಗಳು ಶೇ 9.14 ರಷ್ಟು ನಿಂತಿವೆ

- ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಿಜೋರಾಮ್ ಅತಿ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ, ತದ ನಂತರ ಲಕ್ಷದ್ವೀಪವು ಸ್ಥಾನ ಪಡೆದಿದೆ.

- ಆದಾಗ್ಯೂ, ಈಶಾನ್ಯ ರಾಜ್ಯಗಳಲ್ಲಿ ಮಣಿಪುರವನ್ನು ಹೊರತುಪಡಿಸಿ ಕಾಡಿನ ವ್ಯಾಪ್ತಿಯಲ್ಲಿ ಇಳಿಮುಖ ಕಂಡು ಬಂದಿದೆ .
- ಜಮ್ಮು ಮತ್ತು ಕಾಶ್ಮೀರ, ಉತ್ತರಾಖಂಡ್, ಮೇಘಾಲಯ, ಕೇರಳ, ಅರುಣಾಚಲ ಪ್ರದೇಶ, ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳು ಅತೀಯಾದ ಅರಣ್ಯ ಪ್ರದೇಶದ ನಷ್ಟವನ್ನು ಅನುಭವಿಸುತ್ತಿವೆ .

**ಭಾರತದಲ್ಲಿ ಕಾಡುಗಳನ್ನು ರಕ್ಷಿಸಲು ಇರುವ ಪ್ರಮುಖ ಸವಾಲುಗಳು:**

- ಏರುತ್ತಿರುವ ಜನಸಂಖ್ಯೆಯ ಕಾರಣ ಅರಣ್ಯ ಪ್ರದೇಶ ನಶಿಸಲು ಕಾರಣವಾಗಿದೆ .
- ಕೃಷಿಯ ವಿಸ್ತರಣೆಗಾಗಿ ಹೆಚ್ಚುತ್ತಿರುವ ಆಕ್ರಮಣ
- ಅರಣ್ಯ ಸಂಪನ್ಮೂಲಗಳ ಬೇಡಿಕೆಯ ಹೆಚ್ಚಳ

**ಭಾರತದಲ್ಲಿ ಅರಣ್ಯ ನೀತಿ:**

- 1953ರಲ್ಲಿ ಸರಕಾರ ಅರಣ್ಯವನ್ನು ರಾಷ್ಟ್ರೀಕರಿಸುವ ಮುಂಚಿತವಾಗಿ ದೇಶದ ಅರಣ್ಯ ಸಂಪತ್ತು ಖಾಸಗಿ ವ್ಯಕ್ತಿಗಳ ಅಂದರೆ ಬಹುತೇಕ ಜಮೀನಾರರ ವಶದಲ್ಲಿತ್ತು. 1980ರಲ್ಲಿ ಜಾರಿಗೆ ಬಂದ ಅರಣ್ಯ ಸಂರಕ್ಷಣಾ ಕಾಯಿದೆ ಅರಣ್ಯ ಪ್ರದೇಶದಲ್ಲಿನ ಕೃಷಿ ಚಟುವಟಿಕೆಗೆ ಇಲಾಖೆಯ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಿತು.
- ಆನಂತರ 1988ರಲ್ಲಿ ರಾಷ್ಟ್ರೀಯ ಅರಣ್ಯ ನೀತಿಯನ್ನು ಜಾರಿಗೆ ತರಲಾಯಿತು. ಇದರಿಂದಾಗಿ ಜಂಟಿ ಅರಣ್ಯ ನಿರ್ವಹಣೆ ಎಂಬ ಕಾರ್ಯಕ್ರಮವೂ ಪ್ರಾರಂಭವಾಯಿತು. ಹಳ್ಳಿಗಳು ಅರಣ್ಯ ಇಲಾಖೆಯ ಸಹಭಾಗಿತ್ವದಲ್ಲಿ ನಿರ್ದಿಷ್ಟ ಅರಣ್ಯ ಭಾಗವನ್ನು ನಿರ್ವಹಿಸುವುದೇ ಈ ಕಾರ್ಯಕ್ರಮದ ಆಶಯ. ಆದರೆ ಇದು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದೆ ಕಾಗದದಲ್ಲಿಯೇ ಉಳಿದಿದೆ. ಈಗ 1988ರ ರಾಷ್ಟ್ರೀಯ ಅರಣ್ಯ ನೀತಿ ಬದಲಾಯಿಸಲು ಸರಕಾರ ಮುಂದಾಗಬೇಕಾಗಿದೆ .

**ರಾಷ್ಟ್ರೀಯ ಅರಣ್ಯ ನೀತಿ, 1988**

- 1988 ರ ಅರಣ್ಯ ನೀತಿ ನಿರ್ಣಯದ ಪ್ರಕಾರ, ಒಟ್ಟು ಅರಣ್ಯ ಪ್ರದೇಶವು ಒಟ್ಟು ಭೌಗೋಳಿಕ ಪ್ರದೇಶದ ಶೇ 33% ಕ್ಕಿಂತ ಕಡಿಮೆ ಇರುವಂತಿಲ್.

**ಪ್ರಧಾನ ಗುರಿ:**

- ವಾತಾವರಣದ ಸಮತೋಲನ ಮತ್ತು ವಾತಾವರಣದ ಸಮತೋಲನದ ನಿರ್ವಹಣೆಗೆ ವಾತಾವರಣದ ಸಮತೋಲನವನ್ನು , ಎಲ್ಲಾ ಜೀವಿಗಳ ಮಾನವ, ಪ್ರಾಣಿ ಮತ್ತು ಸಸ್ಯ ಖಾತ್ರಿಪಡಿಸುವುದು
- The derivation of direct economic benefit must be subordinated to this principal aim.

**1988 ರ ರಾಷ್ಟ್ರೀಯ ಅರಣ್ಯ ನೀತಿ, ನ್ಯೂನತೆಗಳು :**

- 1988ರ ನೂತನ ಅರಣ್ಯ ನೀತಿ ಮತ್ತು ಅದರ ಫಲಶ್ರುತಿಯಾಗಿ ರೂಪುಗೊಂಡು, 90ರ ದಶಕದಲ್ಲಿ ಜಾರಿಗೆ ಬಂದ ಸಮುದಾಯ ಸಹಭಾಗಿತ್ವದ ಅತ್ಯುತ್ತಮ ಮಾದರಿ ಎನ್ನಿಸಿಕೊಂಡ, ಜಂಟೀ ಅರಣ್ಯ ಯೋಜನೆ ಸಂಪೂರ್ಣವಾಗಿ ಯಶಸ್ವಿಯಾಗಿದೆಯೇ? ಖಂಡಿತವಾಗಿಯೂ ಇಲ್ಲ. ಯಶಸ್ವಿಯಾಗಿರುವ ಉಜ್ವಲ ಉದಾಹರಣೆಗಳು ನಮಗೆ ದೊರೆಯುತ್ತವೆ ನಿಜ. ಆದರೆ ಅವುಗಳ ಸಂಖ್ಯೆ ಬೆರಳೆಣಿಸುವಷ್ಟು ಮಾತ್ರ. ಉಳಿದಂತೆ ಆಗಬೇಕಾದ ಕೆಲಸಗಳು, ಪರಿಹಾರವಾಗಬೇಕಾದ ಸಮಸ್ಯೆಗಳು ಅಪಾರವಾಗಿವೆ. ಇಂಥ ಕೆಲವು ಸಮಸ್ಯೆ ನ್ಯೂನತೆಗಳನ್ನು ನಾವು ಉದಹರಿಸಬೇಕಾದುದು ಅಗತ್ಯ. ಅದರೊಂದಿಗೆ ಆ ಸಮಸ್ಯೆಗಳನ್ನು ಬಗೆಹರಿಸುವ ಮಾರ್ಗವನ್ನು ತಿಳಿಯಬೇಕು.

- ಅರಣ್ಯ ಇಲಾಖೆ ಮತ್ತು ಗ್ರಾಮ ಅರಣ್ಯ ಸಮಿತಿಗಳ ನಡುವೆ ಸ್ಥಳೀಯ ಅರಣ್ಯ ಸಂಪನ್ಮೂಲಗಳ ರಕ್ಷಣೆ, ಬಳಕೆ, ನಿಯಂತ್ರಣ, ಪುನರುಜ್ಜೀವನಗಳಿಗೆ ಸಂಬಂಧಿಸಿದಂತೆ, ಅಧಿಕಾರದಲ್ಲಿ ತೀವ್ರ ಅಸಮತೋಲನಗಳಿವೆ. ಇದನ್ನು ನಿವಾರಿಸಲು ಅಧಿಕಾರದ ಮರುಹಂಚಿಕೆಯಾಗಿ ಗ್ರಾಮ ಅರಣ್ಯ ಸಮಿತಿಗೆ ಮತ್ತಷ್ಟು ಅಧಿಕಾರ ದೊರೆಯಬೇಕು.

- ಅರಣ್ಯಾಭಿವೃದ್ಧಿಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರದಲ್ಲಿ ಗ್ರಾಮ ಅರಣ್ಯ ಸಮಿತಿಗೆ ಯಾವುದೇ ಪಾತ್ರವಿಲ್ಲ. ಈ ಪರಿಸ್ಥಿತಿಯನ್ನು ಬದಲಿಸಲು ಸ್ಥಳೀಯ ಹಂತದಲ್ಲಿ ಅರಣ್ಯಾಭಿವೃದ್ಧಿಗೆ ಮೀಸಲಾದ ಹಣದಲ್ಲಿ ಶೇಕಡಾ 50 ಭಾಗವನ್ನು ನೇರವಾಗಿ ಉತ್ತಮವಾಗಿ ಕೆಲಸಮಾಡುತ್ತಿರುವ ಆಯ್ದ ಅರಣ್ಯ ಸಮಿತಿಗಳಿಗೆ ನೀಡಬೇಕು. ಸಹಭಾಗಿತ್ವಕ್ಕೆ ಇದು ಉತ್ತಮ ಪ್ರೋತ್ಸಾಹಕವಾಗುತ್ತದೆ.

- ಗ್ರಾಮ ಅರಣ್ಯ ಸಮಿತಿಯ ವ್ಯಾಪ್ತಿಯಲ್ಲಿರುವ ನೆಡುತೋಪುಗಳಿಂದ ಬರುವ ಒಟ್ಟು ಆದಾಯದ ಶೇಕಡಾ 25 ಭಾಗ ಮಾತ್ರ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಹಂಚಿಕೆಯಾಗುತ್ತಿದೆ. ಇದಕ್ಕಾಗಿ 8-10 ವರ್ಷಗಳು ಕಾಯಬೇಕು. ಇದು ತೀರಾ ಅನಾಕರ್ಷಕ, ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಇದನ್ನು ಮರು ಪರಿಶೀಲಿಸಬೇಕು.

- ಸಮುದಾಯದ ಸಹಭಾಗಿತ್ವವನ್ನು ಪ್ರೋತ್ಸಾಹಿಸುವಂತಹ ಗುಣಲಕ್ಷಣಗಳಿರುವ ಹಳ್ಳಿಗಳನ್ನು ಕಟ್ಟುನಿಟ್ಟಾಗಿ ಆಯ್ಕೆ ಮಾಡಿ ಅಂತಹ ಜಾಗಗಳಲ್ಲಿ ಮಾತ್ರ ಯೋಜನೆಯನ್ನು ಜಾರಿಗೆ ತರಬೇಕು.

- ಇಡೀ ಯೋಜನೆಯಲ್ಲಿ ಮಹಿಳೆಯರ ಹಾಗೂ ದುರ್ಬಲ ವರ್ಗದವರ ಭಾಗವಹಿಸುವಿಕೆಗೆ ಕೇವಲ ಸಾಂಕೇತಿಕ ಸ್ಥಾನವಿದೆ. ಇದು ಬದಲಾಗಿ ಅವರ ಸಹಭಾಗಿತ್ವಕ್ಕೆ ಆದ್ಯತೆಯ ಸ್ಥಾನ ದೊರೆಯಬೇಕು.

- ಗ್ರಾಮೀಣ ಅಭಿವೃದ್ಧಿಯ ವಿವಿಧ ಯೋಜನೆಗಳ ಅಡಿಯಲ್ಲಿ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಳ್ಳುವ, ಕೌಶಲ ವರ್ಧಿಸುವ ಎಲ್ಲ ಅವಕಾಶಗಳನ್ನೂ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಬಳಸಿಕೊಂಡು ಅರಣ್ಯದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಪ್ರೋತ್ಸಾಹಿಸಬೇಕು.

**ಸರ್ಕಾರ ಅರಣ್ಯ ರಕ್ಷಣೆಗೆ ಆದ್ಯತೆಯಿಂದ ಕೈಗೊಳ್ಳಬೇಕಾದ ಕೆಲವು ಅಂಶಗಳೆಂದರೆ :**

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

* ಅಗತ್ಯ ಸಿಬ್ಬಂದಿ ನೇಮಕಕ್ಕೆ ಸಮರ್ಪಕವಾದ ವ್ಯವಸ್ಥೆ ರೂಪಿಸಬೇಕಿದೆ. ಸರ್ಕಾರದಿಂದ ಒಪ್ಪಿಗೆ ಸಿಕ್ಕಾಗಲೂ ಇಲಾಖೆಯಿಂದ ನೇಮಕಾತಿ ಪ್ರಕ್ರಿಯೆ ನಡೆಸಲು ವಿಳಂಬ ಆಗುತ್ತಿದೆ. ಅಂತಹ ಕಾಲಹರಣ ತಪ್ಪಬೇಕಿದೆ.

* ಅರಣ್ಯ ಪ್ರದೇಶದಲ್ಲಿ ವಾಹನ ಸಂಚಾರ, ವಾಣಿಜ್ಯ ಚಟುವಟಿಕೆಗಳಿಂದ ಮರ ಮತ್ತು ಜೀವವೈವಿಧ್ಯದ ರಕ್ಷಣೆ ಕಷ್ಟಸಾಧ್ಯ. ಮೊದಲು ಇಂತಹ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕಿದೆ.

* ಅರಣ್ಯ ಪ್ರದೇಶದ ಸವಾಲುಗಳಿಗೆ ಸರಿಹೊಂದುವಂತಹ ಆಧುನಿಕ ತಂತ್ರಜ್ಞಾನವನ್ನು ಸಿಬ್ಬಂದಿಗೆ ಒದಗಿಸಬೇಕು.

* ಬೋಳು ಗುಡ್ಡಗಳಲ್ಲಿ ಹೆಚ್ಚಿನ ಶ್ರಮವಿಲ್ಲದೆ ಗಿಡಗಳನ್ನು ಬೆಳೆಸಬಹುದು. ಅಲ್ಲಿ ಅಗತ್ಯವಿರುವುದು ಹೆಚ್ಚಿನ ಸಮಯದ ನಿರ್ವಹಣೆ ಮಾತ್ರ. ದನಕರುಗಳು ಸಸಿಗಳನ್ನು ಹಾಳು ಮಾಡದಂತೆ ಕಾವಲು ಹಾಕಬೇಕಿದೆ.

* ಅರಣ್ಯ ಪ್ರದೇಶ ವ್ಯಾಪಕವಾಗಿ ಇರುವುದರಿಂದ ಅದರ ಗಡಿ ಮೇಲೆ ನಿಗಾ ಇಡುವುದು ಕಷ್ಟದ ಕೆಲಸ. ಹಲವು ದಶಕಗಳಿಂದ ಅರಣ್ಯ ಪ್ರದೇಶದ ಸಮೀಕ್ಷೆ ಮತ್ತು ಗಡಿ ಪುನರ್ ಗುರುತಿಸುವ ಕೆಲಸ ಆಗಿಲ್ಲ. ನಮ್ಮ ಆಸ್ತಿಯ ಸ್ಪಷ್ಟ ಮಾಹಿತಿ ಇಲ್ಲದೇ ಅದನ್ನು ಸಮರ್ಪಕವಾಗಿ ರಕ್ಷಿಸಿಕೊಳ್ಳುವುದು ಕಷ್ಟ. ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಸೇರಿದಂತೆ ಬೇಕಾದಷ್ಟು ಆಧುನಿಕ ತಂತ್ರಜ್ಞಾನ ಲಭ್ಯವಿದ್ದು, ಅದರ ಪ್ರಯೋಜನ ಪಡೆಯಬೇಕಿದೆ.

* ಅತಿಕ್ರಮಣಗಳನ್ನು ಸಂಪೂರ್ಣವಾಗಿ ತಡೆಗಟ್ಟಲು, ಒತ್ತುವರಿ ಸಮಸ್ಯೆ ಇರುವ ಪ್ರದೇಶಗಳಲ್ಲಿ ಗುಂಡಿ ತೋಡುವ ಮತ್ತು ಬೇಲಿಗಳನ್ನು ಹಾಕುವ ಕೆಲಸ ಮಾಡಬೇಕಿದೆ.

* ಅರಣ್ಯ ಪ್ರದೇಶದಲ್ಲಿ ನಡೆಯುವ ಗಣಿಗಾರಿಕೆಯಿಂದ ಮಣ್ಣು ಸಡಿಲವಾಗಿ ಪರಿಸರಕ್ಕೆ ಧಕ್ಕೆ ಉಂಟಾಗುತ್ತದೆ. ಮರಗಳ ಬೇರುಗಳಿಗೆ ಇದರಿಂದ ಅಪಾಯ ಎದುರಾಗುತ್ತದೆ. ಗಣಿ ಪ್ರದೇಶದ ಪುನಶ್ಚೇತನಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ.

## 2. ನಾವಿಕಾ ಸಾಗರ್ ಪರಿಕ್ರಮ

### ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ

### ಪ್ರಿಲಿಮ್ಸ್ ಪರೀಕ್ಷೆಗಾಗಿ

- ಪಣಜಿ ಸಮೀಪದ ಐಎನ್‌ಎಸ್ ಮಾಂಡೋವಿ ನೌಕಾಪಡೆ ತರಬೇತಿ ಕೇಂದ್ರದಲ್ಲಿ ನಾವಿಕಾ ಸಾಗರ ಪರಿಕ್ರಮಾನದ ಮಹಿಳಾ ಸಿಬ್ಬಂದಿಯನ್ನು ರಕ್ಷಣಾ ಸಚಿವ ನಿರ್ಮಲಾ ಸೀತಾರಾಮನ್ ಚಾಲನೆ ನೀಡಿದರು.
- ಭಾರತದ ಸಂಪೂರ್ಣ ಮಹಿಳಾ ತಂಡ ವಿಶ್ವ ಪರಿಕ್ರಮ ಕೈಗೊಳ್ಳುತ್ತಿರುವುದು ಇದೇ ಪ್ರಥಮವಾಗಿದೆ. ತರಿಣಿ ಹಡಗಿನಲ್ಲಿ ಒಟ್ಟು ಆರು ಸಿಬ್ಬಂದಿಗಗಳಿದ್ದಾರೆ ಎಲ್ಲಾ ಮಹಿಳಾ ಸದಸ್ಯರಾಗಿದ್ದು, ಅವರು ಜಗತ್ತಿನಾದಂತ ಸುಮಾರು 165 ಜಗತ್ಪರ್ಯಟನೆಯ ನಂತರ 2018ರ ಮಾರ್ಚ್ ನಲ್ಲಿ ಗೋವಾಗೆ ಮರಳಲಿದ್ದಾರೆ.
- ಈ ಪಯಣಕ್ಕೆ ನಾವಿಕ ಸಾಗರ ಪರಿಕ್ರಮ ಎಂದು ಹೆಸರಿಸಲಾಗಿದೆ. ಈ ಪರಿಕ್ರಮವು ಐದು ಚರಣಗಳಲ್ಲಿ ನಡೆಯಲಿದ್ದು, ಫ್ರೆಮಾಂಟಲ್ (ಆಸ್ಟ್ರೇಲಿಯಾ), ಲಿಟ್ಟೆಲ್ಟನ್ (ನ್ಯೂಜಿಲೆಂಡ್), ಪೋರ್ಟ್ ಸ್ಟಾನ್ಲಿ (ಫಾಕ್ಲೆಂಡ್ಸ್) ಮತ್ತು ಕೇಪ್ ಟೌನ್ (ದಕ್ಷಿಣ ಆಫ್ರಿಕಾ) ನಾಲ್ಕು ಬಂದರುಗಳಲ್ಲಿ ನಿಲುಗಡೆಯಿರುತ್ತದೆ.

### ಮೇನ್ಸ್ ಪರೀಕ್ಷೆಗಾಗಿ

**ಈ ನೌಕಾಯಾನದ ಪ್ರಮುಖ ಸಂಗತಿಗಳಾವುವು ಮತ್ತು ಅದರ ಗುರಿಗಳೇನು … ???**

- ಇದು ಮಹಿಳಾ ಸಿಬ್ಬಂದಿಯೊಬ್ಬರು ಜಗತ್ತಿನಾದ್ಯಂತದ ಸಂಚರಿಸುವ ಮೊಟ್ಟಮೊದಲ ಭಾರತೀಯ ನೌಕೆಯಾಗಿದೆ. ಈಯೋಜನೆಯು ನೌಕಾಪಡೆಯಲ್ಲಿ ಸಾಗರ ನೌಕಾಯಾನ ಚಟುವಟಿಕೆಗಳನ್ನು ಉತ್ತೇಜಿಸುವ ಕಡೆಗೆ ಗಮನ ಹರಿಸುತ್ತದೆ.
- ದೇಶದಲ್ಲಿ ಮಹಿಳಾ ಸಬಲೀಕರಣವನ್ನು ಉತ್ತೇಜಿಸುವ ಮತ್ತು ಭಾರತೀಯ ನೌಕಾಪಡೆಯಿಂದ ಸಾಗರ ನೌಕಾಯಾನವನ್ನು ಉತ್ತೇಜಿಸುವ ಗುರಿಯನ್ನು ನಾವಿಕಾ ಸಾಗರ್ ಪರಿಕ್ರಮ ಎಂಬ ಶೀರ್ಷಿಕೆಯಡಿಯಲ್ಲಿ ವಿಶೇಷ ಕಾರ್ಯಕ್ರಮ ಮಾಡಲಾಗಿದೆ.

**ಈ ವಿಶೇಷ ಕಾರ್ಯಯಾತ್ರೆ ಗುರಿಗಳು ಕೆಳಕಂಡಂತಿವೆ:**

- **ನಾರಿ (ಮಹಿಳಾ) ಶಕ್ತಿ** : ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸಲು ಮಹಿಳೆಯರಿಗೆ ಅಧಿಕಾರ ನೀಡುವ ರಾಷ್ಟ್ರೀಯ ನೀತಿಯೊಂದಿಗೆ ನಾರಿ ಶಕ್ತಿಯನ್ನು ವಿಶ್ವದ ವೇದಿಕೆಯಲ್ಲಿ ಪ್ರದರ್ಶಿಸುವ ಗುರಿ ಹೊಂದಿದೆ. ಸವಾಲಿನ ಪರಿಸರದಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಗೋಚರತೆಯನ್ನು ಹೆಚ್ಚಿಸುವ ಮೂಲಕ ಭಾರತದಲ್ಲಿನ ಮಹಿಳೆಯರ ಕಡೆಗೆ ಸಾಮಾಜಿಕ ವರ್ತನೆಗಳು ಮತ್ತು ಮನೋಭಾವವನ್ನು ಪರಿವರ್ತಿಸಲು ಸಹ ಇದು ಸಹಾಯ ಮಾಡುತ್ತದೆ.
- **ಪರಿಸರ ಮತ್ತು ಹವಾಮಾನ ಬದಲಾವಣೆ:** ಮಹಿಳೆಯರ ಜೀವನದಲ್ಲಿ ಪರಿಣಾಮ ಬೀರುವ ಪರಿಸರ ಸ್ನೇಹಿ ಸಾಂಪ್ರದಾಯಿಕವಲ್ಲದ ನವೀಕರಿಸಬಹುದಾದ ಇಂಧನ ಸಂಪನ್ಮೂಲಗಳನ್ನು ಬಳಸುವುದನ್ನು ಈ ನೌಕಾಯಾನ ಪ್ರೋತ್ಸಾಹಿಸುತ್ತದೆ. ಆ ಮೂಲಕ ಯಾತ್ರೆಯು ಮಹಿಳೆಯರ ಶಕ್ತಿಯನ್ನು ತಮ್ಮ ಜೀವನೋಪಾಯವನ್ನು ಉತ್ತಮಗೊಳಿಸಲು ಸಹಕರಿಸುತ್ತದೆ .
- **ಮೇಕ್ ಇನ್ ಇಂಡಿಯಾ** : ದೇಶೀಯವಾಗಿ ನಿರ್ಮಿಸಲಾದ ಐಎನ್ಎಸ್ವಿ ತರಿನಿ ಹಡಗಿನಲ್ಲಿ ನೌಕಾಯಾನ ಮಾಡುವ ಮೂಲಕ ಮೇಕ್ ಇನ್ ಇಂಡಿಯಾದ ಉಪಕ್ರಮವನ್ನು ತೋರಿಸಲು ಈ ಪ್ರಯಾಣದ ಇನ್ನೊಂದು ಉದ್ದೇಶವಾಗಿದೆ .
- **ಸಮುದ್ರ ಮಾಲಿನ್ಯ**: ಸಮುದ್ರಗಳಲ್ಲಿನ ಮಾಲಿನ್ಯವನ್ನು ಈ ತಂಡ ಮೇಲ್ವಿಚಾರಣೆ ಮಾಡಿ ವರದಿ ನೀಡುತ್ತಾರೆ

3 .ಪ್ರಾಜೆಕ್ಟ್ ಇನ್‌ಸೈಟ್

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ದುಬಾರಿ ಬೆಲೆ ತೆತ್ತು ಖರೀದಿಸಿದ ಐಷಾರಾಮಿ ಸರಕುಗಳ ಚಿತ್ರಗಳನ್ನು ಬಳಕೆದಾರರು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟರೆ ಕೇಂದ್ರ ತೆರಿಗೆ ಅಧಿಕಾರಿಗಳು ಅದರ ಮೇಲೆ ನಿಗಾ ವಹಿಸಲು ಪ್ರಾಜೆಕ್ಟ್ ಇನ್‌ಸೈಟ್' ಹೆಸರಿನ ಯೋಜನೆ ಜಾರಿಗೆ ತರಲು ಉದ್ದೇಶಿಸಿದೆ.
- ಕಪ್ಪುಹಣ ಪತ್ತೆಗಾಗಿ ತೆರಿಗೆ ಇಲಾಖೆಯು ಸಾಮಾಜಿಕ ಜಾಲತಾಣಗಳ ನೆರವು ಪಡೆಯಲು ನಿರ್ಧರಿಸಿದೆ. ಮುಂದಿನ ತಿಂಗಳಿನಿಂದ ತೆರಿಗೆ ಅಧಿಕಾರಿಗಳು ಈ ಉದ್ದೇಶಕ್ಕೆ ಫೇಸ್ ಬುಕ್, ಇನ್ ಸ್ಟಾ ಗ್ರಾಂ ಒಳಗೊಂಡು ಜನಪ್ರಿಯ ಸಾಮಾಜಿಕ ಜಾಲತಾಣಗಳ ಮೇಲೆ ಕಣ್ಣಿಡಲಿದ್ದಾರೆ.
- ದುಬಾರಿ ಬೆಲೆ ತೆತ್ತು ಖರೀದಿಸಿದ ಸರಕುಗಳೊಂದಿಗೆ ಛಾಯಾಚಿತ್ರ ತೆಗೆಸಿಕೊಂಡು ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವ ಗೀಳು ಇರುವವರು ಅದಕ್ಕೆ ಸಂಬಂಧಿಸಿದ ಸೂಕ್ತ ದಾಖಲೆಗಳನ್ನೂ ತಮ್ಮ ಬಳಿ ಇಟ್ಟು ಕೊಳ್ಳುವುದು ಇನ್ನು ಮುಂದೆ ಅನಿವಾರ್ಯವಾಗಲಿದೆ. ಇಲ್ಲದಿದ್ದರೆ ಕಾನೂನು ಕ್ರಮ ಎದುರಿಸಬೇಕಾಗಿ ಬರಬಹುದು.
- **ಇದರ ಮುಖ್ಯ ಉದ್ದೇಶ ಗಳು**
  - ವ್ಯಕ್ತಿಯ ಘೋಷಿತ ಆದಾಯ ಮತ್ತು ಖರ್ಚಿನ ಬಗ್ಗೆ ಇಲಾಖೆಯು ಖಚಿತ ಮಾಹಿತಿ ಪಡೆಯಬಹುದು.
  - ಇದರಿಂದ ತೆರಿಗೆ ತಪ್ಪಿಸುವ ಪ್ರವೃತ್ತಿಗೆ ಕಡಿವಾಣ ಹಾಕಬಹುದು.
  - ಕಪ್ಪುಹಣದ ಮೂಲವನ್ನೂ ಪತ್ತೆ ಮಾಡಬಹುದಾಗಿದೆ.

- ಈ ಯೋಜನೆಗಾಗಿ ತೆರಿಗೆ ಇಲಾಖೆ ಕಳೆದ ವರ್ಷವೇ ಎಲ್‌ಆ್ಯಂಡ್‌ಟಿ ಇನ್ಫೊ ಟೆಕ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಸದ್ಯ, ಈ ಯೋಜನೆಯನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ಮುಂದಿನ ತಿಂಗಳಿನಿಂದ ಜಾರಿಗೆ ಬರಲಿದೆ.

4 'ಫೈರ್ ಮತ್ತು ಫಾರ್ಗೆಟ್' ನಾಗ್ ಕ್ಷಿಪಣಿಗಳನ್ನು ಯಶಸ್ವಿಯಾಗಿ ಪರೀಕ್ಷಿಸಿದ ಡಿಆರ್‌ಡಿಒ

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

## ಪ್ರಮುಖ ಸುದ್ದಿ

- ರಾಜಸ್ತಾನದಲ್ಲಿನ ಮರಭೂಮಿ ಪ್ರದೇಶದಲ್ಲಿ 'ನಾಗ್' ಕ್ಷಿಪಣಿಯ(Anti-tank missile) ಪರೀಕ್ಷಾರ್ಥ ಪ್ರಯೋಗ ಎರಡು ಬಾರಿ ಯಶಸ್ವಿಯಾಗಿದೆ ಎಂದು ಡಿಆರ್ ಡಿಒ ಅಧಿಕಾರಿಗಳು ದೃಢಪಡಿಸಿದ್ದಾರೆ.
- ಜೂನ್, ಜುಲೈ ತಿಂಗಳಿನಲ್ಲಿ ನಡೆಸಿದ ಪರೀಕ್ಷಾರ್ಥ ಉಡಾವಣೆ ಬಳಿಕ ಈಗ ಮತ್ತೊಮ್ಮೆ ಪ್ರಯೋಗ ಯಶಸ್ವಿಯಾಗಿದೆ. ನಾಗ ಕ್ಷಿಪಣಿಯ ಯಶಸ್ವಿ ಹಾರಾಟ ದೇಶದ ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸಲಿದೆ.

### ನಾಗ್ ಕ್ಷಿಪಣಿ ಬಗ್ಗೆ

- ಶಸ್ತ್ರಸಜ್ಜಿತ ಮಿಲಿಟರಿ ವಾಹನಗಳನ್ನು ಹೊಡೆಯಲು ಮತ್ತು ನಾಶಮಾಡಲು ವಿನ್ಯಾಸಗೊಳಿಸಲಾಗಿರುವ 'ನಾಗ್' ಕ್ಷಿಪಣಿಯು 7 ಕಿ.ಮೀ ತನಕ ಗುರಿಯನ್ನು ನಿಖರವಾಗಿ ತಲುಪಬಹುದು.
- ಮೂರನೇ ತಲೆಮಾರಿನ ಆಂಟಿ ಟ್ಯಾಂಕ್ ಗೈಡೆಡ್ ಮಿಸ್ಸೈಲ್ ನಾಗ್ ನಲ್ಲಿ ಇಂಟಿಗ್ರೇಟೆಡ್ ಏವಿಯೋನಿಕ್ಸ್ ತಂತ್ರಜ್ಞಾನದೊಂದಿಗೆ ಹೆಚ್ಚು ಮುಂದುವರಿದ ಇಮೇಜಿಂಗ್ ಇನ್ಫ್ರಾರೆಡ್ ರಾಡಾರ್ (IRR) ಅನ್ನು ಅಳವಡಿಸಲಾಗಿದೆ. ಎಟಿಜಿಎಂ ನಾಗ್ ಕ್ಷಿಪಣಿಯು ವಿವಿಧ ಶ್ರೇಣಿಯ ಬೇರೆ ಬೇರೆ ಗುರಿಯನ್ನು ನಿಖರವಾಗಿ ತಲುಪಿದೆ, ಪರೀಕ್ಷೆ ಯಶಸ್ವಿಯಾಗಿದೆ.
- ಭಾರತೀಯ ಸೈನ್ಯದ ಯಾಂತ್ರೀಕೃತ ಮತ್ತು ವಾಯುಗಾಮಿ ಪಡೆಗಳನ್ನು ಬೆಂಬಲಿಸಲು ಈ ಕ್ಷಿಪಣಿಯನ್ನು ಅಭಿವೃದ್ಧಿಪಡಿಸಲಾಗಿದೆ.
- ಇದು ಆಧುನಿಕ ಮುಖ್ಯ ಯುದ್ಧ ಟ್ಯಾಂಕ್ಗಳನ್ನು ಮತ್ತು ಇತರ ತೀವ್ರವಾದ ಶಸ್ತ್ರಸಜ್ಜಿತ ಗುರಿಗಳನ್ನು ನಾಶಪಡಿಸಲು ವಿನ್ಯಾಸಗೊಳಿಸಲಾಗಿದೆ.
- ನಾಗ್ ಕ್ಷಿಪಣಿಯನ್ನು ಭೂಮಿ ಮತ್ತು ವಾಯು-ಆಧಾರಿತ ವೇದಿಕೆಗಳಿಂದ ಉಡಾಯಿಸಬಹುದು. ಹೆಲಿಕಾಪ್ಟರ್ ನಿಂದ ಉಡಾಯಿಸುವ ಕ್ಷಿಪಣಿಯನ್ನು ಹೆಲಿಕಾಪ್ಟರ್-ಎನ್ಎಜಿ (ಹೆಲಿನ್) ಎಂದು ಕರೆಯಲಾಗುತ್ತಿದ್ದು, ಧೃವ್ ಸುಧಾರಿತ ಲಘು ಹೆಲಿಕಾಪ್ಟರ್ (ಎಎಲ್ಎಚ್) ಮತ್ತು ಎಚ್ಎಎಲ್ ರುದ್ರ ಹೆಲಿಕಾಪ್ಟರ್ನಿಂದ ದಾಳಿ ನಡೆಸಬಹುದು.

**5. ಫೇಮ್ ಇಂಡಿಯಾ ಅವಧಿ ವಿಸ್ತರಣೆ**

**ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- ತೈಲ ಅಮದು ತಗ್ಗಿಸುವ ಉದ್ದೇಶದೊಂದಿಗೆ ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ತಯಾರಿಕೆ ಮತ್ತು ಬಳಕೆ ಉತ್ತೇಜಿಸಲು ಜಾರಿಗೊಳಿಸಿದ್ದ ಫೇಮ್ ಇಂಡಿಯಾ (FAME-india) ಯೋಜನೆಯನ್ನು 6 ತಿಂಗಳ ಅವಧಿಗೆ ವಿಸ್ತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

- ಮೊದಲಿಗೆ 2015 ಏಪ್ರಿಲ್ 1 ರಿಂದ 2017 ಮಾರ್ಚ್ 31 ರವರೆಗೆ 2 ವರ್ಷಗಳ ಅವಧಿಗೆ ಯೋಜನೆ ಜಾರಿಗೊಳಿಸಲಾಗಿತ್ತು.ನಂತರ 6 ತಿಂಗಳ ಅವಧಿಗೆ (ಸಪ್ಟೆಂಬರ್ ವರಗೆ ) ವಿಸ್ತರಿಸಲಾಗಿತ್ತು.ಇದೀಗ ಮತ್ತೊಂದು ಅವಧಿಗೆ ವಿಸ್ತರಿಸಲಾಗಿದೆ.

**ಫೇಮ್ ಇಂಡಿಯಾದ ಬಗ್ಗೆ**

- ನ್ಯಾಷನಲ್ ಎಲೆಕ್ಟ್ರಿಕ್ ಮೊಬಿಲಿಟಿ ಮಿಷನ್ ಪ್ಲ್ಯಾನ್ ಭಾಗವಾಗಿ,ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ತಯಾರಿಕೆ ಮತ್ತು ಶೀಘ್ರ ಅಳವಡಿಕೆಗಾಗಿ ಫೇಮ್ ಇಂಡಿಯಾ (ಫಾಸ್ಟರ್ ಅಡಾಪ್ಶನ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಆಫ್ ಹೈಬ್ರಿಡ್ ಅಂಡ್ ಎಲೆಕ್ಟ್ರಿಕ್ ವೆಹಿಕಲ್ಸ್ )ಯೋಜನೆ ಆರಂಭಿಸಲಾಗಿದೆ.
- ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ಬಳಕಯಿಂದ 2020ರ ವೇಳೆಗೆ ವರ್ಷಕ್ಕೆ 60 ಸಾವಿರ ಕೋಟಿ ರೂಪಾಯಿ ಮೌಲ್ಯದ ತೈಲ ಅಮದು ತಗ್ಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.

**6. ಕ್ಸಫೆಕೋಪಿ ಟ್ರೋಜನ್**

**ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- ಇದು ಮೊಬೈಲ್ ಫೋನ್ಗಳ ಮೂಲಕ ಹಣವನ್ನು ಕದಿಯುವ ಭಾರತದಲ್ಲಿ ಕಾಣಿಸಿಕೊಳ್ಳುತ್ತಿರುವ ಹೊಸ ಮಾಲ್ವೇರ್ ಇದು.

- ಮೊಬೈಲ್ ಪಾವತಿ ವಿಧಾನ ಜನಪ್ರಿಯವಾಗಿರುವ ದೇಶಗಳಲ್ಲಿ ಅದರ ದಾಳಿಯನ್ನು ಗುರಿಯಾಗಿಸಲಾಗಿದೆ.
- ಸುಮಾರು 40% ಮಾಲ್ವೇರ್ ನ ಗುರಿಗಳು ಭಾರತದಲ್ಲಿ ಪತ್ತೆಯಾಗಿದೆ.
- ಬಳಕೆದಾರರನ್ನು ರಕ್ಷಿಸಲು ವಿನ್ಯಾಸಗೊಳಿಸಲಾದ 'ಕ್ಯಾಪ್ಚಾ' ವ್ಯವಸ್ಥೆಗಳನ್ನು ತಂತ್ರಜ್ಞಾನವನ್ನು ಇದು ಬಳಸುತ್ತದೆ.
- ಕಳುವಾದ ಹಣದ ಬಗ್ಗೆ ಮೊಬೈಲ್ ನೆಟ್ವರ್ಕ್ ಆಪರೇಟರ್ಗಳಿಂದ ಎಚ್ಚರಿಕೆ ಪಠ್ಯ ಸಂದೇಶಗಳನ್ನು ಈ ಮಾಲ್ವೇರ್ ಅಳಿಸಬಹುದು.

**12th SEPTEMBER**

**1. ಗಂಗಾವನ್ನು ಸ್ವಚ್ಛಗೊಳಿಸಲು ಉತ್ತರಾಖಂಡದ ಹೆಚ್ಎನ್ ಬಿ ಗರ್ವಾಲ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಆಯ್ಕೆ**

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ (ಪ್ರಬಂಧ ಬರವಣಿಗೆಗಾಗಿ )**

**ಪ್ರಮುಖ ಸುದ್ದಿ**

- ಉತ್ತರಾಖಂಡ್ ಹೇಮಾವತಿ ನಂದನ್ ಬಹುಗುಣ (ಹೆಚ್ಎನ್ ಬಿ )ಗರ್ವಾಲ್ ಯುನಿವರ್ಸಿಟಿ ಗಂಗಾ ಸಂರಕ್ಷಣೆಗಾಗಿ ನಮಾಮಿ ಗಂಗೆ ಯೋಜನೆಯ ಒಪ್ಪಂದಕ್ಕೆ ಸಹಿ ಹಾಕಿದೆ.

- ಒಪ್ಪಂದದ ಪ್ರಕಾರ ನಮಾಮಿ ಗಂಗೆ ಯೋಜನೆಯಡಿಯಲ್ಲಿ, ಸಾರ್ವಜನಿಕರು ಮತ್ತು ಸಮುದಾಯ ಭಾಗವಹಿಸುವಿಕೆಗಾಗಿ ವಿಚಾರಗೋಷ್ಠಿಗಳು ಮತ್ತು ಸಮ್ಮೇಳನಗಳಂತಹ ಚಟುವಟಿಕೆಗಳನ್ನು ವಿಶ್ವವಿದ್ಯಾಲಯ ಪ್ರಾರಂಭಿಸುತ್ತದೆ.

**ಮುಖ್ಯ ಪರೀಕ್ಷೆಗಾಗಿ**

**ನಮಾಮಿ ಗಂಗೆ ಯೋಜನೆ :**

- ಮೇ 2015 ರಲ್ಲಿ ಕೇಂದ್ರ ಸರ್ಕಾರವು "ನಮಾಮಿ ಗಂಗೆ" ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ಈ ಯೋಜನೆಯಿಂದ ಗಂಗಾ ನದಿಯನ್ನು ಸಮಗ್ರವಾಗಿ ಸ್ವಚ್ಛಗೊಳಿಸಲು ಮತ್ತು ರಕ್ಷಿಸಲು ಪ್ರಯತ್ನಿಸುತ್ತದೆ.
- ಇನ್ನಿತರ ವಿಷಯಗಳ ಪೈಕಿ ಈ ಯೋಜನೆಯು ,ನೀರಿನ ಹರಿಯುವಿಕೆಯ ಸೂಕ್ತವಾದ ಜೈವಿಕ-ಪರಿಹಾರ ಮತ್ತು ನವೀನ ತಂತ್ರಜ್ಞಾನಗಳ ಬಳಕೆ ಮೂಲಕ ತೆರೆದ ಚರಂಡಿಯ ಮೂಲಕ ಮಾಲಿನ್ಯ ತಗ್ಗಿಸುವ ಮಧ್ಯಸ್ಥಿಕೆಗಳ ಮೇಲೆ ಕೇಂದ್ರೀಕರಿಸುತ್ತದೆ.
- ಈ ಯೋಜನೆಯನ್ನು ರಾಷ್ಟ್ರೀಯ ಮಿಷನ್ ಫಾರ್ ಕ್ಲೀನ್ ಗಂಗಾ (NMCG) ಮತ್ತು ಅದರ ರಾಜ್ಯ ಪ್ರತಿಷ್ಠಿತ ಸಂಸ್ಥೆಗಳು ಅಂದರೆ, ರಾಜ್ಯ ಕಾರ್ಯಕ್ರಮ ನಿರ್ವಹಣಾ ಗುಂಪುಗಳು (SPMGs) ಈ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ.

- ಅನುಷ್ಠಾನವನ್ನು ಸುಧಾರಿಸುವ ಸಲುವಾಗಿ, ಯೋಜನಾ ಮೇಲ್ವಿಚಾರಣೆಗಾಗಿ ಮೂರು ಹಂತದ ಯಾಂತ್ರಿಕತೆಯನ್ನು ಪ್ರಸ್ತಾಪಿಸಲಾಗಿದೆ ಅವುಗಳೆಂದರೆ ಎ) ರಾಷ್ಟ್ರೀಯ ಮಟ್ಟದಲ್ಲಿ ಎನ್ಎಂಸಿಜಿ ಸಹಾಯದಿಂದ ಕ್ಯಾಬಿನೆಟ್ ಕಾರ್ಯದರ್ಶಿ ನೇತೃತ್ವದ ಉನ್ನತ ಮಟ್ಟದ ಕಾರ್ಯಪಡೆ ಬಿ) ರಾಜ್ಯ ಮಟ್ಟದಲ್ಲಿ ಎಸ್ಪಿಎಂಜಿ ಸಹಾಯದಿಂದ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ರಾಜ್ಯ ಮಟ್ಟದ ಸಮಿತಿ ಮತ್ತು ಸಿ) ಜಿಲ್ಲಾ ಮಟ್ಟದ ಸಮಿತಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಧ್ಯಕ್ಷತೆ ವಹಿಸಲಿದ್ದಾರೆ.

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಸಚಿವಾಲಯಗಳು / ಏಜೆನ್ಸಿಗಳ ನಡುವಿನ ಸುಧಾರಿತ ಹೊಂದಾಣಿಕೆಯ ಕಾರ್ಯವಿಧಾನಗಳ ಮೇಲೆ ಈ ಯೋಜನೆಯು ಮಹತ್ವ ನೀಡುತ್ತದೆ

**ರೆಜುವೆನೇಷನ್ ಎಂದರೇನು?**

- ನಮಾಮಿ ಗಂಗೆ ಮಿಷನ್ ಪ್ರಕಾರ, ರೆಜುವೆನೇಷನ್ ಎಂದರೆ ನದಿಯ ಮೂಲ " ಆರೋಗ್ಯಕರ ಸ್ಥಿತಿ" ಯನ್ನು ಪುನಃಸ್ಥಾಪಿಸುವುದು ಮತ್ತು ಇದು ಮೂರು ವಿಷಯಗಳನ್ನು ಒಳಗೊಂಡಿದೆ ಅವುಗಳೆಂದರೆ ಅವಿರಲ್ ಧಾರ (ನಿರಂತರ ಹರಿವು), ನಿರ್ಮಲ್ ಧಾರ ( (ಅಶುದ್ಧ ಹರಿವು) ಮತ್ತು ಪರಿಸರ ಮತ್ತು ಭೂವೈಜ್ಞಾನಿಕ ಸಮಗ್ರತೆ.

**ಪ್ರಬಂಧ ಬರವಣಿಗೆಗಾಗಿ**

- ಮೊಘಲ್ ದೊರೆಗಳು, ಅದರಲ್ಲೂ ಅಕ್ಬರ್ ಅಂತೂ ಎಲ್ಲಿಗೆ ಹೋದರೂ ತನ್ನೊಂದಿಗೆ ಗಂಗಾನದಿ ನೀರನ್ನೇ ಬಳಸುತ್ತಿದ್ದನಂತೆ. ಇನ್ನು ಕೋಲ್ಕೊತಾದಿಂದ ಲಂಡನ್‌ಗೆ ತೆರಳುವಾಗ ಹಡಗುಗಳಲ್ಲಿ ಗಂಗಾನದಿ ನೀರನ್ನು ನಾವಿಕರು ತುಂಬಿಕೊಂಡು ಹೋಗುತ್ತಿದ್ದರು. ಅನೇಕ ದಿನ ಸಂಗ್ರಹಿಸಿದರೂ ಅದು ಕೆಡುತ್ತಿರಲಿಲ್ಲ.
- ಇತಿಹಾಸದ ಪುಟಗಳನ್ನು ಇನ್ನಷ್ಟು ತೆರೆದು ನೋಡುವುದಾದರೆ, ಎರಡೂವರೆ ಸಾವಿರ ವರ್ಷಗಳ ಹಿಂದೆ ಪೈಥಾಗೊರಸ್ ರೇಖಾಗಣಿತ ಅಧ್ಯಯನ ಮಾಡಿದ್ದು ಗಂಗಾ ದಡದಲ್ಲಿಯೇ ಎಂಬ ಅಂಶ ಕಾಣುತ್ತದೆ. ಭಾರತೀಯರಷ್ಟೇ ಅಲ್ಲ , ವಿದೇಶಿಯರಿಗೂ ಗಂಗಾ ಎಂದರೆ ಅದೇನೋ ಗೌರವ. ಭಾರತಕ್ಕೆ ಹೋಗಿ ಬರುವವರಿಂದ ಗಂಗಾಜಲ ಮತ್ತು ಮಣ್ಣನ್ನು ಅಲ್ಲಿನವರು ತರಿಸಿಕೊಳ್ಳುವುದೂ ಉಂಟು.

- ಭಾರತೀಯರ ಧಾರ್ಮಿಕ ಶ್ರದ್ಧೆಯ ಕೇಂದ್ರವಾಗಿ ರುವ ಗಂಗಾ ನದಿಗೆ ಮರುಹುಟ್ಟು ನೀಡುವ ತನ್ನ ಹೆಬ್ಬಯಕೆಯನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಪ್ರಯತ್ನ ನಡೆಸುತ್ತಿದೆ. ಮಹತ್ವಾ ಕಾಂಕ್ಷೆಯ 'ನಮಾಮಿ ಗಂಗೆ' ಯೋಜನೆಯನ್ನು ಸರ್ಕಾರ

ಸಿದ್ಧಪಡಿಸಿದ್ದು, ಗಂಗಾ ನದಿ ಹರಿದು ಸಾಗುವ ಐದು ರಾಜ್ಯ(ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ)ಗಳ ಸರ್ಕಾರಗಳು ಈ ಬೃಹತ್ ಯೋಜನೆಯಲ್ಲಿ ಭಾಗಿಯಾಗುತ್ತಿವೆ.

**ಗಂಗೆಯ ಹಾದಿ**

- ಗಂಗೆಯಲ್ಲಿ ಸೇರುವ ನದಿಗಳಿವುಫ ಯಮುನಾ, ರಾಮಗಂಗಾ, ಗೋಮತಿ, ಫಘರ, ಗಂಡಕ, ದಾಮೋದರ, ಕೋಸಿ, ಕಾಳಿ, ಚಂಬಲ್, ಬೆಟ್ವಾ, ಕೆನ್, ಟನ್ಸ್, ಸೋನೆ.ಗಂಗಾ ನದಿ ಹರಿದು ಹೋಗುವ ಪಂಚರಾಜ್ಯಗಳುಫ ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ.

**ರಾಷ್ಟ್ರೀಯ ನದಿ**

- ಗಂಗಾ ನದಿ ಪುನಶ್ಚೇತನದ ಸಲುವಾಗಿ 1986ರ ಪರಿಸರ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 3(3) ಅಡಿ ಕೇಂದ್ರ ಸರ್ಕಾರ 2009ರ ಫಬ್ರವರಿ 20ರಂದು ರಾಷ್ಟ್ರೀಯ ಗಂಗಾ ನದಿ ಜಲಾನಯನ ಪ್ರಾಧಿಕಾರ(ಎನ್‌ಜಿಆರ್‌ಬಿಎ) ರಚಿಸಿತು. ಇದೇ ಕಾಯ್ದೆ ಅಡಿ ಗಂಗೆಯನ್ನು 'ರಾಷ್ಟ್ರೀಯ ನದಿ' ಎಂದು ಘೋಷಿಸಲಾಗಿದೆ. ಈ ಪ್ರಾಧಿಕಾರ ಯಾವುದೇ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿಲ್ಲ.
- ಎಂಭತ್ತರ ದಶಕದಲ್ಲೇ ಎರಡು ಹಂತದ ಗಂಗಾ ಕ್ರಿಯಾಯೋಜನೆ ರೂಪಿಸಿದ್ದರೂ ಆದರೆ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ ವಿಶ್ವ ಬ್ಯಾಂಕ್ ಕೂಡಾ ಇದೊಂದು ಹೈ ರಿಸ್ಕ್ ಪ್ರಾಜೆಕ್ಟ್ ಎಂದು ಎಚ್ಚರಿಸಿರುವಾಗ ಗಂಗಾ ಪುನಶ್ಚೇತನ ಕಾರ್ಯ ಸುಲಭದ ವಿಷಯವೇ ಎಂಬ ವಿಚಾರದ ಚರ್ಚೆಗೆ ಇನ್ನೂ ವಿರಾಮ ಸಿಕ್ಕಿಲ್ಲ.

**ಏನಿದು ಗಂಗಾ ಆಕ್ಷನ್ ಪ್ಲ್ಯಾನ್...?**

- ಗಂಗಾ ನದಿಯ ಮಾಲಿನ್ಯ ಮಟ್ಟ ತಗ್ಗಿಸುವ ಸಲುವಾಗಿ 80ರ ದಶಕದಲ್ಲಿ ಎರಡು ಹಂತದ ಯೋಜನೆ ಸಿದ್ಧಪಡಿಸಲಾಗಿತ್ತು. ರಾಜೀವ್ ಗಾಂಧಿ ಪ್ರಧಾನಮಂತ್ರಿಯಾಗಿದ್ದಾಗ ಗಂಗಾ

ನದಿ ಪ್ರಾಧಿಕಾರ ರಚಿಸಲಾಗಿತ್ತು. ಇದಕ್ಕೆ ಗಂಗಾ ಆಕ್ಷನ್ ಪ್ಲ್ಯಾನ್ ಎಂದು ಹೆಸರಿಸಿದ್ದು, 1986ರ ಏಪ್ರಿಲ್‌ನಲ್ಲಿ ರಾಜೀವ್ ಗಾಂಧಿಯವರೇ ಇದಕ್ಕೆ ಚಾಲನೆ ನೀಡಿದ್ದರು.

- ಮೊದಲ ಹಂತದ ಯೋಜನೆ 1993ರಲ್ಲಿ ವಾರಾಣಸಿ ಭಾಗದಲ್ಲಿ ಮುಕ್ತಾಯವಾಗಿದೆ. ಆದರೆ, ಅದರಿಂದ ಪ್ರಯೋಜನವಾದಂತಿಲ್ಲ. ವಾಸ್ತವದಲ್ಲಿ ಗಂಗಾ ಇನ್ನಷ್ಟು ಮಲಿನಗೊಂಡು, ನಿರ್ಜೀವವಾಗಿತ್ತು. ಸಮಸ್ಯೆಗಳನ್ನು ಅರಿಯದೇ ಯೋಜನೆ ರೂಪಿಸಿದ್ದು ಮೊದಲ ಹಂತದ ವೈಫಲ್ಯಕ್ಕೆ ಮುಖ್ಯ ಕಾರಣ ಎಂಬುದು ವಿಶ್ಲೇಷಣೆಯಲ್ಲಿ ಗೊತ್ತಾಯಿತು.
- ಎರಡನೇ ಹಂತದ ಯೋಜನೆ 1993 ರ ಅವಧಿಯಲ್ಲಿ ಜಾರಿಗೊಂಡಿದ್ದು, ಐದು ರಾಜ್ಯಗಳಲ್ಲಿ ಅನುಷ್ಠಾನಗೊಂಡಿದೆ. ಈ ಎರಡು ಹಂತಗಳ ಯೋಜನೆಗೆ ಸರ್ಕಾರ ಸುಮಾರು 20 ಸಾವಿರ ಕೋಟಿ ರೂ.ಗಳನ್ನು ಮೀಸಲಿಟ್ಟಿತ್ತು ಎಂದು ಮೂಲಗಳು ತಿಳಿಸಿವೆ.
- ಗಂಗಾ ಆಕ್ಷನ್ ಪ್ಲಾನ್ ಅನುಷ್ಠಾನದ ಹಿನ್ನಡೆಗೆ ರಾಜಕೀಯ ಇಚ್ಛಾಶಕ್ತಿಯ ಕೊರತೆ ಪ್ರಮುಖ ಕಾರಣ. ಗಂಗಾ ನದಿ ಐದು ರಾಜ್ಯಗಳಲ್ಲಿ ಹರಿಯುತ್ತಿದ್ದು, ಅಲ್ಲೆಲ್ಲ ಬೇರೆ ಬೇರೆ ಪಕ್ಷಗಳ ಸರ್ಕಾರಗಳಿವೆ. ಆಡಳಿತಶಾಹಿಯ ವಿಳಂಬ ನೀತಿಯೂ ಗಂಗೆಯ ಸ್ವಚ್ಛತೆ ನಡೆಯದಿರಲು ಕಾರಣ. 1995ರಲ್ಲಿ ರಾಷ್ಟ್ರೀಯ ನದಿ ಸಂರಕ್ಷಣಾ ಪ್ರಾಧಿಕಾರ ರಚನೆಯಾಗಿದ್ದು, 2003ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ಒಂದು ಸಭೆ ನಡೆಸಿದ್ದರು. ಅದು ಬಿಟ್ಟರೆ ಕಳೆದ ಹತ್ತು ವರ್ಷಗಳಲ್ಲಿ ಗಂಗಾ ಸ್ವಚ್ಛತೆ ವಿಚಾರದಲ್ಲಿ ಪ್ರಾಧಿಕಾರದ ಒಂದು ಸಭೆಯೂ ನಡೆದಿರಲಿಲ್ಲ.

IAS/KAS ನಮ್ಮ ಐಎಎಸ್ ಅಕಾಡೆಮಿ ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಗಂಗೆಯ ಹರಿವು ಮತ್ತು ಸ್ಥಳೀಯ ಸಮಸ್ಯೆ:**

- ಗಂಗಾ ನದಿ ಹಾದು ಹೋಗುವ ನಗರಗಳಲ್ಲಿ ಹರಿದ್ವಾರ, ಕಾನ್ಪುರ, ಅಲಹಾಬಾದ್ ಹಾಗೂ ವಾರಾಣಸಿ ಪ್ರಮುಖವಾದವು. ಇಲ್ಲಿ ಸ್ಥಳೀಯ ಸಮಸ್ಯೆಗಳೂ ಹೆಚ್ಚು. 2011ರ ಅಂಕಿಅಂಶದ ಪ್ರಕಾರ, ಹರಿದ್ವಾರದಲ್ಲಿ 12 ಪಟ್ಟಣ ಪಂಚಾಯಿತಿಗಳಿಂದ ವಾರ್ಷಿಕ ಒಟ್ಟು 89 ದಶಲಕ್ಷ ಲೀಟರ್‌ನಷ್ಟು ಅಮೇಧ್ಯವೂ ಸೇರಿದಂತೆ ಇತರೆ ಕಲ್ಮಶ ನದಿ ನೀರಿಗೆ ಸೇರುತ್ತದೆ. ಕಾನ್ಪುರದಲ್ಲಿ 476 ದಶಲಕ್ಷ ಲೀಟರ್‌ಗಳಷ್ಟು ಕಲ್ಮಶ, ಅಲಹಾಬಾದ್‌ನಲ್ಲಿ 58 ಚರಂಡಿಗಳ ಮೂಲಕ ಕೈಗಾರಿಕಾ ತ್ಯಾಜ್ಯಗಳು ನದಿಗೆ ಸೇರ್ಪಡೆಯಾಗುತ್ತಿವೆ.

**ಯೋಜನೆಯ ಐದು ಹೆಜ್ಜೆಗಳು**

- ಘಾಟ್ ಹಾಗೂ ಸ್ಮಶಾನಗಳ ಆಧುನೀಕರಣ ಹಾಗೂ ಮರುಅಭಿವೃದ್ಧಿ, ಕೊಳಚೆ ನೀರಿನ ಸಂಸ್ಕರಣೆ, ಮೂಲಸೌಕರ್ಯ, ಅರಣ್ಯ ನಿರ್ಮಾಣ, ಔಷಧಿಯ ಸಸ್ಯಗಳನ್ನು ನೆಡುವುದು, ಪೈಲಟ್ ಕಾಲುವೆ ಪ್ರಾಜೆಕ್ಟ್, ತಡೆ ಕಾಲುವೆ ಪ್ರಾಜೆಕ್ಟ್, ನದಿಯ ಕಸ ಸಂಗ್ರಹಿಸುವ ಯಂತ್ರಗಳು, ಪರಿಸರವೈವಿಧ್ಯ ಕಾಪಾಡುವ ಯೋಜನೆಗಳು ಇದರಲ್ಲಿವೆ.

**ಜಗದ ನದಿಗಳ ಕತೆ-ವ್ಯಥೆ**

- ನಮ್ಮ ಗಂಗಾನದಿಯಂತೆಯೇ ವಿಶ್ವದ ಅನೇಕ ನದಿಗಳೂ ಮಲಿನಗೊಂಡಿವೆ. ಅಮೆರಿಕದ ಮಿಸಿಸಿಪ್ಪಿ ನದಿ ಈಗ ಉತ್ತರ ಅಮೆರಿಕದ ದೊಡ್ಡ ಗಟಾರವಾಗಿದೆ.
- ಚೀನಾದ ನಾಗರಿಕತೆಯ ತೊಟ್ಟಿಲು ಎಂದೇ ಹೇಳಲಾಗಿದ್ದ ಯೆಲ್ಲೋ ನದಿ ಕುಡಿಯುವ ನೀರು ಮತ್ತು ನೀರಾವರಿಗೆ ಸೆಲೆಯಾಗಿದ್ದ ನದಿ ಈಗ ವಿಷಕನ್ಯೆಯಾಗಿದ್ದಾಳೆ.
- ವಿಶ್ವಸಂಸ್ಥೆ ವರದಿ ಪ್ರಕಾರ (1996), 4.29 ಶತಕೋಟಿ ಟನ್ ಕೈಗಾರಿಕಾ ತ್ಯಾಜ್ಯ ಮತ್ತು ಹೊಲಸು ಈ ನದಿಯನ್ನು ಸೇರುತ್ತಿದೆ.
- ಲಂಡನ್‌ನಲ್ಲಿ ಹರಿಯುವ ಥೇಮ್ಸ್ ನದಿ ಗಂಗಾನದಿಯನ್ನೂ ಮೀರಿಸುವಷ್ಟು ಕಲುಷಿತವಾಗಿತ್ತು. ಇದು ಒಂದು ಕಾಲಕ್ಕೆತ್ಯಾಜ್ಯ ವಿಸರ್ಜನೆಯ ಚರಂಡಿಯಂತಾಗಿತ್ತು. ಅಲ್ಲಿನವರು ಮನಸ್ಸು ಮಾಡಿ ಥೇಮ್ಸ್ ನದಿಯನ್ನು ಉಳಿಸಿಕೊಂಡರು.
- 1964ರಲ್ಲಿ ಆರಂಭಗೊಂಡ ಶುದ್ಧೀಕರಣ ಪ್ರಕ್ರಿಯೆ 1970ಕ್ಕೆಲ್ಲ ಪೂರ್ಣಗೊಂಡಿತ್ತು. ಥೇಮ್ಸ್ ದಂಡೆಯಲ್ಲಿ ಪ್ರವಾಸೋದ್ಯಮ, ನೌಕಾಯಾನ, ಜಲಕ್ರೀಡೆ ಮತ್ತಿತರ ಯೋಜನೆಗಳಿಂದಾಗಿ ಆರ್ಥಿಕವಾಗಿಯೂ ಯಶಸ್ಸನ್ನೂ ಕಾಣಲಾಗಿದೆ.

## 2. ಕುಶಲಕರ್ಮಿಗಳಿಗೆ GST ಇಲ್ಲ

**ಪ್ರಾಮುಖ್ಯತೆ ಪ್ರಿಲಿಮ್ಸ್ ಪರೀಕ್ಷೆಗಾಗಿ**

- ವಾರ್ಷಿಕವಾಗಿ 20 ಲಕ್ಷಕ್ಕಿಂತ ಕಡಿಮೆ ವಹಿವಾಟು ಹೊಂದಿರುವ ಕುಶಲಕರ್ಮಿಗಳು ಹಾಗೂ ಜನಪದ ಕಲಾವಿದರಿಗೆ GST ಮಂಡಳಿಯು ಸರಕು ಮತ್ತು ಸೇವಾ ತೆರಿಗೆಯಿಂದ ವಿನಾಯಿತಿ ನೀಡಿದೆ.
- ಹೈದರಾಬಾದ್ ನಲ್ಲಿ ನಡೆದ GSTಯ 21 ನೇ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಮಣ್ಣಿನ ವಿಗ್ರಹಗಳಿಗೂ ತೆರಿಗೆ ಅನ್ವಯಿಸುವುದಿಲ್ಲ ಎನ್ನಲಾಗಿದೆ. ಇದರೊಂದಿಗೆ, ಜುಲೈ ತಿಂಗಳಿನ GST ರಿಟರ್ನ್ಸ್ ಸಲ್ಲಿಸಲು ಅಕ್ಟೋಬರ್ 20ರ ವರೆಗೆ ಕಾಲಾವಕಾಶ ನೀಡಲಾಗಿದೆ.
- ಸರ್ಕಾರಿ ಕೆಲಸಗಳ ಗುತ್ತಿಗೆಗಳ ಮೇಲೆ ವಿಧಿಸಲಾಗಿದ್ದ ತೆರಿಗೆಯನ್ನು ಶೇ. 18ರಿಂದ ಶೇ. 19ಕ್ಕೆ ಇಳಿಸಲಾಗಿದೆ.
- ಕಾರುಗಳ ಮೇಲಿನ ಸೆಸ್ ನ್ನು ಶೇ. 2 ರಷ್ಟು, ದೊಡ್ಡ ಕಾರುಗಳ ಮೇಲೆ ಶೇ. 5 ರಷ್ಟು ಹಾಗೂ ಎಸಯುವಿಗಳ ಮೇಲಿನ ಸೆಸ್ ನ್ನು ಶೇ.7ಕ್ಕೆ ಏರಿಸಲಾಗಿದೆ. GSTಯ ಕೆಲಸವನ್ನು ಸರಾಗಗೊಳಿಸಲು ಮಂತ್ರಿಗಳ ಸಮಿತಿ ನಿರ್ಧರಿಸಲಾಗಿದೆ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 3. ಆಹಾರ ತಪಾಸಣೆ ಗಾಗಿ ಆನ್ ಲೈನ್ ಪ್ಲಾಟ್ಫಾರ್ಮ್ ಪ್ರಾರಂಭಿಸಿದ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

ಆಹಾರ ಸುರಕ್ಷತೆ ತಪಾಸಣೆ ಮತ್ತು ಮಾದರಿಗಳಲ್ಲಿ ಪಾರದರ್ಶಕತೆ ತರಲು, ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (FSSAI) 'FoSCoRIS' ಎಂಬ ರಾಷ್ಟ್ರವ್ಯಾಪಿ ಆನ್ ಲೈನ್ ವೇದಿಕೆ ಅನ್ನು ಒದಗಿಸಿದೆ ಮತ್ತು ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ರಾಜ್ಯಗಳನ್ನು

ಸೂಚಿಸಿದೆ. ಇದು ವ್ಯತಿರಿಕ್ತತೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ ಮತ್ತು ಇದಕ್ಕೆ ಆಹಾರ ಸುರಕ್ಷತೆ ಅಧಿಕಾರಿಗಳು ಜವಾಬ್ದಾರಿಯುತರನ್ನಾಗಿ ಮಾಡುತ್ತದೆ.

**ಮುಖ್ಯ ಪರೀಕ್ಷೆಗಾಗಿ**

- ಸರ್ಕಾರಿ ನಿಯಮಗಳ ಪ್ರಕಾರ ಆಹಾರ ವ್ಯವಹಾರಗಳಲ್ಲಿ ಆಹಾರ ಸುರಕ್ಷತೆ ಮತ್ತು ನೈರ್ಮಲ್ಯ ಮಾನದಂಡಗಳ ಅನುಸರಣೆಗೆ ಈ ವೆಬ್-ಆಧಾರಿತ 'FoSCoRIS' ವ್ಯವಸ್ಥೆಯು ಸಹಾಯ ಮಾಡುತ್ತದೆ.
- ಈ ಹೊಸ ವ್ಯವಸ್ಥೆಯು ಎಲ್ಲ ಪ್ರಮುಖ ಪಾಲುದಾರರ .ಆಹಾರ ಸುರಕ್ಷತೆ ಅಧಿಕಾರಿಗಳು (FSOs), ಗೊತ್ತುಪಡಿಸಿದ ಅಧಿಕಾರಿಗಳನ್ನು , ರಾಜ್ಯ ಆಹಾರ ಸುರಕ್ಷತೆ ಕಮಿಷನರ್ ಗಳನ್ನು ಒಟ್ಟಿಗೆ ಸೇರಿಸುತ್ತದೆ ಹಾಗು ರಾಷ್ಟ್ರವ್ಯಾಪಿ ಐಟಿ ಪ್ಲಾಟ್ಫಾರ್ಮ್ ಮತ್ತು ತಪಾಸಣೆ, ಮಾದರಿ ಮತ್ತು ಪರೀಕ್ಷಾ ಫಲಿತಾಂಶದ ಡೇಟಾಗೆ ಸಂಬಂಧಿಸಿದ ಮಾಹಿತಿಯು ಎಲ್ಲಾ ಅಧಿಕಾರಿಗಳಿಂದ ಹಂಚಿಕೊಳ್ಳುತ್ತಾರೆ .
- ಈ ವ್ಯವಸ್ಥೆಯು FSSAIಗೆ ನೈಜ ಸಮಯದ ಆಧಾರದ ಮೇಲೆ ಸ್ಪಷ್ಟವಾದ ಚಿತ್ರಣವನ್ನು ನೀಡುತ್ತದೆ ಮತ್ತು ಯಾವುದೇ ವ್ಯತ್ಯಾಸ ಬರದಹಾಗೆ ಸಹಾಯ ಮಾಡುತ್ತದೆ. ಈ ವ್ಯವಸ್ಥೆಯು ಮಾದರಿ ಸಂಗ್ರಹದ ಪ್ರಕ್ರಿಯೆಯನ್ನು ಸರಾಗಗೊಳಿಸುವ ಮತ್ತು ಅದನ್ನು ಪಾರದರ್ಶಕವಾಗಿ ಪತ್ತೆಹಚ್ಚುವಂತೆ ಮಾಡುತ್ತದೆ ಮತ್ತು ಅನುಸರಣೆಗಳ ಗುಣಮಟ್ಟವನ್ನು ನಿಯಂತ್ರಿಸುತ್ತದೆ.

- ಈ ಹೊಸ ವ್ಯವಸ್ಥೆಯನ್ನು ಅಳವಡಿಸಲು FSOಗಳಿಗೆ ಇಂಟರ್ನೆಟ್ ಸಂಪರ್ಕದೊಂದಿಗೆ ಕೈಯಲ್ಲಿ ಹಿಡಿಯುವ ಸಾಧನದ ಅಗತ್ಯವಿರುತ್ತದೆ. FSAI ಈಗಾಗಲೇ ರಾಜ್ಯಗಳಳಿಗೆ FSOಗಳಿಗೆ ಒದಗಿಸಿರುವ ವ್ಯವಸ್ಥೆಯನ್ನು ನೇರವಾಗಿ ಸಿಸ್ಟಮ್ಗೆ ಅಳವಡಿಸಬೇಕೆಂದು ತಿಳಿಸಿದೆ

**BACK TO BASICS**

**ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಬಗ್ಗೆ:**

- ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್ಎಸ್ಎಸ್ಎಐ) ವು ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯಿದೆ 2006 ರ ಅಡಿಯಲ್ಲಿ ಸ್ಥಾಪಿಸಲಾಗಿದೆ.
- ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಂಗಸಂಸ್ಥೆಯಾಗಿದೆ.ಸಾರ್ವಜನಿಕ ಆರೋಗ್ಯದ ಸಂರಕ್ಷಣೆ ಮತ್ತು ಉತ್ತೇಜನಕ್ಕಾಗಿ ಆಹಾರ ಸುರಕ್ಷತೆಯ ನಿಯಂತ್ರಣ ಹಾಗೂ ಮೇಲ್ವಿಚಾರಣೆ ಕಾರ್ಯ ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಮುಖ್ಯ ಕೆಲಸವಾಗಿದೆ.
- ಆಹಾರದ ಸಂಗ್ರಹಣೆಯ ಮೇಲೆ ವಿಜ್ಞಾನ ಆಧಾರಿತ ಮಾನದಂಡಗಳನ್ನು ಹಾಕಲು ಮತ್ತು ಮಾನವ ಬಳಕೆಗಾಗಿ ಸುರಕ್ಷಿತ ಮತ್ತು ಆರೋಗ್ಯಕರ ಆಹಾರದ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಅವುಗಳ ತಯಾರಿಕೆ, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಆಮದುಗಳನ್ನು ನಿಯಂತ್ರಿಸಲು ಇದನ್ನು ರಚಿಸಲಾಗಿದೆ.
- ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರಕ್ಕೆ ಅಧಿಕಾರೇತರ ಅಧ್ಯಕ್ಷರಿದ್ದು, ಇವರನ್ನು ಕೇಂದ್ರ ಸರ್ಕಾರ ನೇಮಕ ಮಾಡುತ್ತದೆ.
- ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ. ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಪ್ರಾದೇಶಿಕ ಕಚೇರಿಗಳು **ದೆಹಲಿ, ಛತ್ತೀಸ್‌ಗಢ, ಲಖನೌ, ಗುವಾಹತಿ, ಮುಂಬೈ, ಕೊಲ್ಕತ್ತಾ, ಕೊಚಿನ್ ಮತ್ತು ಚೆನ್ನೈ** ನಗರಗಳಲ್ಲಿವೆ.

## 4. UAEಯಲ್ಲಿ ಭಾರತೀಯರಿಗೆ ಸಲಹಾ ಕೇಂದ್ರ

**ಪ್ರಾಮುಖ್ಯತೆ ಪ್ರಿಲಿಮ್ಸ್ ಪರೀಕ್ಷೆಗಾಗಿ**

- ಯುಎಇಯಲ್ಲಿ ಭಾರತೀಯರ ಹಕ್ಕುಗಳನ್ನು ರಕ್ಷಿಸಲು ಹಾಗೂ ಅದರ ಬಗ್ಗೆ ಜಾಗೃತಿ ಮೂಡಿಸಲು ಶಾರ್ಜಾದಲ್ಲಿ ಇಂಡಿಯನ್ ವರ್ಕರ್ಸ್ ರಿಸೋರ್ಸ್ ಸೆಂಟರ್ ನ (ಐಡಬ್ಲ್ಯೂಆರ್ ಸಿ) ಎರಡನೇ ಕಚೇರಿಗೆ ಚಾಲನೆ ನೀಡಲಾಗಿದೆ.

- ಯುಎಇಗೆ ಭಾರತೀಯ ರಾಯಭಾರಿಯಾಗಿರುವ ನವದೀಪ್ ಸಿಂಗ್ ಸೂರಿ ಈ ಕೇಂದ್ರವನ್ನು ಉದ್ಘಾಟಿಸಿದರು. ಮೊದಲ ಐಡಬ್ಲ್ಯೂಆರ್ ಸಿ ದುಬೈನಲ್ಲಿ 2010 ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇದು 24 ಗಂಟೆಗಳ ಹೆಲ್ಪ್ ಲೈನ್ ಹೊಂದಿದ್ದು, ಯುಎಇಯಲ್ಲಿ ತೊಂದರೆ ಅನುಭವಿಸುತ್ತಿರುವ ಭಾರತೀಯರಿಗೆ ನೆರವು ನೀಡುತ್ತದೆ.
- ವೇತನ, ನಕಲಿ ಉದ್ಯೋಗ ವಿಸಾಗಳು, ಕೆಲಸಕ್ಕೆ ಸಂಬಂಧಿಸಿದ ತೊಂದರೆ, ಮದುವೆಯ ನೋಂದಣಿ ಸೇರಿದಂತೆ ವಿವಿಧ ವಿಚಾರಣೆಗಳಿಗೆ ಇಲ್ಲಿ ಸಲಹೆ ನೀಡಲಾಗುತ್ತದೆ.

**5. ಮೇಲಕಾ, ಮಲೇಶ್ಯಾದಲ್ಲೂ ಉಜಾಲಾ ಯೋಜನೆ**

**ಪ್ರಾಮುಖ್ಯತೆ ಪ್ರಿಲಿಮ್ಸ್ ಪರೀಕ್ಷೆಗಾಗಿ**

- ಭಾರತದಲ್ಲಿ ಉಜಾಲಾ ( ಉನ್ನತ ಜ್ಯೋತಿ ಬೈ ಅಫರ್ಡೆಬಲ್ ಲೈಟಿಂಗ್ ಫಾರ್ ಆಲ್ ) ಯೋಜನೆಗೆ ಉತ್ತಮ ಪ್ರತಿಕ್ರಿಯೆ ದೊರಕಿರುವ ಹಿನ್ನಲೆಯಲ್ಲಿ, ಇದರ ನೇತೃತ್ವ ವಹಿಸಿರುವ ಭಾರತದ ಇಇಎಸಎಲ್ ನ ( ಎನರ್ಜಿ ಎಫಿಷಿಯನ್ಸಿ ಸರ್ವಿಸಸ್ ಲಿಮಿಟೆಡ್ ) ಸಹಕಾರದೊಂದಿಗೆ ಮಲೇಷ್ಯಾದ ಮೇಲಕಾ ರಾಜ್ಯದಲ್ಲೂ ಈ ಯೋಜನೆ ಜಾರಿಗೊಳಿಸಲಾಗಿದೆ.
- 'ಭಾರತದಲ್ಲಿ ಯಶಸ್ವಿಯಾಗಿರುವ ಇಂಧನ ದಕ್ಷತೆಯ ಈ ಯೋಜನೆ ಇತರೆ ದೇಶಗಳಿಗೆ ಮಾದರಿಯಾಗಿದ್ದು, ಅಂತಹದೇ ಲಾಭ ಪಡೆಯಲು ಉಜಾಲಾವನ್ನು ಪರಿಚಯಿಸುತ್ತಿದ್ದೇವೆ'

**13th SEPTEMBER**

## 1. ಕೈಗೆಟುಕುವ ಬೆಲೆಯಲ್ಲಿ ಇಂಧನ ..??

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖಸುದ್ದಿ

- ಅಂತರರಾಷ್ಟ್ರೀಯ ಕಚ್ಚಾ ತೈಲ ಬೆಲೆಗಳು ಕುಸಿಯುತ್ತಿದ್ದರು , ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ದಾಖಲೆಯ ಹೆಚ್ಚಿನ ಮಟ್ಟಕ್ಕೆ ಏರುತ್ತಿವೆ.ಇತ್ತೀಚೆಗೆ ಸರಕಾರ ಪರಿಚಯಿಸಿದ 'ದೈನಂದಿನ ಇಂಧನ ಬೆಲೆ ಪರಿಷ್ಕರಣೆ' ನೀತಿಯು ಗ್ರಾಹಕರಿಗೆ ಲಾಭದಾಯಕವಾಗಿಲ್ಲ.
- ಇದರ ಹಿಂದಿನ ಅಂಶಗಳಿಗೆ ಸರ್ಕಾರವು ಗಮನ ಹರಿಸಬೇಕು ಮತ್ತು ಗ್ರಾಹಕರಿಗೆ ಪೆಟ್ರೋಲ್ ಮತ್ತು ಡೀಸೆಲ್ ಕೈಗೆಟುಕುವ ಬೆಲೆಯಲ್ಲಿ ಸಿಗುವ ಹಾಗೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ

ಮುಖ್ಯ ಪರೀಕ್ಷೆಗಾಗಿ

ಏನಿದು ದಿನನಿತ್ಯದ ಬೆಲೆ ಪರಿಷ್ಕರಣ ನೀತಿ

- ಇದರ ಅಡಿಯಲ್ಲಿ, ಪೆಟ್ರೋಲ್ ಮತ್ತು ಡೀಸೆಲ್ಗಳ ಚಿಲ್ಲರೆ ಮಾರಾಟ ಬೆಲೆಗಳು ದಿನನಿತ್ಯದ ಅಂತರರಾಷ್ಟ್ರೀಯ ಬೆಲೆ ಮತ್ತು ಕರೆನ್ಸಿ ವಿನಿಮಯ ದರದ ಆಧಾರದ ಮೇಲೆ ಪರಿಷ್ಕರಿಸಲ್ಪಡುತ್ತವೆ
- ಅಂತರರಾಷ್ಟ್ರೀಯ ಬೆಲೆಯಲ್ಲಿ ಕುಸಿಯುವ ಪ್ರಯೋಜನವನ್ನು ಕೊನೆಗೆ ಗ್ರಾಹಕರಿಗೆ ತಲುಪಿಸಿ ಹೊರೆಯನ್ನು ಕಡಿಮೆ ಮಾಡುವುದು ಎಂದು ಎಂದು ಸರ್ಕಾರ ವಾದಿಸಿತು.ಆದಾಗ್ಯೂ, ಕ್ರಿಯಾತ್ಮಕ ಇಂಧನ ಬೆಲೆಗಳ ಪರಿಚಯದ ಹೊರತಾಗಿಯೂ, ಪೆಟ್ರೋಲ್ ಮತ್ತು ಡೀಸೆಲ್ಗಳ ಬೆಲೆ ಏರಿಕೆಯಾಗುತ್ತಿದೆ.

**ಈ ಅಸಂಗತತೆಗೆ ಕಾರಣಗಳು ಯಾವುವು?**

- ತೆರಿಗೆಗಳು - ಕ್ರಿಯಾತ್ಮಕ ಇಂಧನ ಬೆಲೆಗಳು ಮಾಡುವ ಅನುಕೂಲಕರವಾದ ಪರಿಣಾಮವು ಸರ್ಕಾರದ ವಿಧಿಸಿದ ತೆರಿಗೆಗಳ ಪ್ರಭಾವದಿಂದ ಮೀರಿಸುತ್ತಿದೆ.
- ಕಳೆದ ಎರಡು ವರ್ಷಗಳಲ್ಲಿ ಪೆಟ್ರೋಲ್ ಮೇಲಿನ ಕೇಂದ್ರ ಎಕ್ಸೈಸ್ ತೆರಿಗೆ 127 ಪ್ರತಿಶತದಷ್ಟು ಹೆಚ್ಚಿದೆ ಮತ್ತು ಡೀಸೆಲ್ನಲ್ಲಿ 387 ರಷ್ಟು ಹೆಚ್ಚಾಗಿದೆ.

- ಇದಕ್ಕೆ ಹೆಚ್ಚುವರಿಯಾಗಿ ಇಂಧನದ ಮೇಲೆ ಸೇರ್ಪಡೆಗೊಳ್ಳುವ ಇತರ ರಾಜ್ಯ ಲೆವಿಗಳು ಪ್ರಮುಖವಾಗಿ, ಪೆಟ್ರೋಲ್ಗೆ ಭಾರತೀಯ ಗ್ರಾಹಕನು ನೀಡುವ ಅರ್ಧದಷ್ಟು ಬೆಲೆಗಳು ಈ ತೆರಿಗೆಗಳೆಯಾಗಿವೆ.
- GST - ಇತ್ತೀಚೆಗೆ ಪರಿಚಯಿಸಲಾದ ಜಿಎಸ್ ಟಿ ಸಹ ಪೆಟ್ರೋಲಿಯಂ ಉತ್ಪನ್ನಗಳನ್ನು ಒಳಗೊಂಡಿರುವುದಿಲ್ಲ ಆದ್ದರಿಂದ ರಾಜ್ಯ ತೆರಿಗೆಗಳ ಆಧಾರದ ಮೇಲೆ ಬೇರೆ ಬೇರೆ ಸ್ಥಳಗಳಲ್ಲಿ ಬೆಲೆಗಳು ಬದಲಾಗುತ್ತವೆ.
- ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್ಟಿ) 28% ನಷ್ಟು ಅದರ ಅತ್ಯುನ್ನತ ಸ್ಲ್ಯಾಬ್ನಲ್ಲಿದ್ದರು ಅದರಲ್ಲಿ ಇಂಧನಗಳನ್ನು ಸೇರಿಸಿದರೆ ಪ್ರಸ್ತುತ ಇರುವ ಇಂಧನಗಳ ತೆರಿಗೆ ಹೊರೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ.
- ಆದಾಗ್ಯೂ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಕ್ರಮವಾಗಿ 2010 ಮತ್ತು 2014 ರಲ್ಲಿ ಅನಿಯಂತ್ರಿತಗೊಳಿಸಲಾಯಿತು. ಇದರಿಂದಾಗಿ ಇಂಧನ ಬೆಲೆಗಳನ್ನು ಪ್ರಾಥಮಿಕವಾಗಿ ಸರಬರಾಜು ಮತ್ತು ಬೇಡಿಕೆಗಳ ಶಕ್ತಿಯಿಂದಾಗಿ ಹೂಡಿಕೆ ವೆಚ್ಚಕ್ಕಿಂತ ಹೆಚ್ಚಾಗಿ ನಿರ್ಧರಿಸಲಾಗುತ್ತದೆ.

**ಭವಿಷ್ಯದ ನೋಟ ಹೇಗಿದೆ?**

- ಅಂತರಾಷ್ಟ್ರೀಯ ಕಚ್ಚಾ ತೈಲ ಬೆಲೆಗಳ ಹೆಚ್ಚಳದ ಸೂಚನೆಗಳು ಕಾಣತೊಡಗಿಸಿದೆ .ಆದಾಗ್ಯೂ, ತೆರಿಗೆಗಳನ್ನು ಕಡಿತಗೊಳಿಸುವ ಸರ್ಕಾರದ ಯಾವುದೇ ಲಕ್ಷಣಗಳು ಕಾಣಿಸುತ್ತಿಲ್ಲ.
- ಪೆಟ್ರೋಲ್ ಮತ್ತು ಡೀಸೆಲ್ಗಳು ಅಂತಿಮ-ಗ್ರಾಹಕರ ಕೈಗೆಟುಕಬೇಕಾದರೆ, ಸರ್ಕಾರವು ಬೆಲೆಗಳನ್ನು ಕಡಿಮೆ ಮಾಡಲು ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಅನುಷ್ಠಾನಗೊಳಿಸಬೇಕಾಗಿದೆ

## 2.ವರ್ಷದಲ್ಲೇ ಸಿಗಲಿದೆ ವಿವಾಹ ವಿಚ್ಛೇದನ -ಸುಪ್ರೀಂ ಕೋರ್ಟ್

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮೇನ್ಸ್ ಪರೀಕ್ಷೆಗಾಗಿ

ಪ್ರಮುಖಸುದ್ದಿ

- ಪರಸ್ಪರ ಒಪ್ಪಿಗೆಯ ಮೇರೆಗೆ ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸುವ ದಂಪತಿಯ ಮರು ಹೊಂದಾಣಿಕೆಗೆ ನೀಡಲಾಗುವ ಆರು ತಿಂಗಳ ಕಡ್ಡಾಯ ಕಾಲಾವಕಾಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ.ಸುಪ್ರೀಂ ಕೋರ್ಟ್ನ ಈ ಮಹತ್ವದ ಆದೇಶ ವಿಚ್ಛೇದನ ಬಯಸುವ ಹಿಂದೂ ದಂಪತಿಗೆ ಅನುಕೂಲ ಮಾಡಿಕೊಡಲಿದೆ.

- ಸದ್ಯದ ಹಿಂದೂ ವಿವಾಹ ಕಾಯಿದೆ ಅಡಿ ಗಂಡ ಮತ್ತು ಹೆಂಡತಿ ಬೇರೆಯಾಗಲು ಪರಸ್ಪರ ಒಪ್ಪಿಗೆ ಸೂಚಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ನಂತರ ಅಧಿಕೃತ ಅನುಮತಿಗಾಗಿ ಕಡ್ಡಾಯವಾಗಿ ಆರು ತಿಂಗಳು ಕಾಯಬೇಕು. ಈ ಅವಧಿಯಲ್ಲಿ ದಂಪತಿಯ ಮನ ಪರಿವರ್ತನೆಯಾಗಿ ಪುನಃ ಒಂದಾಗುವುದಾದರೆ ಆಗಲಿ ಎಂಬ ಉದ್ದೇಶದೊಂದಿಗೆ ಈ ಕಾಲಾವಕಾಶ ನೀಡಲಾಗುತ್ತದೆ.

- ಒಂದು ವೇಳೆ ದಂಪತಿ ಒಂದಾಗುವ ಪ್ರಶ್ನೆಯೇ ಇಲ್ಲ ಎಂದಾದ ಮೇಲೆ ಆರು ತಿಂಗಳ ಕಾಲಾವಕಾಶದ ಅಗತ್ಯವೇನಿದೆ ಎಂದು ನ್ಯಾಯಮೂರ್ತಿಗಳಾದ ಆದರ್ಶ್ ಕುಮಾರ್ ಮತ್ತು ಯು.ಯು. ಲಲಿತ್ ಅವರು ಪ್ರಶ್ನಿಸಿದರು.

- ವಿಚ್ಛೇದನ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ನಂತರವೂ ದಂಪತಿಯ ಮನಃ ಪರಿವರ್ತಿಸಿ ಅವರು ಒಂದಾಗುವಂತೆ ಪ್ರಯತ್ನಿಸುವುದು ಅಗತ್ಯ. ಆದರೆ, ಅವರು ಒಂದಾಗುವ ಸಾಧ್ಯತೆಯೇ ಇಲ್ಲ ಎಂದ ಮೇಲೆ ಅದಕ್ಕಿಂತ ಒಳ್ಳೆಯ ಆಯ್ಕೆ ಅವರ ಮುಂದಿದೆ ಎಂದರ್ಥ. ಅವರ ಮುಂದಿನ ದಾರಿಯ ಆಯ್ಕೆಯನ್ನು ಅವರ ವಿವೇಚನೆಗೆ ಬಿಡಬೇಕು ಎಂದು ನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟರು.

ಮೇನ್ಸ್ ಪರೀಕ್ಷೆಗಾಗಿ

- ಹಿಂದೂ ವಿವಾಹ ಕಾಯ್ದೆ ಸೆಕ್ಷನ್ 13ಬಿ (2) ಅಡಿ ಪ್ರಸ್ತಾಪ ಮಾಡಲಾಗಿರುವ ಆರು ತಿಂಗಳ ಕಾಲಾವಕಾಶ ಕಡ್ಡಾಯವಲ್ಲ. ಅದೊಂದು ನಿರ್ದೇಶನ ಎನ್ನುವುದು ಭಾವನೆಯಾಗಿದೆ. ಪ್ರತಿ ಪ್ರಕರಣ ವಿಭಿನ್ನ ಹಿನ್ನೆಲೆ ಹೊಂದಿದ್ದು ಅವುಗಳ ಪೂರ್ವಾಪರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತೀರ್ಪು ನೀಡುವ ಅಧಿಕಾರ ನ್ಯಾಯಾಲಯಕ್ಕೆ ಇದೆ. ನ್ಯಾಯಾಲಯ ತನ್ನ ವಿವೇಚನೆಯನ್ನು ಬಳಸಿ ನಿರ್ಧಾರ ತೆಗೆದುಕೊಳ್ಳಬೇಕು ಎಂದು ನ್ಯಾಯಮೂರ್ತಿಗಳು ಅಭಿಪ್ರಾಯಪಟ್ಟರು.
- ಮಹಿಳೆಯರ ಹಕ್ಕುಗಳನ್ನು ಕಾನೂನಿನ ಮೂಲಕ ರಕ್ಷಿಸುವ ವಿಷಯ ಚರ್ಚೆಗೆ ಬಂದಾಗಲೆಲ್ಲ, ದೇಶದ ಆರ್ಥಿಕ ಅಸ್ಥಿರತೆಯೂ ಮಾಡದಷ್ಟು ಸುದ್ದಿಯನ್ನು ಅದು ಮಾಡಿಬಿಡುತ್ತದೆ. `ಕಾನೂನುಗಳು ಎಂದಿಗೂ ಮಹಿಳಾ ಪಕ್ಷಪಾತಿ' ಎನ್ನುವ ಮಿಥ್ಯಾರೋಪಗಳೂ ಈ ಸಂದರ್ಭದಲ್ಲಿ ಜೋರಾಗಿಯೇ ವ್ಯಕ್ತವಾಗುತ್ತವೆ. ಹೀಗೆಲ್ಲಾ ಗುಲ್ಲು ಎಬ್ಬಿಸುವಾಗ, ಶೋಷಿತರ ಪರವಾಗಿ ದನಿ ಎತ್ತುವವರಿಗಿಂತ ಮತ್ತು ಶೋಷಣೆಯನ್ನು ವಿರೋಧಿಸುವವರಿಗಿಂತ, ಕಾನೂನುಗಳ ನಿಜವಾದ ಅವಶ್ಯಕತೆ ಇರುವುದು ಶೋಷಿತರಿಗೆ ಎನ್ನುವುದನ್ನು ಮರೆತಂತೆ ನಾಗರಿಕ ಸಮಾಜ ವರ್ತಿಸತೊಡಗುತ್ತದೆ.

- ಹೀಗೆ ಪ್ರಸ್ತುತ ಒಂದು ವರ್ಗದ ಕೆಂಗಣ್ಣಿಗೆ ಗುರಿಯಾಗಿರುವುದು `ವಿವಾಹ ಕಾನೂನುಗಳ ತಿದ್ದುಪಡಿ ಕಾಯ್ದೆ- 2013'. ನಮ್ಮಲ್ಲಿ ಈಗಾಗಲೇ ಜಾರಿಯಲ್ಲಿರುವ `ಹಿಂದೂ ವಿವಾಹ ಕಾನೂನು- 1955' ಮತ್ತು `ವಿಶೇಷ ವಿವಾಹ ಕಾನೂನು- 1954'ನ್ನು ಕೂಲಂಕಷ ವಿಚಾರಣೆಗೆ ಒಳಪಡಿಸಿದ ನಂತರ, ಇದೀಗ ಅವುಗಳಿಗೆ ಗಮನಾರ್ಹ ತಿದ್ದುಪಡಿಗಳನ್ನು ತರಲಾಗಿದೆ. ಹೆಂಡತಿ ಅಥವಾ ಪತ್ನಿ ಎನ್ನುವ ಹಕ್ಕನ್ನು ಮೊಟ್ಟಮೊದಲ ಬಾರಿಗೆ ಗುರುತಿಸಿದ ಕಾನೂನು ಇದಾಗಿದೆ.

**ಈ ಹೊಸ ತಿದ್ದುಪಡಿ ಕಾಯ್ದೆಗೆ ಪ್ರಚೋದನೆ ನೀಡಿದ ಪ್ರಕರಣಗಳೆಂದರೆ**

- ಹಿಂದೂ ವಿವಾಹ ಕಾಯ್ದೆ- 1955ರ ಸೆಕ್ಷನ್ 13ಬಿ ಪ್ರಕಾರ, ಪರಸ್ಪರ ಒಪ್ಪಿಗೆಯ (ಮ್ಯೂಚುವಲ್ ಕನ್ಸೆಂಟ್) ವಿಚ್ಛೇದನ ಪಡೆಯಲು ಇಬ್ಬರ ಒಪ್ಪಿಗೆಯೂ ಬೇಕಾಗುತ್ತದೆ. ಆದರೆ ಸ್ಮೃತಿ ಶಿಂಧೆ ಎನ್ನುವವರು ಈ ಬಗ್ಗೆ ಕೆಲವು ಪ್ರಶ್ನೆಗಳನ್ನು ಎತ್ತಿದ್ದರು.
- ಹೀಗೆ ಪರಸ್ಪರ ಒಪ್ಪಿಗೆಯ ಮೇರೆಗೆ ನ್ಯಾಯಾಲಯಕ್ಕೆ ಅರ್ಜಿ ಹಾಕಿಕೊಂಡಿದ್ದರೂ ನಂತರ ಒಬ್ಬರು ಒಪ್ಪಿಗೆಯನ್ನು ಹಿಂತೆಗೆದುಕೊಂಡು ಬಿಟ್ಟರೆ ಅಥವಾ ನ್ಯಾಯಾಲಯಕ್ಕೆ ಹಾಜರಾಗದಿದ್ದರೆ ವಿಚ್ಛೇದನವನ್ನು ಕೊಡದೇ ಇರುವುದು ಎಷ್ಟು ಸೂಕ್ತ? ಅಸಹನೀಯ ಪರಿಸ್ಥಿತಿಯಲ್ಲೂ ಕಾನೂನು ಇದೊಂದೇ ಕಾರಣಕ್ಕೆ ಆಕೆಯನ್ನು ಮದುವೆಯ ಪರಿಧಿಯೊಳಗೆ ಮುಂದುವರಿಯುವಂತೆ ಒತ್ತಡ ಹೇರುವುದು ನ್ಯಾಯವೇ ಎಂದು ಅವರು ನ್ಯಾಯಾಲಯವನ್ನು ಕೇಳಿದ್ದರು.

- ಇಂತಹ ಪ್ರಶ್ನೆಗಳಿಗೆ, ಸದ್ಯ ಜಾರಿಯಲ್ಲಿದ್ದ ಕಾನೂನಿನಲ್ಲಿ ಉತ್ತರ ಸಿಗುವುದು ಸಾಧ್ಯವಿರಲಿಲ್ಲ. ಹೀಗಾಗಿ ನ್ಯಾಯಾಲಯವು, ಈ ಕುರಿತು ನಿರ್ದೇಶನ ನೀಡುವಂತೆ ಶಾಸಕಾಂಗವನ್ನು ಕೋರಿತ್ತು. ಪರಸ್ಪರ ಒಪ್ಪಿಗೆಯಿಂದ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ ನಂತರ, ಗಂಡ ತನ್ನ ಒಪ್ಪಿಗೆಯನ್ನು ಹಿಂತೆಗೆದುಕೊಂಡರೆ ಅದರಿಂದ ಹೆಂಡತಿಯ ಮೂಲಭೂತ ಹಕ್ಕನ್ನು ಕಿತ್ತುಕೊಂಡಂತೆ ಆಗುತ್ತದೆಯೇ ಎನ್ನುವ ವಿಚಾರದ ಬಗ್ಗೆ ಹೆಚ್ಚಿನ ಸ್ಪಷ್ಟನೆಯನ್ನು ಕೇಳಿತ್ತು.

- ಇದನ್ನೇ ಮೂಲವಾಗಿ ಇಟ್ಟುಕೊಂಡ ಶಾಸಕಾಂಗವು, ವಿವಾಹ ಕಾನೂನುಗಳಿಗೆ ಅವಶ್ಯಕ ತಿದ್ದುಪಡಿಗಳನ್ನು ತರಲು ಮುಂದಾಯಿತು. ಇದರ ಪರಿಣಾಮವಾಗಿ, 2010ರಲ್ಲಿ ವಿವಾಹ ಕಾನೂನುಗಳಿಗೆ ತಿದ್ದುಪಡಿ ಕರಡು ಮಸೂದೆಯನ್ನು ಪ್ರಸ್ತುತ ಪಡಿಸಲಾಯಿತು.

**ತಿದ್ದುಪಡಿಯಲ್ಲಿ ಏನಿದೆ?**

- ತಿದ್ದುಪಡಿಯ ಮೂಲಕ ಹಿಂದೂ ವಿವಾಹ ಕಾಯ್ದೆ- 1955ರ 13ನೇ ಸೆಕ್ಷನ್‌ಗೆ ಹಾಗೂ ವಿಶೇಷ ವಿವಾಹ ಕಾನೂನು- 1954ಕ್ಕೆ ಒಂದಷ್ಟು ಉಪ ಸೆಕ್ಷನ್‌ಗಳನ್ನು ಸೇರಿಸಲಾಗಿದೆ. ಮೊದಲು ಜಾರಿಯಲ್ಲಿದ್ದ ಯಾವುದೇ ಕಾನೂನಿನಲ್ಲಿ, ಮದುವೆ ಮುರಿದು ಬಿದ್ದಿದೆ ಅಥವಾ ಅಸಹನೀಯ ಎನಿಸುತ್ತಿದೆ ಅಥವಾ ಅದೊಂದು ನಿಷ್ಕ್ರಿಯ ಮದುವೆ ಎನ್ನುವ ಕಾರಣಗಳ ಮೇಲೆ ವಿಚ್ಛೇದನ ತೆಗೆದುಕೊಳ್ಳಲು ಸಾಧ್ಯವಿರಲಿಲ್ಲ.
- ಆದರೆ ಈಗ, ಸರಿಪಡಿಸಲು ಆಗದಂತಹ ಕಾರಣಗಳಿಂದ ಮುರಿದುಬಿದ್ದ ಮದುವೆ (irretrievable breakdown) ಎಂಬ ಕಾರಣಕ್ಕೆ ವಿಚ್ಛೇದನ ನೀಡುವಂತೆ ಪುರುಷನಾಗಲೀ, ಮಹಿಳೆಯಾಗಲೀ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಇಂತಹ ಅರ್ಜಿ ಸಲ್ಲಿಸುವ ದಿನಕ್ಕೆ ಕನಿಷ್ಠ ಮೂರು ವರ್ಷಗಳ ಕಾಲದಿಂದ ಅವರಿಬ್ಬರೂ ಒಂದೇ ಮನೆಯಲ್ಲಿ ಒಟ್ಟಿಗೆ ವಾಸ ಇದ್ದಿರಬಾರದು.

**ONLY FOR PRELIMS**

IAS/KAS

**SOURCE-HINDU +PIB**

**3.ವುಡ್ ಈಸ್ ಗುಡ್ "ಕ್ಯಾಂಪೇನ್**

ನಮ್ಮ ಐಎಎಸ್ ಅಕಾಡೆಮಿ
ನಮ್ಮಿಂದ..... ಮಸೂರಿಗೆ/ಮೈಸೂರಿಗೆ

- ಯುಎಸ್‌ಐಐಡಿ ಮತ್ತು ಭಾರತದ ಪರಿಸರ ಸಚಿವಾಲಯದ ನಡುವಿನ ಪಾಲುದಾರಿಕೆಯಲ್ಲಿ ಲ್ಯಾಂಡ್ ಯೂಸ್ ಸೈನ್ಸ್ (ಅರಣ್ಯ-ಪ್ಲಸ್) ಸಹಭಾಗಿತ್ವದಲ್ಲಿ ಸರ್ಕಾರವು "ವುಡ್ ಈಸ್ ಗುಡ್" ಕ್ಯಾಂಪೇನ್ ಅನ್ನು ಪ್ರಾರಂಭಿಸಿದೆ.
- ಮರವು ವಾತಾವರಣ-ಸ್ನೇಹಿ ಸಂಪನ್ಮೂಲವಾಗಿದೆ ಮತ್ತು ಪ್ಲಾಸ್ಟಿಕ್ ಮತ್ತು ಉಕ್ಕಿನಂತಹ ವಸ್ತುಗಳಿಗೆ ಬದಲಿಯಾಗಿ ಮರದ ಉತ್ತೇಜನ ನೀಡುವುದು ಇದರ ಉದ್ದೇಶ, ಏಕೆಂದರೆ ಕಾರ್ಬನ್ ತಟಸ್ಥವು ಇತರರಂತಲ್ಲದೆ ಅವರ ಉತ್ಪಾದನೆಯಲ್ಲಿ ಇಂಗಾಲದ ಹೆಜ್ಜೆಗುರುತನ್ನು ಬಿಟ್ಟುಬಿಡುತ್ತದೆ.

**4.ವಿಶ್ವಜೀತ್ ಯೋಜನೆ**

* ಇತ್ತೀಚೆಗೆ, ವಿಶ್ವಜೀತ್ ಯೋಜನೆಯನ್ನು ಕೇಂದ್ರ ಹಣಕಾಸು ಸಚಿವಾಲಯದಿಂದ ಜಾರಿಗೆಗೊಳಿಸಲಾಗಿದೆ

* ಜಾಗತಿಕ ಶ್ರೇಯಾಂಕಗಳಲ್ಲಿ ಅಗ್ರ ಸ್ಥಾನ ಪಡೆಯಲು ಉನ್ನತ ಐಐಟಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಈ ಯೋಜನೆಯ ಗುರಿಯಾಗಿದೆ.

* ಮೂಲಭೂತ ಸೌಕರ್ಯವನ್ನು ಅಭಿರುದ್ಧಿ ಮಾಡಿ , ವಿದೇಶಿ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಮತ್ತು ವಿದೇಶಿ ಸಂಸ್ಥೆಗಳೊಂದಿಗೆ ಸಹಯೋಗಿಸಲು ಐದು ವರ್ಷಗಳಲ್ಲಿ ಏಳು ಐಐಟಿಗಳಿಗೆ ಹಣ ಒದಗಿಸುವ ಅವಕಾಶವನ್ನು ಅದು ಹೊಂದಿತ್ತು.

* ಆದಾಗ್ಯೂ, ಸಂಶೋಧನಾ ಮೂಲಸೌಕರ್ಯವನ್ನು ರಚಿಸಲು ವಿಶ್ವವಿದ್ಯಾನಿಲಯಗಳಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು "ಉನ್ನತ ಶಿಕ್ಷಣ ಹಣಕಾಸು ಸಂಸ್ಥೆ (HEFA )" ಯನ್ನು ಪರಿಚಯಿಸಿದೆ.

## 5.ಟೆರಾಪಿನ್

* ಶುದ್ಧ ಅಥವಾ ಕೆರೆ ನೀರಿನಲ್ಲಿ ವಾಸಿಸುವ ಅನೇಕ ಸಣ್ಣ ಆಮೆಗಳಲ್ಲಿ ಟೆರಾಪಿನ್ ಸಹ ಒಂದಾಗಿದೆ.

* ಉತ್ತರ ನದಿಯ ಟೆರಾಪಿನ್ (Batagur baska) ಎಂಬುದು ಆಗ್ನೇಯ ಏಷ್ಯಾದ ಸ್ಥಳೀಯ ನದಿಯ ಆಮೆಯಾಗಿದೆ.

* ಇದು IUCN ಯಿಂದ "ಅಳಿವಿನಂಚಿನಲ್ಲಿರು ಪ್ರಭೇದ " ಎಂದು ವರ್ಗೀಕರಿಸಲಾಗಿದೆ.

*ಈ ಜಾತಿಗಳು ಪ್ರಸ್ತುತ ಬಾಂಗ್ಲಾದೇಶದಲ್ಲಿ (in the Sundarbans), ಭಾರತ (ಕೆಲ ಭಾಗಗಳು- ಪಶ್ಚಿಮ ಬಂಗಾಳ ಮತ್ತು ಒಡಿಶಾ), ಇಂಡೋನೇಷ್ಯಾ, ಕಾಂಬೋಡಿಯಾ ಮತ್ತು ಮಲೇಶಿಯಾಗಳಲ್ಲಿ ಕಂಡುಬರುತ್ತವೆ.

*ಪ್ರಭೇದಗಳನ್ನು ನೈಸರ್ಗಿಕ ಅಪಾಯಗಳಿಂದ ರಕ್ಷಿಸಲು ಮತ್ತು ಆನುವಂಶಿಕ ನಿರ್ವಹಣೆಗೆ ಅನುಕೂಲವಾಗುವಂತೆ ಸುಂದರ್ಬನ್ಸ್ ಹುಲಿ ಸಂರಕ್ಷಣೆಯಲ್ಲಿ ಸಂರಕ್ಷಣಾ ತಳಿ ಕಾರ್ಯಕ್ರಮವನ್ನು ಅಳವಡಿಸಲಾಗಿದೆ.

## 6. ನಾರಿ ಶಕ್ತಿ ಪುರಸ್ಕಾರ

* ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ "ಮಹಿಳೆಯರ ಉನ್ನತ ನಾಗರಿಕ ಗೌರವ" ನಾರಿ ಶಕ್ತಿ ಪುರಸ್ಕಾರಗಳಿಗೆ ನಾಮನಿರ್ದೇಶನಗಳನ್ನು ಆಹ್ವಾನಿಸಿದೆ.

* ಅಂತರರಾಷ್ಟ್ರೀಯ ಮಹಿಳಾ ದಿನ (ಮಾರ್ಚ್ 8) ಸಂದರ್ಭದಲ್ಲಿ ಕೇಂದ್ರಸರ್ಕಾರ ಪ್ರತಿವರ್ಷ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.

* ಮಹಿಳಾ ಸಬಲೀಕರಣದ ಕಾರಣದಿಂದ ಮತ್ತು ಸಂಸ್ಥೆಗಳ ಸೇವೆಗಳನ್ನು ಗುರುತಿಸುವುದು ಈ ಪ್ರಶಸ್ತಿಯ ಉದ್ದೇಶವಾಗಿದೆ.

**7.ಹೋಮಿಯೋಪತಿ ವೈರಾಲಜಿ ಪ್ರಯೋಗಾಲಯ.**

* ಕೇಂದ್ರ ಆಯುಶ್ ಸಚಿವರು ಕೊಲ್ಕತ್ತಾದಲ್ಲಿ ಭಾರತದ ಮೊದಲ ಹೋಮಿಯೋಪತಿ ವೈರಾಲಜಿ ಪ್ರಯೋಗಾಲಯವನ್ನು ಉದ್ಘಾಟಿಸಿದ್ದಾರೆ.

* ವೈರಸ್ ರೋಗಗಳ ಉಲ್ಬಣಗೊಂಡ ಸವಾಲುಗಳನ್ನು ಎದುರಿಸಲು ಹೋಮಿಯೋಪತಿಯಲ್ಲಿ ಹೊಸ ಔಷಧಿಗಳನ್ನು ಮತ್ತು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಪ್ರಯೋಗಾಲಯವನ್ನು ಸ್ಥಾಪಿಸಲಾಗಿದೆ.

* ಇನ್ಫ್ಲುಯೆನ್ಸ , ಜಪಾನೀಸ್ ಎನ್ಸೆಫಾಲಿಟಿಸ್, ಡೆಂಗ್ಯೂ, ಚಿಕುಂಗೂನಿಯಾ ಮತ್ತು ಹಂದಿ ಜ್ವರ ಮೊದಲಾದ ವೈರಲ್ ರೋಗಗಳಿಗೆ, ಹೋಮಿಯೋಪತಿ ಸಂಶೋಧನೆ ನಡೆಸಲು ಭಾರತದಲ್ಲಿ ಇರುವ ಒಂದೇ ಒಂದು ಪ್ರಯೋಗಾಲಯವಾಗಿದೆ .

**8.ಡೈರಿ ಸಂಸ್ಕರಣ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಧಿ (ಡಿಐಡಿಎಫ್)**

* ಡೈರಿ ಸಂಸ್ಕರಣ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಧಿ ಸ್ಥಾಪನೆಗೆ ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿ ಅನುಮೋದಿಸಿದೆ.

* ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್ (NABARD) ಅಡಿಯಲ್ಲಿ 2017-18 ರ ಕೇಂದ್ರ ಬಜೆಟ್ನಲ್ಲಿ ಘೋಷಿಸಲಾಯಿತು.

* ರಾಷ್ಟ್ರೀಯ ಡೈರಿ ಅಭಿವೃದ್ಧಿಮಂಡಳಿ (NDDB) ಮತ್ತು ರಾಷ್ಟ್ರೀಯ ಡೈರಿ ಅಭಿವೃದ್ಧಿ ಸಹಕಾರ ( NCDC) ಈ ಯೋಜನೆಯನ್ನು ಜಾರಿಗೆ ತರಲಿದೆ.

* ಹಾಲು ಸಹಕಾರ ಸಂಘಗಳಿಗೆ ಸಹಾಯ ಮಾಡಲು NDDB ಮತ್ತು NCDCಗಳಿಗೆ ನಾಬಾರ್ಡ್ ಸಾಲ ನೀಡುತ್ತದೆ.

* ಈ ಯೋಜನೆಯು ಪರಿಣಾಮಕಾರಿ ಹಾಲು ಸಂಗ್ರಹಣಾ ವ್ಯವಸ್ಥೆ, ಹಾಲು ಒಕ್ಕೂಟಗಳು ಮತ್ತು ಉತ್ಪಾದನಾ ಕಂಪೆನಿಗಳ ಮೌಲ್ಯವರ್ಧಿತ ಉತ್ಪನ್ನಗಳಿಗೆ ಸಂಸ್ಕರಣೆ ಮೂಲಸೌಕರ್ಯದ ವಿಸ್ತರಣೆಗೆ ಗಮನ ಹರಿಸುತ್ತದೆ.

## 14th SEPTEMBER

### 1.ಜಾಗತಿಕ ಮಾನವ ಬಂಡವಾಳ ಸೂಚ್ಯಂಕ 103 ಸ್ಥಾನದಲ್ಲಿ ಭಾರತ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖುಸುದ್ದಿ

- ಪೋಷಣೆ, ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆಗೆ ಪ್ರತಿಭಾವಂತರ ಬಳಕೆ ಮತ್ತಿತರ ವಿಷಯಗಳಲ್ಲಿ ದೇಶದ ಸಾಮರ್ಥ್ಯವನ್ನು ಅಳೆಯುವ ವಿಶ್ವದ 'ಮಾನವ ಬಂಡವಾಳ ಸೂಚ್ಯಂಕ'ದಲ್ಲಿ ಭಾರತ 10೩ನೇ ಸ್ಥಾನ ಪಡೆದಿದೆ.
- ಈ ವರದಿಯನ್ನು ಜಿನೇವಾ ಮೂಲದ ವರ್ಲ್ಡ್ ಎಕನಾಮಿಕ್ ಫೋರಂ(ಡಬ್ಲ್ಯು ಇಎಫ್) ಬಿಡುಗಡೆ ಗೊಳಿಸಿದೆ

ಮುಖ್ಯ ಪರೀಕ್ಷೆಗಾಗಿ

**ಮಾನವ ಬಂಡವಾಳ ಸೂಚ್ಯಂಕ ದ ಬಗ್ಗೆ:**

- 2017ರ ಜಾಗತಿಕ ಮಾನವ ಬಂಡವಾಳ ಸೂಚ್ಯಂಕ 130 ದೇಶಗಳಲ್ಲಿ ನಾಲ್ಕು ವಿಷಯಾಧಾರಿತ ಆಯಾಮಗಳು ಮತ್ತು ಐದು ವಿಭಿನ್ನ ವಯೋಮಾನದ ಗುಂಪುಗಳಲ್ಲಿ 130 ರಾಷ್ಟ್ರಗಳನ್ನು

ಹೊಂದಿದೆ . ದೇಶಗಳಲ್ಲಿನ ಪ್ರಗತಿಯನ್ನು ನಿರ್ಣಯಿಸಲು ಮತ್ತು ವಿನಿಮಯಕ್ಕಾಗಿ ಅವಕಾಶಗಳನ್ನು ಸೂಚಿಸುವ ಸಾಧನವಾಗಿ ಇದನ್ನು ಬಳಸಲಾಗುತ್ತದೆ.

- ಜಿನೀವಾ ಮೂಲದ ವರ್ಲ್ಡ್ ಎಕನಾಮಿಕ್ ಫೋರಮ್ (WEF) ಸಂಗ್ರಹಿಸಿದ ಪಟ್ಟಿಯಲ್ಲಿ " the knowledge and skills people possess that enable them to create value in the global economic system" to measure the 'human capital' rank of a country.

- ಮಾನವ ಸಂಪನ್ಮೂಲ ಅಭಿವೃದ್ಧಿಯ ನಾಲ್ಕು ಮುಖ್ಯ ಕ್ಷೇತ್ರಗಳಲ್ಲಿ 130 ರಾಷ್ಟ್ರಗಳ ವಿರುದ್ಧವಾಗಿದೆ ಎಂದು ವರದಿ ಮಾಡಲಾಗಿದೆ; ಅವುಗಳೆಂದರೆ

  - ➢ ಸಾಮರ್ಥ್ಯ (ಹಿಂದಿನ ಔಪಚಾರಿಕ ಶಿಕ್ಷಣದಲ್ಲಿ ಹೂಡಿಕೆಯನ್ನು ನಿರ್ಧರಿಸುತ್ತದೆ),
  - ➢ ನಿಯೋಜನೆ (ಕೆಲಸದ ಮೂಲಕ ಕೌಶಲಗಳನ್ನು ಸಂಗ್ರಹಿಸುವುದು),
  - ➢ ಅಭಿವೃದ್ಧಿ (ಮುಂದುವರಿದ ಕಾರ್ಮಿಕರ ಕೌಶಲ್ಯ )
  - ➢ ಮತ್ತು ತಾಂತ್ರಿಕ ಜ್ಞಾನ (ಕೆಲಸದಲ್ಲಿ ವಿಶೇಷ ಕೌಶಲಗಳು-ಬಳಕೆ)

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಭಾರತದ ಸಾಧನೆ:**

- ➢ ಭಾರತವು 103 ಸ್ಥಾನದಲ್ಲಿದೆ ಇದು , BRICS ರಾಷ್ಟ್ರಗಲ್ಲೆ ಅತಿ ಕಡಿಮೆಯಾಗಿದೆ. ಭಾರತದ ಲಿಂಗಾಧಾರಿತ ಉದ್ಯೋಗಕ್ಕೆ(employment gender gap) ಬಂದಾಗ "ವಿಶ್ವದಲ್ಲೇ ಅತ್ಯಂತ ಕಡಿಮೆ" ಸ್ಥಾನದಲ್ಲಿದೆ.
- ➢ ಆದರೆ ಭವಿಷ್ಯದ ಅಗತ್ಯತೆಗಳ ಅಭಿವೃದ್ಧಿಗೆ ಬಂದಾಗ ಸಮೀಕ್ಷೆ ನಡೆಸಿದ ಒಟ್ಟು 130 ದೇಶಗಳಲ್ಲಿ 65 ನೇ ಶ್ರೇಯಾಂಕವನ್ನು ಹೊಂದಿರುವುದು ಅತ್ಯತ್ತಮ ವಾಗಿದೆ .
- ➢ ದಕ್ಷಿಣ ಏಷ್ಯಾದ ರಾಷ್ಟ್ರಗಳ ಪೈಕಿ ಭಾರತವು ಶ್ರೀಲಂಕಾ ಮತ್ತು ನೇಪಾಳಕ್ಕಿಂತ ಕಡಿಮೆ ಸ್ಥಾನದಲ್ಲಿದೆ, ಆದರೆ ನೆರೆಯ ಬಾಂಗ್ಲಾದೇಶ ಮತ್ತು ಪಾಕಿಸ್ತಾನಕ್ಕಿಂತ ಹೆಚ್ಚಿನ ಮಟ್ಟದಲ್ಲಿದೆ.

- ಭಾರತವು ಕಡಿಮೆ ಶೈಕ್ಷಣಿಕ ಸಾಧನೆ (110 ನೇ ಸ್ಥಾನದಲ್ಲಿ 25 -54 ವರ್ಷ ವಯಸ್ಸಿನ ಪ್ರಾಥಮಿಕ ಶಿಕ್ಷಣ ಸಾಧನೆಯಲ್ಲಿ ) ಇದರಿಂದ ಲಭ್ಯವಿರುವ ಕೌಶಲ್ಯಗಳು ಉತ್ತಮ ಬಳಕೆಗೆ ಒಳಗಾಗುವುದಿಲ್ಲವೆಂದು ಅರ್ಥೈಸುತ್ತದೆ.

**ಇತರ ರಾಷ್ಟ್ರಗಳ ಸಾಧನೆ:**

- ಒಟ್ಟಾರೆ ಪಟ್ಟಿಯಲ್ಲಿ ನಾರ್ವೆ ಅಗ್ರಸ್ಥಾನದಲ್ಲಿದೆ, ಫಿನ್ಲ್ಯಾಂಡ್ ಮತ್ತು ಸ್ವಿಜರ್ಲ್ಯಾಂಡ್ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನದಲ್ಲಿದೆ.
- ಅಮೆರಿಕಾ ಸಂಯುಕ್ತ ಸಂಸ್ಥಾನಗಳು (4ನೇಯ ಸ್ಥಾನ ), ಡೆನ್ಮಾರ್ಕ್ (5 ನೇಯ), ಜರ್ಮನಿ (6 ನೇಯ), ನ್ಯೂಜಿಲೆಂಡ್ (7 ನೇಯ ), ಸ್ವೀಡನ್ (8 ನೇಯ), ಸ್ಲೊವೇನಿಯಾ (9 ನೇಯ) ಮತ್ತು ಆಸ್ಟ್ರಿಯಾ (10 ನೇ ) ಸ್ಥಾನಗಳು ಸೇರಿವೆ.

**ವಿದ್ಯಾರ್ಥಿಗಳ ಯೋಚನೆಗೆ ಒಂದು ಯೋಜನೆ**

**ಜಾಗತಿಕ ಮಾನವ ಬಂಡವಾಳ ಸೂಚ್ಯಂಕದಲ್ಲಿ ಪ್ರಗತಿ ಕಾಣಬೇಕೆಂದರೆ ಭಾರತವು ಯಾವರೀತಿಯ ಕ್ರಮಗಳನ್ನು ಕೈಗೊಳ್ಳಬಹುದೆಂದು ನೀವು ಯೋಚಿಸುವಿರಿ ... ???**

**3. ಸಂಚಿತ ವಲಯಗಳ ಸರ್ವೇಗೆ ಒಪ್ಪಿಗೆ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

ನಮ್ಮ ಐಎಎಸ್ ಅಕಾಡೆಮಿ IAS/KAS

- ಭಾರತಕ್ಕೆ ಸೇರಿದ ಸಂಚಿತ ವಲಯಗಳ (ಜೈವಿಕ ಮತ್ತು ಅಜೈವಿಕ ತ್ಯಾಜ್ಯಗಳು ಸಂಚಯಗೊಂಡು ಅಮೂಲ್ಯ ಖನಿಜ ಅಥವಾ ಪೆಟ್ರೋಲಿಯಂ ಸಂಪನ್ಮೂಲವಾಗಿ ರೂಪಗೊಳ್ಳುವ ಸಮುದ್ರದಾಳದ ಅಥವಾ ಭೂಮಿಯಾಳದ ಪ್ರದೇಶಗಳು) ಸರ್ವೇ ನಡೆಸಲು ಆರ್ಥಿಕ ವ್ಯವಹಾರಗಳ ಮೇಲಿನ ಸಂಸದೀಯ ಸಮಿತಿ ಒಪ್ಪಿಗೆ ನೀಡಿದೆ.
- ಇಂತಹ ಸಂಚಿತ ವಲಯಗಳ ಕುರಿತು ಅತಿ ಕಡಿಮೆ ಮಾಹಿತಿಯಿದೆ. ಹೀಗಾಗಿ, ಒಟ್ಟು 45,243 ಲೈನ್ ಕಿಲೋಮೀಟರನಷ್ಟು ಆಳ ಸಾಗರ ಮೈದಾನ ಪ್ರದೇಶದಲ್ಲಿ ಕಂಪನ ಹಾಗೂ ಅದಕ್ಕೆ ಸಂಬಂಧಿಸಿದ 2ಡಿ ದತ್ತಾಂಶಗಳನ್ನು ಸಂಗಹಿಸುವ ಯೋಜನೆಗೆ ಸಮಿತಿ ಅನುಮೋದನೆ ನೀಡಿದೆ.

**ಮುಖ್ಯ ಪರೀಕ್ಷೆಗಾಗಿ**

- ಭಾರತ ಒಟ್ಟು 26 ಸಂಚಿತ ಮೈದಾನಗಳನ್ನು ಹೊಂದಿದ್ದು, 21 ಲಕ್ಷ ಚ.ಕಿ.ಮೀಟರ್ ಗೂ ಹೆಚ್ಚು ಪ್ರದೇಶವನ್ನು ವ್ಯಾಪಿಸಿದೆ. ಅಳವಲ್ಲದ ಹಾಗೂ ಆಳಸಮುದ್ರ ಸಂಚಯ ಮೈದಾನಗಳೂ ಇದರಲ್ಲಿ ಸೇರಿದೆ.
- ಈ ಪೈಕಿ ಸುಮಾರು 15 ಲಕ್ಷ ಚ.ಕಿ.ಮೀಟರ್ (ಶೇ. 45ರಷ್ಟು) ಪ್ರದೇಶದ ಸಂಚಿತ ಮೈದಾನಗಳ ಕುರಿತು ಭೂ- ವೈಜ್ಞಾನಿಕ ದತ್ತಾಂಶಗಳೇ ಲಭ್ಯವಿಲ್ಲ. ಹೀಗಾಗಿ, ಮುಂದಿನ ದಿನಗಳಲ್ಲಿ ಸಂಶೋಧನೆ ಮತ್ತು ಉತ್ಪಾದನೆಗಳಿಗೆ ಅನುಕೂಲವಾಗುವಂತೆ ಸಂಚಿತ ಮೈದಾನಗಳ ಸರ್ವೇ ಮಾಡಿ ಮೌಲ್ಯಮಾಪನ ಮಾಡುವುದು ಪ್ರಮುಖ ಕಾರ್ಯವಾಗಿದೆ. ಸರ್ವೇ ನಡೆಸಲು 2015-16ರಲ್ಲೇ ಪೂರ್ವ ತಯಾರಿ ಆರಂಭಿಸಲಾಗಿತ್ತು.
- 2017ರ ಜುಲೈವರೆಗೆ ಸುಮಾರು 9100 ಲೈನ್ ಕಿಲೊಮೀಟರ್ ನಷ್ಟು 2ಡಿ ಸೀಸ್ಮಿಕ್ (ಕಂಪನ ಹಾಗೂ ಅದಕ್ಕೆ ಸಂಬಂಧಿಸಿದ) ದತ್ತಾಂಶ ಸಂಗ್ರಹಿಸಲಾಗಿದೆ. ಒಟ್ಟಾರೆ ಯೋಜನೆಗೆ 2932 ಕೋಟಿ ರೂ. ವೆಚ್ಚವಾಗಲಿದೆ.

**ಯೋಜನೆಯ ಪ್ರಮುಖಾಂಶಗಳು •**

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ.... ಮಸ್ಸೂರಿಗೆ/ಮೈಸೂರಿಗೆ

- ಭಾರತಕ್ಕೆ ಸೇರಿದ ಸಂಚಿತ ಮೈದಾನಗಳ ಬಗ್ಗೆ ನಿಖರ ಮಾಹಿತಿ ಸಂಗ್ರಹಕ್ಕೆ ಸಹಾಯಕ. ಈ ಮೂಲಕ ಮುಂದಿನ ದಿನಗಳ ಅನ್ವೇಷಣೆ ಮತ್ತು ಉತ್ಪಾದನೆಗಳಿಗೆ ಪೂರಕ ಅನ್ವೇಷಣಾ ಚಟುವಟಿಕೆಗಳಿಗೆ ಸೂಕ್ತ ಪ್ರದೇಶಗಳನ್ನು ನಿರ್ಧರಿಸಲು ಸರ್ವೇ ಕಾರ್ಯ ಪ್ರಮುಖ ಪಾತ್ರ ವಹಿಸಲಿದೆ. ಇತರೆ ಮೈದಾನಗಳ ಕುರಿತ ಪ್ರಾಥಮಿಕ ದತ್ತಾಂಶಗಳನ್ನು ಸಂಗ್ರಹಿಸಬಹುದು.
- ಅನ್ವೇಷಣಾ ಮತ್ತು ಉತ್ಪಾದನಾ ಕಂಪನಿಗಳಿಗೆ ಸಂಶೋಧನಾ ಚಟುವಟಿಕೆಗಳಿಗೆಂದು ನಿರ್ದಿಷ್ಟ ಪ್ರದೇಶಗಳನ್ನು ನಿಗದಿ ಮಾಡಲು ಸಹಾಯಕ ತೈಲ ಮತ್ತು ನೈಸರ್ಗಿಕ ಅನಿಲದ ದೇಶೀಯ ಉತ್ಪಾದನೆಗೆ ಬಂಡವಾಳ ಹೂಡಿಕೆ ಹೆಚ್ಚಿಸುವಲ್ಲಿಯೂ ಸರ್ವೇ ಕಾರ್ಯ ಆಧಾರವಾಗಲಿದೆ.
- ಸರ್ವೇ ಕಾರ್ಯವನ್ನು ರಾಷ್ಟ್ರೀಯ ತೈಲ ಕಂಪನಿಗಳಾದ ಆಯಿಲ್ ಇಂಡಿಯಾ ಲಿಮಿಟೆಡ್(OIL), ಆಯಿಲ್ ಆಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಷನ್(ONGC) ಕಂಪನಿಗಳು ಅನುಷ್ಠಾನಗೊಳಿಸುತ್ತಿವೆ. ಈಶಾನ್ಯ ರಾಜ್ಯಗಳಲ್ಲಿ ಸರ್ವೇ ಕಾರ್ಯ ನಡೆಸಿದರೆ, ಉಳಿದೆಲ್ಲ ಭಾಗಗಳಲ್ಲೂ ಸರ್ವೇ ನಡೆಸಲಿದೆ. ಒಟ್ಟು 28 ರಾಜ್ಯಗಳಲ್ಲಿ ಸರ್ವೇ ಕಾರ್ಯ ನಡೆಯಲಿದೆ. 2019-20ರ ವೇಳೆಗೆ ಸರ್ವೇ ಯೋಜನೆ ಪೂರ್ಣಗೊಳ್ಳಲಿದೆ.
- ಡೈರೆಕ್ಟರ್ ಜನರಲ್ ಆಫ್ ಹೈಡ್ರೋಕಾರ್ಬನ್ ಪ್ರತಿ ತಿಂಗಳ ಸರ್ವೇ ಕಾರ್ಯದ ಮೇಲ್ವಿಚಾರಣೆ ನಡೆಸಲಿದೆ. ಎಲ್ಲ ನಿಕ್ಷೇಪಗಳ ಸರ್ವೇ ಮತ್ತು ಮೌಲ್ಯಮಾಪನದ ನಂತರ ಆಯಾ ಪ್ರದೇಶ ಹಾಗೂ ಅಗತ್ಯಕ್ಕನುಗುಣವಾಗಿ ಪರಿಶೋಧನೆ ಮತ್ತು ಉತ್ಪಾದನಾ ಚಟುವಟಿಕೆಗಳನ್ನು ಕೈಗೊಳ್ಳಬಹುದು. ಈ ಯೋಜನೆ ಬೃಹತ್ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ಸಹ ಸೃಷ್ಟಿಸಲಿದೆ.
- ಭೂಖಂಡಗಳ ಚಲನೆ, ವಿಲೀನ ಹಾಗೂ ಭೂಪದರಗಳಲ್ಲಿ ಆಗುವ ಬದಲಾವಣೆಗಳ ಪರಿಣಾಮ ಭೂಮಿಯ ಹೊರಪದರದ (ಕ್ರಸ್ಟ್) ಕೆಳಭಾಗದಲ್ಲಿ ಕೆಸರಿನ ರೂಪದಲ್ಲಿ ಅಮೂಲ್ಯ ಖನಿಜ ಅಥವಾ ಪೆಟ್ರೋಲಿಯಂ ಸಂಪನ್ಮೂಲಗಳು ಸಂಗ್ರಹಗೊಳ್ಳುತ್ತವೆ.

## 4. ಚಕ್ಮಾ, ಹಜೊಂಗ್ ನಿರಾಶ್ರಿತರಿಗೆ ಶೀಘ್ರದಲ್ಲೇ ಪೌರತ್ವ-ಕೇಂದ್ರ ಸರಕಾರ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಅರುಣಾಚಲ ಪ್ರದೇಶದ ನಿರಾಶ್ರಿತ ಶಿಬಿರಗಳಲ್ಲಿ ವಾಸಿಸುತ್ತಿರುವ ಸುಮಾರು 1 ಲಕ್ಷಕ್ಕೂ ಅಧಿಕ ಚಕ್ಮಾ ಹಾಗೂ ಹಜಾಂಗ್ ಸಮುದಾಯದವರಿಗೆ ಭಾರತೀಯ ಪೌರತ್ವ ನೀಡಲು ನೀರ್ಧರಿಸಿದೆ.
- ಸುಮಾರು 50 ವರ್ಷಗಳ ಹಿಂದೆಯೇ ಹಿಂದಿನ ಪೂರ್ವ ಪಾಕಿಸ್ತಾನದಿಂದ ಭಾರತಕ್ಕೆ ಆಶ್ರಯವನ್ನರಸಿ ಬಂದಿದ್ದ ಚಕ್ಮಾ ಮತ್ತು ಹಜಾಂಗ್ ನಿರಾಶ್ರಿತರಿಗೆ ಪೌರತ್ವ ನೀಡುವಂತೆ 2015ರಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

ಮುಖ್ಯ ಪರೀಕ್ಷೆಗಾಗಿ

ಯಾರಿವರು ?

- ಚಕ್ಮಾ ಮತ್ತು ಹಜೊಂಗ್ ಬುಡಕಟ್ಟು ಜನರು ಹಿಂದಿನ ಪೂರ್ವ ಪಾಕಿಸ್ತಾನದ ಚಿತ್ತಗಾಂಗ್ ಗುಡ್ಡಗಾಡು ಪ್ರದೇಶದಲ್ಲಿ ನೆಲೆಯಾಗಿದ್ದರು. 1960ರ ದಶಕದಲ್ಲಿ ಕಪ್ತಾಯ್ ಅಣೆಕಟ್ಟು ಯೋಜನೆಯಿಂದಾಗಿ ಅವರ ಹುಟ್ಟೂರು ಮುಳುಗಿ ಹೋಯಿತು. ಚಕ್ಮಾಗಳು ಬೌದ್ಧರಾದರೆ, ಹಜೊಂಗ್ ಜನರು ಹಿಂದೂ ಧರ್ಮವನ್ನು ಅನುಸರಿಸುತ್ತಾರೆ.
- ಆದುದರಿಂದ ಧರ್ಮದ ನೆಲೆಯಲ್ಲಿಯೂ ಅವರು ಕಿರುಕುಳಕ್ಕೆ ಒಳಗಾಗಿದ್ದರು ಎಂದು ಹೇಳಲಾಗುತ್ತಿದೆ. ಈ ಎಲ್ಲ ಕಾರಣದಿಂದ ಅವರು ಮಿಜೋರಂನ ಲುಷಾಯ್ ಗುಡ್ಡಗಾಡು ಪ್ರದೇಶದ ಮೂಲಕ ಭಾರತಕ್ಕೆ ಪ್ರವೇಶಿಸಿದರು.

- ಈ ನಿರಾಶ್ರಿತರಿಗೆ ಪೌರತ್ವ ನೀಡಬಾರದು ಎಂದು ಅರುಣಾಚಲ ಪ್ರದೇಶದ ಹಲವು ಸಂಘಟನೆಗಳು ಒತ್ತಾಯಿಸುತ್ತಿವೆ. ಪೌರತ್ವ ನೀಡುವುದರಿಂದ ಅರುಣಾಚಲ ಪ್ರದೇಶದ ಜನಸಂಖ್ಯಾ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆ ಬದಲಾಗುತ್ತದೆ ಎಂಬುದು ಇವರ ವಿರೋಧಕ್ಕೆ ಕಾರಣ. ಆದರೆ ಸರ್ವಸಮ್ಮತವಾದ ಕಾರ್ಯಯೋಜನೆಯೊಂದನ್ನು ರೂಪಿಸಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ.

**ಸರ್ವಸಮ್ಮತ ಯೋಜನೆಯೇ ?:**

- ಅರುಣಾಚಲ ಪ್ರದೇಶದಲ್ಲಿ ವಸತಿ, ಪ್ರಯಾಣ ಮತ್ತು ಕೆಲಸ ಮಾಡುವ ಪರವಾನಗಿ
- ಅರುಣಾಚಲ ಪ್ರದೇಶದಲ್ಲಿ ಜಮೀನು ಖರೀದಿಸಲು ಅವಕಾಶ ಇಲ್ಲ
- ದೇಶದ ಇತರ ಭಾಗಗಳಲ್ಲಿ ಆಸ್ತಿ ಖರೀದಿಗೆ ಅವಕಾಶ
- ಈಗ ಇವರೆಲ್ಲರೂ ಅರುಣಾಚಲ ಪ್ರದೇಶದಲ್ಲಿ ನೆಲೆಯಾಗಿದ್ದಾರೆ.

**1960ರ ದಶಕದಲ್ಲಿ ಭಾರತಕ್ಕೆ ವಲಸೆ**

- ಪೌರತ್ವ ನೀಡುವಂತೆ 2015ರಲ್ಲಿ ಸುಪ್ರೀಂ ಕೋರ್ಟ್ ಸೂಚನೆ
- ಆದೇಶ ಪುನರ್ ಪರಿಶೀಲಿಸುವಂತೆ ಅರುಣಾಚಲ ಪ್ರದೇಶ ಸರ್ಕಾರ ಸಲ್ಲಿಸಿದ್ದ ಅರ್ಜಿ ವಜಾ
- ಕೇಂದ್ರ ಮತ್ತು ಅರುಣಾಚಲ ಪ್ರದೇಶ ಸರ್ಕಾರ ಸಮಾಲೋಚನೆ ನಡೆಸಿ ಪೌರತ್ವ ನೀಡುವ ಬಗ್ಗೆ ಚಿಂತನೆ

IAS/KAS
ಮಸ್ಸೂರಿಗೆ/ಮೈಸೂರಿಗೆ

## 5. ಮೊಟ್ಟಮೊದಲ ಬಾರಿಗೆ ಅಮರಾಬಾದ್ ಹುಲಿ ಸಂರಕ್ಷಣಾದಲ್ಲಿ ಮೌಸ್ ಡೀರ್

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ದೇಶದಲ್ಲಿ ಒಂದು ವಿಶಿಷ್ಟ ಉಪಕ್ರಮದಲ್ಲಿ, ತೆಲಂಗಾಣ ರಾಜ್ಯ ಅರಣ್ಯ ಇಲಾಖೆ ನೆಹರೂ ಮೃಗಾಲಯದ ಅಮಾರಾಬಾದ್ ಟೈಗರ್ ರಿಸರ್ವ್‌ನಲ್ಲಿ ನಲ್ಲಮಲ್ಲ ಅರಣ್ಯ ಪ್ರದೇಶದಲ್ಲಿ ಅಳಿವಿನಂಚಿನಲ್ಲಿರುವ ಮೌಸ್ ಡೀರ್ ಎಂಬ ವಿಶೇಷ ಪ್ರಾಣಿಪ್ರಬೇಧವನ್ನು ಪರಿಚಯಿಸಿದೆ.

ಮುಖ್ಯ ಪರೀಕ್ಷೆಗಾಗಿ

- 2010ರಿಂದೀಚೆಗೆ ನೆಹರೂ ಮೃಗಾಲಯವು ಲ್ಯಾಬೊರೇಟರಿ ಫಾರ್ ಕನ್ಸರ್ವೇಷನ್ ಆಫ್ ಎಂಡೇಜರ್ಡ್ ಸ್ಪೀಸಿಸ್ ಮತ್ತು ಕಣವಿಜ್ಞಾನ ಭೌತಶಾಸ್ತ್ರ ಸಂಸ್ಥೆ ಹಾಗೂ ಕೇಂದ್ರೀಯ ಮೃಗಾಲಯ ಪ್ರಾಧಿಕಾರಗಳ ಸಂಯುಕ್ತ ಆಶ್ರಯದಲ್ಲಿ, ಇವುಗಳ ಸಂತಾನೋತ್ಪತ್ತಿ ಯೋಜನೆಯನ್ನು ಕೈಗೊಂಡು ಇವುಗಳನ್ನು ಅಭಿವೃದ್ಧಿಪಡಿಸಲು ಮುಂದಾಗಿದೆ.
- ಎರಡು ಗಂಡು ಹಾಗೂ ಆರು ಹೆಣ್ಣು ಮೌಸ್ ಡೀರ್ ಗಳನ್ನು ಅರಣ್ಯಕ್ಕೆ ತರಲಾಗಿದ್ದು, 2.14 ಹೆಕ್ಟೇರ್ ವಿಸ್ತೀರ್ಣದ ಬೇಲಿ ಇರುವ ಅರೆ ಅರಣ್ಯ ವಾತಾವರಣದಲ್ಲಿ ಇವುಗಳನ್ನು ಸಂರಕ್ಷಿಸಲು ನಿರ್ಧರಿಸಲಾಗಿದೆ.
- ಇದೀಗ ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಜೀವಶಾಸ್ತ್ರಜ್ಞರು, ಇವು ಈ ಪ್ರದೇಶಕ್ಕೆ ಹೇಗೆ ಹೊಂದಿಕೊಳ್ಳುತ್ತವೆ ಹಾಗೂ ಅವುಗಳ ಸಹಜ ತಾಣಗಳಿಗೆ ಹೋಲಿಸಿದರೆ ಇಲ್ಲಿ ಅವುಗಳ ನಡವಳಿಕೆ ಹೇಗಿರುತ್ತದೆ ಎಂಬ ಅಧ್ಯಯನವನ್ನೂ ಕೈಗೊಳ್ಳಲಿದ್ದಾರೆ. ಬಳಿಕ ಇದನ್ನು ಈ ಅರೆ ಅರಣ್ಯ ವಾತಾವರಣದಿಂದ ಮುಕ್ತ ಅರಣ್ಯಕ್ಕೆ ಬಿಡಲಾಗುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**BACK 2 BAICS**

**ಮೌಸ್ ಡೀರ್ ಬಗ್ಗೆ**

- ಮೌಸ್ ಡೀರ್ ಚುಕ್ಕೆ ಇರುವ ಚೆರ್ವತಾಲ್ ಎಂದೂ ಕರೆಯಲಾಗುತ್ತದೆ. ಇದು ಅತ್ಯಂತ ವಿಶಿಷ್ಟ ಹಾಗೂ ವಿನಾಶದ ಅಂಚಿನಲ್ಲಿರುವ ಪ್ರಾಣಿ.
- ಇದು ಜಿಂಕೆ, ಇಲಿ ಹಾಗೂ ಹಂದಿಯ ಮಿಶ್ರತಳಿಯಂತೆ ಕಾಣಿಸುತ್ತದೆ. ಇದನ್ನು ವಾಸ್ತವ ಜಿಂಕೆ ಎಂದು ಪರಿಗಣಿಸುವುದಿಲ್ಲ. ಆದರೆ ಜಿಂಕೆಗಳ ಬಹಳಷ್ಟು ಹೋಲಿಕೆ ಹೊಂದಿದೆ. ಇದು ಟ್ರಗಲೈಡ್ ಎಂಬ ಪ್ರಬೇಧಕ್ಕೆ ಸೇರಿದ್ದು, ರಾತ್ರಿ ವೇಳೆ ಸಂಚರಿಸುವ ಪ್ರಾಣಿ.

- ಸಣ್ಣ ಗಾತ್ರದ ಈ ಪ್ರಾಣಿ, ದೊಡ್ಡ ಸಸ್ತನಿಯಂತೆ ಕಾಣಿಸುತ್ತದೆ. ಇದು ಹೆಚ್ಚಾಗಿ ನಿತ್ಯ ಹರಿದ್ವರ್ಣದ ದಟ್ಟಕಾಡಿನಲ್ಲಿ ಕಂಡುಬರುತ್ತದೆ. ಅರಣ್ಯನಾಶ, ವಾಸತಾಣಗಳ ನಾಶ ಹಾಗೂ ಕಳ್ಳಬೇಟೆಯಿಂದಾಗಿ ಇದು ವಿನಾಶದ ಅಂಚಿನಲ್ಲಿದೆ.

**ONLY FOR PRLIMS**

## 6. ಮೊದಲ ಬುಲೆಟ್ ರೈಲು ತರಬೇತಿ ಕೇಂದ್ರ

- ಗುಜರಾತನ ವಡೋದರಾದಲ್ಲಿ ಹೈಸ್ಪೀಡ್ ರೈಲ್ವೆಯ ದೇಶದ ಮೊದಲ ತರಬೇತಿ ಕೇಂದ್ರ ಅಸ್ತಿತ್ವಕ್ಕೆ ಬರಲಿದೆ. ದೇಶದ ಮೊದಲ ಬುಲೆಟ್ ಟ್ರೇನ್ ಯೋಜನೆ ಕಾಮಗಾರಿಗೆ ಚಾಲನೆ ನೀಡಲಾಗುತ್ತಿದ್ದು, ಇದಕ್ಕಾಗಿ ಅಗತ್ಯವಿರುವ ಸಿಬ್ಬಂದಿ ತರಬೇತಿಗೆ 600 ಕೋಟಿ ರೂ. ವೆಚ್ಚದಲ್ಲಿ ಹೈಸ್ಪೀಡ್ ರೇಲ್ ಟ್ರೇನಿಂಗ್ ಸೆಂಟರ್ ಆರಂಭವಾಗಲಿದೆ.
- ನ್ಯಾಷನಲ್ ಅಕಾಡೆಮಿ ಆಫ್ ಇಂಡಿಯನ್ ರೈಲ್ವೇಸ್ ಆವರದಲ್ಲಿಯೇ ಈ ತರಬೇತಿ ಕೇಂದ್ರ ಶುರುವಾಗಲಿದೆ. 2020ರ ವೇಳೆಗೆ ಕೇಂದ್ರ ಕಾರ್ಯಾರಂಭ ಮಾಡಲಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 7.ಭಾರತ-ಬೆಲಾರಸ್ ಹತ್ತು ಒಪ್ಪಂದ

- ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಬೆಲಾರಸ್ ಅಧ್ಯಕ್ಷ ಅಲೆಗ್ಸಾಂಡರ್ ಗ್ರಿಗೋರಿಚ್ ಲುಕಾಶೆಂಕೋ ಅವರು ದೆಹಲಿಯಲ್ಲಿ ಉಭಯ ದೇಶಗಳ ಆಸಕ್ತಿ ಕುರಿತು ಚರ್ಚಿಸಿದ್ದು, ಒಟ್ಟು 10 ಒಪ್ಪಂದಗಳು ಏರ್ಪಟ್ಟಿವೆ.
- ಅವುಗಳಲ್ಲಿ ಪ್ರಮುಖವಾದವುಗಳೆಂದರೆ,
    - ಭಾರತದ ಯುವ ಮತ್ತು ಕ್ರೀಡಾ ಸಚಿವಾಲಯ ಹಾಗೂ ಬೆಲಾರಸ್ ನ ಶಿಕ್ಷಣ ಸಚಿವಾಲಯದ ನಡುವೆ ಒಪ್ಪಂದ

- ವೃತ್ತಿಪರ ಶಿಕ್ಷಣ ಹಾಗೂ ತರಬೇತಿಗಗಾಗಿ ಭಾರತೀಯ ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ ಹಾಗೂ ಬೆಲಾರಸ್ ನ ಶಿಕ್ಷಣ ಸಚಿವಾಲಯದ ನಡುವೆ ಒಪ್ಪಂದ
- ಭಾರತೀಯ ವಿಜ್ಞಾನ ಅಕಾಡೆಮಿ ಹಾಗೂ ಬೆಲಾರಸ್ ನ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ನಡುವೆ ವೈಜ್ಞಾನಿಕ ಮತ್ತು ತಾಂತ್ರಿಕ ಸಹಕಾರ ಒಪ್ಪಂದ
- ಕೃಷಿ ಮತ್ತು ಸಂಶೋಧನೆ, ಕೃಷಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉಭಯ ದೇಶಗಳ ಕೃಷಿ ಸಂಶೋಧನಾ ಮಂಡಳಿಗಳ ನಡುವೆ ಒಪ್ಪಂದ
- 2018-20ರವರೆಗೆ ಸಾಂಸ್ಕೃತಿಕ ಕ್ಷೇತ್ರದಲ್ಲಿನ ಸಹಕಾರ ಒಪ್ಪಂದ.
- ಪೆಟ್ರೋಲಿಯಂ ಮತ್ತು ತೈಲ ಅನಿಲ ಒಪ್ಪಂದ

## 8.ಭದ್ರತಾ ಸಹಕಾರಕ್ಕೆ ಒಪ್ಪಿದ ಭಾರತ - ಅಫ್ಘಾನ್

- ನವದೆಹಲಿಯಲ್ಲಿ 2ನೇ ಭಾರತ - ಅಫಘಾನಿಸ್ತಾನ ಕಾರ್ಯ ತಂತ್ರದ ಸಹಭಾಗಿತ್ವ ಸಭೆ ನಡೆಯಿತು. ವಿದೇಶಾಂಗ ವ್ಯವಹಾರಗಳ ಸಚಿವ ಸುಷ್ಮಾ ಸ್ವರಾಜ್ ಮತ್ತು ಆಫ್ಘಾನ್ ವಿದೇಶಾಂಗ ಸಚಿವ ಸಲಾಹುದ್ದೀನ್ ರಬ್ಬಾನಿ ಸಭೆಯಲ್ಲಿ ಪಾಲ್ಗೊಂಡಿದ್ದರು.
- ಎರಡೂ ರಾಷ್ಟ್ರಗಳು ಆರೋಗ್ಯ, ಸಾರಿಗೆ(ಮೋಟಾರು ವಾಹನಗಳ ಒಪ್ಪಂದ), ಬಾಹ್ಯಾಕಾಶ ಮತ್ತು ಹೊಸ ಅಭಿವೃದ್ಧಿ ಪಾಲುದಾರಿಕೆಯಲ್ಲಿ ನಾಲ್ಕು ಒಪ್ಪಂದಗಳನ್ನು ವಿನಿಮಯ ಮಾಡಿ ಕೊಂಡವು. ದ್ವಿಪಕ್ಷೀಯ, ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಪರಸ್ಪರ ಹಿತಾಸಕ್ತಿ ವಿಚಾರಗಳನ್ನು ಚರ್ಚಿಸಿವೆ ಮತ್ತು ಅವುಗಳ ಬಗ್ಗೆ ಅವಲೋಕನ ಮತ್ತು ಒಮ್ಮತವನ್ನು ಹಂಚಿಕೊಂಡಿದೆ. ಅಲ್ಲದೆ, ಎರಡೂ ದೇಶಗಳ ನಡುವೆ ಭದ್ರತಾ ಸಹಕಾರವನ್ನು ಬಲಪಡಿಸಲು ಒಪ್ಪಿಗೆ ಸೂಚಿಸಲಾಗಿದೆ.
- **ಅಭಿವೃದ್ಧಿ ಯೋಜನೆಗಳು** : ಶಿಕ್ಷಣ, ಆರೋಗ್ಯ, ಕೃಷಿ, ಕುಡಿಯುವ ನೀರು, ನವೀಕರಿಸಬಹುದಾದ ಶಕ್ತಿ, ಪ್ರವಾಹ ನಿಯಂತ್ರಣ ಮತ್ತು ಆಡಳಿತಾತ್ಮಕ ಮೂಲಭೂತ ಸೌಕರ್ಯಗಳನ್ನೊಳಗೊಂಡಂತೆ ಅಫ್ಘಾನಿಸ್ತಾನದ 31 ಪ್ರಾಂತ್ಯಗಳಲ್ಲಿ ಅನುಷ್ಠಾನಗೊಳಿಸಲು 116 ಹೈ ಇಂಪ್ಯಾಕ್ಟ್ ಕಮ್ಯುನಿಟಿ ಡೆವಲಪ್ ಮೆಂಟ್ ಪ್ರಾಜೆಕ್ಟ್ ಗಳನ್ನು ಕೈಗೆತ್ತಿಕೊಳ್ಳಲು ಎರಡೂ ದೇಶಗಳು ಒಪ್ಪಿಕೊಂಡಿವೆ.

- **ಶಾಂತಿ ಮತ್ತು ಸಾಮರಸ್ಯ ಪ್ರಕ್ರಿಯೆ :** ಶಾಂತಿ ಮತ್ತು ಸಾಮರಸ್ಯ ಪ್ರಕ್ರಿಯೆಗಾಗಿ ಬೆಂಬಲ, ಭಯೋತ್ಪಾದನೆ, ಸಂಘಟಿತ ಅಪರಾಧ, ಮಾದಕದ್ರವ್ಯ ಮತ್ತು ಮನಿ ಲಾಂಡರಿಂಗ್ ಟ್ರ್ಯಾಕಿಂಗ್ ನಲ್ಲಿ ಅಫ್ಘಾನ್ ರಾಷ್ಟ್ರೀಯ ರಕ್ಷಣಾ ಮತ್ತು ಭದ್ರತಾ ಪಡೆಗಳಿಗೆ ಹೆಚ್ಚಿನ ಸಹಾಯವನ್ನು ವಿಸ್ತರಿಸಲು ಭಾರತ ಸಹ ಒಪ್ಪಿಗೆ ನೀಡಿತು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮಿಂದ..... ಮೈಸೂರಿಗೆ/ಮೈಸೂರಿಗೆ

**15th SEPTEMBER**

**1.ಸ್ವಚ್ಛತಾ ಹಿ ಸೇವಾ**

**ಪ್ರಮುಖ ಸುದ್ದಿ**

- ಸರ್ಕಾರದ ಪ್ರಮುಖ ಯೋಜನೆಯಾದ ಸ್ವಚ್ ಭಾರತ್ ಮಿಷನ್ ಅನ್ನು ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 2 ರವರೆಗೆ ರಾಷ್ಟ್ರವ್ಯಾಪಿ,ಹದಿನೈದು ದಿನಗಳ ಕಾಲ ಅಭಿಯಾನವನ್ನು ಪ್ರಾರಂಭಿಸಲು ಕೇಂದ್ರವು ಸಿದ್ಧವಾಗಿದೆ.
- ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಉತ್ತರ ಪ್ರದೇಶದ ಕಾನ್ಪುರದಲ್ಲಿಂದು ಸ್ವಚ್ಛತಾ ಹಿ ಸೇವಾ – ಸ್ವಚ್ಛತೆಯೇ ಸೇವೆ ರಾಷ್ಟ್ರೀಯ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

**ಕಾರ್ಯಾಚರಣೆ ಬಗ್ಗೆ:**

- ಈ ಕಾರ್ಯಾಚರಣೆಯನ್ನು ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯ ಸಹಕಾರ ನೀಡಲಿದೆ .
- ಮಹಾತ್ಮಾ ಗಾಂಧಿ ಅವರ ಕನಸಿನ ಸ್ವಚ್ಛ ಭಾರತ ಪರಿಕಲ್ಪನೆಯ ಸಾಕಾರಕ್ಕೆ ಜನರಲ್ಲಿ ಜಾಗೃತಿ ಮೂಡಿಸುವುದು ಮತ್ತು ಅವರ ಬದ್ಧತೆಯನ್ನು ಪುನರ್ ಸ್ಥಾಪಿಸುವುದು ಇದರ ಉದ್ದೇಶವಾಗಿದೆ.

- ನೈರ್ಮಲ್ಯೀಕರಣ ವಿವಿಧ ವಲಯಗಳೊಂದಿಗೆ ಸಂಪರ್ಕ ಹೊಂದಿದೆ. ಆರೋಗ್ಯದಿಂದ ಮಹಿಳೆಗೆ ಭದ್ರತೆ ಹಾಗೂ ಗೌರವ ನೀಡುವಲ್ಲಿಯವರೆಗೆ ನೈರ್ಮಲ್ಯೀಕರಣ ಪ್ರಾಮುಖ್ಯತೆ ಹೊಂದಿದೆ. ದೇಶದ ಆರ್ಥಿಕತೆ ಮೇಲೂ ನೈರ್ಮಲ್ಯೀಕರಣ ಪ್ರಭಾವ ಬೀರುತ್ತದೆ
- ಯುನಿಸೆಫ್ ಪ್ರಕಾರ ಉತ್ತಮ ನೈರ್ಮಲ್ಯೀಕರಣ ದಿಂದ ವರ್ಷಕ್ಕೆ ಪ್ರತೀ ಕುಟುಂಬ 50 ಸಾವಿರ ರೂಪಾಯಿ ಉಳಿಸಲು ಸಾಧ್ಯ ಎಂದು ಕುಡಿಯುವ ನೀರು ಹಾಗೂ ನೈರ್ಮಲ್ಯೀಕರಣ ಸಚಿವಾಲಯ ತಿಳಿಸಿದೆ,

- ಸಮಾಜದ ನಾನಾ ಸ್ತರಗಳ ವ್ಯಕ್ತಿಗಳನ್ನು ಬಳಸಿಕೊಂಡು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯ ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

- ಎಲ್ಲ ರಾಜ್ಯಗಳಲ್ಲಿ ಹಾಗೂ ಜಿಲ್ಲೆಗಳಲ್ಲಿ ರಾಜ್ಯಪಾಲರು, ಮುಖ್ಯಮಂತ್ರಿಗಳು, ರಾಜ್ಯ ಸಚಿವರುಗಳು, ಸಂಸದರು, ಶಾಸಕರು ಮತ್ತು ಜಿಲ್ಲಾಧಿಕಾರಿಗಳನ್ನು ಬಳಸಿಕೊಂಡು ಈ ಸಪ್ತಾಹಕ್ಕೆ ಅಧಿಕೃತ ಚಾಲನೆ ನೀಡಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 2. 3ಡಿ ಮೂಳೆ ಅಂಗಾಂಶ ಅಭಿವೃದ್ಧಿ

- ಮುರಿತಕ್ಕೊಳಗಾದ ಅಥವಾ ಸಾಂದ್ರತೆ ಕಳೆದುಕೊಂಡು ಬಲಹೀನಗೊಂಡ ಮೂಳೆಗಳಿಗೆ ಪರ್ಯಾಯವಾಗಿ ಬಳಸಲಾಗುವ 3ಡಿ ಮೂಳೆ ಅಂಗಾಂಶವನ್ನು ಕೃತಕವಾಗಿ ಲ್ಯಾಬ್‌ನಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಅಪಘಾತಕ್ಕೊಳಗಾದ ಮತ್ತು ಮೂಳೆಸಂಬಂಧಿ ಸಮಸ್ಯೆ ಹೊಂದಿರುವ ರೋಗಿಗಳಿಗೆ ಪ್ರಯೋಜನವಾಗಲಿದೆ.

- 3ಡಿ ಮೂಳೆ ಅಂಗಾಂಶವು ಬಲಹೀನಗೊಂಡ ಅಥವಾ ಮುರಿದ ಮೂಳೆಗೆ ಬಳಸುವ ಕುರಿತು ಇಂಗ್ಲೆಂಡಿನ ಗ್ಲಾಸ್ಗೋ ಯೂನಿವರ್ಸಿಟಿ ಮತ್ತು ಸ್ಟ್ರಾಥ್ಕ್ಲೈಡ್ ಯೂನಿವರ್ಸಿಟಿ ತಜ್ಞರು ಸಂಶೋಧನೆ ನಡೆಸಿದ್ದಾರೆ.
- ಅಪಘಾತದ ಸಂದರ್ಭದಲ್ಲಿ ಮೂಳೆ ಹೆಚ್ಚು ಹಾನಿಗೊಳ್ಳುತ್ತದೆ. ಅಂತಹ ಸಂದರ್ಭದಲ್ಲಿ ಬದಲಿ ವ್ಯವಸ್ಥೆಯ ಜತೆಗೆ ಶಸ್ತ್ರಚಿಕಿತ್ಸಾ ತಜ್ಞರು ದಾನಿಗಳಿಂದ ಪಡೆದ ಅಥವಾ ರೋಗಿಯ ಮೂಳೆಯಿಂದ ಪಡೆದ ಅಂಶವನ್ನು ಬಳಸಿ ಮಾದರಿ ಅಭಿವೃದ್ಧಿಪಡಿಸುತ್ತಾರೆ.
- ಆದರೆ ನ್ಯಾನೋಕಿಕಿಂಗ್ ತಂತ್ರಜ್ಞಾನ ಬಳಸಿ 3ಡಿ ಮೂಳೆ ಅಂಗಾಂಶ ಅಭಿವೃದ್ಧಿಯಿಂದ ಮೊದಲ ಬಾರಿಗೆ ಪ್ರಯೋಗಾಲಯದಲ್ಲಿ ಕೃತಕ ಎಲುಬನ್ನು ಅಭಿವೃದ್ಧಿಪಡಿಸಲಾಗಿದೆ.
- ಭವಿಷ್ಯದಲ್ಲಿ ಮೂಳೆ ಕಸಿ ಅಗತ್ಯವಿರುವ ರೋಗಿಗಳಿಗೆ 3ಡಿ ಮೂಳೆ ಅಂಗಾಂಶವನ್ನು ಜೋಡಿಸಿದರೆ, ಅದರಿಂದ ತೊಂದರೆಗೊಳಗಾದ ಮೂಳೆಯನ್ನು ಸರಿಪಡಿಸುವ ಅಥವಾ ಬದಲಿಸುವ ಸಾಧ್ಯತೆಯಿದೆ. ಎಲುಬಿನಲ್ಲಿರುವ ಅಸ್ಥಿಮಜ್ಜೆಯನ್ನು ಮಾನವನ ದೇಹ ನೈಸರ್ಗಿಕವಾಗಿ ಉತ್ಪಾದಿಸುವುದರಿಂದ, ಅದು 3ಡಿ ಎಲುಬಿನೊಂದಿಗೆ ಸೇರಿಕೊಳ್ಳುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 2.ಗ್ರಾಚ್ಯುಟಿ ಮಸೂದೆ ಮಂಡನೆಗೆ ಅಸ್ತು

### ಪ್ರಮುಖ ಸುದ್ದಿ

- ಪೇಮೆಂಟ್ ಆಫ್ ಗ್ರಾಚ್ಯುಟಿ (ತಿದ್ದುಪಡಿ) ಮಸೂದೆ-2017ನ್ನು ಸಂಸತ್ತಿನಲ್ಲಿ ಪ್ರಸ್ತಾವಿಸಲು ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ತಿದ್ದುಪಡಿ ಮಸೂದೆಯಲ್ಲಿ ನೌಕರರ ಗ್ರಾಚ್ಯುಟಿಯನ್ನು ಗರಿಷ್ಠ ಮಟ್ಟಕ್ಕೆ (ಕೇಂದ್ರ ಸರ್ಕಾರಿ ನೌಕರರಿಗೆ ಸಮನಾಗಿ) ಏರಿಕೆ ಮಾಡಲಾಗಿದೆ.
- ಇದು ಖಾಸಗಿ, ಸಾರ್ವಜನಿಕ ಹಾಗೂ ಸ್ವಾಯತ್ತ ಸಂಸ್ಥೆಗಳ ನೌಕರರಿಗೂ ಅನ್ವಯಿಸಲಿದೆ. 1972ರ ಪೇಮೆಂಟ್ ಆಫ್ ಗ್ರಾಚ್ಯುಟಿ ಕಾಯ್ದೆಯು 10ಕ್ಕಿಂತ ಹೆಚ್ಚು ಜನ ನೌಕರರನ್ನೊಳಗೊಂಡ ಸಂಸ್ಥೆಗಳಿಗೆ ಅನ್ವಯವಾಗುತ್ತಿತ್ತು.

- ನೌಕರರಿಗೆ ನಿವೃತ್ತಿ ನಂತರವೂ ಭದ್ರತೆ ಒದಗಿಸುವ ಉದ್ದೇಶದಿಂದ ಈ ಕಾಯ್ದೆ ಜಾರಿಗೊಳಿಸಲಾಗಿತ್ತು. ಇದೀಗ 1972ರ ಕಾಯ್ದೆಯಡಿ 10 ಲಕ್ಷ ರೂಪಾಯಿ ಇದ್ದ ಗ್ರಾಚ್ಯುಟಿ ಗರಿಷ್ಠ ಮೊತ್ತವನ್ನು 20 ಲಕ್ಷ ರೂ. ಗೆ ಏರಿಸಲಾಗಿದೆ

### 3. ಆಪರೇಷನ್ ಇನ್ಸಾನಿಯಾಟ್

- ನೆರೆಯ ಬಾಂಗ್ಲಾದೇಶದ ರೋಹಿಂಗ್ಯಾ ನಿರಾಶ್ರಿತರ ಬಿಕ್ಕಟ್ಟನ್ನು ನಿವಾರಿಸಲು ಮತ್ತು ನೆರವಾಗಲು ಆಪರೇಷನ್ ಇನ್ಸಾನಿಯಟ್ ಅನ್ನು ಭಾರತ ಸರ್ಕಾರವು ಪ್ರಾರಂಭಿಸಿದೆ.

### ಪ್ರಮುಖ ಸಂಗತಿಗಳು

- ನಿರಾಶ್ರಿತರ ಸಂಖ್ಯೆ ಹೆಚ್ಚಳದಿಂದ ಉಂಟಾಗಿರುವ ಮಾನವೀಯ ಬಿಕ್ಕಟ್ಟಿಗೆ ಪ್ರತಿಕ್ರಿಯೆಯಾಗಿ ಬಾಂಗ್ಲಾಕ್ಕೆ ನೆರವು ನೀಡಲು ನಿರ್ಧರಿಸಲಾಗಿದೆ'ಎಂದು ಭಾರತ ವಿದೇಶಾಂಗ ಇಲಾಖೆ ಪ್ರಕಟಣೆ ತಿಳಿಸಿದೆ.
- ಈ ಯೋಜನೆಯ ಅನುಸಾರವಾಗಿ ಅಕ್ಕಿ, ಸಕ್ಕರೆ, ಉಪ್ಪು, ಅಡುಗೆ ಎಣ್ಣೆ, ಚಹಾಪುಡಿ, ಸೊಳ್ಳೆ ಪರದೆ ಇತ್ಯಾದಿ ಸಾಮಗ್ರಿಗನ್ನು ಕಳುಹಿಸಲಾಗಿದೆ. ಒಟ್ಟು 7 ಸಾವಿರ ಟನ್ ಪರಿಹಾರ ಸಾಮಗ್ರಿಗಳನ್ನು ಬಾಂಗ್ಲಾದೇಶಕ್ಕೆ ಕಳುಹಿಸಲಾಗುವುದು . ವಾಯುಯಾನದ ಮೂಲಕ ಆಹಾರ ಸಾಮಗ್ರಿಗಳನ್ನು ಕಳುಹಿಸಲಿದ್ದಾರೆ.
- ಹಿಂಸಾಚಾರದ ಕಾರಣ ಕಳೆದ ಆಗಸ್ಟ್ 25ರಿಂದ ಸುಮಾರು 3.79ಲಕ್ಷ ರೋಹಿಂಗ್ಯಾ ಮುಸ್ಲಿಂ ನಿರಾಶ್ರಿತರು ಮ್ಯಾನ್ಮಾರ್‌ನ ರಖಿನೆ ರಾಜ್ಯವನ್ನು ತೊರೆದು ಬಾಂಗ್ಲಾದೇಶಕ್ಕೆ ವಲಸೆ ಬಂದಿದ್ದಾರೆ.

- ಭಾರತದಲ್ಲಿನ ಬಾಂಗ್ಲಾದೇಶ ಹೈಕಮಿಷನರ್ ಸೈಯದ್ ಮುಜೆಂ ಅಲಿ ಅವರು ಭಾರತದ ವಿದೇಶಾಂಗ ಕಾರ್ಯದರ್ಶಿ ಎಸ್. ಜೈಶಂಕರ್ ಅವರನ್ನು ಕಳೆದ ವಾರ ಭೇಟಿಯಾಗಿ ನಿರಾಶ್ರಿತರ ಸಂಖ್ಯೆ ಹೆಚ್ಚಳದಿಂದ ಎದುರಾಗಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿದ್ದರು. ಇದರ ಬೆನ್ನಲ್ಲೇ ಭಾರತ ಈ ನೆರವು ನೀಡಿದೆ.

## 4. ಸ್ಮಾರ್ಟ್ ಸಿಟಿಗಳಿಗೆ ಸ್ಪರ್ಧೆ

### ಪ್ರಮುಖ ಸುದ್ದಿ

- ವಿವಿಧ ನಗರಗಳಲ್ಲಿ ಜಾರಿಯಲ್ಲಿರುವ ಸ್ಮಾರ್ಟ್ ಸಿಟಿ ಯೋಜನೆಯ ಗುಣಮಟ್ಟ ಹಾಗೂ ಪ್ರಭಾವ ಅಳೆಯುವ ಉದ್ದೇಶದಿಂದ ಇವುಗಳ ನಡುವೆ ಸ್ಪರ್ಧೆ ಏರ್ಪಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಒಟ್ಟಾರೆ ಸ್ಪರ್ಧೆಯ ಮೊತ್ತ 50 ಲಕ್ಷ ರೂ.
- ಸ್ಮಾರ್ಟ್ ಸಿಟಿ ಯೋಜನೆ ಜಾರಿಯಲ್ಲಿರುವ ನಗರಗಳ ವಿವಿಧ ಕ್ಷೇತ್ರಗಳಲ್ಲಿ ಆಗಿರುವ ಪ್ರಭಾವ, ಅನ್ವೇಷಣೆ, ವೃದ್ಧಿ, ಪುನರಾವರ್ತನೆಯಾಗುವ ಅಂಶಗಳನ್ನು ಪ್ರಮುಖ ಮಾನದಂಡವಾಗಿ ನಿಗದಿಪಡಿಸಲಾಗಿದೆ. ಆಡಳಿತ ಸುಧಾರಣೆ, ಸಾಮಾಜಿಕ ಆಯಾಮ, ಸಾಂಸ್ಕೃತಿಕ ಮತ್ತು ಆರ್ಥಿಕತೆ, ಸಾರಿಗೆ, ನೀರು ಮತ್ತು ಸ್ವಚ್ಛತೆ ವಿಭಾಗಗಳಲ್ಲಿ ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದೆ. ಈ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ತೋರಿಸುವ ನಗರಗಳಿಗೆ ಪ್ರಶಸ್ತಿ ನೀಡಲಾಗುವುದು.
- 2018 ರ ಏಪ್ರಿಲ್ 1 ರೊಳಗೆ ಪೂರ್ಣಗೊಳ್ಳುವ ಯೋಜನೆಗಳು ಮಾತ್ರವೇ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದು. ಪ್ರಶಸ್ತಿಗಳನ್ನು ಸ್ಮಾರ್ಟ್ ಸಿಟಿ ಯೋಜನೆ ಆರಂಭವಾಗಿ 3ನೇ ವರ್ಷಾಚರಣೆ ನಡೆಯಲಿರುವ 2018 ರ ಜೂ. 25ರಂದು ಪ್ರಧಾನ ಮಾಡಲಾಗುವುದು.

HINDU/OTHER NEWS

5. ಅವಿಭಕ್ತ ಕುಟುಂಬದ ಆಸ್ತಿ ಎಲ್ಲ ಸದಸ್ಯರಿಗೂ ಸೇರಿದ್ದು-ಸುಪ್ರೀಂಕೋರ್ಟ್

ಪ್ರಮುಖ ಸುದ್ದಿ

- ಮಹತ್ವದ ಬೆಳವಣಿಗೆಯೊಂದರಲ್ಲಿ, ಅವಿಭಕ್ತ ಕುಟುಂಬಗಳ ಆಸ್ತಿ ಹಕ್ಕು ಆ ಕುಟುಂಬದ ಎಲ್ಲ ಸದಸ್ಯರಿಗೂ ಸೇರಿರುತ್ತದೆ ಎಂಬ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ. ಅವಿಭಕ್ತ ಕುಟುಂಬದ ಆಸ್ತಿ ಮೇಲೆ ಹಕ್ಕು ಸಾಧಿಸುವ ಸಂಬಂಧ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.
- ಅವಿಭಕ್ತ ಕುಟುಂಬದ ಜಂಟಿ ಖಾತೆಯಲ್ಲಿರುವ ಆಸ್ತಿ ಎಲ್ಲರಿಗೂ ಸೇರಿದ್ದಾಗಿರುತ್ತದೆ. ಒಂದೊಮ್ಮೆ ಕೆಲವು ಆಸ್ತಿ ಸ್ವಯಾರ್ಜಿತ ಎಂದು ಹೇಳುವುದಾದರೆ, ಆ ಆಸ್ತಿಯ ಖರೀದಿಗಾಗಿ ಮಾಡಿಕೊಂಡಿದ್ದ ಕರಾರು ಒಪ್ಪಂದ, ಆಸ್ತಿ ಖರೀದಿಸಲು ಸ್ವಂತ ದುಡಿಮೆಯಿಂದ ಹಣ ಕೊಟ್ಟಿರುವ ಬಗ್ಗೆ ಸೂಕ್ತ ದಾಖಲಾತಿಗಳನ್ನು ಒದಗಿಸಬೇಕು.
- ತಮ್ಮ ಪ್ರಯತ್ನ ಬಲದಿಂದಲೇ ಆ ಆಸ್ತಿ ಖರೀದಿಸಲಾಗಿದೆ. ಅದು ಪಿತ್ರಾರ್ಜಿತ ಆಸ್ತಿಯ ಭಾಗವಾಗಿಲ್ಲ ಎಂಬುದನ್ನು ಸಾಬೀತುಪಡಿಸಬೇಕು. ಆಗ ಅದನ್ನು ಸ್ವಯಾರ್ಜಿತ ಆಸ್ತಿ ಎಂದು ಒಪ್ಪಿಕೊಳ್ಳಬಹುದೆಂದು ಕೋರ್ಟ್ ಹೇಳಿದೆ.
- ಕರ್ನಾಟಕದ ಅವಿಭಕ್ತ ಕುಟುಂಬವೊಂದು ಜಂಟಿ ಖಾತೆಯಲ್ಲಿರುವ ಆಸ್ತಿಯ ಪಾಲು ವಿಚಾರಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ದಾವೆ ಹೂಡಿತ್ತು. ಜಂಟಿ ಖಾತೆಯಲ್ಲಿದ್ದ ಕೆಲವು ಆಸ್ತಿಗಳು ಸ್ವಯಾರ್ಜಿತವಾದದ್ದರಿಂದ ಅದು ಪಾಲುವಿಭಾಗಕ್ಕೆ ಒಳಪಡುವುದಿಲ್ಲ ಎಂದು ಕೆಲವು ಸದಸ್ಯರು ತಕರಾರು ಎತ್ತಿದ್ದರು. ಇದರ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಎಲ್ಲರಿಗೂ ಹಕ್ಕು ಇದೆ ಎಂದು ಹೇಳಿತ್ತು. ಈ ತೀರ್ಪಿನ ವಿರುದ್ಧ ಕೆಲವು ಸದಸ್ಯರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

6. ಇಂಟರ್ನ್ಯಾಷನಲ್ ಡೇ ಆಫ್ ಡೆಮಾಕ್ರಸಿ

ಪ್ರಮುಖ ಸುದ್ದಿ

- ಯುನೈಟೆಡ್ ನೇಷನ್ ಪ್ರತಿ ವರ್ಷ 15 ನೇ ಸೆಪ್ಟೆಂಬರ್ ಅನ್ನು ಇಂಟರ್ನ್ಯಾಷನಲ್ ಡೇ ಆಫ್ ಡೆಮಾಕ್ರಸಿ ಎಂದು ಆಚರಿಸುತ್ತದೆ.
- ಈ ವರ್ಷದ ಥೀಮ್ - ಪ್ರಜಾಪ್ರಭುತ್ವ ಮತ್ತು ಸಂಘರ್ಷದ ತಡೆಗಟ್ಟುವಿಕೆ ಶಾಂತಿಯುತ ಮತ್ತು ಸ್ಥಿರತೆ ಉತ್ತೇಜಿಸಲು ಪ್ರಜಾಪ್ರಭುತ್ವದ ಸಂಸ್ಥೆಗಳ ಬಲಪಡಿಸಲು ಅಗತ್ಯವಾದ ಗಮನ ಹರಿಸುವುದು
- ಸ್ವಾತಂತ್ರ್ಯದ ಮೌಲ್ಯಗಳು, ಮಾನವ ಹಕ್ಕುಗಳ ಗೌರವ ಮತ್ತು ಸಾರ್ವತ್ರಿಕ ಮತದಾನದ ಮೂಲಕ ಆವರ್ತಕ ಮತ್ತು ನಿಜವಾದ ಚುನಾವಣೆಗಳ ತತ್ವಗಳು ಪ್ರಜಾಪ್ರಭುತ್ವದ ಅತ್ಯಗತ್ಯ ಅಂಶಗಳಾಗಿವೆ.
- ಈ ಮೌಲ್ಯಗಳು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಮತ್ತು ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಂತರರಾಷ್ಟ್ರೀಯ ಒಪ್ಪಂದದಲ್ಲಿ ಮೂರ್ತಿವೆತ್ತಾಗಿವೆ.

## 7. ಡೇರಿ ಸಂಸ್ಕರಣೆ ಮತ್ತು ಮೂಲಭೂತ ಅಭಿವೃದ್ಧಿಗೆ ನಿಧಿ

### ಪ್ರಮುಖ ಸುದ್ದಿ

- ಡೇರಿ ಸಂಸ್ಕರಣೆ ಮತ್ತು ಮೂಲಭೂತ ಸೌಕರ್ಯಕ್ಕಾಗಿ ನಿಧಿ (DIDF) ಸ್ಥಾಪಿಸುವ ಯೋಜನೆಗೆ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಇತ್ತೀಚೆಗೆ ಅನುಮೋದನೆ ನೀಡಿದೆ. 2017-18ರಿಂದ 2028-29ರ ಅವಧಿಗೆ 1081 ಕೋಟಿ ರೂ. ನಿಧಿ ಸ್ಥಾಪಿಸಲು ಒಪ್ಪಿಗೆ ನೀಡಲಾಗಿದೆ.
- ಇದು ಭಾರತದ ಹಾಲು ಉತ್ಪಾದನೆ ಹಾಗೂ ಮಾರಾಟಕ್ಕೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ಸಹಾಯಕವಾಗಿಲಿದೆ. ಅಲ್ಲದೆ, ಹಾಲಿನ ಸಂಸಕರಣೆ ಹಾಗೂ ತಂತ್ರಜ್ಞಾನ ಅಭಿವೃದ್ಧಿಗೆ ಹೆಚ್ಚಿನ ಸಹಕಾರ ನೀಡುತ್ತದೆ.
- ಡಿಐಡಿಎಫ್ ನ ಪ್ರಮುಖ ಉದ್ದೇಶವೆಂದರೆ ಹಾಲು ಸಂಗ್ರಹಣಾ ವ್ಯವಸ್ಥೆಯಲ್ಲಿ ವಿವಿಧ ಮೂಲ ಸೌಕರ್ಯಗಳನ್ನು ಸ್ಥಾಪಿಸುವುದು, ಎಲೆಕ್ಟ್ರಿಕಲ್ ಹಾಲು ಮಾಪಕಗಳಂತಹ ಸಲಕರಣೆಗಳನ್ನು ಅಳವಡಿಸುವುದು, ಹಾಲು ಉತ್ಪಾದನಾ ಒಕ್ಕೂಟ ಹಾಗೂ ಕಂಪನಿಗಳಿಗೆ ವಿವಿಧ ಸೌಲಭ್ಯ ನೀಡುವುದು ಮುಂತಾದ ಕೆಲಸಗಳನ್ನು ಡಿಐಡಿಎಫ್ ಯೋಜನೆ ಮುಖೇನ ಮಾಡಲಾಗುತ್ತದೆ.

### ಡಿಐಡಿಎಫ್ ನಿರ್ವಹಣಾ ಮಂಡಳಿ

- ಈ ಯೋಜನೆಯನ್ನು ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ (NDDB) ಹಾಗೂ ರಾಷ್ಟ್ರೀಯ ಡೇರಿ ಅಭಿವೃದ್ಧಿ ಸಹಕಾರ (NCDC)ವು ಹಾಲು ಒಕ್ಕೂಟ, ರಾಜ್ಯ ಡೇರಿ ಫೆಡರೇಷನ್, ಹಾಲು ಉತ್ಪಾದಕ ಕಂಪನಿ ಹಾಗೂ ಏನಡಿಡಿಬಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ.
- ಡಿಐಡಿಎಫ್ ನ ಅನುಷ್ಠಾನ ಮತ್ತು ಮೇಲುಸ್ತುವಾರಿ ಕೋಶವನ್ನು ಗುಜರಾತ್ ರಾಜ್ಯದ ಆನಂದ್ ಜಿಲ್ಲೆಯಲ್ಲಿರುವ ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ(ಏನ್ ಡಿಡಿಎಫ್) ನಲ್ಲಿ ಸ್ಥಾಪಿಸಲಾಗುವುದು.
- ಇದು ಆಯಾದಿನದ ಯೋಜನೆ ಮತ್ತು ಅನುಷ್ಠಾನದ ಮೇಲ್ವಿಚಾರಣೆಯನ್ನು ನಿರ್ವಹಿಸುತ್ತದೆ.
- ಹಾಲು ಉತ್ಪಾದಕರಿಗೆ ಶೇ. 6.5ರ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತದೆ. ಮರುಪಾವತಿಯ ಅವಧಿಯು 10 ವರ್ಷಗಳಾಗಿದ್ದು, ಆರಂಭದ ಎರಡು ವರ್ಷಗಳು ಬಡ್ಡಿರಹಿತವಾಗಿವೆ. ಸಾಲ ಮರುಪಾವತಿಯ ಜವಾಬ್ದಾರಿ ಆಯಾ ರಾಜ್ಯ ಸರ್ಕಾರದ್ದೇ ಆಗಿರುತ್ತದೆ.
- ಡೇರಿ ಸಂಸ್ಕರಣಾ ಮತ್ತು ಸೌಕರ್ಯ ನಿಧಿಯ ಹೂಡಿಕೆಯೊಂದಿಗೆ 50 ಸಾವಿರ ಗ್ರಾಮಗಳಲ್ಲಿ 95 ಲಕ್ಷ ರೈತರು ಪ್ರಯೋಜನ ಪಡೆಯಲಿದ್ದಾರೆ. ದಿನಕ್ಕೆ126 ಲಕ್ಷ ಹೆಚ್ಚುವರಿ ಹಾಲು ಸಂಸ್ಕರಣಾ ಸಾಮರ್ಥ್ಯ, 140 ಲಕ್ಷ ಲೀಟರ್ ಹಾಲು ತಂಪಾಗಿಸುವ ಸಾಮರ್ಥ್ಯ, 28 ಸಾವಿರ ಬೃಹತ್ ಕೂಲರ್ಸ್, ಹಾಲಿನ ಕಲಬೆರಕೆ ಪರೀಕ್ಷಾ ಸಲಕರಣೆಗಳು ಹಾಗೂ ವಿವಿಧ ಸಲಕರಣೆಗಳನ್ನು ಅಳವಡಿಸಲಾಗುತ್ತದೆ.
- ಡಿಐಡಿಎಫ್ ಯೋಜನೆಯ ಅನುಷ್ಠಾನವು ನುರಿತ, ಅರೇನುರಿತ, ಹಾಗೂ ಕೌಶಲ/ಕೌಶಲವಿಲ್ಲದವರಿಗೂ ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗವನ್ನು ಸೃಷ್ಟಿಸುತ್ತದೆ. ಅಸ್ತಿತ್ವದಲ್ಲಿರುವ ಹಾಲು ಸಂಸ್ಕರಣಾ ಸೌಕರ್ಯಗಳ ವಿಸ್ತರಣೆ ಮತ್ತು ಆಧುನೀಕರಣ, ಹೊಸ ಸಂಸ್ಕರಣಾ ಘಟನೆಗಳನ್ನು ಸ್ಥಾಪಿಸುವುದು, ಮೌಲ್ಯವರ್ಧಿತ ಉತ್ಪನ್ನಗಳಿಗೆ ಉತ್ಪಾದನಾ ಸೌಲಭ್ಯ ಒದಗಿಸುವುದು ಹಾಗೂ ಹೆಚ್ಚು ಸಂಖ್ಯೆಯಲ್ಲಿ ಹಾಲಿನ ತಂಪುಮಾಡುವ ಘಟಕಗಳನ್ನು ಸ್ಥಾಪಿಸುವಂತ ಯೋಜನೆಗಳಿಂದ 40 ಸಾವಿರ ಜನರಿಗೆ ಉದ್ಯೋಗ ದೊರಕುತ್ತದೆ. ಅಲ್ಲದೆ, ಹಾಲಿನ ಉತ್ಪನ್ನಗಳ ಹೆಚ್ಚಳದಿಂದಾಗಿ ಪಶುವೈದ್ಯ ಸೇವೆ, ಪಶು ಆಹಾರ ಉತ್ಪಾದನೆ ಸೇರಿದಂತೆ ವಿವಿಧ ವಲಯಗಳಿಗೂ ಚೈತನ್ಯ ದೊರೆಯುತ್ತದೆ.
- **ಭಾರತ ವಿಶ್ವದಲ್ಲೇ ಅಧಿಕ ಹಾಲು ಉತ್ಪಾದನೆ ಮಾಡುವ ರಾಷ್ಟ್ರವಾಗಿದ್ದು.** 2016ರಲ್ಲಿ ಶೇ. 6.26ರಷ್ಟು ಹೆಚ್ಚಳ ದಾಖಲಿಸಿತ್ತು.

**8. UNCTAD**

ಪ್ರಮುಖ ಸುದ್ದಿ

- UNCTAD ಯು 1964 ರಲ್ಲಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಸ್ಥಾಪಿಸಿದ ಶಾಶ್ವತ ಅಂತರಸರ್ಕಾರಿ ಸಂಸ್ಥೆಯಾಗಿದೆ.
- ಸ್ವಿಟ್ಜರ್ಲೆಂಡ್ನ ಜಿನೀವಾ ದಲ್ಲಿ ಇದರ ಪ್ರಧಾನ ಕಚೇರಿಯಿದೆ ಮತ್ತು ಯುಎನ್ ಸಚಿವಾಲಯದ ಭಾಗವಾಗಿದೆ .
- ಇದು ಯುನೈಟೆಡ್ ನೇಷನ್ಸ್ ಡೆವಲಪ್ಮೆಂಟ್ ಗ್ರೂಪ್ (UNDG) ನ ಒಂದು ಭಾಗವಾಗಿದೆ.
- ವ್ಯಾಪಾರ, ಹೂಡಿಕೆ ಮತ್ತು ಅಭಿವೃದ್ಧಿ ಸಮಸ್ಯೆಗಳೊಂದಿಗೆ ವ್ಯವಹರಿಸುವಾಗ ಅಭಿವೃದ್ಧಿಶೀಲ ರಾಷ್ಟ್ರಗಳ ಸಮಸ್ಯೆಗಳನ್ನು ನಿಭಾಯಿಸಲು ಇದು ವಿಶೇಷವಾಗಿ ರಚನೆಯಾಗಿದೆ .

**ಇದು ಪ್ರಕಟಿಸುವ ವರದಿಗಳೆಂದರೆ**

- ವಿಶ್ವ ಬಂಡವಾಳ ಹೂಡಿಕೆ ವರದಿ
- ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ವರದಿ
- ಮಾಹಿತಿ ಮತ್ತು ಆರ್ಥಿಕತೆ ವರದಿ
- ತಂತ್ರಜ್ಞಾನ ಮತ್ತು ಇನ್ನೋವೇಶನ್ ವರದಿ ಮತ್ತು ಸರಕುಗಳು ಮತ್ತು ಅಭಿವೃದ್ಧಿ ವರದಿಗಳು

IAS/KAS ನಮ್ಮ ಐಎಎಸ್ ಅಕಾಡೆಮಿ ನಮ್ಮಿಂದ..... ಮನಸ್ಸೂರಿಗೆ/ಮೈಸೂರಿಗೆ

**10 ರಾಜಸ್ಥಾನದಲ್ಲಿ ವಿಶ್ವದ ೨ನೇ ಉದ್ದದ ಮಹಾಗೋಡೆ**

ಪ್ರಮುಖ ಸುದ್ದಿ

- ಚೀನಾದ ಮಹಾಗೋಡೆಯ ಬಗ್ಗೆ ಸಾಮಾನ್ಯವಾಗಿ ಎಲ್ಲರೂ ಕೇಳಿರುತ್ತೇವೆ. ಆದರೆ, ಭಾರತದಲ್ಲಿಯೂ ಅದ್ಭುತವಾದ ಮಹಾಗೋಡೆ ಇದೆ ಎಂಬುದು ಹಲವು ಜನರಿಗೆ ತಿಳಿದಿರಲಿಕ್ಕಿಲ್ಲ.
- ರಾಜಸ್ಥಾನದ ರಾಜ್ ಸಮಂದ್ ಜಿಲ್ಲೆಯ ಬಳಿಯಿರುವ ಕುಂಬಲ್ ಗಢ ಗೋಡೆಯು ವಿಶ್ವದ ಎರಡನೇ ಅತಿ ಉದ್ದವಾದ ಗೋಡೆ ಎಂದು ಹೆಸರಾಗಿದೆ. ಇದು ಮುನ್ನೂರಕ್ಕೂ ದೇವಾಲಯಗಳಿಗೆ

ಕಾವಲುಗಾರನಂತೆ ಸುತ್ತುವರಿದಿದೆ. ಸುಮಾರು 25 ಕಿ.ಮೀ. ದೂರ ವ್ಯಾಪಿಸಿರುವ ಈ ಗೋಡೆ ಹಲವಾರು ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿದೆ.

- ಚೀನಾದ ಮಹಾಗೋಡೆಯನ್ನು ಇದು ಹೋಲುತ್ತದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಗೋಡೆಯು15 ಮೀಟರನಷ್ಟು ದಪ್ಪವಾಗಿದ್ದು, ಆಕರ್ಷಕವಾಗಿ ಕಾಣುತ್ತದೆ.

**16th SEPTEMBER**

**1. ದ್ವಿಪಕ್ಷೀಯ ಬಂಧಕ್ಕೆ ಬುಲೆಟ್ ವೇಗ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

- ಭಾರತದ ರೈಲ್ವೆ ಕ್ಷೇತ್ರದಲ್ಲಿ ಹೊಸ ಯುಗಾರಂಭವಾಗಿದೆ. ರೈಲುಗಳು ಹಳಿ ತಪ್ಪುತ್ತಿರುವ ಅವಘಡಗಳಿಂದಾಗಿ ಇತ್ತೀಚೆಗೆ ರೈಲ್ವೆ ಸುರಕ್ಷತೆ ಬಗ್ಗೆಯೇ ಅನುಮಾನ ಮೂಡಿರುವ ಸಂದರ್ಭದಲಿ, ರೈಲು ಹಳಿಗಳ ಮೇಲೆ ಶರವೇಗದ ಸಾರಥಿಯನ್ನು ತರುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ, ಭಾರತದ ಮೊಟ್ಟ ಮೊದಲ ಬುಲೆಟ್ ರೈಲು ಯೋಜನೆಗೆ ವಿಧ್ಯುಕ್ತ ಚಾಲನೆ ಸಿಕ್ಕಿದೆ.
- ಪ್ರಧಾನಿ ನರೇಂದ್ರ ಮೋದಿ ಹಾಗೂ ಜಪಾನ್ ಪ್ರಧಾನಿ ಶಿಂಜೋ ಅಬೆ ಜಂಟಿಯಾಗಿ ಅಡಿಗಲ್ಲನ್ನಿರಿಸಿದ ಈ ಯೋಜನೆ ದೇಶದ ಪ್ರಗತಿಗೂ ಬುಲೆಟ್ ವೇಗ ತರುವ ನಿರೀಕ್ಷೆ ಹುಟ್ಟಿಸಿದೆ. ಇದರ ಜತೆ, ಇಂಧನ, ಭದ್ರತೆ ಮತ್ತಿತರ 15 ಒಡಂಬಡಿಕೆಗಳು ಉಭಯ ದೇಶಗಳ ಸಂಬಂಧವನ್ನು ಮತ್ತೊಂದು ಎತ್ತರಕ್ಕೆ ಒಯ್ದಿವೆ.

ಮುಖ್ಯ ಪರೀಕ್ಷೆಗಾಗಿ

**ಇದರಿಂದ ಭಾರತಕ್ಕೇನು ಲಾಭ?**

- ಬುಲೆಟ್ ರೈಲು ತಂತ್ರಜ್ಞಾನ ಜಪಾನ್ನಲ್ಲಿ ಸಿದ್ಧವಾದರೂ ಅದರ ಉತ್ಪನ್ನ ಭಾರತದಲ್ಲೇ ತಯಾರಾಗುತ್ತದೆ. ಯೋಜನೆಯಿಂದ 20 ಸಾವಿರ ಭಾರತೀಯರಿಗೆ ಉದ್ಯೋಗ ಸಿಗುತ್ತದೆ. ಭಾರತೀಯ ಕಂಪನಿಗಳಿಗೂ ಪ್ರೋತ್ಸಾಹ ?ಪ್ರಯಾಣ ಅವಧಿ ತಗ್ಗುವುದರಿಂದ ಮಾನವಶ್ರಮ ಉಳಿತಾಯ

ಜಪಾನ್ ಲೆಕ್ಕಾಚಾರವೇನು?

- ಚೀನಾದ ಬುಲೆಟ್ ರೈಲು ತಂತ್ರಜ್ಞಾನಕ್ಕೆ ವಿದೇಶಗಳು ಹೆಚ್ಚು ಆಕರ್ಷಿತವಾಗುತ್ತಿರುವುದರಿಂದ ಜಾಗತಿಕ ಮಾರುಕಟ್ಟೆ ಪ್ರವೇಶಿಸಲು ಭಾರತವನ್ನು ಬಳಸಿಕೊಳ್ಳುವುದು.
- ಈ ಮೊದಲೇ ಕ್ಯಾಲಿಫೋರ್ನಿಯಾದಲ್ಲಿ ಹೈಸ್ಪೀಡ್ ರೈಲು ಯೋಜನೆಗೆ ಪ್ರಸ್ತಾವನೆ ಸಲ್ಲಿಸಿರುವುದರಿಂದ ಭಾರತದ ಯೋಜನೆ ಯಶಸ್ವಿಯಾದಲ್ಲಿ ಅಮೆರಿಕ ಮನವೊಲಿಸುವಿಕೆ ಸುಲಭ.
- 2026ರ ವೇಳೆಗೆ ಸಿಂಗಾಪುರ- ಕೌಲಾಲಂಪುರ ಮಾರ್ಗದ ನಡುವಿನ ಯೋಜನೆ ಪಡೆದುಕೊಳ್ಳಲು ಅಡ್ಡಗಾಲು ಹಾಕುತ್ತಿರುವ ಚೀನಾವನ್ನು ಹಿಂದಿಕ್ಕುವ ಉದ್ದೇಶ. ಮುಂಬೈ-ಅಹಮದಾಬಾದ್ ಕಾರಿಡಾರ್ ಯೋಜನೆ ಯಶಸ್ವಿಯಾದಲ್ಲಿ ದೇಶಾದ್ಯಂತ 6 ಬುಲೆಟ್ ರೈಲು ಕಾರಿಡಾರ್ ಆರಂಭಿಸಲು ಚಿಂತನೆ ನಡೆಸಿರುವ ಭಾರತ ಸರ್ಕಾರದ ಮನವೊಲಿಸುವ ವಿಶ್ವಾಸ.
- 1.10 ಲಕ್ಷ ಕೋಟಿ ರೂ. ವೆಚ್ಚದ ಈ ಯೋಜನೆಗೆ ಜಪಾನ್ (ಶೇ.81)88 ಸಾವಿರ ಕೋಟಿ ರೂ. ಸಾಲ ನೀಡುತ್ತಿದೆ. ಇಂತಹ ಸಾಲಗಳಿಗೆ ವಿಶ್ವಬ್ಯಾಂಕ್ ಶೇ.5.9 ಬಡ್ಡಿ ವಿಧಿಸುತ್ತದೆ. ಆದರೆ ಜಪಾನ್ ಕೇವಲ ಶೇ.0.1 ಬಡ್ಡಿದರದಲ್ಲಿ ಸಾಲ ನೀಡುತ್ತಿದೆ. ಈ ಸಾಲವನ್ನು ಭಾರತ 50 ವರ್ಷಗಳಲ್ಲಿ ಮರುಪಾವತಿಸಬೇಕಿದೆ

**15 ಒಪ್ಪಂದಗಳಿಗೆ ಸಹಿ**

- ಭಾರತ ಹಾಗೂ ಜಪಾನ್ ಮಧ್ಯೆ ವಿಪತ್ತು ನಿರ್ವಹಣೆ, ಕೌಶಲ ಅಭಿವೃದ್ಧಿ, ಸಂಪರ್ಕ, ವಾಣಿಜ್ಯೋದ್ಯಮ, ಹೂಡಿಕೆ, ನಾಗರಿಕ ವಿಮಾನಯಾನ, ವಿಜ್ಞಾನ- ತಂತ್ರಜ್ಞಾನ, ಶಿಕ್ಷಣ ಮತ್ತು ಕ್ರೀಡಾ ವಲಯಗಳಿಗೆ ಸಂಬಂಧಿಸಿದಂತೆ 15 ಒಪ್ಪಂದ ಏರ್ಪಟ್ಟಿವೆ.

**ಉಗ್ರ ನಿಗ್ರಹಕ್ಕೆ ಜಂಟಿ ಯತ್ನ**

- ಪಾಕ್ ಮೂಲದ ಲಷ್ಕರ್-ಇ-ತೋಯ್ಬಾ (ಎಲ್‌ಇಟಿ) ಮತ್ತು ಜೈಷ್-ಇ-ಮೊಹಮ್ಮದ್ (ಜೆಇಎಂ) ಸೇರಿ ಎಲ್ಲ ಉಗ್ರ ಸಂಘಟನೆಗಳನ್ನು ಮಟ್ಟಹಾಕಲು ಸಕಲ ಪ್ರಯತ್ನ ಮಾಡುವುದಾಗಿ ಉಭಯ ರಾಷ್ಟ್ರಗಳು ಘೋಷಿಸಿವೆ. ಮುಂಬೈ ಮತ್ತು ಪಠಾಣ್ಕೋಟ್ ಮೇಲಿನ ದಾಳಿಕೋರರನ್ನು ಶಿಕ್ಷೆಗೆ ಗುರಿಪಡಿಸುವಂತೆಯೂ ಮೋದಿ ಮತ್ತು ಶಿಂಜೋ ಪಾಕಿಸ್ತಾನವನ್ನು ಆಗ್ರಹಿಸಿದ್ದಾರೆ,
- ಭಾರತದ ವಿವಿಧ ವಲಯಗಳಲ್ಲಿ ಜಪಾನ್ 30,199 ಕೋಟಿ ರೂ. (4.70 ಬಿಲಿಯನ್ ಡಾಲರ್) ಬಂಡವಾಳ ಹೂಡಲಿದೆ. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಬಂಡವಾಳ ಹೂಡಿಕೆ ಪ್ರಮಾಣ ಶೇ.80ರಷ್ಟು ಏರಿಕೆ ಆದಂತಾಗಲಿದೆ.

**ಮೇಕ್ ಇನ್ ಇಂಡಿಯಾ**

- ತಂತ್ರಜ್ಞಾನ ಜಪಾನ್ ದೇಶದ್ದಾದರೂ ನಿರ್ಮಾಣ ಕಾರ್ಯ ಮೇಕ್ ಇನ್ ಇಂಡಿಯಾ ಯೋಜನೆಯನ್ವಯ ನಡೆಯಲಿದೆ. ತರಬೇತಿ ನೀಡಲು ಜಪಾನ್ನ 100ಕ್ಕೂ ಹೆಚ್ಚು ಇಂಜಿನಿಯರ್‌ಗಳು ಭಾರತಕ್ಕೆ ಬಂದಿದ್ದಾರೆ. ಭಾರತದ ಮೇಕ್ ಇನ್ ಇಂಡಿಯಾ ಯೋಜನೆಗೆ ಉತ್ತೇಜನ ನೀಡಲು ಜಪಾನ್ ನ ಕೈಗಾರಿಕೆಗಳು ಕೂಡ ಮುಂದಾಗುತ್ತಿವೆ .
- ಬುಲೆಟ್ ರೈಲಿಗೆ ಸಂಬಂಧಪಟ್ಟಂತೆ ವಡೋದರಾದಲ್ಲಿ ಹೈಸ್ಪೀಡ್ ರೈಲು ತರಬೇತಿ ಸಂಸ್ಥೆ ಸ್ಥಾಪನೆಗೊಳ್ಳಲಿದೆ. ಈ ಸಂಸ್ಥೆಯಲ್ಲಿ 4 ಸಾವಿರಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಲಾಗುತ್ತದೆ. ಬುಲೆಟ್ ರೈಲು ಯೋಜನೆಯಿಂದಾಗಿ ದೇಶದಲ್ಲಿ ಒಟ್ಟಾರೆ 20 ಲಕ್ಷ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ಪ್ರಧಾನಿ ಹೇಳಿದರು.

**ಪ್ರಮುಖ ಒಪ್ಪಂದಗಳು**

- ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ಒಪ್ಪಂದ- ಉಭಯ ದೇಶಗಳ ನಗರಗಳ ಮಧ್ಯೆ ಅನಿರ್ಬಂಧಿತ ವಿಮಾನ ಹಾರಾಟ ಭಾರತದಲ್ಲಿ ಜಪಾನಿ ಭಾಷೆ ಕಲಿಕೆಗೆ ಸಹಕಾರ . ಭಾರತ-ಜಪಾನ್ ಈಸ್ಟ್ ವೇದಿಕೆ ಮೂಲಕ ಈಶಾನ್ಯ ಭಾರತದ ಜತೆಗೆ ಸಂಪರ್ಕ ಹೆಚ್ಚಳ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಉತ್ತೇಜನ ಕೂಲ್ ಇಎಂಎಸ್ ಸೇವೆ (ಶೀತಲಿಕೃತ ಬಾಕ್ಸ್ ಳಲ್ಲಿ ಆಹಾರ ರವಾನೆ) ಉಭಯ ದೇಶಗಳ ಅಂಚೆ ಇಲಾಖೆ ಮಧ್ಯೆ ಒಪ್ಪಂದ
- ಗುಜರಾತ್ನಲ್ಲಿ ವಿವಿಧ ಯೋಜನೆಗಳಲ್ಲಿ ಜಪಾನ್ ಹೂಡಿಕೆಗೆ ಉತ್ತೇಜನ ಉಭಯ ದೇಶಗಳ ಯುವ ವಿಜ್ಞಾನಿಗಳಿಗೆ ಉತ್ತೇಜನ ನೀಡಲು ವಿಜ್ಞಾನ- ತಂತ್ರಜ್ಞಾನ ವಿಷಯದಲ್ಲಿ ಜಂಟಿ ವಿನಿಮಯ ಕಾರ್ಯಕ್ರಮಕ್ಕೆ ಒಪ್ಪಿಗೆ.
- ಜಪಾನ್ನಿಂದ ಭಾರತದಲ್ಲಿ ಡೈಸೆಂಟರ್ (ಟ್ರಾನ್ಸ್ಲೇಷನಲ್ ಮತ್ತು ಎನ್ವಿರಾನ್ಮೆಂಟಲ್ ಸಂಶೋಧನೆಯ ಡಿಬಿಟಿ-ಎಐಎಸ್ಟಿ ಅಂತಾರಾಷ್ಟ್ರೀಯ ಕೇಂದ್ರ) ಸ್ಥಾಪನೆ ಜೀವ ವಿಜ್ಞಾನ ಮತ್ತು ಬಯೋಟೆಕ್ನಾಲಜಿ ಸಂಬಂಧಿಸಿದಂತೆ ಸಂಶೋಧನಾ ಸಂಸ್ಥೆ ಸ್ಥಾಪನೆ ಕ್ರೀಡಾ ಸಂಸ್ಥೆಗಳ ಮಧ್ಯೆ ಕ್ರೀಡಾ ವಿಷಯ ವಿನಿಮಯ

**ಪರಿವರ್ತನೆಯ ಸಂಕೇತ**

- ಬುಲೆಟ್ ರೈಲು ಒಪ್ಪಂದ ಬರೀ ಆರ್ಥಿಕ ಅಥವಾ ದ್ವಿಪಕ್ಷೀಯ ಅಲ್ಲ, ಭಾರತದ ಪರಿವರ್ತನೆಯ ಸಂಕೇತ ಎನ್ನಬಹುದು. ದೇಶದ ಹಿತದೃಷ್ಟಿಯಿಂದ ನಾವು ಮುಂದೆ ಎಲ್ಲಿಗೆ ಹೋಗಬೇಕು ಎಂಬುದರ ದ್ಯೋತಕ. ಈ ರೈಲಿನಿಂದ ಮೂಲಸೌಕರ್ಯ, ಆರ್ಥಿಕ ಪ್ರಗತಿ, ಅಭಿವೃದ್ಧಿ ದರ ಹೆಚ್ಚಳದ ಸಾಧ್ಯತೆಯಿದೆ.
- ಈ ಯೋಜನೆಯಿಂದ ಎರಡೂ ದೇಶಗಳಿಗೆ ಪ್ರಯೋಜನವಿದೆ. ಜಪಾನ್ ಭಾರತದ ವಿಶ್ವಾಸಿಕ ಪಾಲುದಾರ. ಕಳೆದ ವರ್ಷವೊಂದರಲ್ಲೇ ಜಪಾನ್ ಭಾರತದಲ್ಲಿ ಸುಮಾರು 4 ಶತಕೋಟಿ ಡಾಲರ್

ಹೂಡಿಕೆ ಮಾಡಿದೆ. ಆ ದೇಶದ ಅನೇಕ ಕಂಪನಿಗಳು ನಮ್ಮಲ್ಲಿವೆ. ಜಪಾನ್ ದೆಹಲಿ-ಮುಂಬೈ ಕಾರಿಡಾರ್ಗೂ ಬೆಂಬಲ ನೀಡುತ್ತಿದೆ.

- ಡೋಕ್ಲಮ್ ಬಿಕ್ಕಟ್ಟು ಪರಿಹಾರದ ನಂತರ ಜಾಗತಿಕವಾಗಿ ಭಾರತದ ಪ್ರತಿಷ್ಠೆ ಹೆಚ್ಚಿದೆ; ಇದು ಬಲಯುತ ದೇಶ ಎಂಬ ಭಾವನೆ ಮೂಡಿದೆ. ಹೀಗಾಗಿ ಇತರ ದೇಶಗಳು ನಮ್ಮೊಂದಿಗೆ ವ್ಯವಹರಿಸಲು ಮುಂದಾಗುತ್ತಿವೆ. ಇನ್ನು, ಜಪಾನ್ ಜತೆಗಿನ ಇತರ ಒಪ್ಪಂದಗಳಿಂದ ಉಭಯ ದೇಶಗಳಿಗೆ ಮಾತ್ರವಲ್ಲ, ಈ ಇಡೀ ವಲಯದ ಶಾಂತಿ, ಸ್ಥಿರತೆಗೂ ಅನುಕೂಲವಾಗಲಿದೆ.

## 2. ಅಸ್ಸಾಂ ರಾಜ್ಯದಲ್ಲಿ ಜನಸಂಖ್ಯೆ ಮತ್ತು ಮಹಿಳಾ ಸಬಲೀಕರಣ ನೀತಿ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

**ಪ್ರಮುಖ ಸುದ್ದಿ**

- ದೇಶದಲ್ಲಿ ಏರುತ್ತಿರುವ ಜನಸಂಖ್ಯೆಯ ಸ್ಫೋಟವನ್ನು ತಡೆಯಲು, ವಿಶೇಷವಾಗಿ ಧಾರ್ಮಿಕ ಅಲ್ಪಸಂಖ್ಯಾತರ ನಡುವೆ, ಮಹಿಳಾ ಸಬಲೀಕರಣದ ಮೂಲಕ ಹೆಚ್ಚುತ್ತಿರುವ ಜನಸಂಖ್ಯಾ ಬದಲಾವಣೆ ಮತ್ತು ಸೀಮಿತ ಸಂಪನ್ಮೂಲಗಳ ಮೇಲೆ ನಿಯಂತ್ರಣ ತರುವ ಸಲುವಾಗಿ ಅಸ್ಸಾಂ ಶಾಸನಸಭೆಯು 'ಅಸ್ಸಾಂನ ಜನಸಂಖ್ಯೆ ಮತ್ತು ಮಹಿಳಾ ಸಬಲೀಕರಣ ನೀತಿ' ಯನ್ನು ಅಳವಡಿಸಿಕೊಳ್ಳುತ್ತಿದೆ .

**ಮುಖ್ಯ ಪರೀಕ್ಷೆಗಾಗಿ**

ನೀತಿಯ ಮುಖ್ಯಾಂಶಗಳು:

* ಈ ನೀತಿಯು ಸರ್ಕಾರಿ ಸೇವಕರಿಗೆ ಮತ್ತು ಪಂಚಾಯತ್, ಪುರಸಭೆಯ ಚುನಾಯಿತ / ನಾಮನಿರ್ದೇಶಿತ ಪ್ರತಿನಿಧಿಗಳಿಗೆ ಕಟ್ಟುನಿಟ್ಟಾದ ಪಾಲಿಸಿಯು ಸಬಲೀಕರಣ ಮತ್ತು ಜಾಗೃತಿ ಬಗ್ಗೆ ಜಾಗೃತಿ ಮೂಡಿಸಲಿದೆ .

* ರಾಜ್ಯ ಮಟ್ಟದಲ್ಲಿ ಪಂಚಾಯತ್, ಪುರಸಭೆ ಮತ್ತು ಇತರ ಶಾಸನಬದ್ಧ ಸಂಸ್ಥೆಗಳು ಮತ್ತು ಸಮಿತಿಗಳ ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ಇಬ್ಬರಿಗಿಂತಲೂ ಹೆಚ್ಚು ಮಕ್ಕಳನ್ನು ಹೊಂದಿದ ಜನರಿಗೆ ಈ ನೀತಿಯು ನಿಬಂಧನೆಗಳನ್ನು ಹೊಂದಿದೆ

ಹಿನ್ನೆಲೆ:

- ಅಸ್ಸಾಂನ ಸರಾಸರಿ ಕುಟುಂಬದ ಗಾತ್ರವು ರಾಷ್ಟ್ರೀಯ ಸರಾಸರಿಗಿಂತ ಶೇ 5.5 ಹಿಚ್ಚಿದೆ , ಮತ್ತು 2011 ರ ಜನಗಣತಿಯ ಪ್ರಕಾರ ಜನಸಂಖ್ಯೆಯನ್ನು ಸುಮಾರು ಒಂದು ಕೋಟಿ ಯಸ್ಸು ಹೆಚ್ಚಾಗಿದೆ., 2001 ಜನಗಣತಿ ಪ್ರಕಾರ ಜನಸಂಖ್ಯಾ ಸಾಂದ್ರತೆಯು 398 ಆಗಿದೆ, 2011 ರಲ್ಲಿ ಇದು 340 ರಷ್ಟಿತ್ತು.
- ಜನಸಂಖ್ಯಾ ಒತ್ತಡವು ಆರ್ಥಿಕತೆಯ ಮೇಲೆ ಆಳವಾದ ಪರಿಣಾಮವನ್ನು ಬೀರಿದೆ. 2005 ಮತ್ತು 2014 ರ ನಡುವೆ ಅಸ್ಸಾಂ ಜಿಡಿಪಿ ಬೆಳವಣಿಗೆ (6% ಕ್ಕಿಂತ ಕಡಿಮೆ) ಐದು ರಾಜ್ಯಗಳಿಗಿಂತ ಕಡಿಮೆಯಾಗಿದೆ .
- UNDP ಯ ಬಡತನದ ಅನುಪಾತ ವಿಭಾಗದಲ್ಲಿ 37.9% ಜನಸಂಖ್ಯೆಯು ಕುಸಿದಿದೆ. ಮತ್ತು ನಿರುದ್ಯೋಗ ದರವು ಸಹ ಹೆಚ್ಚಾಗಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 3. ಚೆನ್ನೈ- ವಾಲ್ದಿವೊಸ್ಟಾಕ್ ಸಾಗರ ಮಾರ್ಗಕ್ಕೆ ಭಾರತ ಪ್ರಯತ್ನ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

**ಪ್ರಮುಖ ಸುದ್ದಿ**

- ಚೀನಾದ ಓಬಿಓಆರ್ ಯೋಜನೆಗೆ ಪ್ರತಿಯಾಗಿ ಚೆನ್ನೈ- ವಾಲ್ದಿವೊಸ್ಟಾಕ್ ಸಾಗರ ಮಾರ್ಗಕ್ಕೆ ಚಾಲನೆ ನೀಡುವ ಮಹತ್ವದ ಯೋಜನೆಗೆ ಭಾರತ ಮುಂದಾಗಿದೆ. ಇದು ಭಾರತದ ಪ್ರಮುಖ

ಚೆನ್ನೈ ಬಂದರು ಮತ್ತು ರಷ್ಯಾದ ಪ್ರಮುಖ ಬಂದರು ಎನಿಸಿದ ವಾಲ್ದಿವೋಸ್ಟಾಕ್ ನಡುವೆ ಸಂಪರ್ಕ ಕಲ್ಪಿಸಲಿದೆ.

- ಈ ಸಹಜ ಜಲಮಾರ್ಗವು ವಾಯವ್ಯ ಏಷ್ಯಾ ಮತ್ತು ಪಶ್ಚಿಮ ಫೆಸಿಫಿಕ್ ಪ್ರದೇಶಗಳ ನೈಸರ್ಗಿಕ ಸಂಪನ್ಮೂಲಗಳ ವಹಿವಾಟಿಗೆ ಪ್ರಮುಖ ಸಾಧನವಾಗಲಿದೆ.

**ಮುಖ್ಯ ಪರೀಕ್ಷೆಗಾಗಿ**

- ಭಾರತ 1992ರಲ್ಲಿ ಮೊಟ್ಟಮೊದಲ ಬಾರಿಗೆ ವ್ಲಾದಿವೊಸ್ಟಾಕ್‌ನಲ್ಲಿ ಸನಿವಾಸಿ ಕಾನ್ಸುಲೇಟ್ ಆರಂಭಿಸುವ ಮೂಲಕ ಈ ಸೌಲಭ್ಯ ಸೃಷ್ಟಿಸಿದ ಮೊದಲ ದೇಶ ಎನಿಸಿಕೊಂಡಿತ್ತು. ಪ್ರಸ್ತುತ ಭಾರತ ಈ ಪ್ರದೇಶದ ಜತೆ ಹೊಂದಿರುವ ಸಂಪರ್ಕವು ಇರ್ಕುಲ್ ಸಹಕಾರದ ಕೆಲ ಪ್ರದೇಶಗಳಿಗೆ ಸೀಮಿತವಾಗಿದ್ದು,
- ಎಂಐಜಿ ಹಾಗೂ ಸುಖೋಯ್ ವಿಮಾನಗಳನ್ನು ನಿರ್ಮಿಸುವುದಕ್ಕೆ ಇದು ಸೀಮಿತವಾಗಿದೆ. ಇದರಡಿ ಓಎನ್‌ಜಿಸಿ ವಿದೇಶ ಲಿಮಿಟೆಡ್ ಸಂಸ್ಥೆ ಸಕಲಿನ್‌ನಲ್ಲಿ ಒಂದು ಯೋಜನೆಗೆ 600 ಕೋಟಿ ಡಾಲರ್ ಹೂಡಿಕೆ ಮಾಡಿದೆ.
- ಇದು ಮರಮುಟ್ಟು, ವಜ್ರ ಹಾಗೂ ಕಲ್ಲಿದ್ದಲಿನಂಥ ಖನಿಜ ಸಂಪನ್ಮೂಲಗಳಿಂದ ಸಮೃದ್ಧವಾಗಿದ್ದು, ಚಿನ್ನ, ಪ್ಲಾಟಿನಂ, ತವರ ಹಾಗೂ ಟಂಗ್‌ಸ್ಟನ್‌ನಂಥ ಅಮೂಲ್ಯ ಲೋಹಗಳ ನಿಕ್ಷೇಪವೂ ಸಾಕಷ್ಟಿದೆ. ತೈಲ ಮತ್ತು ನೈಸರ್ಗಿಕ ಅನಿಯ ಸಂಪನ್ಮೂಲವೂ ಇಲ್ಲಿ ಹೇರಳವಾಗಿ ಸಿಗುತ್ತದೆ.
- ಈ ಪ್ರಸ್ತಾವಿತ ಸಾಗರ ಯಾನ ಮಾರ್ಗವನ್ನು ಇಂಡೋ- ಜಪಾನ್ ಫೆಸಿಫಿಕ್‌ನಿಂದ ಹಿಂದೂ ಮಹಾಸಾಗರಕ್ಕೆ ಕಾರಿಡಾರ್ ಯೋಜನೆಯಾಗಿ ಅಭಿವೃದ್ಧಿಪಡಿಸುವ ಮೂಲಕ ಚೀನಾದ ಸಾಗರ ರೇಷ್ಮೆ ಮಾರ್ಗ ಯೋಜನೆಗೆ ಪ್ರತಿಯಾಗಿ ರೂಪಿಸಬಹುದಾಗಿದೆ. ಚೀನಾದ ಈ ಯೋಜನೆಯಡಿ ಇಡೀ ಆಗ್ನೇಯ ಏಷ್ಯಾಗೆ ಜಲ, ಭೂ ಮಾರ್ಗ ಹಾಗೂ ರೈಲು ಯೋಜನೆಯ ಮೂಲಕ ಸಂಪರ್ಕ ಸಾಧಿಸಲಾಗುತ್ತದೆ.
- ರಷ್ಯಾದ ಪೂರ್ವ ಒಳನಾಡು ಪ್ರದೇಶದಲ್ಲಿ ಚೀನಾದ ಅಸ್ತಿತ್ವ ಹೆಚ್ಚಿಸುವ ಪ್ರಯತ್ನಕ್ಕೆ ರಷ್ಯಾ ವಿರೋಧ ವ್ಯಕ್ತಪಡಿಸಿದ್ದು, ಚೀನಾದಿಂದ ಬಹಳಷ್ಟು ಮಂದಿ ಇಲ್ಲಿಗೆ ಬಂದು ನೆಲೆಸಲು ಇದು ಅನುಕೂಲವಾಗುತ್ತದೆ ಎನ್ನುವುದು ರಷ್ಯಾದ ಆತಂಕ.

➢ ಇದು ರಷ್ಯಾದ ಪೂರ್ವ ಒಳನಾಡಿನ ಜನಸಂಖ್ಯಾ ಸಮತೋಲನಕ್ಕೆ ಧಕ್ಕೆಯಾಗುತ್ತದೆ ಎಂಬ ಆತಂಕ ರಷ್ಯಾದ್ದು. ಈ ಹಿನ್ನೆಲೆಯಲ್ಲಿ ಭಾರತ ಸೇರಿದಂತೆ ವಿವಿಧ ದೇಶಗಳ ಜನರ ಅಸ್ತಿತ್ವ ಸ್ಥಾಪನೆಗೆ ಅವಕಾಶನೀಡುವ ಮೂಲಕ ಸಮತೋಲನ ಸಾಧಿಸುವ ಪ್ರಯತ್ನವನ್ನು ರಷ್ಯಾ ಮಾಡುತ್ತಿದೆ.

**4. ಅಲಾಂಗ್-ಸೊಸಿಯ ಶಿಪ್ಯಾರ್ಡ್ ಅನ್ನು ನವೀಕರಿಸಲು JICA ಯೊಂದಿಗೆ ಭಾರತ ಒಪ್ಪಂದ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

**ಪ್ರಮುಖ ಸುದ್ದಿ**

➢ ಅಲಾಂಗ್-ಸೊಶಿಯಾ ಹಡಗಿನ ಮರುಬಳಕೆಗಳಲ್ಲಿ ಪರಿಸರ ನಿರ್ವಹಣೆ ಯೋಜನೆಯನ್ನು ನವೀಕರಿಸುವ ಯೋಜನೆಗಾಗಿ, ಭಾರತ ಸರ್ಕಾರವು ಜಪಾನ್ ಅಂತರರಾಷ್ಟ್ರೀಯ ಸಹಕಾರ ಏಜೆನ್ಸಿ (JICA) ನೊಂದಿಗೆ $ 76 ಮಿಲಿಯನ್ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಿದೆ.

ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಮುಖ್ಯ ಪರೀಕ್ಷೆಗಾಗಿ

* ಯೋಜನೆಯ ಒಟ್ಟು ವೆಚ್ಚ $ 111 ಮಿಲಿಯನ್ ಆಗಿರುತ್ತದೆ, ಅದರಲ್ಲಿ $ 76 ಮಿಲಿಯನ್ ಅನ್ನು JICA ದಿಂದ ಸಾಲವಾಗಿ ನೀಡಲಾಗುತ್ತದೆ.

* ಗುಜರಾತ್ ಮ್ಯಾರಿಟೈಮ್ ಬೋರ್ಡ್ (GMB) ಈ ಯೋಜನೆಯನ್ನು ಕಾರ್ಯಗತಗೊಳಿಸಲಿದೆ ಮತ್ತು 2022 ರೊಳಗೆ ಪೂರ್ಣಗೊಳ್ಳಲಿದೆ.

ಈ ಯೋಜನೆಯ ಪ್ರಯೋಜನಗಳು

* ಅಂತರರಾಷ್ಟ್ರೀಯ ಸುರಕ್ಷತೆ ಮತ್ತು ಪರಿಸರ ನಿಯಮಗಳಿಗೆ ಅನುಸಾರವಾಗಿ ಈ ಯೋಜನೆಯನ್ನು ಅಲಾಂಗ್-ಸೋಶಿಯಾ ಹಡಗಿನ ಮರುಬಳಕೆಗಳಿಗೆ ಸಹಾಯ ಮಾಡುತ್ತದೆ.

* ಇದು ಅಲಾಂಗ್ನಲ್ಲಿನ ಮರುಬಳಕೆ ಸೌಲಭ್ಯಗಳಲ್ಲಿ ಹೆಚ್ಚು ವ್ಯಾಪಾರವನ್ನು ಆಕರ್ಷಿಸುತ್ತದೆ, ಇದರಿಂದ ಜಾಗತಿಕ ಹಡಗು-ಮರುಬಳಕೆ ಉದ್ಯಮದಲ್ಲಿ ಭಾರತದ ಪಾಲು ಮತ್ತಷ್ಟು ಬಲಗೊಳ್ಳುತ್ತದೆ.

* ಈ ಯೋಜನೆಯು ಸಮುದ್ರ ಮತ್ತು ಕರಾವಳಿ ಪರಿಸರವನ್ನು ಕಾಪಾಡುವಲ್ಲಿ ಸಹಾಯ ಮಾಡುತ್ತದೆ. ಮುಂದುವರಿದ ಶುದ್ಧೀಕರಣ ತಂತ್ರಜ್ಞಾನವನ್ನು ಬಳಸುವುದು. ಎಣ್ಣೆ ಮತ್ತು ರಾಸಾಯನಿಕ ಟ್ಯಾಂಕರ್ನಲ್ಲಿ ಬೆಂಕಿಯ ಅಪಘಾತಗಳ ಸಾಧ್ಯತೆಯನ್ನು ತಳ್ಳಿಹಾಕುತ್ತದೆ. ಇದರಿಂದಾಗಿ ಕಾರ್ಮಿಕರ ಸುರಕ್ಷತೆಯನ್ನು ಖಾತ್ರಿಗೊಳಿಸುತ್ತದೆ.

* ಯೋಜನೆಯು 50,000 ದಿಂದ 92,000 ಜನರಿಗೆ ನೇರ ಉದ್ಯೋಗದಲ್ಲಿ ಮತ್ತು 1.5 ಲಕ್ಷದಿಂದ 3 ಲಕ್ಷ ಜನರಿಗೆ ಪರೋಕ್ಷ ಉದ್ಯೋಗವನ್ನು ಹೆಚ್ಚಿಸಲು ಕಾರಣವಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

## 5. ರಾಷ್ಟ್ರೀಯ ಪ್ರಾಧಾನ್ಯತೆ ಸಂಸ್ಥೆ (INI)

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಪ್ರಮುಖ ಸುದ್ದಿ**

- ಐಎನ್ಐ ಸಂಸತ್ತಿನ ಒಂದು ಕಾಯ್ದೆ ಮೂಲಕ ಭಾರತದಲ್ಲಿನ ಪ್ರಧಾನ ಸಾರ್ವಜನಿಕ ಉನ್ನತ ಶಿಕ್ಷಣ ಸಂಸ್ಥೆಗೆ ನೀಡುವ ಸ್ಥಾನಮಾನವಾಗಿದೆ.
- ಇದು "ರಾಷ್ಟ್ರ / ರಾಜ್ಯದ ನಿರ್ದಿಷ್ಟ ಪ್ರದೇಶದ ಒಳಗೆ ಹೆಚ್ಚು ನುರಿತ ಸಿಬ್ಬಂದಿ ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಅಂಶವಾಗಿ ಕಾರ್ಯನಿರ್ವಹಿಸುತ್ತದೆ"
- INIಯು ವಿಶೇಷ ಮನ್ನಣೆ ಮತ್ತು ನಿಧಿಯನ್ನು ಪಡೆಯುತ್ತವೆ.
- ಎಲ್ಲಾ ಐಐಟಿಗಳು, ಎನ್ಐಟಿಗಳು, ಎಐಐಎಂಎಸ್, ಸ್ಕೂಲ್ ಆಫ್ ಪ್ಲಾನಿಂಗ್ ಮತ್ತು ಆರ್ಕಿಟೆಕ್ಚರ್ ಮತ್ತು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್ ರಾಷ್ಟ್ರೀಯ ಪ್ರಮುಖ ಸಂಸ್ಥೆಗಳೆಂದು ಎಂದು ಪರಿಗಣಿಸಲಾಗಿದೆ.

**6.ಟ್ರಾಲ್ಲ್ ಸಿಸ್ಟಮ್**

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

**ಪ್ರಮುಖ ಸುದ್ದಿ**

- DRDO ಇತ್ತೀಚೆಗೆ ಟ್ರಾಲ್ ಸಿಸ್ಟಮ್ ಎಂಬ ಸ್ಥಳೀಯ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಂಡಿದೆ.
- ಟ್ರಾಲ್ಲ್ ಸಿಸ್ಟಮ್ ಅನ್ನು ಗಣಿ ಪ್ರದೇಶಗಳಲ್ಲಿ ಮತ್ತು ಯುದ್ಧ ವಲಯದಲ್ಲಿ ಯಾಂತ್ರೀಕೃತ ಪಡೆಗಳ ಪ್ರಗತಿಗಾಗಿ ವಾಹನದ ಸುರಕ್ಷಿತ ಮಾರ್ಗವನ್ನಾಗಿ ಬಳಸಲಾಗುತ್ತದೆ
- ಇದು ಮೇಕ್ ಇನ್ ಇಂಡಿಯಾ' ಉಪಕ್ರಮದ ಅಡಿಯಲ್ಲಿ ವಿಮರ್ಶಾತ್ಮಕ ಮಿಲಿಟರಿ ಉಪಕರಣಗಳ ಪ್ರದೇಶಗಳಲ್ಲಿ ಸ್ವಾವಲಂಬನೆ ಸಾಧಿಸಲು ಸ್ಥಳೀಯ ಅಭಿವೃದ್ಧಿ ಪ್ರಮುಖ ಹಂತವಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**18th SEPTEMBER**

**1. ದೊಡ್ಡ ನಗರಗಳಲ್ಲಿ FSI/FAR ಮಾನದಂಡಗಳ ವಿಮರ್ಶೆ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ದೇಶದ ಮೆಗಾ ನಗರಗಳಲ್ಲಿ ಮಹಡಿ ಸ್ಥಳದ ಏರಿಳಿತದ ಸೂಚಿ(ಎಫ್ಎಸ್ಐ) ಮತ್ತು ಫ್ಲೋರ್ ಏರಿಯಾ ರೇಶಿಯೋ (FAR) ಮಾನದಂಡಗಳ ಪರಿಶೀಲನೆಗೆ ಸರ್ಕಾರ ಆದೇಶಿಸಿದೆ. ಈ ಮಾನದಂಡಗಳ ಸಮಯ ಪರಿಶೀಲನೆಯು ಸುಮಾರು 53 ನಗರಗಳಲ್ಲಿ ಒಂದು ದಶಲಕ್ಷದಷ್ಟು ಮತ್ತು ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ನಗರಗಳಲ್ಲಿ ಪರಿಶೀಲನೆ ನಡೆಸಲಿದೆ .
- ದಶಲಕ್ಷಕ್ಕೂ ಕಡಿಮೆ ಜನಸಂಖ್ಯೆ ಹೊಂದಿರುವ ರಾಜ್ಯ ರಾಜಧಾನಿಗಳಿಗು ಸಹ ಇದೇ ರೀತಿಯ ವಿಮರ್ಶೆ ಕೂಡಾ ಸಹಜವಾಗಿ ತೆಗೆದುಕೊಳ್ಳಲಾಗುತ್ತದೆ.
- ರಾಜ್ಯ ಮತ್ತು ನಗರಗಳೊಂದಿಗೆ ಸಮಾಲೋಚಿಸಿ ಈ ಕ್ರಮವನ್ನು ಕೈಗೊಳ್ಳಲಾಗುತ್ತದೆ . ಅದರಿಂದ ಈಗಿರುವ ರೂಢಿಗಳ ಮೌಲ್ಯಮಾಪನವನ್ನು ಮತ್ತು ಅದನ್ನು ಯಾವ ಮಟ್ಟದಲ್ಲಿ ವರ್ಧಿಸಬಹುದೆಂದು ತಿಳಿಯುವುದು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಮುಖ್ಯ ಪರೀಕ್ಷೆಗಾಗಿ**

**ಎಫ್ಎಸ್ಐ ಎಂದರೇನು?**

- ಫ್ಲೋರ್ ಸ್ಪೇಸ್ ಇಂಡೆಕ್ಸ್ (ಎಫ್ಎಸ್ಐ) ಅಂದರೆ ನಿರ್ಮಿತ ಪ್ರದೇಶ ಮತ್ತು ನಿವೇಶನದ ನಡುವಿನ ಅನುಪಾತ. ನಿವೇಶನದ ಅಳತೆ 100 ಚದರ ಮೀಟರ್ ಆಗಿದ್ದರೆ ಎಫ್ಎಸ್ಐ 1 ಆಗಿರುತ್ತದೆ. ಇದರ ಪ್ರಕಾರ ನಿವೇಶನದ ಮಾಲೀಕರು ಸೆಟ್‌ಬ್ಯಾಕ್ ಮತ್ತು ಓಪನ್‌ಸ್ಪೇಸ್‌ಗೋಳನ್ನು ಬಿಟ್ಟು 100 ಚದರಮೀಟರ್‌ನಷ್ಟು ಕಟ್ಟಡ ಕಟ್ಟಬಹುದು.

- ಒಂದು ಮಹಡಿಗಿಂತಲೂ ಹೆಚ್ಚಾಗಿ ಕಟ್ಟಿಸಬಹುದು.ಇದರರ್ಥ ಎಫ್ಎಸ್ಐ ಹೆಚ್ಚಿದ್ದರೆ ನಿರ್ಮಿತ ಪ್ರದೇಶವೂ ಹೆಚ್ಚುತ್ತದೆ.. ಭಾರತೀಯ ನಗರಗಳಲ್ಲಿ, ಇದು ಸಾಮಾನ್ಯವಾಗಿ 1.50 ರಷ್ಟಿರುತ್ತದೆ, ಇದು ತ್ವರಿತ ನಗರೀಕರಣದ ಅಗತ್ಯತೆಗಳ ಕೆಳಭಾಗದಲ್ಲಿದೆ ಎಂದು ಹೇಳಲಾಗುತ್ತದೆ

**ವಿಮರ್ಶೆ ಅಗತ್ಯವಿದೆಯೇ ??**

- ನೀತಿ ಅಯೋಗ್ ತನ್ನ ವರದಿಯಲ್ಲಿ ಮುಂಬೈ ಮತ್ತು ಶಾಂಘೈಗಳ ಹೋಲಿಕೆಯಿಂದ ಎಫ್ಎಸ್ಐನ ಹಾನಿಕರ ಪರಿಣಾಮಗಳನ್ನು ವಿವರಿಸುತ್ತದೆ.
- 1984 ರಲ್ಲಿ ಶಾಂಘೈಯಲ್ಲಿ ಪ್ರತಿ ವ್ಯಕ್ತಿಗೆ ಕೇವಲ 3.65 ಚ.ಮಿ.ಮೀ. ಎಫ್ಎಸ್ಐನ ಉದಾರ ಬಳಕೆಯಿಂದ, 1984 ರಿಂದಲೂ ಜನಸಂಖ್ಯೆಯ ಹೆಚ್ಚಳದ ಹೊರತಾಗಿಯೂ, ನಗರದಲ್ಲಿ ಲಭ್ಯವಿರುವ ಜಾಗವನ್ನು ಪ್ರತಿ ವ್ಯಕ್ತಿಗೆ 34 ಚ.ಮಿ.ಟಿಗೆ ಹೆಚ್ಚಿಸಿತು . ಇದಕ್ಕೆ ವ್ಯತಿರಿಕ್ತವಾಗಿ, 2009 ರಲ್ಲಿ ಮುಂಬೈ ಸರಾಸರಿ 4.50 ಚದರ ಮೀಟರ್ನಷ್ಟು ಜಾಗವನ್ನು ನೀಡಿತ್ತು .
- ಆದ್ದರಿಂದ, ದೇಶದಲ್ಲಿ ನಗರ ಅಭಿವೃದ್ಧಿಗೆ ಸರಿಯಾಗಿ ಯೋಜಿತ ಉತ್ತೇಜನ ನೀಡಲು ವಿಮರ್ಶೆ ಅಗತ್ಯವಾಗಿರುತ್ತದೆ. ಇದಲ್ಲದೆ, ನಗರ ಪ್ರದೇಶಗಳಲ್ಲಿ ಭೂಮಿ ಲಭ್ಯತೆಯನ್ನು ಹೆಚ್ಚಿಸುವುದು ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಅಡಿಯಲ್ಲಿ ಕೈಗೆಟುಕುವ ವಸತಿ ಬೇಡಿಕೆ ಪೂರೈಸಲು ಮಹತ್ವದ್ದಾಗಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಯಾವರೀತಿ ಸರಕಾರ ಪರಿಶೀಲನೆಯ ಅಗತ್ಯವಿದೆ ..??? ಮತ್ತು ಅದರಿಂದ ಬೀರುವ ಪರಿಣಾಮಗಳೇನು ..?**

- ಕೆಲವು ಶಿಫಾರಸುಗಳನ್ನು ಜಾರಿಗೆ ತಂದರೆ ನಗರದ ಜನರು ಹೆಚ್ಚಿನ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಶಿಫಾರಸುಗಳನ್ನು ಜಾರಿಗೊಳಿಸಲು ಹೆಚ್ಚಿನ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.
- ಸೂಕ್ತ ಮೂಲಸೌಕರ್ಯಗಳನ್ನು ಕಲ್ಪಿಸದೆ ಎಫ್ಎಸ್ಐ ಹೆಚ್ಚಳಕ್ಕೆ ಶಿಫಾರಸು ಮಾಡುವುದು ದೂರದೃಷ್ಟಿಯಿಲ್ಲದ ಅಪಾಯಕಾರಿ ಸಲಹೆ. ಎಫ್ಎಸ್ಐ ಹೆಚ್ಚಳದಿಂದ ನಗರದ ಕಟ್ಟಡಗಳ ಎತ್ತರ ಬೆಳೆಯಬಹುದು. ಆದರೆ, ಈ ರೀತಿಯ ಬೆಳವಣಿಗೆಗೆ ನಗರ ಸಜ್ಜಾಗಿಲ್ಲ. ಈ ಕ್ರಮದಿಂದ ಜನಸಾಂದ್ರತೆ ಅಧಿಕಗೊಳ್ಳುತ್ತದೆ.

- ಅಲ್ಲದೆ ಇಲ್ಲಿನ ಲಭ್ಯ ಸೌಕರ್ಯದ ಮೇಲೆ ಒತ್ತಡ ಬೀಳುತ್ತದೆ. ಜೊತೆಗೆ ನಗರದ ಹಸಿರು ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ' .
- ಎಫ್‌ಎಸ್‌ಐನಲ್ಲಿ ಇತರ ಅಂತರರಾಷ್ಟ್ರೀಯ ನಗರಗಳಿಗೆ ಹೋಲಿಸಿದರೆ ಭಾರತ ಹಿಂದುಳಿದಿದೆ. ಶಾಂಘೈಯ ಎಫ್‌ಎಸ್‌ಐ 13.1, ನ್ಯೂಯಾರ್ಕ್ ಹಾಗೂ ಮ್ಯಾನ್‌ಹಾಟನ್‌ನಲ್ಲಿ ಎಫ್‌ಎಸ್‌ಐ 15 ಇದೆ.
- ನ್ಯೂಯಾರ್ಕ್‌ನ ಬಹುಮಹಡಿ ಕಟ್ಟಡಗಳಲ್ಲೇ ಅಗತ್ಯ ಜನರೇಟರ್‌ಗಳು, ಅಂಗಡಿಗಳು ಹಾಗೂ ಇತರ ಎಲ್ಲ ಸೌಲಭ್ಯಗಳಿದ್ದು, ಒಂದೊಂದು ಕಟ್ಟಡ ಒಂದೊಂದು ನಗರದಂತಿದೆ. ಆದರೆ, ಅಗತ್ಯ ಸೌಲಭ್ಯಗಳನ್ನು ಒದಗಿಸುವುದರಲ್ಲಿ ನಾವು ಹಿಂದುಳಿದ ಕಾರಣ ಕಟ್ಟಡಗಳ ಎತ್ತರವನ್ನು ಹೆಚ್ಚಿಸುವುದು ಸೂಕ್ತವಲ್ಲ'
- ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಎಫ್‌ಎಸ್‌ಐ ಹೆಚ್ಚಳದಿಂದ ಅಲ್ಲಿ ಈಗಾಗಲೇ ವಾಸಿಸುತ್ತಿರುವ ನಿವಾಸಿಗಳ ಮೇಲೆ ಹೊರೆ ಬೀಳುತ್ತದೆ. ಅಸ್ತಿತ್ವದಲ್ಲಿರುವ ರಸ್ತೆ, ಮೈದಾನ, ಉದ್ಯಾನ ಮುಂತಾದ ನಾಗರಿಕ ಸವಲತ್ತುಗಳನ್ನೇ ಹೊಸ ನಿವಾಸಿಗಳು ಉಪಯೋಗಿಸುವುದರಿಂದ ಒತ್ತಡವೂ ಹೆಚ್ಚುತ್ತದೆ. ನಗರದ ಜನತೆಗೆ ಮೂಲಸೌಕರ್ಯ ಕಲ್ಪಿಸಲು ಮೊದಲ ಆದ್ಯತೆ ನೀಡಬೇಕು.
- ಎಫ್‌ಎಸ್‌ಐ ಹೆಚ್ಚಳದಿಂದ ಜನಸಾಂದ್ರತೆ ಹೆಚ್ಚುವುದಲ್ಲದೆ ನಗರದ ಹಸಿರು ಪರಿಸರಗಳು ಹಾಳಾಗುತ್ತವೆ. ಈ ಸಾಂದ್ರತೆಯನ್ನು ಸರಿಯಾಗಿ ನಿಭಾಯಿಸದಿದ್ದಲ್ಲಿ ದುರಾಡಳಿತದ ಫಲವಾಗಿ ಜನರು ಹೆಚ್ಚು ತೊಂದರೆಗೆ ಒಳಗಾಗುತ್ತಾರೆ.
- ನಾಗರಿಕ ಸೌಲಭ್ಯಗಳನ್ನು ಸಮರ್ಪಕವಾಗಿ ಹೆಚ್ಚಿಸದೇ ಎಫ್‌ಎಸ್‌ಐ ಹೆಚ್ಚಳದಿಂದ ಜೀವನದ ಗುಣಮಟ್ಟವೂ ಕಡಿಮೆಯಾಗುತ್ತದೆ. ನಮ್ಮ ಚಿಂತನೆಗಳು ಜೀವನ ಗುಣಮಟ್ಟವನ್ನು ಉತ್ತಮಗೊಳಿಸುವತ್ತ ಸಾಗಬೇಕೇ ಹೊರತು ಎಫ್‌ಎಸ್‌ಐ ಹೆಚ್ಚಳದ ಪರಿಹಾರಕ್ಕೆ ಜಿಗಿಯುವುದಲ್ಲ.
- ನಗರದಲ್ಲಿ ಬಿಲ್ಡರ್‌ಗಳು ಕಾನೂನು ಉಲ್ಲಂಘಿಸಿಯೇ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಎಫ್‌ಎಸ್‌ಐ ಹೆಚ್ಚಿಸಲು ಅನುವು ಮಾಡಿಕೊಟ್ಟರೆ ಇನ್ನಷ್ಟು ಇಂತಹ ಚಟುವಟಿಕೆಗೆ ಪ್ರೋತ್ಸಾಹ ನೀಡಿದಂತೆ ಆಗುತ್ತದೆ.
- `ಎಫ್‌ಎಆರ್ ಹೆಚ್ಚಳವನ್ನು ಹೊಂದಿರುವ `ವಲಯ ಮಹಾಯೋಜನೆ-2015' (ಆರ್‌ಎಂಪಿ-2015)ಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಯಾವುದೇ ಮಹಾಯೋಜನೆಗಳು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗಬೇಕು. ಅದರ ಸಾಮಾಜಿಕ, ಪ್ರಾಕೃತಿಕ ಪರಿಣಾಮಗಳ

ಕುರಿತು ಪಾರದರ್ಶಕವಾಗಿ ಚರ್ಚೆ ಆಗಬೇಕು. ಇಂತಹ ನಡೆಗಳಿಂದ ಸರ್ಕಾರ ಹಾಗೂ ನಾಗರಿಕರ ನಡುವಿನ ವಿಶ್ವಾಸ ವೃದ್ಧಿಯಾಗುತ್ತದೆ'

**SOURCE-PIB**

**2. ಈಶಾನ್ಯಭಾಗದಲ್ಲಿ ವೆಂಚರ್ ಫಂಡ್**

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- ಈಶಾನ್ಯವನ್ನು ಯುವ ಉದ್ಯಮಗಳಿಗೆ ನೆಚ್ಚಿನ ತಾಣವಾಗಿ ಮಾಡಲು ಈಶಾನ್ಯ ವೆಂಚರ್ ಫಂಡ್ನ ಪ್ರಯೋಜನಗಳನ್ನು ಪಡೆಯಲು ಸರ್ಕಾರವು ಯುವ ಉದ್ಯಮಗಳನ್ನು ಆಹ್ವಾನಿಸಿದೆ.
- ಈಶಾನ್ಯ ಭಾಗದಲ್ಲಿ ಜೀವನೋಪಾಯಕ್ಕಾಗಿ ನೋಡುತ್ತಿರುವವರು ಶೀಘ್ರದಲ್ಲೇ ವಿಶೇಷವಾಗಿ ಹಣ್ಣು, ಆಹಾರ, ಕರಕುಶಲ ಮತ್ತು ಪ್ರವಾಸೋದ್ಯಮ ಉದ್ಯಮಗಳಲ್ಲಿ ಸಂಭಾವ್ಯ ಉದ್ಯಮವನ್ನು ಕಂಡುಕೊಳ್ಳುತ್ತಾರೆ

**ಮುಖ್ಯ ಪರೀಕ್ಷೆಗಾಗಿ**

**ಈಶಾನ್ಯ ವೆಂಚರ್ ಫಂಡ್ ಬಗ್ಗೆ:**

- ಭಾರತ ಸರಕಾರದ "ಸ್ಟಾಂಪ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ" ಕಾರ್ಯಕ್ರಮದಲ್ಲಿ ಲಭ್ಯವಿರುವ ನಿರ್ಗಮನದ ಅವಧಿಯ ಜೊತೆಗೆ,ಈಶಾನ್ಯ ಪ್ರದೇಶದ ಅಭಿವೃದ್ಧಿ ಸಚಿವಾಲಯವು ಈಶಾನ್ಯ ವಲಯದಲ್ಲಿ ಹೊಸ ಯೋಜನೆಯನ್ನು ಪ್ರಾರಂಭಿಸಲು ಬಯಸುವವರಿಗೆ "ವೆಂಚರ್ ಫಂಡ್" ಅನ್ನು ಹೊರಡಿಸಿದೆ.
- ವಿಶೇಷವಾಗಿ ಯುವ ಉದ್ಯಮಿಗಳಿಗೆ ಭಾರೀ ಹಣಕಾಸಿನ ಪರಿಹಾರವನ್ನು ಒದಗಿಸುತ್ತದೆ.
- ಈಶಾನ್ಯ ವೆಂಚರ್ ಫಂಡ್ ಈಶಾನ್ಯ ಪ್ರದೇಶದ ಮೊದಲ ಮೀಸಲಾದ ಸಾಹಸೋದ್ಯಮ ಬಂಡವಾಳ ನಿಧಿ ಮತ್ತು ಈ ವರ್ಷದ ಏಪ್ರಿಲ್ ನಲ್ಲಿ ಪ್ರಾರಂಭವಾಯಿತು.
- ಇದು ಈಶಾನ್ಯ ಅಭಿವೃದ್ಧಿಶೀಲ ಹಣಕಾಸು ಕಾರ್ಪೊರೇಷನ್ ಲಿಮಿಟೆಡ್ (NEDFi) ನಿಂದ ಸ್ಥಾಪಿಸಲ್ಪಟ್ಟಿದೆ, ಈ ಪ್ರದೇಶದಲ್ಲಿ ಈಗಾಗಲೇ ಉದ್ಯಮಶೀಲತೆಯನ್ನು ಉತ್ತೇಜಿಸುವ ಆದೇಶವನ್ನು ಹೊಂದಿದೆ, ಮುಖ್ಯವಾಗಿ ಮೊದಲ-ತಲೆಮಾರಿನ ಉದ್ಯಮಿಗಳಿಗೆ ಬೆಂಬಲ ನೀಡುವ ಮೂಲಕ. ಇದರ ಜೊತೆಗೆ, ಹಿಡುವಳಿ ಮತ್ತು ಸಾಮರ್ಥ್ಯದ ಕಟ್ಟಡದ ಪಾತ್ರವನ್ನೂ NEDFi ನಿರ್ವಹಿಸುತ್ತದೆ

**ಏಂಜಲ್ ಇನ್ವೆಸ್ಟರ್ ಯಾರು?**

- ಏಂಜಲ್ ಇನ್ವೆಸ್ಟರ್ ಎನ್ನುವನು ಒಬ್ಬ ವ್ಯಕ್ತಿ. ಸಮಾಜದಲ್ಲಿ ಹೆಸರುವಾಸಿಯಾದ ಯಾವುದಾದರೂ ಒಂದು ಕ್ಷೇತ್ರದಲ್ಲಿ ಯಶಸ್ಸು ಪಡೆದ ಸಿರಿವಂತ. ತನ್ನ ಕ್ಷೇತ್ರದಲ್ಲಿ ಅಥವಾ ತನಗೆ ಇಷ್ಟವಾದ ಕ್ಷೇತ್ರದಲ್ಲಿ ತನ್ನದಲ್ಲದ ಹೊಸ ಚಿಂತನೆಯನ್ನು ಮೆಚ್ಚಿ ಆ ಚಿಂತನೆಯನ್ನು ಸಾಕಾರಗೊಳಿಸಲು ಹಣವನ್ನು ಹೂಡಿಕೆ ಮಾಡುವಾತ ಏಂಜಲ್ ಇನ್ವೆಸ್ಟರ್.

**ವೆಂಚರ್ ಕ್ಯಾಪಿಟಲ್ ಎಂದರೇನು?**

- ವೆಂಚರ್ ಕ್ಯಾಪಿಟಲ್ ಎನ್ನುವುದು ಸಮಾಜದ ಹಲವು ಗಣ್ಯ ವ್ಯಕ್ತಿಗಳ ಗುಂಪು ಅಥವಾ ಒಂದು ಸಂಸ್ಥೆ. ನಿಗದಿತ ಉದ್ದೇಶದಿಂದ ಹಣವನ್ನು ಒಂದು ಕಡೆ ಸೇರಿಸಿ ಅದಕ್ಕೆ ಒಂದು

ಸಂಸ್ಥೆಯ ರೂಪ ಕೊಟ್ಟು, ಶೇಖರಿಸಿದ ಹಣವನ್ನು ಉತ್ತಮ ಭವಿಷ್ಯ ಇರುವ ಪ್ರಾಜೆಕ್ಟ್ ಅಥವಾ ಕಂಪನಿಗಳಲ್ಲಿ ಹೂಡಿಕೆ ಮಾಡುವರನ್ನು ವೆಂಚರ್ ಕ್ಯಾಪಿಟಲಿಸ್ಟ್ ಎನ್ನುತ್ತಾರೆ.

**ಕ್ರೌಡ್ funding ಎಂದರೇನು?**

- ಇದು ಕೂಡ ಒಂದು ಹೊಸ ಐಡಿಯಾ ಅಥವಾ ಒಂದು ಹೊಸ ಪ್ರಯತ್ನಕ್ಕೆ ಬೇಕಾಗುವ ಹಣವನ್ನು ಪಡೆಯುವ ವಿಧಾನ. ನಮ್ಮ ಬ್ಯಾಂಕುಗಳು ಅಥವಾ ಹಣಕಾಸು ಸಂಸ್ಥೆಗಳು ಹಣ ನೀಡಲು ಹಿಂದೇಟು ಹಾಕಿದಾಗ ನಾವು ಜನ ಸಾಮಾನ್ಯರಿಂದ ಹಣವನ್ನು ಕೇಳಿ ಪಡೆಯುವ ವಿಧಾನಕ್ಕೆ ಕ್ರೌಡ್ funding ಎನ್ನುತ್ತೇವೆ.
- ಇಲ್ಲಿ ಹಣ ಹೂಡುವ ಜನ ಸಾಮಾನ್ಯನ ಸಂಖ್ಯೆ ನೂರಿರಬಹುದು, ಸಾವಿರ ಇರಬಹುದು ಅಥವಾ ಲಕ್ಷವೂ ಇರಬಹುದು. ಹಾಗೆಯೇ ಹೂಡಿಕೆಯ ಹಣವೂ ಕೂಡ ನೂರು ರೂಪಾಯಿಯಿಂದ ಲಕ್ಷವೂ ಇರಬಹುದು. ಇದೊಂದು ಹೊಸ ವಿಧಾನ ಹೀಗಾಗಿ ಹೂಡಿಕೆದಾರರ ಹೂಡಿಕೆಯನ್ನು ರಕ್ಷಿಸುವ ಕಾನೂನು ಬರಬೇಕಿದೆ.
- ಹಲವು ಬಾರಿ ಹೀಗೆ ಮಾಡಿದ ಹೂಡಿಕೆ ಮರಳಿ ಬರದೇ ಹೋಗುತ್ತದೆ ಆದರೆ ಜನರು ತಾವು ಇಷ್ಟ ಪಟ್ಟ ಅಥವಾ ನಂಬಿದ ಸಿದ್ಧಾಂತಕ್ಕೆ ನೀಡಿದ ಹಣದ ಮೊತ್ತವೂ ಹೆಚ್ಚಿಲ್ಲದಿರುವುದರಿಂದ ಅದನ್ನು ಕಾಣಿಕೆ ಎಂದು ಪರಿಗಣಿಸುತ್ತಾರೆ. ಮರಳಿ ನೀಡಲೇಬೇಕಾದ ಡೆಟ್ ಕ್ರೌಡ್ ಫಂಡ್ ಮೇಲಿನ ರೀತಿ ನೀತಿಗಳ ನಿಯಮಗಳ ಅನಾವರಣ ಇನ್ನಷ್ಟೇ ಆಗಬೇಕಿದೆ.
- ಈಕ್ವಿಟಿ ಮೂಲದ ಕ್ರೌಡ್ funding ಅನ್ನು ಕಾನೂನು ಬಾಹಿರ ಎಂದು ಸೆಬಿ ಹೇಳಿದೆ. ರಿವಾರ್ಡ್ ಮೂಲದ ಮತ್ತು ಡೊನೇಷನ್ ಮೂಲದ ಕ್ರೌಡ್ funding ಭಾರತದಲ್ಲಿ ಮಾಡಬಹುದು.

ನಮ್ಮಿಂದ..... ಮನುಸ್ಸಿಗೆ/ಮೈಸೂರಿಗೆ

**ಏಂಜಲ್ ಇನ್ವೆಸ್ಟರ್ ಮತ್ತು ವೆಂಚರ್ ಕ್ಯಾಪಿಟಲ್ ನಡುವಿನ ವ್ಯತ್ಯಾಸವೇನು?**

- ಏಂಜಲ್ ಇನ್ವೆಸ್ಟರ್ ಓರ್ವ ವ್ಯಕ್ತಿ . ವೆಂಚರ್ ಕ್ಯಾಪಿಟಲ್ ಒಂದು ಸಂಸ್ಥೆ.
- ಏಂಜಲ್ ಇನ್ವೆಸ್ಟರ್ ಒಂದು ಹೊಸ ಉದ್ದಿಮೆಯ ಪ್ರಾರಂಭದಲ್ಲಿ ಹಣ ಹೂಡಲು ತಯಾರಿರುತ್ತಾನೆ. ಅಂದರೆ ಕೇವಲ ಒಂದು ಹೊಸ ಯೋಜನೆ/ಐಡಿಯಾ ಸಾಕು ಆತ ಹಣ ಹೂಡಲು ಸಿದ್ಧ. ವೆಂಚರ್ ಕ್ಯಾಪಿಟಲ್ ಹಾಗಲ್ಲ. ಅವರದೇನಿದ್ದರೂ ಸ್ವಲ್ಪ ಲೇಟ್ ಎಂಟ್ರಿ. ಹೌದು, ಉದ್ದಿಮೆ ಸ್ವಲ್ಪ ಮಟ್ಟದ ಸ್ಥಿರತೆ ಕಂಡು ಬೃಹದಾಕಾರಾವಾಗಿ ಬೆಳೆಯುವ ಸೂಚನೆ ಸಿಕ್ಕರೆ ಸಾಕು ಅಲ್ಲಿ ಹೂಡಿಕೆಗೆ ನಾವು ರೆಡಿ ಅಂತ ಬರುವರೇ ವೆಂಚರ್ ಕ್ಯಾಪಿಟಲಿಸ್ಟ್.
- ಏಂಜಲ್ ಇನ್ವೆಸ್ಟರ್ ಒಬ್ಬ ವ್ಯಕ್ತಿಯಾದ ಕಾರಣ ಆತ ಮಾಡುವ ಹೂಡಿಕೆ ಹೆಚ್ಚಿರುವುದಿಲ್ಲ. ಐದು ಲಕ್ಷದಿಂದ ಶುರುವಾಗಿ ಒಂದು ಕೋಟಿ ರೂಪಾಯಿ ವರೆಗೆ ಇವರು ಹೂಡಿಕೆ ಮಾಡುತ್ತಾರೆ. ಹಲವು ಅಸಾಧಾರಣ ಪ್ರಕರಣದಲ್ಲಿ ಕೋಟಿಗೂ ಮೀರಿ ಹೂಡಿಕೆ ಕೂಡ ಮಾಡಬಲ್ಲರು. ಆದರೆ ಸಾಮಾನ್ಯ ಸ್ಥಿತಿಯಲ್ಲಿ ಇವರ ಮಿತಿ ಒಂದು ಕೋಟಿ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಇದು ಹತ್ತರಿಂದ ಹನ್ನೆರಡು ಕೋಟಿ ತಲುಪುತ್ತದೆ.
- ವೆಂಚರ್ ಕ್ಯಾಪಿಟಲಿಸ್ಟ್ ಗಳು ಹೈ ನೆಟ್ ವರ್ತ್ ಜನರ ಒಂದು ಗುಂಪು ಅಥವಾ ಸಂಸ್ಥೆ. ಸಾಮಾನ್ಯವಾಗಿ ಇವರ ಹೂಡಿಕೆಗಳು ಕೋಟಿಗಳಲ್ಲಿ ಇರುತ್ತದೆ. ಒಂದು ಅಥವಾ ಎರಡು ಕೋಟಿಗೆ ಕಡಿಮೆ ಇವರು ಹೂಡಿಕೆ ಮಾಡಲು ಇಷ್ಟ ಪಡುವುದೇ ಇಲ್ಲ. ಸಾಮನ್ಯವಾಗಿ 200 ರಿಂದ 300 ಕೋಟಿ ರೂಪಾಯಿ ವರೆಗೆ ಹೂಡಿಕೆಮಾಡಲು ಇವರು ಸಿದ್ಧರಿರುತ್ತಾರೆ.
-
- ಏಂಜಲ್ ಇನ್ವೆಸ್ಟರ್ ದೈನಂದಿನ ನವೋದ್ದಿಮೆಯ ಕಾರ್ಯದಲ್ಲಿ ಭಾಗವಹಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ನವೋದ್ದಿಮೆಯ ಸೋಲು ಗೆಲುವು ಅಲ್ಲಿನ ಹೂಡಿಕೆಯ ಭದ್ರತೆಗಾಗಿ ಆತ ಸಂಸ್ಥೆಯ ಗೈಡ್ ಆಗಿ ಮೆಂಟರ್ ಆಗಿ ಕೆಲಸ ಮಾಡುವ ಸಾಧ್ಯತೆಗಳಿವೆ.

- ವೆಂಚರ್ ಕ್ಯಾಪಿಟಲ್ ಎನ್ನುವುದು ಒಂದು ಸಂಸ್ಥೆ. ಒಂದು ನೆಟ್ವರ್ಕ್, ಇವರ ನಡವಳಿಕೆ ಪೂರ್ಣ ಪ್ರಮಾಣದ ವೃತ್ತಿಪರತೆಯಿಂದ ಕೂಡಿರುತ್ತದೆ. ತಾವು ಹೂಡಿಕೆ ಮಾಡಿದ ಸಂಸ್ಥೆಗೆ ಬೇಕಾದ ಸಹಾಯ ಪ್ರೊಫೆಷನಲ್ ಗಳ ಮೂಲಕ ನೀಡುತ್ತದೆ.

- ನವೆಂಬರ್ 2015 ರಲ್ಲಿ ಭಾರತದ ಕ್ಯಾಪಿಟಲ್ ಮಾರ್ಕೆಟ್ ನಿಯಂತ್ರಿಸುವ ಸೆಬಿ (SEBI ) ಏಂಜಲ್ ಇನ್ವೆಸ್ಟರ್ ಅನ್ನು ಆಲ್ಟರ್ನೇಟಿವ್ ಇನ್ವೆಸ್ಟ್ಮೆಂಟ್ ಫಂಡ್ (AIF) ಅಡಿಯಲ್ಲಿ ಗುರುತಿಸಿದೆ. ಹೀಗಾಗಿ ಹಿಂದೆ ಕೇವಲ ವೆಂಚರ್ ಕ್ಯಾಪಿಟಲಿಸ್ಟ್ ಗಳಿಗೆ ಸಿಗುತ್ತಿದ್ದ ಟ್ಯಾಕ್ಸ್ ಬೆನಿಫಿಟ್ ಈಗ ಏಂಜಲ್ ಇನ್ವೆಸ್ಟರ್ ಗೂ ಸಿಗಲಿದೆ.

**ಏಂಜಲ್ ಇನ್ವೆಸ್ಟರ್ ಇರಲಿ ಅಥವಾ ವೆಂಚರ್ ಕ್ಯಾಪಿಟಲಿಸ್ಟ್ ಆಗಿರಲಿ ಇವರನ್ನು ಹೇಗೆ ಭೇಟಿ ಮಾಡಲು ಏನಿರಬೇಕು?**

- ವ್ಯಕ್ತಿ ಅಥವಾ ಸಂಸ್ಥೆ ಯಾರೇ ಆಗಿರಲಿ ನಿಮ್ಮ ವ್ಯಾಪಾರದಲ್ಲಿ ಅಥವಾ ನಿಮ್ಮ ಕನಸಿಗೆ ಸುಮ್ಮನೆ ಹಣ ಏಕೆ ಹೂಡುತ್ತಾರೆ? ಅವರಿಗೆ ನಿಮ್ಮ ವ್ಯಾಪಾರ ಅಥವಾ ನಿಮ್ಮ ಕನಸು ಎಳೆ ಎಳೆಯಾಗಿ ಬಿಡಿಸಿ ಹೇಳಬೇಕು. ಅದು ಇಷ್ಟವಾದರೆ ಅವರು ಹಣ ಹೂಡುವುದು ಸುಲಭ.

**SOURCE-PIB**

**3. ಸಂಸದರು ಅವಧಿ ಮುಗಿದ ನಂತರ ತಮ್ಮ ಆಸ್ತಿಗಳನ್ನು ಘೋಷಣೆ -ಖಾಸಗಿ ಮಸೂದೆಯಲ್ಲಿ ಪ್ರಸ್ತಾಪ**

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ**

## ಪ್ರಮುಖ ಸುದ್ದಿ

- ಸಂಸದರ ಅಧಿಕಾರಾವಧಿ ಮುಗಿದ ನಂತರ ಅವರ ಆಸ್ತಿಗಳನ್ನು ಘೋಷಿಸಲು ಒಂದು ಮಸೂದೆಯನ್ನು ಪ್ರಸ್ತಾವಿಸಲಾಗಿದೆ. ಜನಪ್ರತಿನಿಧಿ ಕಾಯಿದೆ (ತಿದ್ದುಪಡಿ) ಯನ್ನು 2017 ರ ಈ ವರ್ಷದ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುವುದು.
- ಈ ಮಸೂದೆಯು ಸಂಸದರ ಹೊಣೆಗಾರಿಕೆಯನ್ನು ಮತ್ತು ಪಾರದರ್ಶಕತೆಯನ್ನು ಖಚಿತಪಡಿಸುವ ಗುರಿಯನ್ನು ಹೊಂದಿದೆ.

## ಮುಖ್ಯ ಪರೀಕ್ಷೆಗಾಗಿ

**ಮಸೂದೆ ಮುಖ್ಯಾಂಶಗಳು**

- ತಮ್ಮ ಅಧಿಕಾರಾವಧಿಯ ನಂತರ 90 ದಿನಗಳೊಳಗೆ ಸಂಸತ್ತಿನ ಸದಸ್ಯರು ತಮ್ಮ ಸ್ವತ್ತುಗಳನ್ನು ಘೋಷಿಸುತ್ತಾರೆ ಎಂದು ಮಸೂದೆಯಲ್ಲಿ ಸೂಚಿಸಲಾಗಿದೆ . ಈ ನಿಬಂಧನೆಯು 'ಜನ ಪ್ರತಿನಿಧಿ ಕಾಯಿದೆ, 1951' ರಲ್ಲಿ ಉಪ ವಿಭಾಗ 75 ಬಿ (1)ದಲ್ಲಿ ಸೇರಿಸಲಾಗಿದೆ
- ಪ್ರಸ್ತಾವಿತ ತಿದ್ದುಪಡಿಯು ಜನ ಪ್ರತಿನಿಧಿಯ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಸಹಾಯ ಮಾಡುತ್ತದೆ. ಇದು ಸಂಸದರಿಗೆ ಭ್ರಷ್ಟಾಚಾರದಿಂದ ಮುಕ್ತ ಸ್ಥಿತಿಯ ಧನಾತ್ಮಕ ವಾತಾವರಣವನ್ನು ಸೃಷ್ಟಿಸುವಲ್ಲಿ ಸಹಾಯ ಮಾಡುತ್ತದೆ.

**ಪ್ರಸ್ತುತ ಸನ್ನಿವೇಶ**

- ಪ್ರಸ್ತುತ, ಸಂಸತ್ತಿನ ಎರಡು ಸದನದ ಚುನಾಯಿತ ಅಭ್ಯರ್ಥಿಯು ಅವರು ತಮ್ಮ ಸ್ಥಾನವನ್ನು ಅಲಂಕರಿಸುವ ದಿನಾಂಕದಿಂದ ತೊಂಬತ್ತು ದಿನಗಳ ಒಳಗೆ ಅವರ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಘೋಷಿಸಬೇಕಾಗುತ್ತದೆ.

- ಆದರೆ ಅವರ ಪದವಿ ಮುಕ್ತಾಯದ ನಂತರ ಅವರ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ಘೋಷಣೆಗಾಗಿ ಇಂತಹ ನಿಬಂಧನೆಗಳು ಇರಲಿಲ್ಲ .
- ರಾಜಕಾರಣಿಗಳ ಆಸ್ತಿಯಲ್ಲಿ ಜಿಗಿತದ ಬಗ್ಗೆ ಬಹಿರಂಗಪಡಿಸದಿರುವಿಕೆಗೆ ಸಂಬಂಧಿಸಿದ ವಿಚಾರದಲ್ಲಿ ಈ ತಿಂಗಳ ಆರಂಭದಲ್ಲಿ ಸುಪ್ರೀಂಕೋರ್ಟ್ ಅವಲೋಕನಗಳ ಹಿನ್ನಲೆಯಲ್ಲಿ ಈ ಮಸೂದೆಯನ್ನು ಮಂಡಿಸಲು ನಿರ್ಧರಿಸಲಾಗಿದೆ .
- ರಾಜಕಾರಣಿಗಳ ವಿರುದ್ಧ ನಡೆಸಿದ ಕ್ರಮದ ಬಗ್ಗೆ ಮಾಹಿತಿ ಬಹಿರಂಗಪಡಿಸದಿರುವ ಕೇಂದ್ರದ ಮನೋಭಾವಕ್ಕೆ ಸುಪ್ರೀಂ ಕೋರ್ಟ್ ತೀವ್ರವಾದ ಕಳವಳ ವ್ಯಕ್ತ ಪಡಿಸಿದೆ . ಎರಡು ಚುನಾವಣೆಗಳ ನಂತರ ಕೆಲವು ಸಂಸದರ ಅಸ್ತಿ ವಿವರಗಳು ಶೇ 500% ನಷ್ಟು ಏರಿಕೆ ಕಂಡಿದೆ ಈ ನಿಟ್ಟಿನಲ್ಲಿ ನ್ಯಾಯಾಲಯವು ಅಗತ್ಯ ಮಾಹಿತಿಯನ್ನು ಇರಿಸಲು ಸರಕಾರಕ್ಕೆ ನಿರ್ದೇಶನ ನೀಡಿದೆ.

**SOURCE-HINDU**

**4. ಸರ್ಧಾರ್ ಸರೋವರ ಲೋಕಾರ್ಪಣೆ ಮಾಡಿದ ಪ್ರಧಾನಿ**

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಪ್ರಮುಖ ಸುದ್ದಿ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- ಬಹುದಶಕಗಳಿಂದ ನನೆಗುದಿಗೆ ಬಿದ್ದಿದ್ದ ಸರ್ಧಾರ್ ಸರೋವರ ಅಣೆಕಟ್ಟನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು.ಗುಜರಾತ್ ನಲ್ಲಿ ನರ್ಮದಾ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಸರ್ಧಾರ್ ಸರೋವರಕ್ಕೆ ಕಾಂಕ್ರಿಟ್ ನಿಂದ ನಿರ್ಮಿಸಿದ ವಿಶ್ವದ ಎರಡನೇ ಅತಿ ದೊಡ್ಡ ಅಣೆಕಟ್ಟೆ ಎಂಬ ಹೆಗ್ಗಳಿಕೆ ಇದೆ.
- ಈ ಅಣೆಕಟ್ಟೆ ನಿರ್ಮಾಣಕ್ಕೆ 1961 ರಲ್ಲಿ ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಶಂಕುಸ್ಥಾಪನೆ ಮಾಡಿದ್ದರು.ಮಹಾರಾಷ್ಟ್ರ,ಮದ್ಯಪ್ರದೇಶ,ಗುಜರಾತ್ ರಾಜ್ಯಗಳ ಮದ್ಯೆ ನೀರು ಹಂಚಿಕೆ

ವಿವಾದಗಳಿಂದಾಗಿ ಆಣೆಕಟ್ಟು ನಿರ್ಮಾಣ ಕಾಮಗಾರಿ ಹಲವು ಬಾರಿ ಸ್ಥಗಿತಗೊಂಡಿತ್ತು.ಅಣೆಕಟ್ಟೆ 2005 ರಲ್ಲೇ ಕಾರ್ಯ ಆರಂಭಿಸಿತ್ತಾದರೂ ಲೋಕಾರ್ಪಣೆಗೊಂಡಿರಲಿಲ್ಲ.

- ಈ ಮಧ್ಯೆ ಸಂತ್ರಸ್ತರಿಗೆ ಸರಿಯಾಗಿ ಪರಿಹಾರ ವಿತರಣೆ ಮಾಡದ್ದಕ್ಕೆ ಸುಪ್ರೀಂ ಕೋರ್ಟ್ ನಿಂದ ನಿರ್ಮಾಣ ಕಾರ್ಯಕ್ಕೆ ತಡೆ ಸಿಕ್ಕಿತ್ತು. ನಂತರ ಎಲ್ಲ ಅಡೆ ತಡೆಗಳು ನಿವಾರಣೆಯಾಗಿ ಇಂದು ಯೋಜನೆ ಲೋಕಾರ್ಪಣೆಯಾಗಿದೆ.

**ಮುಖ್ಯ ಪರೀಕ್ಷೆಗಾಗಿ**

- ವಿಶ್ವ ಬ್ಯಾಂಕ್ ನರ್ಮದಾ ನದಿ ಅಣೆಕಟ್ಟು ಯೋಜನೆಗೆ ಆರ್ಥಿಕ ಸಹಾಯವನ್ನು ಮಾಡಲು ನಿರಾಕರಿಸಿದರೂ ಆದರೆ ಗುಜರಾತ್ ದೇವಾಲಯಗಳು ಆರ್ಥಿಕ ಸಹಾಯ ಮಾಡಿದ ಕಾರಣ ವಿಶ್ವದ ದೊಡ್ಡ ಅಣೆಕಟ್ಟು ನಿರ್ಮಾಣವಾಗಿದೆ.
- ನರ್ಮದಾ ಸರ್ದಾರ್ ಅಣೆಕಟ್ಟನ್ನು ಗುಜರಾತ್‌ನ ಜೀವನಾಡಿ ಎಂದು ಕರೆಯಲಾಗಿದ್ದು, ಕೃಷಿಯನ್ನು ಮೂಲ ವೃತ್ತಿಯಾಗಿ ಸ್ವೀಕರಿಸಿರುವ ರೈತ ಕುಟುಂಬಗಳ ಆರ್ಥಿಕ ಸಾಮರ್ಥ್ಯ ಉತ್ತಮಗೊಳ್ಳುತ್ತದೆ

**ಸರ್ಧಾರ್ ಸರೋವರ ಡ್ಯಾಂ ವಿಶೇಷತೆಗಳು**

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಅಮೆರಿಕದ ವಿಶ್ವದ ಅತೀದೊಡ್ಡ ಅಣೆಕಟ್ಟು ಗ್ರ್ಯಾಂಡ್‌ಕೂಲೀ ಡ್ಯಾಂ ನಂತರ ಭಾರತದ ಸರ್ದಾರ್ ಸರೋವರ ಅಣೆಕಟ್ಟು ವಿಶ್ವದ ಎರಡನೇ ಅತೀದೊಡ್ಡ ಅಣೆಕಟ್ಟು ಎಂಬ ಹೆಗ್ಗಳಿಕೆ ಪಡೆದಿದೆ.
- ಸುಮಾರು 1.2 ಕಿ.ಮೀ ಉದ್ದವನ್ನು ಹೊಂದಿರುವ ಅಣೆಕಟ್ಟು, ನೆಲದಿಂದ ಸುಮಾರು 163 ಮೀಟರ್ ಎತ್ತರವನ್ನು ಹೊಂದಿದೆ. ಯೋಜನೆಯ ನದಿಯ ತಳದಲ್ಲಿ(1200 ಮೆಗಾ ವ್ಯಾಟ್) ಹಾಗೂ ನಾಲೆಯಲ್ಲಿ (250 ಮೆಗಾ ವ್ಯಾಟ್) ಎರಡು ವಿದ್ಯುತ್ ಉತ್ಪಾದನ ಘಟಕಗಳನ್ನು ಅಳವಡಿಸಲಾಗಿದ್ದು, ಸುಮಾರು 4,141 ಕೋಟಿ ಯೂನಿಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ.

- ಸರ್ದಾರ್ ಡ್ಯಾಂ ವಿದ್ಯುತ್ ಘಟಕದಿಂದ ಉತ್ಪಾದಿಸಿರುವ ವಿದ್ಯುತ್ ಮಧ್ಯ ಪ್ರದೇಶ, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳು ಕ್ರಮವಾಗಿ ಶೇ.57, ಶೇ.27 ಮತ್ತು 16 ರಷ್ಟು ವಿದ್ಯುತ್ ಹಂಚಿಕೊಳ್ಳಲಿವೆ.

- ಈ ಯೋಜನೆಯ ಪ್ರದೇಶದಲ್ಲಿ ಹೆಚ್ಚು ಅರಣ್ಯವು ಮುಳುಗಡೆಯಾಗಿದೆ. ಪರಿಸರವಾದಿಗಳು ಡ್ಯಾಂ ಗೇಟ್‌ಗಳನ್ನು ತೆರೆದಿಡುವಂತೆ ಬೇಡಿಕೆ ಇಟ್ಟ ಹಿನ್ನೆಲೆಯಲ್ಲಿ ನೀರಿನ ಮಟ್ಟ ಕಡಿಮೆಯಾಗುವರೆಗೂ ಗೇಟ್‌ಗಳನ್ನು ತೆರೆದಿಡಲಾಗುತ್ತದೆ.

**ಮೇಧಾ ಪಾಟ್ಕರ್ ಜಲ ಸತ್ಯಾಗ್ರಹ**

- ನರ್ಮದಾ ಬಚಾವೋ ಆಂದೋಲನದಿಂದಲೇ ಗುರುತಿಸಿಕೊಂಡಿರುವ ಚಳುವಳಿಗಾರ್ತಿ ಮೇಧಾ ಪಾಟ್ಕರ್ ಮದ್ಯಪ್ರದೇಶದ ಬರ್ವಾನಿ ಜಿಲ್ಲೆಯ ಛೋಟಾ ಬರ್ದಾ ಗ್ರಾಮದ ಬಳಿ ಅಣೆಕಟ್ಟೆ ಯೋಜನೆ ವಿರೋದಿಸಿ ನರ್ಮದಾ ನದಿಯಲ್ಲಿ ಜಲ ಸತ್ಯಾಗ್ರಹ ಮುಂದುವರೆಸಿದ್ದಾರೆ.
- ಅಣೆಕಟ್ಟೆ ಹಿನ್ನಿರಿನಲ್ಲಿ ಬರ್ವಾನಿ ಜಿಲ್ಲೆಯ ಹಲವು ಗ್ರಾಮಗಳು ಮುಳುಗಡೆಯಾಗಿವೆ. 40 ಸಾವಿರ ಯೋಜನಾ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸಿಲ್ಲ ಎಂದು ಆರೋಪಿಸಿದ್ದಾರೆ.
- ಸರ್ಧಾರ್ ಸರೋವರದಿಂದ ಪರಿಸರಕ್ಕೆ ಹಾನಿಯಗಲಿದ್ದು, ಸಾವಿರಾರು ಜನ ನಿರಾಶ್ರಿತರಾಗುತ್ತಾರೆ ಎಂಬ ಅಪೇಕ್ಷದೊಂದಿಗೆ ಯೋಜನೆ ಆರಂಭದಲ್ಲೇ ಹಲವು ಚಳುವಳಿ ನಡೆಯುತಿದ್ದವು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- 1984ರ ವೇಳೆಗೆ ನರ್ಮದಾ ಬಚಾವೋ ಆಂದೋಲನದಡಿ ಈ ಎಲ್ಲ ಚಳುವಳಿಗಳು ಒಗ್ಗೂಡಿದವು. ಮೇಧಾ ಪಾಟ್ಕರ್ ಚಳುವಳಿಯ ನಾಯಕತ್ವ ವಹಿಸಿಕೊಂಡರು.

**5. 23 ನೇ ವಿಶ್ವ ಓಝೋನ್ ದಿನ**

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆ ಗಾಗಿ**

**ಪ್ರಮುಖ ಸುದ್ದಿ**

- ಮಾಂಟ್ರಿಯಲ್ ಪ್ರೋಟೋಕಾಲ್ ನ 30 ನೆಯ ವಾರ್ಷಿಕೋತ್ಸವ ಮತ್ತು 23 ನೇ ವಿಶ್ವ ಓಝೋನ್ ದಿನವನ್ನು ಸೆಪ್ಟೆಂಬರ್ 16 ರಂದು ರಾಷ್ಟ್ರದಾದ್ಯಂತ ಆಚರಿಸಲಾಯಿತು.

- ಈ ವರ್ಷದ ಥೀಮ್ - "ಸೂರ್ಯನ ಕೆಳಗೆ ಎಲ್ಲಾ ಜೀವಿಗಳ ರಕ್ಷಣೆ ".(Caring for all life under the Sun)

## ಮುಖ್ಯ ಪರೀಕ್ಷೆ ಗಾಗಿ

- ಪ್ರತಿ ವರ್ಷ, ಸೆಪ್ಟೆಂಬರ್ 16 ರಂದು, ವಿಶ್ವ ಓಝೋನ್ ದಿನವಾಗಿ ಓಝೋನ್ ಪದರವನ್ನು ಸಂರಕ್ಷಿಸಲು ಅಂತರರಾಷ್ಟ್ರೀಯ ದಿನವನ್ನು ಆಚರಿಸುತ್ತದೆ.
- ಮಾಂಟ್ರಿಯಲ್ ಪ್ರೊಟೊಕಾಲ್ಗಾಗಿ ವಿಯೆನ್ನಾದಲ್ಲಿ ನಡೆದ ವಿಶ್ವಸಂಸ್ಥೆಯ ಸಮಾವೇಶದಲ್ಲಿ, ಜನರಲ್ ಅಸೆಂಬ್ಲಿ ಸೆಪ್ಟೆಂಬರ್ 16 ರಂದು ಓಝೋನ್ ಪದರವನ್ನು ನಾಶಮಾಡುವ ವಿಶ್ವವನ್ನು ನೆನಪಿಸುವ ಸಲುವಾಗಿ ವಿಶ್ವ ಓಝೋನ್ ದಿನವೆಂದು ಘೋಷಿಸಿತ್ತು

## ಓಜೋನ್ ಪದರದ ಬಗ್ಗೆ

- "If earth is our mother, then Ozone is our father" ಪ್ರಾಣಿಗಳು ಜೀವಿಸಲು ಮುಖ್ಯವಾದದ್ದು ಭೂಮಿ, ಆದ್ದರಿಂದ ಭೂಮಿಯನ್ನು ಭೂ ತಾಯಿಗೆ ಹೋಲಿಸುತ್ತೇವೆ. ಅದೇ ರೀತಿ ಓಝೋನ್ ಪದರು ಸಹ ಜೀವಿಸಲು ಅಷ್ಟೇ ಮುಖ್ಯ. ಜೀವಿಗಳು ಬದುಕಿ ಬಾಳಲು ಭೂಮಿ ಬೇಕು ಹಾಗೆಯೇ ಭೂಮಿ ಬದುಕಲು ಓಝೋನ್ ಬೇಕೇ ಬೇಕು.
- ಮಳೆಗಾಲದಲ್ಲಿ ಕೊಡೆ ನಮ್ಮನ್ನು ಮಳೆಯಿಂದ ರಕ್ಷಿಸುವ ಹಾಗೆ, ಓಝೋನ್ ಪದರ ನಮ್ಮನ್ನು ಸೂರ್ಯನಿಂದ ಬರುವ ನೇರಳಾತೀತ (UV- Rays ) ಕಿರಣಗಳಿಂದ ರಕ್ಷಿಸುತ್ತದೆ. ರಾಸಾಯನಿಕ ಧಾತುವೊಂದರ ಭಿನ್ನರೂಪವಾಗಿ ಮೊಟ್ಟಮೊದಲ ಬಾರಿಗೆ ಗುರುತಿಸಲ್ಪಟ್ಟ ಓಝೋನ್ ಒಂದು ಭಿನ್ನವಾದ ರಾಸಾಯನಿಕ ಸಂಯುಕ್ತವಾಗಿ 'ಕ್ರಿಸ್ಟಿಯನ್ ಫ್ರೆಡ್ರಿಕ್ ಸ್ಕಾನ್ ಬೀನ್' ಎಂಬಾತನಿಂದ 1840 ರಲ್ಲಿ ಸೂಚಿಸಲ್ಪಟ್ಟಿತ್ತು.
- ಮಿಂಚಿನ ಬಿರುಗಾಳಿಗಳಲ್ಲಿನ ಒಂದು ವಿಲಕ್ಷಣವಾದ ವಾಸನೆಗೆ ಉಲ್ಲೇಖಿಸಲಾಗುವ "ಓಝೀನ್" (ವಾಸನೆ ಬೀರುವುದು) ಎಂಬ ಗ್ರೀಕ್ ಕ್ರಿಯಾಪದದ ಹೆಸರನ್ನು ಅವನು "ಓಝೋನ್" ಗೆ ಇರಿಸಿದ. ಓಝೋನ್ ಗೆ ಸಂಬಂಧಿಸಿದ ಸೂತ್ರವಾದ 03 ಎಂಬುದು" ಜಾಕ್ವೆಸ್-ಲೂಯಿಸ್ ಸೋರೆಟ್" ಎಂಬಾತನಿಂದ 1865 ರಲ್ಲಿ ನಿರ್ಣಯಿಸಲ್ಪಡುವವರೆಗೆ ಮತ್ತು ಸ್ಕಾನ್ ಬೀನ್ ಎಂಬಾತನಿಂದ 1867 ರಲ್ಲಿ ಧೃಢೀಕರಿಸಲ್ಪಡುವವರೆಗೆ ತೀರ್ಮಾನಿಸಲ್ಪಟ್ಟಿರಲಿಲ್ಲ.
- ಓಝೋನ್ ಪದರಿನ ಮುಖ್ಯ ಕಾರ್ಯವೆಂದರೆ ಸೂರ್ಯನಿಂದ ಬಂದ 97-98% ಅತಿನೇರಳೆ ಕಿರಣಗಳನ್ನು ಹೀರಿಕೊಂಡು ಬೆಳಕಿನ ಕಿರಣಗಳನ್ನು ಮಾತ್ರ ಭೂಮಿ ಮೇಲೆ ಬೀಳುವಂತೆ

ಮಾಡುತ್ತದೆ. ಸೂರ್ಯನಿಂದ ಬರುವಂತಹ ಅತಿನೇರಳೆ ಕಿರಣಗಳು ವಾತಾವರಣದಲ್ಲಿರುವ ಆಮ್ಲಜನಕದ(02) ಮೇಲೆ ಬಿದ್ದಾಗ ಆಮ್ಲಜನಕ 2 ಅಣುಗಳಾಗಿ (0+0) ಬೇರ್ಪಡುತ್ತವೆ. ಬೇರ್ಪಡದೇ ಇದ್ದ ಆಮ್ಲಜನಕ (02) ಜೊತೆ ಮತ್ತೊಂದು ಅಣು ಸಂಯೋಗವಾಗಿ ಓಝೋನ್ (03) ಆಗುತ್ತದೆ.

- ಓಝೋನ್ ಪದರ ನಾಶವಾಗಲು ಕಾರಣ ಫ್ರಿಜ್ ಮತ್ತು ಕೋಲ್ಡ್ ಹೌಸ್ಗಳಲ್ಲಿ ಉಪಯೋಗಿಸುವ Chloro Floro Carbons (CFC's) ಮತ್ತು ವಾಯುಮಾಲಿನ್ಯ (CFC's) ಒಂದು ಅಣುವು ಓಝೋನ್ ನ 1,00,000 ಅಣುಗಳನ್ನು ನಾಶ ಮಾಡುತ್ತದೆ. ಇದು ಸರಪಳಿ ರಾಸಾಯನಿಕ ಕ್ರಿಯೆಯಾಗಿದೆ.
- ಬಾಹ್ಯಕಾಶ ಸಂಶೋಧನೆ , ಉಪಗ್ರಹಗಳ ಉಡಾವಣೆಗೆ ಹಾರಿ ಬಿಡುವ ರಾಕೆಟ್ ಗಳಿಂದ ಹಾನಿ ಿದರ ಪರಿಣಾಮ ಅತಿಯಾದ ಮಳೆ, ಅತಿಯಾದ ಬರ, ಸಮುದ್ರ ಮಟ್ಟ ಏರಿಕೆ, ನದಿ ಪ್ರವಾಹಗಳು, ಭೂತಾಪ ಏರಿಕೆ, ಅತಿಯಾದ ಚಳಿ, ಅತಿಯಾದ ಶಾಖ, ಒಣಗುತ್ತಿರುವ- ಬರಿದಾದ ಕಾಡು ಚಂಡಮಾರುತಗಳ ಹೆಚ್ಚಳ ಇತ್ಯಾದಿ.
- ಓಝೋನ್ ಪದರದ ರಕ್ಷಣೆಗಾಗಿ ಕೃಷಿಯಲ್ಲಿ ಕೀಟನಾಶಕ ಬಳಸುತ್ತಿರುವ ಮಿಥೈಲ್ ಬ್ರೋಮೈಡ್ ಗೆ ನಿಷೇಧ, ಅವಶ್ಯವಿದ್ದಾಗ ಮಾತ್ರ ವಾಹನ ಬಳಕೆ, ಅರಣ್ಯ ನಾಸ ತಡೆ ಗಟ್ಟಿ ಹಸಿರನ್ನು ಬೆಳೆಸಿ, ರಾಸಾಯನಿಕ ಬಳಕೆ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು , ರೆಫ್ರೀಜರೇಟರ್ ನಲ್ಲಿ ಹಾಗೂ ಕೋಲ್ಡ್ ಹೌಸ್ ಗಳಲ್ಲಿ (CFC's)ಯ ಬದಲು Hydro Chloro Floro Carbons(HCFC's) ರಾಸಾಯನಿಕ ಉಪಯೋಗಿಸಬೇಕು.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಮಾಂಟ್ರೆಲ್ ಪ್ರೊಟೊಕಾಲ್**

- 1985 ರಲ್ಲಿ ಓಝೋನ್ ಪದರದಲ್ಲಿ ರಂಧ್ರ ಹಾಗೂ ಪದರ ತೆಳುವಾಗಿರುವುದು ಕಂಡುಬಂದಿತು. ಇದರಿಂದುಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿತ ವಿವಿಧ ದೇಶಗಳ ಸಕಾರದ ಮುಖ್ಯಸ್ತರು ಒಟ್ಟಾಗಿ ಸೇರಿ 1987ರ ಸೆ.16 ರಲ್ಲಿ ವಿಯೆನ್ನಾದಲ್ಲಿ ಓಝೋನ್ ಪದರ ರಕ್ಷಣೆಗಾಗಿ ಅಂತರಾಷ್ಟ್ರೀಯ ಸಮಾವೇಶ ನಡೆಯಿತು.
- ಓಝೋನ್ ಬಗ್ಗೆ ಜಾಗೃತಿ ಮೂಡಿಸುವ ನಿರ್ಣಯವನ್ನು ಅಲ್ಲಿ ಕೈಗೊಳ್ಳಲಾಯಿತು. ಈ ಸಂಬಂಧದ " ಮಾಂಟ್ರೆಲ್ ಪ್ರೊಟೊಕಾಲ್" ಗೆ 24 ದೇಶಗಳು ಸಹಿ ಹಾಕಿದವು. ಈ ಮಹತ್ವದ ದಿನವನ್ನು ನೆನೆಯುವ ಮತ್ತು ಓಝೋನ್ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶ ಹಾಗೂ 1994 ಸೆಪ್ಟೆಂಬರ್ 16 ರಂದು ನಡೆದ ಅಮೇರಿಕಾ ಸಂಯುಕ್ತ ಸಂಸ್ಥಾನದ ಸಾಮಾನ್ಯ ಸಭೆಯಲ್ಲಿ

ಓಝೋನ್ ಪದರದ ಸಂರಕ್ಷಣೆಗೆ ಸಂಬಂಧಿಸಿದ ಅಂತರಾಷ್ಟ್ರೀಯ ದಿನ ಆಚರಿಸಲು ನಿರ್ಧರಿಸಿ 1987 ರ ಸಪ್ಟೆಂಬರ್ 16 ರಂದು ಮಾಂಟ್ರಿಯಲ್ ಪ್ರೊಟೊಕಾಲ್ ಗೆ ಸಹಿ ಹಾಕಿರುವುದನ್ನು ನೆನಪಿಸಲು ಸೆ.16 ನ್ನು ವಿಶ್ವ ಓಝೋನ್ ದಿನ ಆಚರಿಸಲು ತೀರ್ಮಾನಿಸಿತು.

- ಇದರ ಉದ್ದೇಶ ಓಝೋನ್ ಪದರಿನ ಸವಕಳಿ ಹಾಗೂ ಜಾಗತಿಕ ತಾಪಮಾನ ಏರಿಕೆ ನಿಯಂತ್ರಣ ಪರಿಸರ ಮತ್ತು ಮಾನವ ಜೀವನದ ಮೇಲೆ ಇದರ ಪಾತ್ರವನ್ನು ತಿಳಿಸುತ್ತದೆ.

**ONLY FOR PRILIMS**

**5. ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲು ಸಮಿತಿ**

- ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ವ್ಯಾಪಕ ಹಿಂಸಾಚಾರದ ಹಿನ್ನೆಲೆಯಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿಯ (ಎಐಸಿಸಿ) 'ಪಾಲಿಸಿ ಅಂಡ್ ಪ್ಲಾನಿಂಗ್' ಗುಂಪನ್ನು ರಚಿಸಲಾಯಿತು.
- ಈ ಸಮಿತಿಯು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನೇತೃತ್ವದಲ್ಲಿದೆ.
- ಆರ್ಟಿಕಲ್ 370 ಮತ್ತು ಆರ್ಟಿಕಲ್ 35 ಎ ಯಂತಹ ಜಮ್ಮು ಕಾಶ್ಮೀರದ ಸಮಸ್ಯೆಗಳನ್ನು ಬಗೆಹರಿಸಲು ಈ ಸಮಿತಿಯನ್ನು ರಚಿಸಲಾಯಿತು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮೈಸೂರಿಗೆ/ಮೈಸೂರಿಗೆ

**6. ಅನುದಾನ ತತ್ವ(Subsidiarity Principle)**

- ಇದು ಸಾಮಾಜಿಕ ಚಿಂತನೆಯಲ್ಲಿ ತತ್ವ ಅಂದರೆ ಇದು ಕೇಂದ್ರೀಕೃತ ರಾಜಕೀಯ ಸಂಸ್ಥೆಗಳಿಗಿಂತ ಉತ್ತಮವಾಗಿ ಸಮಸ್ಯೆಗಳನ್ನು ನಿಭಾಯಿಸುವಂತಹ ಚಿಕ್ಕ ಸ್ಥಳೀಯ ಸಂಸ್ಥೆಗಳಿಂದ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುತ್ತದೆ
- ಈ ತತ್ವವನ್ನು ಸೀಮಿತ ಸರ್ಕಾರದ ಒಂದು ವಾದವೆಂದು ಪರಿಗಣಿಸಲಾಗುತ್ತದೆ, ಅನೇಕ ಸಾಮಾಜಿಕ ಸಮಸ್ಯೆಗಳನ್ನು ನಿಭಾಯಿಸಲು ಸ್ವಯಂಪ್ರೇರಿತ ಸಂಸ್ಥೆಗಳ ಶಕ್ತಿಯನ್ನು ಒತ್ತಿಹೇಳುತ್ತದೆ.

**19th SEPTEMBER**

## 1. ಒಳನುಸುಳುವಿಕೆ ತಡೆಗೆ ಗಡಿಯಲ್ಲಿ ಹೈಟೆಕ್ ತಂತ್ರಜ್ಞಾನ ಅವಶ್ಯಕತೆಯಿದೆ -ಬಿಎಸ್‌ಎಫ್, ಐಟಿಬಿಪಿ ಮುಖ್ಯಸ್ಥರು

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಉತ್ತಮ ಗಡಿ ನಿರ್ವಹಣೆಗಾಗಿ ತಂತ್ರಜ್ಞಾನದ ಸಹಾಯದಿಂದ ಮುಂದಿನ ವರ್ಷ ಡಿಸೆಂಬರ್ನಿಂದ ಸ್ಮಾರ್ಟ್ ಟೆಕ್ನಾಲಜಿ-ನೆರವಿನ ಬೇಲಿಯನ್ನು ಪಾಕಿಸ್ತಾನದ ಗಡಿಗೆ ಅಳವಡಿಸಲಾಗುವುದು ಎಂದು ಬಾರ್ಡರ್ ಸೆಕ್ಯುರಿಟಿ ಫೋರ್ಸ್ ಮುಖ್ಯಸ್ಥರು ಮತ್ತು ಇಂಡೋ-ಟಿಬೇಟಿಯನ್ ಬಾರ್ಡರ್ ಪೋಲಿಸ್ ತಿಳಿಸಿದ್ದಾರೆ.

ಮುಖ್ಯ ಪರೀಕ್ಷೆಗಾಗಿ

- ಭಾರತ-ಪಾಕಿಸ್ತಾನ ಗಡಿಪ್ರದೇಶದ ಮೂಲಕ ಭಯೋತ್ಪಾದಕರ ನುಸುಳುವಿಕೆ ದೇಶದ ಆಂತರಿಕ ಭದ್ರತೆಗೆ ಭಾರಿ ಸವಾಲೊಡ್ಡಿದೆ. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಗಡಿಭಾಗವನ್ನು ತಂತ್ರಜ್ಞಾನದ ಮೂಲಕ ಹೈಟೆಕ್ ಆಗಿಸಲು ನಿರ್ಧರಿಸಲಾಗಿದ್ದು, ಗಡಿಭಾಗದಲ್ಲಿ ಹೆಚ್ಚು ಸೈನಿಕರನ್ನು ನಿಯೋಜಿಸುವ ಅನಿವಾರ್ಯತೆಯೂ ತಪ್ಪಲಿದೆ.
- ಭಾರತ ಮತ್ತು ಪಾಕಿಸ್ತಾನದ ಗಡಿ ಉದ್ದ 1800 ಮೈಲಿಗಳಷ್ಟಿದೆ. ಗಡಿಗುಂಟದ ಈ ಭಾಗದಲ್ಲೆಲ್ಲ ಭಯೋತ್ಪಾದಕರನ್ನು ನುಸುಳಿಸಿ, ಭಾರತದಲ್ಲಿ ಅಶಾಂತಿ, ಹಿಂಸೆ ಹರಡಲು ಪಾಕಿಸ್ತಾನ ಸದಾ ಹವಣಿಸುತ್ತಿರುತ್ತದೆ.
- ಇದಕ್ಕಾಗಿ ಪಾಕ್ ಸೇನೆ ಕದನವಿರಾಮವನ್ನು ಉಲ್ಲಂಘಿಸಿ ಗುಂಡಿನ ದಾಳಿ ನಡೆಸುತ್ತದೆ. ಭಾರತೀಯ ಸೇನೆ ಇದಕ್ಕೆ ಪ್ರತ್ಯುತ್ತರ ನೀಡಲು ನಿರತವಾಗಿದ್ದಾಗಲೇ ಅತ್ತ ಭಯೋತ್ಪಾದಕರನ್ನು ಗಡಿ ಮೂಲಕ ಭಾರತದೊಳಕ್ಕೆ ನುಸುಳಿಸಲು ಪಾಕ್ ಕುಮ್ಮಕ್ಕು ನೀಡುತ್ತದೆ.
- ಕಳೆದ ಕೆಲ ವರ್ಷಗಳಿಂದ ಪಾಕ್ ಅನುಸರಿಸುತ್ತಿರುವ ಈ ತಂತ್ರಕ್ಕೆ ತಕ್ಕ ಉತ್ತರ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಗಡಿ ನಿಯಂತ್ರಣ ರೇಖೆಯನ್ನು ತಂತ್ರಜ್ಞಾನದ ನೆರವಿನಿಂದ ಬಿಗಿ ಕಣ್ಗಾವಲಿಗೆ ಒಳಪಡಿಸಲು ನಿರ್ಧರಿಸಿದೆ. ಇದಕ್ಕಾಗಿ 20 ಅಂತಾರಾಷ್ಟ್ರೀಯ ಕಂಪನಿಗಳ ನೆರವು ಪಡೆದುಕೊಳ್ಳಲಾಗುತ್ತಿದೆ.

- ಭಾರತ-ಇಸ್ರೇಲ್ ಸಂಯುಕ್ತ ಮಂಡಳಿ ಈ ಸಂಬಂಧ ಕಾರ್ಯತಂತ್ರವನ್ನು ರೂಪಿಸಿದ್ದು, ಕೇಂದ್ರ ಗೃಹ ಸಚಿವಾಲಯದ ಕಾರ್ಯಸೂಚಿ ಪ್ರಕಾರ ಇದನ್ನು ಅನುಷ್ಠಾನಗೊಳಿಸಲಾಗುತ್ತಿದೆ. high-tech Comprehensive Integrated Border Management System (CIBMS) ಅಡಿ ರಾಡಾರ್ ಗಳು, ಥರ್ಮಲ್ ಇಮೇಜಿಂಗ್ ಉಪಕರಣ(ಥರ್ಮೋಗ್ರಫಿ ಕ್ಯಾಮರಾ), ನೈಟ್ ವಿಜನ್ ಕ್ಯಾಮರಾ (ರಾತ್ರಿಯ ಚಲನವಲನಗಳ ದೃಶ್ಯಗಳನ್ನು ಸ್ಪಷ್ಟವಾಗಿ ಸೆರೆಹಿಡಿಯಬಲ್ಲ ಕ್ಯಾಮರಾ)ಗಳನ್ನು ಗುಜರಾತ್‌ನಿಂದ ಜಮ್ಮು-ಕಾಶ್ಮೀರವರೆಗೆ ವ್ಯಾಪಿಸಿರುವ ಗಡಿ ನಿಯಂತ್ರಣ ರೇಖೆಯಲ್ಲಿ ಅಳವಡಿಸಲಾಗುತ್ತದೆ.
- ಗಡಿಯಿಂದ 5 ಕಿಲೋಮೀಟರ್ ಅಂತರದಲ್ಲಿ 24X7 ಕಾರ್ಯನಿರ್ವಹಿಸುವ ಕಂಟ್ರೋಲ್ ರೂಮ್ಮನ್ನು ಸ್ಥಾಪಿಸಲಾಗುತ್ತದೆ. ಈ ಕಂಟ್ರೋಲ್ ರೂಮ್ಮು ಈ ಎಲ್ಲ ಉಪಕರಣಗಳ ಚಲನವಲನ, ಅವುಗಳು ದಾಖಲಿಸುವ, ರವಾನಿಸುವ ಮಾಹಿತಿಯನ್ನು ಕ್ಷಣ-ಕ್ಷಣಕ್ಕೂ ಗಮನಿಸುತ್ತವೆ.
- ನುಸುಳುವಿಕೆಯ ಪ್ರಯತ್ನ ನಡೆದಲ್ಲಿ ಅದರ ಮಾಹಿತಿಯನ್ನು ಕೂಡಲೇ ಸಂಬಂಧಿತ ಬೆಟಾಲಿಯನ್ ಗೆ ರವಾನಿಸುವ ವ್ಯವಸ್ಥೆ ಇದೆ. ಹಾಗಾಗಿ, ನುಸುಳುವಿಕೆಯ ಯತ್ನಗಳನ್ನು ತಕ್ಷಣದಲ್ಲೇ ವಿಫಲಗೊಳಿಸಲು ಸಾಧ್ಯವಾಗಲಿದೆ. ಮಾತ್ರವಲ್ಲ, ಸುರಂಗ ಮಾರ್ಗಗಳನ್ನು ನಿರ್ಮಿಸುವ ಯತ್ನಗಳನ್ನು ಪತ್ತೆ ಹಚ್ಚಬಹುದಾಗಿದೆ.
- ಜಮ್ಮು-ಕಾಶ್ಮೀರದ ಸಾಂಬಾ ಮತ್ತು ಕಠುವಾದ ಗಡಿಪ್ರದೇಶಗಳಲ್ಲಿ ಮೊದಲು ಈ ರಾಡಾರ್‌ಗಳ ಅಳವಡಿಕೆ ಕಾರ್ಯ ನಡೆಯಲಿದೆ. ಆ ಬಳಿಕ ಹಂತ-ಹಂತವಾಗಿ ಗಡಿಯ ಇತರ ಭಾಗಗಳಲ್ಲೂ ಈ ತಂತ್ರಜ್ಞಾನ ಅಳವಡಿಸಲಾಗುತ್ತದೆ.

**ಗುಪ್ತಾ ಸಮಿತಿ ವರದಿ**

- ಗಡಿಯಲ್ಲಿ ನುಸುಳುವಿಕೆ ತಡೆಯುವ ಸಂಬಂಧ ಉನ್ನತ ತಂತ್ರಜ್ಞಾನವನ್ನು ಒಳಗೊಂಡ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಸಲಹೆ ನೀಡಲು ನಿವೃತ್ತ ಕೇಂದ್ರ ಗೃಹ ಕಾರ್ಯದರ್ಶಿ ಮಧುಕರ ಗುಪ್ತಾ ಅಧ್ಯಕ್ಷತೆಯಲ್ಲಿ ರಕ್ಷಣಾ ತಜ್ಞರ ಸಮಿತಿಯನ್ನು ಕೇಂದ್ರ ಸರ್ಕಾರವು ರಚಿಸಿತ್ತು.

- ಈ ಸಮಿತಿಯು 2016ರ ಆಗಸ್ಟ್ ನಲ್ಲಿ ಗೃಹ ಸಚಿವ ರಾಜನಾಥ್ ಸಿಂಗ್ ಅವರಿಗೆ ವರದಿ ಸಲ್ಲಿಸಿ, ಪ್ರಮುಖ ಶಿಫಾರಸುಗಳನ್ನು ಮಾಡಿದೆ. ಲೇಸರ್ ವಾಲ್ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸುವ ಹಾಗೂ ಅದನ್ನು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡುವ ಸೂಕ್ತ ವ್ಯವಸ್ಥೆ ರೂಪುಗೊಳ್ಳಬೇಕು.
- ಜಮ್ಮು-ಕಾಶ್ಮೀರ, ಪಂಜಾಬ್, ಗುಜರಾತ್ ಮತ್ತು ರಾಜಸ್ಥಾನ ಈ ನಾಲ್ಕೂ ರಾಜ್ಯಗಳಲ್ಲಿ ಇದು ಅಳವಡಿಕೆಯಾಗಬೇಕು. ಗಡಿಭಾಗಗಳಲ್ಲಿ ಕಂಟ್ರೋಲ್ ರೂಮ್ಸು ಸ್ಥಾಪನೆಯಾಗಬೇಕು ಅಲ್ಲದೆ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಮೇಲ್ದರ್ಜೆಗೆ ಏರಿಸಬೇಕು ಎಂಬ ಶಿಫಾರಸುಗಳನ್ನು ಈ ಸಮಿತಿ ನೀಡಿತ್ತು.
- ಈ ಪೈಕಿ ಬಹುತೇಕ ಶಿಫಾರಸುಗಳನ್ನು ಒಪ್ಪಿಕೊಂಡಿರುವ ಕೇಂದ್ರ ಸರ್ಕಾರ ಅವುಗಳ ಜಾರಿಗೆ ಮುಂದಾಗಿದೆ. ಗಡಿಯಲ್ಲಿ 24 ಗಂಟೆ ಯೋಧರ ಬಿಗಿಕಾವಲಿನ ನಡುವೆಯೂ ಹವಾಮಾನ ವೈಪರೀತ್ಯ, ಕದನ ವಿರಾಮ ಉಲ್ಲಂಘನೆಯಂಥ ಸಂದರ್ಭಗಳನ್ನು ಬಳಸಿಕೊಂಡು ಪ್ರತಿವರ್ಷ ಸರಾಸರಿ 100 ಭಯೋತ್ಪಾದಕರು ಭಾರತದೊಳಕ್ಕೆ ನುಸುಳುತ್ತಿದ್ದಾರೆ.
- ಕಳೆದ ವರ್ಷವಂತೂ ಜಮ್ಮು-ಕಾಶ್ಮೀರ ಮೂಲಕ 150 ಉಗ್ರರು ದೇಶದೊಳಕ್ಕೆ ನುಸುಳಿದ್ದಾರೆ. ಇದು ಭದ್ರತಾ ವ್ಯವಸ್ಥೆಗೆ ಬಹುದೊಡ್ಡ ಆತಂಕ ಎಂದೇ ಮನಗಂಡು ಗಡಿ ಸುರಕ್ಷತೆಗೆ ಹೊಸ ವ್ಯವಸ್ಥೆ ರೂಪಿಸಲಾಗುತ್ತಿದ್ದು, ಈ ವರ್ಷಾಂತ್ಯದಲ್ಲಿ ಅದು ಪೂರ್ಣಗೊಳ್ಳಲಿದೆ.

**ಲೇಸರ್ ವಾಲ್‌ಗಳ ಕ್ಷಿಪ್ರ ನಿರ್ಮಾಣ**

- ಭಾರತ ಮತ್ತು ಪಾಕ್ ನಡುವಿನ ಅಂತಾರಾಷ್ಟ್ರೀಯ ಗಡಿಯಲ್ಲಿ ಕಳೆದೊಂದು ವರ್ಷದಲ್ಲಿ 12 ಲೇಸರ್ ವಾಲ್‌ಗಳನ್ನು ನಿರ್ಮಿಸಲಾಗಿದ್ದು, ಮತ್ತಷ್ಟು ಲೇಸರ್ ವಾಲ್‌ಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.
- ಒಟ್ಟು 45 ಲೇಸರ್ ವಾಲ್‌ಗಳನ್ನು ಅಳವಡಿಸಲಾಗುತ್ತಿದ್ದು, ಇದನ್ನು ಉಪಗ್ರಹ ಆಧಾರಿತ ವ್ಯವಸ್ಥೆ ನಿಯಂತ್ರಿಸಲಿದೆ. ಇದರಲ್ಲಿ ಮಂಜು ಮತ್ತು ರಾತ್ರಿ ವೇಳೆಯಲ್ಲೂ ಸಮರ್ಥವಾಗಿ ಕಾರ್ಯನಿರ್ವಹಿಸುವ ಇನ್‌ಫ್ರಾರೆಡ್ ಸೆನ್ಸರ್‌ಗಳಿವೆ. ಪಠಾಣ್‌ಕೋಟ್ ಹಾಗೂ ಉರಿ ದಾಳಿಯ

ಬಳಿಕ ಗಡಿಭದ್ರತೆಯ ಕುರಿತು ಎಚ್ಚೆತ್ತುಕೊಂಡಿರುವ ಬಿಎಸ್ಎಫ್ ಗಡಿಯಲ್ಲಿ ಹೆಚ್ಚುವರಿ 1000 ಸಿಬ್ಬಂದಿ ನಿಯೋಜಿಸಿದ್ದು, ಪಹರೆಯನ್ನು ಬಿಗಿಗೊಳಿಸಿದೆ.

- ನದಿತೀರದ ಪ್ರದೇಶಗಳಲ್ಲಿ ಕಟ್ಟೆಚ್ಚರ: ಭಾರತ-ಪಾಕ್ ಗಡಿಯ ಮಧ್ಯೆ ನದಿತೀರದ 130 ಪ್ರದೇಶಗಳು ಇವೆ. ಹಾಗಾಗಿ, ಜಲಮಾರ್ಗದ ಮೂಲಕ ಉಗ್ರರು ನುಸುಳುವ ಆತಂಕವಿದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶಗಳನ್ನು ಲೇಸರ್ ತಡೆಗೋಡೆಗಳ ಮೂಲಕ ಸೀಲ್ ಮಾಡಲಾಗಿದೆ.

## 2. REITs, InvITs ನಿಧಿ ಸಂಗ್ರಹಣೆಗೆ ನಿಯಮಗಳ ಸಡಿಲಿಕೆ

**SOURCE-** http://www.thehindu.com/todays-paper/tp-business/norms-eased-for-fund-raising-by-reits-invits/article19712056.ece

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (SEBI) ರಿಯಲ್ ಎಸ್ಟೇಟ್ ಇನ್ವೆಸ್ಟ್ಮೆಂಟ್ ಟ್ರಸ್ಟ್ಸ್ (REITs, ಮತ್ತು ಇನ್ಫ್ರಾಸ್ಟ್ರಕ್ಚರ್ ಇನ್ವೆಸ್ಟ್ಮೆಂಟ್ ಟ್ರಸ್ಟ್ (REITs) ಗಾಗಿ ಮಾರ್ಗದರ್ಶಿ ಸೂತ್ರಗಳನ್ನು ಸಲಹೆಗಳ ಮೂಲಕ ನಿಧಿ ಸಂಗ್ರಹಣೆಯ ವ್ಯಾಪ್ತಿಯನ್ನು ವಿಸ್ತರಿಸುವ ಸಲುವಾಗಿ ಸಡಿಲಗೊಳಿಸಿದೆ.
- ಈ ಆರ್ಇಐಟಿಗಳು ಹೂಡಿಕೆದಾರರ ಹಣವನ್ನು ರಿಯಲ್ ಎಸ್ಟೇಟ್ ಖರೀದಿಗೆ ಬಳಸಿ ಆ ಮೂಲಕ ಮೂಲ ಬಂಡವಾಳ ಮತ್ತು ಬಾಡಿಗೆ ದರದ ಲಾಭವನ್ನು ತಂದು ಕೊಡುವ ಉದ್ದೇಶ ಹೊಂದಿದೆ.RETIs ಗೂ ಸಹ ಆಧಾರವಾಗಿರುವ ಹಿಡುವಳಿ ಕಂಪನಿ ಅಥವಾ ವಿಶೇಷ ಉದ್ದೇಶ ವಾಹನ(SPV) ಗೆ ಸಾಲ ನೀಡಲು ಅನುಮತಿ ನೀಡಲಾಗಿದೆ.

**ಮುಖ್ಯ ಪರೀಕ್ಷೆಗಾಗಿ**

**REITs ಗಳು ಎಂದರೇನು..??**

- ಭಾರತದಲ್ಲಿ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳು (ಆರ್‌ಇಐಟಿ) ಸದ್ಯದಲ್ಲೇ ಕಾರ್ಯಾರಂಭ ಮಾಡಲಿವೆ. ಮ್ಯುಚುಯಲ್ ಫಂಡ್‌ಗಳ ಹಾಗೆಯೇ ಆರ್‌ಇಐಟಿ ಸಹ ಕಾರ್ಯ ನಿರ್ವಹಿಸುತ್ತದೆ. ಸಣ್ಣ ಸಣ್ಣ ಹೂಡಿಕೆದಾರರಿಂದ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಹಣವನ್ನು ಸಂಗ್ರಹಿಸಿ ದೇಶದ ರಿಯಲ್ ಎಸ್ಟೇಟ್ ಅಭಿವೃದ್ಧಿ ಉದ್ಯಮ ಕ್ಷೇತ್ರದಲ್ಲಿ ಹೂಡಿಕೆ ಮಾಡುವ ಹಣಕಾಸು ಮಾರುಕಟ್ಟೆ ವ್ಯವಸ್ಥೆ ಇದಾಗಿದೆ.
- ಸ್ಥಿರಾಸ್ತಿಯಿಂದ ಬರುವ ಬಾಡಿಗೆ ಮೂಲದ ಆದಾಯವನ್ನು ನಂತರದಲ್ಲಿ ಹೂಡಿಕೆದಾರರಿಗೆ ಅವರು ತೊಡಗಿಸಿದ ಹಣದ ಪ್ರಮಾಣಕ್ಕೆ ತಕ್ಕಂತೆ ಹಂಚಲಾಗುತ್ತದೆ.
- ಇದರಲ್ಲಿ ಸಣ್ಣ ಹೂಡಿಕೆದಾರರು ವಾಸ್ತವದಲ್ಲಿ ಆಸ್ತಿಯ ಸ್ವಾಧೀನವನ್ನೇನೂ ಪಡೆಯುವುದಿಲ್ಲ. ಆದರೆ, ಅವರ ಹೂಡಿಕೆ ಪ್ರಮಾಣಕ್ಕೆ ತಕ್ಕಂತೆ ಆಯಾ ಕಂಪೆನಿಯ ಆಸ್ತಿಗಳಲ್ಲಿ ಮಾಲೀಕತ್ವ ಇರುತ್ತದೆ. ಆಸ್ತಿಯನ್ನು ಖರೀದಿಸಲು ಬಂಡವಾಳ, ಕಾನೂನು ಅಡಚಣೆಗಳು, ಸಮಯ ನಿರ್ವಹಣೆ ಅಡಚಣೆಗಳಾಗಿವೆ.
- ಸಣ್ಣ ಬಂಡವಾಳದಿಂದ ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಲು ಅವಕಾಶ ದೊರಕಲಿದೆ.ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ನ ಸಂಕ್ಷಿಪ್ತ ರೂಪವೇ ಆರ್‌ಇಐಟಿ. ಆರ್ ಇಐಟಿ ಕಾರ್ಯನಿರ್ವಹಣೆ ಬಗ್ಗೆ ಸೆಕ್ಯುರಿಟೀಸ್ ಆಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಕರಡು ಮಸೂದೆಯನ್ನು ಪ್ರಕಟಿಸಿದೆ. ಮ್ಯುಚುಯಲ್ ಫಂಡ್‌ಗಳ ಹಾಗೆಯೇ ಆರ್‌ಇಐಟಿ ಸಹ ಸೆಬಿಯಲ್ಲಿ ನೋಂದಣಿ ಆಗಿರುತ್ತದೆ.
- ಆರ್‌ಇಐಟಿ ಸಣ್ಣ ಹೂಡಿಕೆದಾರರಿಂದ ಹಣವನ್ನು ಶೇಖರಿಸುತ್ತದೆ. ಆರ್‌ಇಐಟಿಗಳು ಜಮೀನು, ಸೈಟು ಹಾಗೂ ಇತರ ಕಟ್ಟಡವಿರದ ಆಸ್ತಿಯಲ್ಲಿ ಹೂಡಿಕೆ ಮಾಡುವಂತಿಲ್ಲ. ಕೇವಲ ಬಾಡಿಗೆ ಹಾಗೂ ಆದಾಯ ಬರುವ ಕಟ್ಟಡಗಳಲ್ಲಿ ಮಾತ್ರ ಹೂಡಿಕೆ ಮಾಡಬಹುದು. ಆಸ್ತಿಯಿಂದ ಬರುವ ಬಾಡಿಗೆ ಆದಾಯವನ್ನು ಸಣ್ಣ ಹೂಡಿಕೆದಾರರಿಗೆ ಡಿವಿಡೆಂಡ್ (ಲಾಭಾಂಶ) ರೂಪದಲ್ಲಿ ಹಂಚಲಾಗುತ್ತದೆ.
- ಆರ್‌ಇಐಟಿಗಳು ಕಚೇರಿಗಳು, ಷಾಪಿಂಗ್ ಮಾಲ್‌ಗಳು, ವಾಣಿಜ್ಯ ಬಳಕೆಯ ಕಟ್ಟಡಗಳಲ್ಲಿ ಹೂಡಿಕೆ ಮಾಡಬಹುದು. ಆರ್‌ಇಐಟಿಯ ಒಟ್ಟು ಆದಾಯದಲ್ಲಿ ಶೇ. ೭೫ರಷ್ಟು ಬಾಡಿಗೆ ರೂಪದಲ್ಲಿರಬೇಕು. ಮ್ಯುಚುಯಲ್ ಫಂಡ್‌ಗಳ ಹಾಗೇ ಆರ್‌ಇಐಟಿಗೂ ಹಣಕಾಸು, ಹೂಡಿಕೆ ನಿರ್ವಹಣೆಗೆಂದೇ ಪ್ರತ್ಯೇಕ ನಿರ್ವಹಣಾ ಸಂಸ್ಥೆಗಳು (ಫಂಡ್ ಮ್ಯಾನೇಜರ್ಸ್) ಇರುತ್ತವೆ. ಹೂಡಿಕೆದಾರರ ರಿಯಲ್ ಎಸ್ಟೇಟ್ ಫೋರ್ಟ್ ಫೋಲಿಯೋವನ್ನು ವೃದ್ಧಿಪಡಿಸುತ್ತಾರೆ.

- ಆರ್‌ಇಐಟಿಗಳ ಬಂಡವಾಳ ಕನಿಷ್ಠ ರೂ೧೦೦೦ ಕೋಟಿ ಇರಬೇಕು. ಈ ಕಾರಣದಿಂದಲೇ ಸಣ್ಣ ಪುಟ್ಟ ಕಂಪೆನಿಗಳು ಈ ಕ್ಷೇತ್ರದಿಂದ ದೂರ ಉಳಿಯಲಿವೆ. ಹೂಡಿಕೆದಾರರು ಆರ್‌ಇಐಟಿಗಳಲ್ಲಿ

ಹೂಡಿಕೆ ಮಾಡಿದ್ದಕ್ಕೆ ತಕ್ಕಂತೆ ಯುನಿಟ್‌ಗಳನ್ನು (ಷೇರುಗಳ ಲೆಕ್ಕದಲ್ಲಿ) ಪಡೆಯುತ್ತಾರೆ. ಪರತಿ ಯುನಿಟ್ ಮುಖಬೆಲೆ ರೂ1 ಲಕ್ಷ ಇರುತ್ತದೆ. ಹೂಡಿಕೆದಾರರು ಕನಿಷ್ಠ ರೂ2 ಲಕ್ಷ ಮೊತ್ತವನ್ನು ಆರ್‌ಇಐಟಿಗಳಲ್ಲಿ ಹೂಡಿಕೆ ಮಾಡಬೇಕಾಗುತ್ತದೆ.

- ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿನ ಏರುಪೇರುಗಳು ಆರ್‌ಇಐಟಿನಲ್ಲಿನ ಹೂಡಿಕೆ ಮೇಲೆ ನೇರ ಪರಿಣಾಮ ಬೀರುತ್ತವೆ. ಹೆಚ್ಚು ಬೆಲೆ ಇದ್ದಾಗ ಆರ್‌ಇಐಟಿನಲ್ಲಿ ಹೂಡಿಕೆ ಮಾಡಿ ಬೆಲೆ ಕಡಿಮೆಯಾದಾಗ ಯೂನಿಟ್‌ಗಳನ್ನು ಮಾರಾಟ ಮಾಡಿದರೆ ಹೂಡಿಕೆದಾರರಿಗೆ ನಷ್ಟವಾಗುತ್ತದೆ.

- ಆರ್‌ಇಐಟಿ ಯುನಿಟ್‌ಗಳನ್ನು ಷೇರು ಮಾರುಕಟ್ಟೆಯಲ್ಲಿಯೂ ಮಾರಾಟ ಮಾಡಲಾಗುತ್ತದೆ. ಹೂಡಿಕೆದಾರರಿಗೆ ತಮ್ಮ ಹೂಡಿಕೆಯಿಂದ ಸುಗಮವಾಗಿ ಹೊರಬರಲು ಇದರಿಂದ ಅವಕಾಶವಾಗುತ್ತದೆ. ಆರ್‌ಇಐಟಿಗಳು ತಮ್ಮ ಯುನಿಟ್‌ಗಳ ಮಾರುಕಟ್ಟೆ ಬೆಲೆಯನ್ನು (ನೆಟ್ ಅಸೆಟ್ ವ್ಯಾಲ್ಯು) ಆರು ತಿಂಗಳಿಗೊಮ್ಮೆ ಪ್ರಕಟಿಸಬೇಕೆಂಬುದು ಸೆಬಿ ನಿಯಮವಾಗಿದೆ.

**ಆದಾಯ ತೆರಿಗೆ**

- ಆರ್‌ಇಐಟಿಯಲ್ಲಿ ಹೂಡಿಕೆ ಮಾಡಿದ ನಂತರ ಪಡೆಯುವ ಒಟ್ಟು ಆದಾಯಕ್ಕೆ ಆದಾಯ ತೆರಿಗೆ ವಿನಾಯ್ತಿಯೂ ಇದೆ. ಆದರೆ ಹೂಡಿಕೆದಾರರು ಆರ್‌ಇಐಟಿಯಿಂದ ದೊರಕುವ ಡಿವಿಡೆಂಡ್‌ಗೆ (ಲಾಭಾಂಶಕ್ಕೆ) ಆದಾಯ ತೆರಿಗೆ ಪಾವತಿಸಬೇಕಾಗುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಭವಿಷ್ಯ**

- ಆರ್‌ಇಐಟಿ ಚಟುವಟಿಕೆ ಆರಂಭದಿಂದ ಭಾರತದಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ದೊಡ್ಡ ಮಟ್ಟದಲ್ಲಿಯೇ ಉತ್ತೇಜನ ದೊರೆಯಲಿದೆ. ಬಿಲ್ಡರ್‌ಗಳಿಗೆ ತಮ್ಮ ವಾಣಿಜ್ಯ ಸಂಕೀರ್ಣಗಳ, ಷಾಪಿಂಗ್ ಮಾಲ್ ನಿರ್ಮಾಣದ ಯೋಜನೆಗಳಿಗೆ ಸುಲಭ ಹಾಗೂ ಕಡಿಮೆ ದರದಲ್ಲಿ ಬಂಡವಾಳ ದೊರೆಯಲಿದೆ.
- ಸಣ್ಣ ಹೂಡಿಕೆದಾರರಿಗೂ ಸಹ ದೊಡ್ಡ ದೊಡ್ಡ ಯೋಜನೆಗಳಲ್ಲಿ ಹೂಡಿಕೆ ಮಾಡಲು ಅವಕಾಶ ದೊರಕಲಿದೆ. ರಿಯಲ್ ಎಸ್ಟೇಟ್ ಫಂಡ್‌ಗಳಾದ ಎಂಬೆಸಿ -ಬ್ಲಾಕ್‌ಸ್ಟೋನ್, ಡಿಎಲ್‌ಎಫ್, ಆರ್ ಎಂಜೆಡ್ ಕಾರ್ಪ್, ಜಾಂಡರ್, ಕೊಟಕ್ ರಿಯಲಿಟಿ ಫಂಡ್, ರೆಡ್ ಫೋರ್ಟ್ ಕ್ಯಾಪಿಟಲ್ ಹಾಗೂ ಇತರೆ ಕಂಪೆನಿಗಳು ಈಗಾಗಲೆ ರಿಯಲ್ ಎಸ್ಟೇಟ್‌ನಲ್ಲಿ ಕೋಟಿಗಟ್ಟಲೆ ಹಣವನ್ನು ಹೂಡಿಕೆ ಮಾಡಿದ್ದಾರೆ. ಈ ಕಂಪೆನಿಗಳಿಗೆ ಹೂಡಿಕೆದಾರರನ್ನು ಆಕರ್ಷಿಸಲು ಈಗ ಸುವರ್ಣ ಅವಕಾಶ ದೊರೆತಿದೆ.

**3. ಸಶಸ್ತ್ರ ಸೀಮಾ ಬಲಕ್ಕೂ ಗುಪ್ತಚರ ವಿಭಾಗ**

**SOURCE-** http://timesofindia.indiatimes.com/india/rajnath-launches-ssbs-new-intelligence-unit/articleshow/60739975.cms

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಕೇಂದ್ರ ಗೃಹ ಸಚಿವ ರಾಜನಾಥ ಸಿಂಗ್ ಅವರು ಸಶಸ್ತ್ರ ಸೀಮಾ ಬಲದ ಗುಪ್ತಚರ ವಿಭಾಗಕ್ಕೆ
- ಚಾಲನೆ ನೀಡಿದ್ದಾರೆ .ಅಪರಾಧಿಗಳು ಮತ್ತು ಪಾಕಿಸ್ತಾನದಿಂದ ಹಿಂದಿರುಗುವ ಕಾಶ್ಮೀರಿ ಉಗ್ರರು ಭಾರತ ಪ್ರವೇಶಿಸಲು ಬಳಸುವ ನೇಪಾಳ ಮತ್ತು ಭೂತಾನ್ ಗಡಿ ಕಾಯುವ ಕೆಲಸವನ್ನು ಸಶಸ್ತ್ರ ಸೀಮಾ ಬಲ ನಿರ್ವಹಿಸುತ್ತಿದೆ.
- ಈ ಸೀಮಾ ಬಲದ ಗುಪ್ತಚರ ವಿಭಾಗದಲ್ಲಿ 650 ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದು, ನುಸುಳುಕೋರರ ಬಗ್ಗೆ ನಿಖರವಾದ ಮಾಹಿತಿಯನ್ನು ಕಲೆಹಾಕಲಿದೆ.
- ನೇಪಾಳದ ಗಡಿಯು ಉತ್ತರಾಖಂಡ್, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಸಿಕ್ಕಿಂ ಮತ್ತು ಭೂತಾನ್ ಗಡಿಯೊಂದಿಗೆ ಸಿಕ್ಕಿಂ, ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಅರುಣಾಚಲ ಪ್ರದೇಶದಲ್ಲಿ ಮುಟ್ಟುತ್ತದೆ.

ಮುಖ್ಯ ಪರೀಕ್ಷೆಗಾಗಿ

**ಪ್ರತ್ಯೇಕ ಗುಪ್ತಚರ ವಿಭಾಗ ಏಕೆ ಬೇಕಾಗಿದೆ ... ??**

- ಭಾರತ ಮತ್ತು ಭೂತಾನ್ ಗಡಿಯಲ್ಲಿ ಸಶಸ್ತ್ರ ಸೀಮಾ ಬಲ ಕಾರ್ಯ ನಿರ್ವಹಿಸುತ್ತದೆ. ನೇಪಾಳ ಜತೆ 1,751 ಕಿಲೋಮೀಟರ್ ಮತ್ತು ನೇಪಾಳ ಜತೆ 699 ಕಿಲೋಮೀಟರ್ ಗಡಿಯನ್ನು ಭಾರತ ಹಂಚಿಕೊಂಡಿದೆ.
- ಕ್ರಿಮಿನಲ್ ಗಳು ಮತ್ತು ಪಾಕಿಸ್ತಾನದಿಂದ ಒಳನುಸುಳುವ ಉಗ್ರರು ಭೂತಾನ್ ಮತ್ತು ನೇಪಾಳ ಮಾರ್ಗವನ್ನು ಇತ್ತೀಚೆಗೆ ಹೆಚ್ಚಾಗಿ ಬಳಸುತ್ತಿದ್ದು ಇದಕ್ಕೆ ಕಡಿವಾಣ ಹಾಕಲು ಗುಪ್ತಚರ ವಿಭಾಗವನ್ನು ಆರಂಭಿಸಲಾಗುತ್ತಿದೆ.
- SSB ಕಾರ್ಯಾಚರಣೆಗಳು ಗುಪ್ತಚರವನ್ನು ಆಧರಿಸಿರುವದರಿಂದ ಅಪರಾಧಿಗಳು ಮತ್ತು ಕಳ್ಳಸಾಗಾಣಿಕೆದಾರರು ನೇಪಾಳ ಮತ್ತು ಭೂತಾನ್ ಜೊತೆ ಸೌಹಾರ್ದ ಗಡಿಗಳನ್ನು ಪ್ರಯೋಜನ ಪಡೆದುಕೊಳ್ಳುವುದರಿಂದ ತಡೆಗಟ್ಟಲು ಇದು ಅಗತ್ಯವಾಗಿತ್ತು.

### ಸಶಸ್ತ್ರ ಸೀಮಾ ಬಲ ಎಂದರೇನು?

- ಸಶಸ್ತ್ರ ಸೀಮಾ ಬಲವು ನೇಪಾಳ ಮತ್ತು ಭೂತಾನ್ಗಳೊಂದಿಗೆ ಭಾರತದ ಅಂತರರಾಷ್ಟ್ರೀಯ ಗಡಿಗಳನ್ನು ಕಾಪಾಡುವ ನಿಟ್ಟಿನಲ್ಲಿ ಗೃಹ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಅರೆಸೇನಾ ಪೊಲೀಸ್ ಪಡೆ. ಇದು ಐಟಿಬಿಪಿ, ಬಿಎಸ್ಎಫ್, ಸಿಆರ್ಪಿಎಫ್ ಮತ್ತು ಸಿಐಎಸ್ಎಫ್ ಅನ್ನು ಒಳಗೊಂಡಿರುವ ಭಾರತದ ಸೆಂಟ್ರಲ್ ಸಶಸ್ತ್ರ ಪೊಲೀಸ್ ಪಡೆಗಳಲ್ಲಿ ಒಂದಾಗಿದೆ.
- ಇದನ್ನು 1963 ರಲ್ಲಿ ರಚಿಸಲಾಯಿತು, ಇದನ್ನು ವಿಶೇಷ ಸೇವೆಗಳ ಕಛೇರಿ ಎಂದು ಕರೆಯಲಾಯಿತು. 2001 ನೇ ಇಸವಿಯಲ್ಲಿ ನೇಪಾಳ ಗಡಿಯ ಉಸ್ತುವಾರಿ ವಹಿಸಿದ ನಂತರ ಈ ಹೆಸರನ್ನು ಸಶತ್ರ ಸೀಮಾ ಬಲ ಎಂದು ಬದಲಾಯಿಸಲಾಯಿತು.
- ಇದಲ್ಲದೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಚತ್ತೀಸ್ಗಢ, ಜಾರ್ಖಂಡ್ ಮತ್ತು ಬಿಹಾರದಲ್ಲಿ ಕೌಂಟರ್ ದಂಗೆ ಕಾರ್ಯಾಚರಣೆ ಮತ್ತು ನಕ್ಸಲ್-ವಿರೋಧಿ ಕಾರ್ಯಾಚರಣೆಗಳಿಗೆ ಬಲವನ್ನು ನಿಯೋಜಿಸಲಾಗಿದೆ. ಇದು ವಿವಿಧ ರಾಜ್ಯಗಳಲ್ಲಿ ಚುನಾವಣೆ ಸಮಯದಲ್ಲಿ ಆಂತರಿಕ ಭದ್ರತೆಯನ್ನು ಒದಗಿಸುತ್ತದೆ.

### SSB ಯ ಪ್ರಾಥಮಿಕ ಪಾತ್ರ ಯಾವುದು?

- ಅಂತರರಾಷ್ಟ್ರೀಯ ಗಡಿಯನ್ನು ಭೌತಿಕವಾಗಿ ಕಾಪಾಡುವುದು ಮತ್ತು ನಿರ್ವಹಿಸುವುದು ಇದರ ಮುಖ್ಯ ಪಾತ್ರವಾಗಿದೆ, ಇದರಿಂದಾಗಿ ಸ್ಥಳೀಯ ಗಡಿಯ ಜನಸಂಖ್ಯೆಯ ನಡುವೆ ಭದ್ರತೆ ಮತ್ತು ಹೆಮ್ಮೆಯ ಪ್ರಜ್ಞೆಯನ್ನು ಉತ್ತೇಜಿಸುತ್ತದೆ.
- SSB ನೇಪಾಳ ಮತ್ತು ಭೂತಾನ್ ಗಡಿಯ ಪ್ರಮುಖ ಗುಪ್ತಚರ ಘಟಕ ಮತ್ತು ರಾಷ್ಟ್ರೀಯ ಭದ್ರತಾ ಚಟುವಟಿಕೆಗಳಿಗೆ ಸಹಕಾರ ಸಂಸ್ಥೆಯಾಗಿದೆ.

- ಇದಲ್ಲದೆ, SSBಗಳು ಶಾಲೆಗಳು, ಕಟ್ಟಡಗಳು, ಶೌಚಾಲಯಗಳು, ಗಡಿ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡುತ್ತದೆ .

- ಇದು ಸಾಮಾನ್ಯ ಅಧ್ಯಯನ ಮತ್ತು ದೈಹಿಕ ತರಬೇತಿಯಲ್ಲಿ ನಿರುದ್ಯೋಗಿ ಯುವಕರಿಗೆ ನಿಯಮಿತವಾದ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುತ್ತದೆ.

- SSBಯು ಗಡಿ ಗ್ರಾಮಗಳಲ್ಲಿ, ಗಡಿ ಜನಗಳಿಗೆ ಅತ್ಯುತ್ತಮ ಕೃಷಿ ಪದ್ಧತಿಗಳನ್ನು, ತೋಟಗಾರಿಕೆ, ಇತ್ಯಾದಿಗಳ ಬಗ್ಗೆ ಕಲಿಸುತ್ತದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಗಡಿಯ ಉದ್ದಕ್ಕೂ ಬಡ ಗ್ರಾಮಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣವನ್ನು ಅಳವಡಿಸಿಕೊಳ್ಳಲು ಮತ್ತು ದತ್ತು ತೆಗೆದುಕೊಳ್ಳಲು ಎಸ್ಎಸಬಿ ವಿಶಿಷ್ಟವಾದ ಮತ್ತು ಮುಖ್ಯವಾದ ಕಾರ್ಯವನ್ನು ಕೈಗೆತ್ತಿಕೊಂಡಿದೆ ಮತ್ತು ಅವರನ್ನು ನಿರಾಯುಧ ಯುದ್ಧ ತರಬೇತಿ ಕಲಿಸುತ್ತದೆ. ಗಡಿಯುದ್ದಕ್ಕೂ ಮಹಿಳೆಯರ ಅತಿರೇಕದ ಮಾನವ ಕಳ್ಳಸಾಗಣೆ ತೊಡೆದುಹಾಕಲು ಇದನ್ನು ಮಾಡಲಾಗುತ್ತದೆ.

**ONLY FOR PRELIMS**

**4. ಕಾರ್ಪೊರೇಟ್ ವಂಚನೆ ಕಡಿವಾಣಕ್ಕೆ ಮಾಹಿತಿ ವಿನಿಮಯ**

- ಸ್ವಯಂಚಾಲಿತ ಹಾಗೂ ನಿಯಮಿತ ಮಾಹಿತಿ ವಿನಿಮಯಕ್ಕಾಗಿ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ(ಎಂಸಿಎ) ಹಾಗೂ ಕೇಂದ್ರ ನೇರ ತೆರಿಗಗಳ ಮಂಡಳಿ(ಸಿಬಿಡಿಟಿ) ಒಪ್ಪಂದಕ್ಕೆ ಸಹಿ ಹಾಕಿವೆ.
- ಕಾರ್ಪೊರೇಟ್ ವ್ಯವಸ್ಥೆಯನ್ನು ದುರುಪಯೋಗ ಮಾಡಿಕೊಳ್ಳುವುದು, ಕಪ್ಪುಹಣ ನಿಯಂತ್ರಣ, ಹಣಕಾಸು ವಂಚನೆ ಪ್ರಕರಣ ಸೇರಿದಂತೆ ಅನೇಕ ಅಕ್ರಮಗಳಿಗೆ ತಡೆ ಹಾಕುವ ನಿಟ್ಟಿನಲ್ಲಿ ಈ ಒಪ್ಪಂದ ಏರ್ಪಟ್ಟಿದೆ.
- ದತ್ತಾಂಶಗಳ ಮಾಹಿತಿ ವಿನಿಮಯವನ್ನು ಸ್ವಯಂಚಾಲಿತ ವ್ಯವಸ್ಥೆಯೊಳಗೆ ತರುವುದು ಹಾಗೂ ನಿಯಮಿತವಾಗಿ ಮಾಹಿತಿ ವಿನಿಮಯ ಮಾಡಿಕೊಳ್ಳುವುದು ಒಪ್ಪಂದದ ಮುಖ್ಯ ಉದ್ದೇಶ. ಕಾರ್ಪೊರೇಟ್ಗಳ ಪ್ಯಾನ್ ಸಂಖ್ಯೆ, ಆದಾಯ ತೆರಿಗೆ ಸಲ್ಲಿಕೆ, ಷೇರುಗಳ ಹಂಚಿಕೆ, ಲೆಕ್ಕಪತ್ರ ವರದಿ, ಹಣಕಾಸು ವ್ಯವಹಾರಗಳ ವಿವರಣೆ ಈ ವ್ಯವಸ್ಥೆಗೆ ಒಳಪಡಲಿವೆ.
- ಒಪ್ಪಂದ ತಕ್ಷಣವೇ ಜಾರಿಗೆ ಬಂದಿರುವ ಹಿನ್ನಲೆಯಲ್ಲಿ ದತ್ತಾಂಶ ವಿನಿಮಯ ನಿರ್ವಹಣೆಗಾಗಿ ಮೇಲ್ವಿಚಾರಣಾ ತಂಡವನ್ನು ನೇಮಕ ಮಾಡಲಾಗಿದೆ.

### 5. ಪ್ರಾದೇಶಿಕ ವೃತ್ತಿಪರ ತರಬೇತಿ ಸಂಸ್ಥೆ

- ಹೈದರಾಬಾದ್ ನಲ್ಲಿ ಪ್ರಾದೇಶಿಕ ವೃತ್ತಿಪರ ತರಬೇತಿ ಸಂಸ್ಥೆಯನ್ನು ಇತ್ತೀಚೆಗೆ ಸ್ಥಾಪಿಸಲಾಯಿತು.
- ಮಹಿಳೆಯರಲ್ಲಿ ಕೌಶಲ್ಯ ಅಭಿವೃದ್ಧಿ ಅವಕಾಶಗಳನ್ನು ಹೆಚ್ಚಿಸಲು ಸಂಸ್ಥೆಯು ಉದ್ದೇಶಿಸಿದೆ.
- ಒಮ್ಮೆ ಗೆ ಸುಮಾರು 1,000 ಯುವಕರು ಪ್ರತಿವರ್ಷ ಇನ್ಸ್ಟಿಟ್ಯೂಟ್ ತರಬೇತಿ ನೀಡಲಾಗುತ್ತದೆ.
- ಇನ್ಸ್ಟಿಟ್ಯೂಟ್ ಫ್ಯಾಶನ್ ಡಿಸೈನ್ & ಟೆಕ್ನಾಲಜಿ, ಆರ್ಕಿಟೆಕ್ಚರಲ್ ಅಸಿಸ್ಟೆನ್ಷಿಪ್, ಕಾಸ್ಮೆಟಾಲಜಿ, ಫ್ರಂಟ್ ಆಫೀಸ್ ಸಹಾಯಕ, ಸೆಕ್ರೇರಿಯರಲ್ ಪ್ರಾಕ್ಟೀಸ್ (ಇಂಗ್ಲಿಷ್) ಮತ್ತು ಆಹಾರ ಮತ್ತು ಪಾನೀಯಗಳ ಸೇವೆ ಸಹಾಯಕ ದಂತಹ ಕೋರ್ಸ್‌ಗಳನ್ನು ನಡೆಸುತ್ತದೆ

**6. ಗೂಗಲ್ ಮೊಬೈಲ್ ವ್ಯಾಲೆಟ್ ಗೆ ಚಾಲನೆ**

- ಕೇಂದ್ರ ವಿತ್ತ ಸಚಿವ ಅರುಣ ಜೇಟ್ಲಿ ಸೋಮವಾರ ಗೂಗಲ್ ನ **ಟೆಜ್ (tez)** ಹೆಸರಿನ ಮೊಬೈಲ್ ವ್ಯಾಲೆಟ್ ಹಾಗೂ ಪೇಮೆಂಟ್ ಆಪ್ ಗೆ ಚಾಲನೆ ನೀಡಿದ್ದಾರೆ. ಈ app ಅನ್ನು ಭಾರತಕ್ಕೆಂದೇ ವಿಶೇಷವಾಗಿ ಅಭಿವೃದ್ದಿಪಡಿಸಲಾಗಿದೆ.
- ಇದು ಆಂಡ್ರಾಯ್ಡ್ ವ್ಯಾಲೆಟ್ ಗೆ ಹೊರತಾಗಿದ್ದು, ಯುಪಿಐ (unified payments interface) ಮಾದರಿಯ ಪೇಮೆಂಟ್ app ಆಗಿದೆ. ಡಿಜಿಟಲ್ ಪಾವತಿಯನ್ನು ಉತ್ತೇಜಿಸುವಲ್ಲಿ ಪೂರಕವಾಗಿದ್ದು, ಭಾರತ ಡಿಜಿಟಲ್ ಪಾವತಿ ಪರಿಸರದಲ್ಲಿ ಮಹತ್ವದ ಬದಲಾವಣೆ ತರಲಿದೆ ಎಂದೇ ವಿಶ್ಲೇಷಿಸಲಾಗಿದೆ. ಪೇಟಿಎಂ, ಮೊಬಿಕ್ವಿಕ್ appಗಳಿಗೂ ಸಹಕರಿಸಲಿದೆ. ಹಿಂದಿಯಲ್ಲಿಯೂ app ಲಭ್ಯವಿರುವುದು ವಿಶೇಷ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**20th SEPTEMBER**

**1. ಪರಿಷ್ಕೃತ ಖೇಲೋ ಇಂಡಿಯಾ ಕಾರ್ಯಕ್ರಮಕ್ಕೆ ಸಂಪುಟದ ಅನುಮೋದನೆ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, 2017-18 ರಿಂದ 2019-20ರ ಅವಧಿಗಾಗಿ 1,756ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪರಿಷ್ಕೃತ ಖೇಲೋ ಇಂಡಿಯಾ (ಆಟವಾಡು ಭಾರತ) ಕಾರ್ಯಕ್ರಮಕ್ಕೆ ತನ್ನ ಅನುಮೋದನೆ ನೀಡಿದೆ.
- ಇದು ಭಾರತೀಯ ಕ್ರೀಡಾ ಇತಿಹಾಸದಲ್ಲಿ ಒಂದು ವಿಶಿಷ್ಠ ಕ್ಷಣವಾಗಿದ್ದು, ಈ ಕಾರ್ಯಕ್ರಮವು ವೈಯಕ್ತಿಕ ವಿಕಾಸ, ಸಮುದಾಯ ಅಭಿವೃದ್ಧಿ, ಆರ್ಥಿಕ ಅಭಿವೃದ್ಧಿ ಮತ್ತು ರಾಷ್ಟ್ರದ ಪ್ರಗತಿಗೆ ಕ್ರೀಡೆಯನ್ನು ಒಂದು ಪ್ರಧಾನ ಸಾಧನವಾಗಿ ಮುಖ್ಯವಾಹಿನಿಗೆ ತರುವ ಉದ್ದೇಶ ಹೊಂದಿದೆ.
- ಪರಿಷ್ಕೃತ ಖೇಲೋ ಇಂಡಿಯಾ ಕಾರ್ಯಕ್ರಮವು, ಮೂಲಸೌಕರ್ಯ, ಸಮುದಾಯ ಕ್ರೀಡೆ, ಪ್ರತಿಭೆಯ ಗುರುತಿಸುವಿಕೆ, ಔನ್ನತ್ಯಕ್ಕಾಗಿ ತರಬೇತಿ, ಸ್ಪರ್ಧಾ ಸ್ವರೂಪ ಮತ್ತು ಕ್ರೀಡಾ ಆರ್ಥಿಕತೆ ಸೇರಿದಂತೆ ಇಡೀ ಕ್ರೀಡಾ ಪರಿಸರ ವ್ಯವಸ್ಥೆಯ ಮೇಲೆ ಪರಿಣಾಮ ಬೀರಲಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಮುಖ್ಯ ಪರೀಕ್ಷೆಗಾಗಿ**

ಪ್ರಮುಖ ಲಕ್ಷಣಗಳು:

- ಆಯ್ದ ಕ್ರೀಡಾ ವಿಭಾಗಗಳಲ್ಲಿ ಪ್ರತಿ ವರ್ಷ 1000 ಹೆಚ್ಚು ಪ್ರತಿಭಾವಂತ ಯುವ ಅಥ್ಲೀಟ್ ಗಳಿಗಾಗಿ ಅಭೂತಪೂರ್ವವಾದ ಇಡೀ ಭಾರತಕ್ಕೆ ಅನ್ವಯಿಸುವ ಕ್ರೀಡಾ ವಿದ್ಯಾರ್ಥಿ ವೇತನ ಯೋಜನೆ.

- ಈ ಯೋಜನೆಯಡಿ ಆಯ್ಕೆಯಾದ ಪ್ರತಿಯೊಬ್ಬ ಅಥ್ಲೀಟ್ ಸತತ 8 ವರ್ಷಗಳವರೆಗೆ ವಾರ್ಷಿಕ 5 ಲಕ್ಷ ರೂಪಾಯಿಗಳ ವಿದ್ಯಾರ್ಥಿ ವೇತನ ಪಡೆಯಲಿದ್ದಾರೆ.
- ಇದೇ ಮೊದಲ ಬಾರಿಗೆ, ಸ್ಪರ್ಧಾತ್ಮಕ ಕ್ರೀಡೆಗಳಲ್ಲಿ ಔನ್ನತ್ಯ ಗಳಿಸಲು ಉತ್ಕೃಷ್ಟ ಮತ್ತು ಪ್ರತಿಭಾನ್ವಿತ ಯುವಜನರಿಗೆ ದೀರ್ಘಾವಧಿಯ ಅಥ್ಲೀಟ್ ಅಭಿವೃದ್ಧಿ ಹಾದಿ ದೊರಕುವಂತೆ ಮಾಡಲಾಗುತ್ತಿದೆ ಮತ್ತು ವಿಶ್ವ ಮಟ್ಟದಲ್ಲಿ ಜಯಗಳಿಸಲು ಉನ್ನತ ಸ್ಪರ್ಧಾತ್ಮಕತೆಯ ಪಡೆಯನ್ನು ಸಜ್ಜುಗೊಳಿಸುತ್ತದೆ.
- ಈ ಕಾರ್ಯಕ್ರಮವು ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಸ್ಪರ್ಧಾತ್ಮಕ ಕ್ರೀಡೆಗಳು ಮತ್ತು ಶಿಕ್ಷಣದ ಎರಡೂ ಹಾದಿಯಲ್ಲಿ ಸಾಗಲು ಅನುವಾಗುವಂತೆ ದೇಶಾದ್ಯಂತ ಇರುವ 20 ವಿಶ್ವವಿದ್ಯಾಲಯಗಳನ್ನು ಕ್ರೀಡಾ ಔನ್ನತ್ಯದ ತಾಣಗಳಾಗಿ ಉತ್ತೇಜಿಸುವ ಗುರಿ ಹೊಂದಿದೆ.
- ಆರೋಗ್ಯಪೂರ್ಣ ಜೀವನ ಶೈಲಿಯೊಂದಿಗೆ ಸಕ್ರಿಯ ಜನತೆಯನ್ನು ರಚಿಸುವ ಗುರಿಯನ್ನೂ ಈ ಕಾರ್ಯಕ್ರಮ ಹೊಂದಿದೆ.
- ಈ ಕಾರ್ಯಕ್ರಮವು 10-18ರ ವಯೋಮಾನದ 200 ದಶಲಕ್ಷಕ್ಕೂ ಹೆಚ್ಚು ಮಕ್ಕಳನ್ನು ವ್ಯಾಪಕ ರಾಷ್ಟ್ರೀಯ ದೈಹಿಕ ಸಾಮರ್ಥ್ಯ ಕಾರ್ಯಕ್ರಮದ ವ್ಯಾಪ್ತಿಗೆ ತರುತ್ತದೆ, ಇದು ಕೇವಲ ಈ ವಯೋಮಾನದ ಮಕ್ಕಳ ದೈಹಿಕ ಕ್ಷಮತೆಯನ್ನಷ್ಟೇ ಅಲ್ಲದೆ, ಅವರ ಕ್ಷಮತೆ ಸಂಬಂಧಿತ ಚಟುವಟಿಕೆಗಳನ್ನೂ ಪ್ರೋತ್ಸಾಹಿಸುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಇದರಿಂದ ಆಗುವ ಪರಿಣಾಮಗಳು :

- ಲಿಂಗ ಸಮಾನತೆ ಮತ್ತು ಸಾಮಾಜಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಕ್ರೀಡೆಯ ಶಕ್ತಿಯನ್ನು ಕೂಡ ಸಂಪೂರ್ಣವಾಗಿ ಗುರುತಿಸಲಾಗಿದ್ದು, ಈ ಉದ್ದೇಶಗಳ ಸಾಧನೆಗೆ ವಿಶೇಷ ಕ್ರಮಗಳನ್ನು ಒದಗಿಸಲಾಗುತ್ತಿದೆ.
- ಈ ಕಾರ್ಯಕ್ರಮವು ತೊಂದರೆಗೊಳಗಾದ ಮತ್ತು ವಂಚಿತ ಪ್ರದೇಶಗಳಲ್ಲಿ ವಾಸಿಸುವ ಯುವಜನರನ್ನು ಅನುತ್ಪಾದಕ ಮತ್ತು ವಿಚ್ಛಿದ್ರಕಾರಕ ಚಟುವಟಿಕೆಗಳಿಂದ ದೂರವಿರಿಸಲು ಮತ್ತು

ರಾಷ್ಟ್ರದ-ನಿರ್ಮಾಣ ಪ್ರಕ್ರಿಯೆಯ ಮುಖ್ಯವಾಹಿನಿಗೆ ತರಲು ಅವರನ್ನು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಗುರಿ ಹೊಂದಿದೆ.

- ಈ ಕಾರ್ಯಕ್ರಮವು ಸಂಘಟಿತ ಕ್ರೀಡಾ ಸ್ಪರ್ಧೆಗಳಲ್ಲಿ ಗರಿಷ್ಠ ಅವಕಾಶ ಒದಗಿಸಲು ಶಾಲಾ ಮತ್ತು ಕಾಲೇಜು ಮಟ್ಟದಲ್ಲಿ ಸ್ಪರ್ಧೆಯ ಗುಣಮಟ್ಟವನ್ನು ಹೆಚ್ಚಿಸುವ ಪ್ರಯತ್ನ ಮಾಡಲಿದೆ.
- ಇದು ಕ್ರೀಡಾ ಉತ್ತೇಜನದ ಎಲ್ಲಾ ಅಂಶಗಳಲ್ಲಿ ಇತ್ತೀಚಿನ ಬಳಕೆದಾರ-ಸ್ನೇಹಿ ತಂತ್ರಜ್ಞಾನದ ಬಳಕೆಯನ್ನು ಒಳಗೊಂಡಿದೆ, ಕ್ರೀಡಾ ತರಬೇತಿ ಪ್ರಸಾರಕ್ಕಾಗಿ ಮೊಬೈಲ್ ಆನ್ವಯಿಕಗಳ ಬಳಕೆ; ಪ್ರತಿಭೆ ಗುರುತಿಸುವಿಕೆಗಾಗಿ ರಾಷ್ಟ್ರೀಯ ಕ್ರೀಡೆ ಪ್ರತಿಭೆ ಶೋಧ  ಪೋರ್ಟಲ್;ಸ್ಥಳೀಯ ಕ್ರೀಡೆಗಳಿಗೆ ಸಂವೇದಾತ್ಮಕ ಅಂತರ್ಜಾಲಪುಟ; ಕ್ರೀಡಾ ಮೂಲಸೌಕರ್ಯವನ್ನು ಶೋಧಿಸಲು ಮತ್ತು ಬಳಸಿಕೊಳ್ಳುವುದಕ್ಕಾಗಿ ಜಿಐಎಸ್ಆಧಾರಿತ ಮಾಹಿತಿ ಇತ್ಯಾದಿ ವ್ಯವಸ್ಥೆಗಳನ್ನು ಹೊಂದಿದೆ.
- ಈ ಕಾರ್ಯಕ್ರಮವು "ಎಲ್ಲರಿಗೂ ಕ್ರೀಡೆ ಮತ್ತು "ಔನ್ನತ್ಯಕ್ಕಾಗಿ ಕ್ರೀಡೆ" ಎಂಬುದನ್ನು ಉತ್ತೇಜಿಸಲೂ ಶ್ರಮಿಸುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**SOURCE-** http://economictimes.indiatimes.com/news/politics-and-nation/gorakhpur-koraput-and-thane-to-launch-zero-hunger-programme-on-october-16/articleshow/60742734.cms

**2. ಗೋರಖ್ಪುರ್, ಕೋರಪುಟ್ ಮತ್ತು ಥಾಣೆಯಲ್ಲಿ ಝೀರೋ ಹಂಗರ್ ಕಾರ್ಯಕ್ರಮ ಪ್ರಾರಂಭ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಉತ್ತರ ಪ್ರದೇಶ ಜಿಲ್ಲೆಯ ಗೋರಖ್ಪುರ, ಒರಿಸ್ಸಾದಲ್ಲಿನ ಕೋರಪುಟ್ ಮತ್ತು ಮಹಾರಾಷ್ಟ್ರದ ಥಾಣೆ ಯಲ್ಲಿ ಅಕ್ಟೋಬರ್ 16 ರಂದು(ವಿಶ್ವ ಆಹಾರ ದಿನ) ಕೃಷಿ ಕ್ಷೇತ್ರದಲ್ಲಿ ಮಧ್ಯಸ್ಥಿಕೆ ಮೂಲಕ ಭಾರತದ ಮಹತ್ವಾಕಾಂಕ್ಷೆಯ 'ಝೀರೋ ಹಂಗರ್' ಕಾರ್ಯಕ್ರಮವನ್ನು ಆರಂಭಿಸುತ್ತದೆ.
- ಸಮರ್ಪಿತ ಕೃಷಿ-ಆಧಾರಿತ ಕಾರ್ಯಕ್ರಮದ ಅಡಿಯಲ್ಲಿ ಹಲವು ಜಿಲ್ಲೆಗಳು ಒಳಗೊಂಡಿರುತ್ತವೆ, ಸೂಕ್ತ ಕೃಷಿ \ ತೋಟಗಾರಿಕಾ ಕ್ರಮಗಳನ್ನು ಅಳವಡಿಸಿಕೊಳ್ಳುವ ಮೂಲಕ ಹಸಿವು ಮತ್ತು ಅಪೌಷ್ಟಿಕತೆಗಳನ್ನು ನಿಭಾಯಿಸುವ ಮೂಲಕ ಸಮಗ್ರ ವಿಧಾನದ ಮಾದರಿಯಾಗಿ ಈ ಮೂರೂ ಜಿಲ್ಲೆಗಳು ಕಾರ್ಯನಿರ್ವಹಿಸುತ್ತವೆ.

ಮುಖ್ಯ ಪರೀಕ್ಷೆಗಾಗಿ

- ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ಐಸಿಎಂಆರ್), ಎಮ್ ಎಸ್ ಸ್ವಾಮಿನಾಥನ್ ರಿಸರ್ಚ್ ಫೌಂಡೇಶನ್ ಮತ್ತು ಬಯೋಟೆಕ್ನಾಲಜಿ ಇಂಡಸ್ಟ್ರಿ ರೀಸರ್ಚ್ ಅಸಿಸ್ಟೆನ್ಸ್ ಕೌನ್ಸಿಲ್ (ಬಿಐಆರ್ಎಸಿ) ಸಹಯೋಗದೊಂದಿಗೆ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ (ಐಸಿಎಆರ್) ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದು.
- ಸಂಬಂಧಿತ ರಾಜ್ಯ ಸರ್ಕಾರಗಳು ಪೌಷ್ಟಿಕಾಂಶಕ್ಕಾಗಿ ಕೃಷಿ ವ್ಯವಸ್ಥೆಗಳ ಸಂಘಟನೆಗಳನ್ನು ಒಳಗೊಂಡಿರುವ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುತ್ತವೆ.ಅವುಗಳೆಂದರೆ ಜೈವಿಕ ಸೌಕರ್ಯಗಳು / ಬೆಳೆಗಳಿಗೆ ಅನುವಂಶಿಕ ತೋಟಗಳನ್ನು ಸ್ಥಾಪಿಸುವುದು ಮತ್ತು 'ಝೀರೋ ಹಂಗರ್' ತರಬೇತಿಯನ್ನು ಆರಂಭಿಸುವುದು.

- ಈ ಕಾರ್ಯಕ್ರಮವು ಪ್ರತಿ ಜಿಲ್ಲೆಯ ಪೌಷ್ಟಿಕಾಂಶದ ದುಷ್ಪರಿಣಾಮಗಳು ಮತ್ತು ಸರಿಯಾದ ಕೃಷಿ / ತೋಟಗಾರಿಕಾ ಮತ್ತು ಪ್ರಾಣಿ ಸಂಗೋಪನಾ ಪರಿಹಾರಗಳನ್ನು ಗುರುತಿಸಲು ತೀವ್ರವಾದ ತರಬೇತಿಯಂತಹ ಕಾರ್ಯಕ್ರಮವನ್ನು ಕೈಗೊಳ್ಳಲಿದೆ ಇರುತ್ತದೆ.

- 2022 ರ ವೇಳೆಗೆ ಭಾರತದ ಅಪೌಷ್ಟಿಕತೆಯನ್ನು ಮುಕ್ತಗೊಳಿಸುವುದಕ್ಕಾಗಿ ಸರ್ಕಾರವು ಯೋಜಿಸಿರುವುದರ ಕಾರ್ಯಕ್ರಮದ ಗುರಿ ಅಡಿಯಲ್ಲಿ ವಿವಿಧ ಉಪಕ್ರಮಗಳ ಮೂಲಕ

ಅಪೌಷ್ಟಿಕತೆಯ ಸಮಸ್ಯೆಯನ್ನು ಎದುರಿಸಲು ಈ ಕಾರ್ಯಕ್ರಮವನ್ನು ಬಿಡುಗಡೆ ಮಾಡಲಾಗುವುದು.

- ಇದರ ಮುಖ್ಯ ಗುರಿ ಎಂದರೆ ಹಸಿವು ಮುಕ್ತ, ಆಹಾರ ಭದ್ರತೆ ಮತ್ತು ಸುಧಾರಿತ ಪೌಷ್ಟಿಕಾಂಶವನ್ನು ಸಾಧಿಸಿ ಮತ್ತು ಸುಸ್ಥಿರ ಕೃಷಿಯನ್ನು ಉತ್ತೇಜಿಸುವುದು.

**ಜೈವಿಕ ಉದ್ಯಾನವನ ಎಂದರೇನು ..?**

- ಬಯೋಫಾರ್ಫಿಫೈಡ್ ಸಸ್ಯಗಳು / ಬೆಳೆಗಳಿಗೆ ಆನುವಂಶಿಕ/ಜೈವಿಕ ಉದ್ಯಾನದಲ್ಲಿ ನೈಸರ್ಗಿಕವಾಗಿ ಜೈವಿಕ-ಫಲವತ್ತಾದ ಬೆಳೆಗಳು ಅಥವಾ ಅಂತಹ ಬೆಳೆಗಳನ್ನು ಸಸ್ಯ ತಳಿ ಮೂಲಕ ಪಡೆಯಲಾಗುತ್ತದೆ. ಇದು ಸಸ್ಯಗಳು ಮತ್ತು ಬೆಳೆಗಳನ್ನು ಹೊಂದಿದೆ, ಅದು ಸೂಕ್ಷ್ಮ-ಪೋಷಕಾಂಶದ ಕೊರತೆಯನ್ನು ಸಹ ಪೂರೈಸುತ್ತದೆ.
- ಜಾಗತಿಕವಾಗಿ, ಇಂದು ವಿಶ್ವದ ಒಂಬತ್ತರಲ್ಲಿ ಒಬ್ಬರು (795 ಮಿಲಿಯನ್) ಪೌಷ್ಟಿಕಾಂಶದ ಕೊರತೆಯಲ್ಲಿದ್ದಾರೆ .
- ವಿಶ್ವದ ಹಸಿದ ಜನರಲ್ಲಿ ಹೆಚ್ಚಿನವರು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವಾಸಿಸುತ್ತಿದ್ದಾರೆ, ಅಲ್ಲಿ 12.9% ಜನಸಂಖ್ಯೆಗೆ ಪೌಷ್ಟಿಕಾಂಶಗಳಿಲ್ಲ.

IAS/KAS
ನಮ್ಮ ಐಎಎಸ್ ಅಕಾಡೆಮಿ
ಮಸ್ಸೂರಿಗೆ/ಮೈಸೂರಿಗೆ

- ಏಷ್ಯಾವು ಹೆಚ್ಚು ಹಸಿವುಳ್ಳ ಖಂಡವಾಗಿದೆ - ಒಟ್ಟಾರೆಯಾಗಿ ಮೂರನೇ ಎರಡು ಭಾಗದಷ್ಟು ಏಶಿಯಾ ಕಂಡದಲ್ಲಿದ್ದಾರೆ . ದಕ್ಷಿಣ ಏಷ್ಯಾದ ಶೇಕಡಾವಾರು ಪ್ರಮಾಣವು ಇತ್ತೀಚಿನ ವರ್ಷಗಳಲ್ಲಿ ಕುಸಿದಿದೆ ಆದರೆ ಪಶ್ಚಿಮ ಏಷ್ಯಾದಲ್ಲೇ ಇದು ಸ್ವಲ್ಪ ಹೆಚ್ಚಾಗಿದೆ.

**SOURCE-** http://www.thehindu.com/todays-paper/tp-national/finalise-body-for-sharing-of-river-water-tn-tells-sc/article19717673.ece

**3. ಕಾವೇರಿ ನೀರು ನಿರ್ವಹಣಾ ಮಂಡಳಿ ಸ್ಥಾಪಿಸಿ -ತಮಿಳುನಾಡು ಸರ್ಕಾರದ ಮನವಿ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಕಾವೇರಿ ಜಲವಿವಾದ ನ್ಯಾಯಮಂಡಳಿಯ ಸೂಚನೆಯ ಮೇರೆಗೆ ನದಿ ನೀರು ನಿರ್ವಹಣಾ ಮಂಡಳಿ ಸ್ಥಾಪಿಸಬೇಕು ಎಂದು ತಮಿಳುನಾಡು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿತು.

- ನ್ಯಾಯಮಂಡಳಿಯ ಐತೀರ್ಪು ಪ್ರಶ್ನಿಸಿ ಸಲ್ಲಿಸಲಾಗಿರುವ ಮೇಲ್ಮನವಿಯ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ತ್ರಿಸದಸ್ಯ ಪೀಠದೆದುರು ಈ ಬೇಡಿಕೆ ಇರಿಸಿದ ತಮಿಳುನಾಡು ಕಳೆದ 25 ವರ್ಷಗಳಿಂದ ಇರುವ ಈ ಕುರಿತ ಬೇಡಿಕೆಯ ಈಡೇರಿಕೆಗೆ ನ್ಯಾಯಾಲಯ ಮುಂದಾಗಬೇಕಿದೆ ಎಂದರು.

- ಮಂಡಳಿಯು ನೀರು ಹಂಚಿಕೆಯ ಹೊಣೆಯನ್ನು ನಿಭಾಯಿಸಲಿದೆ. ಮಂಡಳಿ ರಚನೆಯ ಹೊಣೆಯನ್ನು ಕೇಂದ್ರ ಸರ್ಕಾರಕ್ಕೆ ವಹಿಸದೆ ನ್ಯಾಯಾಲಯವೇ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಮುಖ್ಯ ಪರೀಕ್ಷೆಗಾಗಿ

- ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ, ನೀರು ಹಂಚಿಕೆ ಉದ್ದೇಶದಿಂದಲೇ ಕೇಂದ್ರ ಸರ್ಕಾರ 2013ರಲ್ಲಿ ಮೇಲುಸ್ತುವಾರಿ ಸಮಿತಿ ರಚಿಸಿದೆ. ನ್ಯಾಯಮಂಡಳಿ ನೀಡಿರುವ ಐತೀರ್ಪಿನ ಬಗ್ಗೆ ಸ್ಪಷ್ಟನೆ ಕೋರಲಾಗಿದ್ದು, ಸುಪ್ರೀಂ ಕೋರ್ಟ್‌ನ ತೀರ್ಪಿಗಾಗಿ ಕಾಯಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ವಾದವಾಗಿದೆ .
- ಹೆಚ್ಚುವರಿಯಾಗಿ ಮಳೆ ಸುರಿದಾಗಲೂ ಯಾವ ರೀತಿ ನೀರು ಹಂಚಬೇಕು ಎಂಬ ಕುರಿತೂ ಐತೀರ್ಪಿನಲ್ಲಿ ಸ್ಪಷ್ಟ ನಿರ್ದೇಶನ ಇಲ್ಲ ಎಂದು ಕರ್ನಾಟಕದ ವಾದವಾಗಿದೆ.
- ಅಂತರರಾಜ್ಯ ಜಲ ವಿವಾದ ಕಾಯ್ದೆಯ ಪ್ರಕಾರ, ನದಿ ನೀರು ಹಂಚಿಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ಮಂಡಳಿ ರಚನೆಯಲ್ಲಿ ಸಂಸತ್ತು ಪರಮಾಧಿಕಾರ ಹೊಂದಿದೆ. ನ್ಯಾಯಾಲಯ ಈ ಅಧಿಕಾರವನ್ನು ಕಿತ್ತುಕೊಳ್ಳಲಾಗದು. ಕೇಂದ್ರ ಸರ್ಕಾರವು ಮಂಡಳಿ ರಚನೆಗೆ ಪೂರಕ ಕ್ರಮಗಳನ್ನು ಕೈಗೊಳ್ಳಲು ಸಿದ್ಧವಿದೆ .
- ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದು ಕೇಂದ್ರದ ಕರ್ತವ್ಯ. ಈ ಬಗ್ಗೆ ಕ್ರಮ ಕೈಗೊಳ್ಳಲು ಕೇಂದ್ರಕ್ಕೆ ಕಾಲಮಿತಿ ವಿಧಿಸಲಾಗುವುದು. ಅಷ್ಟರೊಳಗೆ ಕ್ರಮ ಕೈಗೊಳ್ಳಬೇಕು.

ನೀರು ಹಂಚಿಕೆ ಕುರಿತಂತೆ ತಟಸ್ಥ ನಿಲುವಿಗೆ ಆದ್ಯತೆ ಇರಲಿ ಎಂದು ಮುಖ್ಯ ನ್ಯಾಯಮೂರ್ತಿ ಕೇಂದ್ರಕ್ಕೆ ಸೂಚಿಸಿದರು.

SOURCE-http://economictimes.indiatimes.com/news/politics-and-nation/maharashtra-approves-50-per-cent-cost-sharing-for-sagarmala-project/articleshow/60755106.cms

## 5. ಸಾಗರ್ಮಾಲಾ ಯೋಜನೆಗೆ ಶೇ 50ರಷ್ಟು ಪಾಲು -ಮಹಾರಾಷ್ಟ್ರ ಸರಕಾರ

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- ಮಹಾರಾಷ್ಟ್ರ ಸರಕಾರ ಕೇಂದ್ರದ ಮಹತ್ವಾಕಾಂಕ್ಷೆಯ ಸಾಗರ್ಮಾಲಾ ಯೋಜನೆಯ ಅನುಷ್ಠಾನಕ್ಕೆ ರಾಜ್ಯವು ಶೇ 50 ರಷ್ಟು ಪಾಲು ಹಂಚಿಕೆ ಮಾಡಲು ಅನುಮೋದಿಸಿದೆ.

### ಮುಖ್ಯ ಪರೀಕ್ಷೆಗಾಗಿ

**ಸಾಗರ್‌ಮಾಲಾ' ಯೋಜನೆ ಬಗ್ಗೆ ಮುಖ್ಯವಾಗಿ ಏನು ತಿಳಿದುಕೊಳ್ಳಬೇಕು ..?**

- ಇದು ಕೇಂದ್ರ ನೌಕಾ ಸಚಿವಾಲಯದ ಅಡಿಯಲ್ಲಿ ಬರುತ್ತದೆ
- ಪ್ರಧಾನಿ ನರೇಂದ್ರ ಮೋದಿ ಅವರ 'ಮೇಕ್ ಇನ್ ಇಂಡಿಯಾ'ದ ಭಾಗವಾದ 'ಸಾಗರ್‌ಮಾಲಾ' ಯೋಜನೆ ವಾಣಿಜ್ಯ ಬಂದರುಗಳಿಗೆ ಅತ್ಯುತ್ತಮ ಮೂಲಸೌಲಭ್ಯಗಳ ಮೂಲಕ ಆಧುನೀಕರಣಗೊಳಿಸಿ, ಅಲ್ಲಿಂದ ಕಾರ್ಗೋವನ್ನು ಕ್ಷಿಪ್ರಗತಿಯಲ್ಲಿ ಸಾಗಾಟ ಮಾಡಲು ರಸ್ತೆ, ರೈಲು, ವಿಮಾನ ಯಾನಕ್ಕೆ ಪೂರಕ ಸಂಪರ್ಕ ಸೌಲಭ್ಯ ಅಭಿವೃದ್ಧಿಗೊಳಿಸಿ, ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುವುದು ಕೇಂದ್ರ ಸರಕಾರದ 'ಸಾಗರ್‌ಮಾಲಾ ಯೋಜನೆಯ ಪ್ರಮುಖ ಉದ್ದೇಶ.
- ಇದು ದೇಶದ ಎಲ್ಲ ಬಂದರು, ನಗರ, ಕೈಗಾರಿಕಾ ಕಾರಿಡಾರ್‌ಗಳನ್ನು ಸಂಪರ್ಕಿಸಿ, ಬಂದರುಗಳಲ್ಲಿ ಆರ್ಥಿಕ ಚಟುವಟಿಕೆ ಹೆಚ್ಚಿಸಲಿದೆ.

- ದೇಶದ ವಿವಿಧೆಡೆ ಬಂದರು, ವಿಮಾನ ನಿಲ್ದಾಣ, ರೈಲ್ವೇ ರಸ್ತೆ ಸಂಪರ್ಕಗಳಿದ್ದರೂ ಅವುಗಳ ನೇರ ಸಂಪರ್ಕ ಇಲ್ಲದೆ, ನಿರೀಕ್ಷಿತ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಸಾಗರ್‌ಮಾಲ ಯೋಜನೆ ಮೂಲಕ ಬಂದರುಗಳನ್ನು ಹೊಸ 'ನೀಲಿ ಆರ್ಥಿಕ ಅಭಿವೃದ್ಧಿ ಕ್ಷೇತ್ರ'ಗಳಾಗಿ ಗುರುತಿಸಿ, ಸಂಪರ್ಕ ಅಭಿವೃದ್ಧಿಪಡಿಸಲಾಗುತ್ತದೆ. ಇದು ರಫ್ತು ಮತ್ತು ಆಮದು ಉದ್ಯಮ ಹೆಚ್ಚಿಸಿ, ಸ್ಥಳೀಯರಿಗೆ ಉದ್ಯೋಗ, ಕೌಶಲ್ಯ ವೃದ್ಧಿ ಮಾಡಲಿದೆ. ಇದಕ್ಕೆ ಪೂರಕ ತಂತ್ರಜ್ಞಾನ ಒದಗಿಸಿ ಕೈಗಾರಿಕೆಗಳನ್ನು ಸ್ಥಾಪಿಸಲಾಗುತ್ತದೆ.

- ಸಾಗರ್‌ಮಾಲ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೋಸ್ಟಲ್ ಎಕನಾಮಿಕ್ ಝೋನ್(ಸಿಇಝೆಡ್) ಹೆಸರಿನಲ್ಲಿ ಸಮಗ್ರ ಕರಾವಳಿಯ ಸಂಭಾವ್ಯ ಭೌಗೋಳಿಕ ಪ್ರದೇಶದ 'ನ್ಯಾಷನಲ್ ಪರ್‌ಸ್ಪೆಕ್ಟಿವ್ ಪ್ಲಾನ್'(ಎನ್‌ಪಿಪಿ) ಸಿದ್ಧಪಡಿಸಲಾಗುತ್ತಿದೆ. ಎನ್‌ಪಿಪಿಯಡಿ ಕೈಗಾರಿಕಾ ಕಾರಿಡಾರ್, ಸಮರ್ಪಿತ ಸರಕು ಕಾರಿಡಾರ್, ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ, ಕೈಗಾರಿಕಾ ವಲಯಗಳ ಸ್ಥಾಪನೆಯಾಗಲಿದೆ.

- ಸಾಗರ್‌ಮಾಲ ಯೋಜನೆಯು ಇರುವ ಬಂದರುಗಳ ಅಭಿವೃದ್ಧಿ ಜತೆಗೆ ಹೊಸ ವಾಣಿಜ್ಯ, ಮೀನುಗಾರಿಕೆ ಬಂದರುಗಳ ಸ್ಥಾಪನೆ, ಉದ್ಯೋಗ ಸೃಷ್ಟಿ, ಆರ್ಥಿಕ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಲಿದೆ. ಇದರ ಪರಿಣಾಮಗಾರಿ ಅನುಷ್ಠಾನಕ್ಕಾಗಿ ಕೇಂದ್ರವು ರಾಜ್ಯದ ಸಹಯೋಗದಲ್ಲಿ ಸ್ಪಷ್ಟ ರೂಪುರೇಷೆ ಸಿದ್ಧಪಡಿಸುತ್ತಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 5. ಹೈಟೆಕ್ ನಗರಗಳ ಶ್ರೇಯಾಂಕ

**ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ**

- ವಿಶ್ವದ ಅತಿ ಹೆಚ್ಚು ಹೈಟೆಕ್ 25 ನಗರಗಳಲ್ಲಿ ಬೆಂಗಳೂರು ನಗರವು 19 ನೇ ಸ್ಥಾನವನ್ನು ಪಡೆದಿದೆ, 2016 ರ ಶ್ರೇಯಾಂಕದಲ್ಲಿ ನಗರವು 49 ನೇ ಸ್ಥಾನದಲ್ಲಿತ್ತು .
- ಈಗ ಅದು ಬರ್ಲಿನ್, ಹಾಂಗ್ಕಾಂಗ್ ಮತ್ತು ಶೆನ್ಜೆನ್ ಗಿಂತ ಮುಂದಿದೆ, ಸ್ಯಾನ್ ಫ್ರಾನ್ಸಿಸ್ಕೊ ಅಗ್ರಸ್ಥಾನದಲ್ಲಿದೆ.
- The ranking was released by Research firm 2thinknow.
- ಶ್ರೇಯಾಂಕವು ಪ್ರತಿ ವ್ಯಕ್ತಿಗೆ ಸಲ್ಲಿಸಿದ ಪೇಟೆಂಟ್ ಗಳ ಸಂಖ್ಯೆ, ಸ್ಟಾರ್ಟ್ ಅಪ್ಸ್ ಕಂಪನಿಗಳು ಮತ್ತು ಸ್ಮಾರ್ಟ್ಫೋನ್ ಬಳಕೆಯ ಮಟ್ಟ ಸೇರಿದಂತೆ ತಂತ್ರಜ್ಞಾನದ ಪ್ರಗತಿಯನ್ನು ಆಧರಿಸಿದೆ.

21ST SEPTEMBER

## 1. ಪ್ಯಾರಿಸ್ ಒಪ್ಪಂದ ವನ್ನು ಮೀರಿ ಪರಿಸರ ರಕ್ಷಣೆ ಕಾಳಜಿ ವಹಿಸಲಿದೆ-ಭಾರತ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಜೂನ್ ನಲ್ಲಿ ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕವು ಪ್ಯಾರಿಸ್ ಒಪ್ಪಂದದಿಂದ ಹಿಂತೆಗೆದುಕೊಳ್ಳುವುದಾಗಿ ಘೋಷಿಸಿತು, ಭಾರತ ಮತ್ತು ಚೀನಾದಂತಹ ದೇಶಗಳಿಗೆ ಲಾಭಕರವಾಗಿರುವ ಈ ಕ್ರೂರ ಒಪ್ಪಂದ ಅಮೆರಿಕಕ್ಕೆ ಅನ್ಯಾಯ ಮಾಡಿದೆ ಎಂದು ಅವರು ಆರೋಪಿಸಿದ್ದರು.
- ಈ ಅನಿಶ್ಚಿತತೆ ಮಧ್ಯೆಯು ಪ್ಯಾರಿಸ್ ಹವಾಮಾನ ಬದಲಾವಣೆಯ ಒಪ್ಪಂದಕ್ಕೆ ಭಾರತ ತನ್ನ ಬದ್ಧತೆಯನ್ನು ಪುನರುಚ್ಚರಿಸಿತು.
- ನ್ಯೂಯಾರ್ಕ್ ನಲ್ಲಿ ಹವಾಮಾನ ಬದಲಾವಣೆ ಕುರಿತು ವಿಶ್ವಸಂಸ್ಥೆ ಕಾರ್ಯದರ್ಶಿ ಜನರಲ್ ಆಂಟೊನಿಯೊ ಗುಟೆರ್ರೆಸ್ ಅವರೊಂದಿಗೆ ಕೆಲವು ಆಯ್ದ ನಾಯಕರೊಂದಿಗೆ ಸಭೆ ನಡೆಸಿದ ಬಳಿಕ ಪ್ಯಾರಿಸ್ ಒಪ್ಪಂದ ವನ್ನು ಮೀರಿ ಪರಿಸರ ರಕ್ಷಣೆ ಕಾಳಜಿ ವಹಿಸಲಿದೆ ಎಂದು ಭಾರತದ ವಿದೇಶಾಂಗ ಸಚಿವರು ಈ ಹೇಳಿಕೆ ನೀಡಿದರು.
- ಪರಿಸರ ಮತ್ತು ತಾಯ್ನಾಡಿನ ರಕ್ಷಣೆ ಮೇಲೆ ನಂಬಿಕೆ ಇರಬೇಕಾಗಿದ್ದು ಅದಕ್ಕೆ ಒತ್ತು ನೀಡುವ ಅವಶ್ಯಕತೆಯಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ಭಾರತ ಈ ನಿಟ್ಟಿನಲ್ಲಿ ತನ್ನ ಕೆಲಸವನ್ನು ಮುಂದುವರಿಸಲಿದ್ದು ಪ್ಯಾರಿಸ್ ಒಪ್ಪಂದವನ್ನು ಮೀರಿ ಕಾರ್ಯನಿರ್ವಹಿಸಲಿದೆ. ಮುಂದಿನ ಜನಾಂಗ ಉತ್ತಮ ಜೀವನ ನಡೆಸುವುದು ನಮ್ಮ ಬದ್ಧತೆಯಾಗಿದೆ ಎಂದು ಹೇಳಿದ್ದಾರೆ.

- ಅಂತಾರಾಷ್ಟ್ರೀಯ ಸೌರ ಮೈತ್ರಿ ವಿಷಯದಲ್ಲಿ ವಿಶ್ವಸಂಸ್ಥೆಯ ಭದ್ರತಾ ಪಡೆ ಮತ್ತು ಸಂಬಂಧಪಟ್ಟ ವಿಶ್ವಸಂಸ್ಥೆಯ ಸಂಸ್ಥೆಗಳ ಜೊತೆಗೆ ಕೆಲಸ ಮಾಡಲು ಭಾರತ ಸಿದ್ಧವಿದೆ ಎಂದು ಹೇಳಿದರು.

ಮುಖ್ಯ ಪರೀಕ್ಷೆಗಾಗಿ

**ಪ್ಯಾರಿಸ್ ಒಪ್ಪಂದವನ್ನು ಭಾರತ ಏಕೆ ಸ್ವೀಕರಿಸಿತು..?**

- ಭಾರತವು ಹವಾಮಾನ ಬದಲಾವಣೆಯ ಪ್ಯಾರಿಸ್ ಒಪ್ಪಂದವನ್ನು ಸ್ಥಿರೀಕರಿಸುವ ದಾಖಲೆಗಳನ್ನು ಸಲ್ಲಿಸುವ ಮೂಲಕ ಐತಿಹಾಸಿಕ ಒಪ್ಪಂದಕ್ಕೆ ಅಧಿಕೃತವಾಗಿ ಸೇರ್ಪಡೆಗೊಂಡಿತ್ತು .
- ಮಹಾತ್ಮ ಗಾಂಧೀಜಿ ಅವರ 147ನೇ ಜಯಂತಿಯಂದೇ ಭಾರತ 'ಪೃಥ್ವಿಯನ್ನು ಮುಂದಿನ ತಲೆಮಾರಿಗೂ ರಕ್ಷಿಸಿಡುವ ಐತಿಹಾಸಿಕ ಪ್ಯಾರಿಸ್ ಒಪ್ಪಂದ'ವನ್ನು ಸೇರಿರುವುದು ವಿಶೇಷ.ಪ್ಯಾರಿಸ್ ಒಪ್ಪಂದ ಸ್ಥಿರೀಕರಿಸಿದ 62ನೇ ರಾಷ್ಟ್ರ ಭಾರತ

- ವಿಶ್ವದಲ್ಲಿ ಜಾಗತಿಕ ತಾಪಮಾನ ಕಡಿಮೆ ಮಾಡುವುದು ಮತ್ತು ಜಲ ಸಂಪನ್ಮೂಲದ ಸಮರ್ಪಕ ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳುವುದಕ್ಕೆ ಕುರಿತಂತೆ ವಿಶ್ವನಾಯಕರು ಐತಿಹಾಸಿಕ ಒಪ್ಪಂದಕ್ಕೆ ಬಂದಿದ್ದಾರೆ. 'ಪ್ಯಾರಿಸ್ ಒಪ್ಪಂದ' ಎಂದು ಕರೆಯಲ್ಪಡುವ ಈ ಒಪ್ಪಂದದ ಅನ್ವಯ ಭಾರತ ಹವಾಮಾನ ಬದಲಾವಣೆ ತಡೆ ಯೋಜನೆಗಳಿಗೆ 20 ದಶಲಕ್ಷ ಡಾಲರ್ ನೆರವು ನೀಡಲಿದೆ.

- ಹವಾಮಾನ ಬದಲಾವಣೆ ತಡೆ ಹಾಗೂ ಜಲಸಂಪನ್ಮೂಲ ವ್ಯವಸ್ಥೆ ಚೇತರಿಕೆ ಸಂಬಂಧ ಕ್ರಿಯಾಯೋಜನೆ ಅನುಷ್ಠಾನಕ್ಕೆ ಹೊಸ ಮೈತ್ರಿಕೂಟ ಅಸ್ತಿತ್ವಕ್ಕೆ ಬಂದಿದ್ದು, ಈ ಉದ್ದೇಶಕ್ಕಾಗಿ ನೂರು ಕೋಟಿ ಡಾಲರ್ ಸಂಗ್ರಹಿಸಲಾಗಿದೆ.

- ಇದು ಸಮುದ್ರದ ಉಷ್ಣಾಂಶ ಹೆಚ್ಚಳ ತಡೆಗೂ ಕಾರ್ಯಯೋಜನೆ ಹಮ್ಮಿಕೊಳ್ಳಲಾಗಿದೆ. ವಿಶ್ವದ ವಿವಿಧ ದೇಶಗಳು, ನದಿ ಜಲಾನಯನ ಪ್ರದೇಶಗಳ ಸಂಘಟನೆಗಳು,ವ್ಯಾಪಾರಿ ಸಮೂಹ, ನಾಗರಿಕ ಸಮಾಜ ಈ ನಿಟ್ಟಿನಲ್ಲಿ ಒಗ್ಗೂಡಲಿದ್ದು, ಐತಿಹಾಸಿಕ ಅಂತರರಾಷ್ಟ್ರೀಯ ನೀರು ಮತ್ತು ಹವಾಮಾನ ಬದಲಾವಣೆ ಕುರಿತ ಪ್ಯಾರಿಸ್ ಒಪ್ಪಂದ ಅನುಷ್ಠಾನವನ್ನು ಘೋಷಿಸಲಾಯಿತು.

- ಮಾನವನ ಸುಸ್ಥಿರ ಅಭಿವೃದ್ಧಿಗೆ ಅನಿವಾರ್ಯವಾದ ಜಲಮೂಲ ರಕ್ಷಣೆ ಹಾಗೂ ಹವಾಮಾನ ಬದಲಾವಣೆ ವಿರುದ್ಧದ ಹೋರಾಟ ಇದರ ಮಹತ್ವದ ಅಂಶ.

- ಸುಮಾರು 290 ನದಿ ಜಲಾನಯನ ಪ್ರದೇಶಗಳ ಸಂಘಟನೆಗಳು ನೀರು ಮತ್ತು ಹವಾಮಾನ ಬದಲಾವಣೆ ಕುರಿತ ಪ್ಯಾರೀಸ್ ಒಪ್ಪಂದದಲ್ಲಿ ಭಾಗಗಳಾಗಿವೆ.

- ಹವಾಮಾನ ಬದಲಾವಣೆ ಹಾಗೂ ಸುಸ್ಥಿರವಲ್ಲದ ವಿಧಾನದಲ್ಲಿ ನೀರಿನ ಬಳಕೆ ವಿಶ್ವದ ಆರ್ಥಿಕತೆ ಹಾಗೂ ಸಮಾಜಗಳ ಮೇಲೆ ಭೀಕರ ಪರಿಣಾಮ ಬೀರುತ್ತಿದ್ದು, ಇದರಿಂದ ಕ್ಷಾಮ, ಪ್ರವಾಹ ಹಾಗೂ ಉಷ್ಣತೆ ಹೆಚ್ಚಳದಂಥ ವ್ಯತ್ಯಯಗಳು ಕಂಡುಬರುತ್ತಿವೆ. ಇದು ಋಣಾತ್ಮಕ ಹಾಗೂ ಮಾರಕ ಪರಿಣಾಮಗಳನ್ನು ನೀರಿನ ವ್ಯವಸ್ಥೆಯ ಮೇಲೆಯೂ ಬೀರುವ ಅಪಾಯವಿದೆ.

- ಸುಧಾರಿತ ಜಲಸಂಪನ್ಮೂಲ ನಿರ್ವಹಣೆಯಿಲ್ಲದೇ ಬಡತನ ನಿರ್ಮೂಲನೆ ನಿಟ್ಟಿನಲ್ಲಿ ಮುನ್ನಡೆಯುವುದಾಗಲೀ, ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆ ಮಾಡುವುದಾಗಲೀ, ಸಾಮಾಜಿಕ, ಆರ್ಥಿಕ ಹಾಗೂ ಪರಿಸರದ ಸುಸ್ಥಿರ ಅಭಿವೃದ್ಧಿಯಾಗಲೀ ಸಾಧ್ಯವೇ ಇಲ್ಲ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿರ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ನೀರು ಮತ್ತು ಹವಾಮಾನ ಬದಲಾವಣೆ ಕುರಿತ ಪ್ಯಾರೀಸ್ ಒಪ್ಪಂದ**

- ನೀರು ಮತ್ತು ಹವಾಮಾನ ಬದಲಾವಣೆ ಕುರಿತ ಪ್ಯಾರೀಸ್ ಒಪ್ಪಂದದಲ್ಲಿ ವಿಸ್ತøತ ಭೌಗೋಳಿಕ ಪ್ರದೇಶಗಳ ದೇಶಗಳು, ನದಿ ಜಲಾನಯನ ಪ್ರದೇಶಗಳ ಸಂಘಟನೆಗಳು,ವ್ಯಾಪಾರಿ ಸಮೂಹ, ನಾಗರಿಕ ಸಮಾಜ, ಹಣಕಾಸು ನೆರವು ಸಂಸ್ಥೆಗಳು, ಸ್ಥಳೀಯ ಸರ್ಕಾರಗಳು, ಕಂಪನಿಗಳು ಈ ನಿಟ್ಟಿನಲ್ಲಿ ಒಗ್ಗೂಡಿವೆ.

- ಹೀಗೆ ಕೈಗೊಳ್ಳಲು ಉದ್ದೇಶಿಸಿರುವ ಯೋಜನೆಗಳ ಅನುಷ್ಠಾನಕ್ಕೆ ವೈಯಕ್ತಿಕ ಬದ್ಧತೆಗಳನ್ನು ಇದು ಒಳಗೊಂಡಿದ್ದು, ಜಲಸಂಪನ್ಮೂಲಗಳ ಮೇಲುಸ್ತುವಾರಿ ಹಾಗೂ ನದಿ ಜಲಾನಯನಪ್ರದೇಶಗಳಲ್ಲಿ ಮಾಪನ, ಹಣಕಸು ಸುಸ್ಥಿರತೆಯನ್ನು ಉತ್ತೇಜಿಸುವುದು ಹಾಗೂ ನೀರು ವ್ಯವಸ್ಥೆ ಸುಧಾರಣೆಯಲ್ಲಿ ಹೊಸ ಹೂಡಿಕೆಯನ್ನು ಉತ್ತೇಜಿಸುವುದು ಸೇರಿದೆ.

ಈ ಪ್ರಮುಖ ಸಹಭಾಗಿತ್ವ ಯೋಜನೆಗಳು ಒಟ್ಟಾಗಿ 20 ದಶಲಕ್ಷ ಡಾಲರ್ ಮೌಲ್ಯದ ತಾಂತ್ರಿಕ ನೆರವು ಹಾಗೂ 100 ಕೋಟಿ ಡಾಲರ್ ಹಣಕಾಸು ಅಗತ್ಯವನ್ನು ಬೇಡಲಿದೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಕೆಳಗೆ ಪಟ್ಟಿಮಾಡಲಾಗಿದೆ.

- ವಾತಾವರಣ ಬದಲಾವಣೆ ತಡೆ ಯೋಜನೆಗಳಿಗೆ ಭಾರತ ಅಂತರ್ಜಲ ನಿರ್ವಹಣೆ ಯೋಜನೆಗಳಿಗೆ ಹಣಕಾಸುನೆರವು ಘೋಷಿಸುವ ಮೂಲಕ ಬದ್ಧತೆ ಮೆರೆದಿದೆ.
- ನೈಜೀರ್ ಜಲಾನಯನದಲ್ಲಿ (ಒಂಬತ್ತು ಆಫ್ರಿಕನ್ ದೇಶಗಳ ಭೂಭಾಗ) 10 ವರ್ಷಗಳ ಹೂಡಿಕೆ ಯೋಜನೆಯನ್ನು ಜಾರಿಗೊಳಿಸಲು ನಿರ್ಧರಿಸಲಾಗಿದೆ.
- ವಿಶ್ವಬ್ಯಾಂಕ್, ಡಬ್ಲ್ಯು ಎಇಎಂಯು, ಕೆಎಫ್‌ಡಬ್ಲ್ಯು, ಜಿಇಎಫ್ ಮತ್ತು ಆ ದೇಶಗಳು ಒಟ್ಟಾಗಿ ಹೂಡಿಕೆ ಮಾಡಿ ಹವಾಮಾನ ಬದಲಾವಣೆಗೆ ತಡೆ ನಿಟ್ಟಿನಲ್ಲಿ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸಲಿವೆ.
- ಜೋರ್ಡಾನ್, ಲೆಬನಾನ್, ಮೊನಾಕೊ, ಮೊರಾಕ್ಕೊ, ಸ್ಪೇನ್ ಹಾಗೂ ಟ್ಯೂನೇಶಿಯಾ ದೇಶಗಳು ಮೆಡಿಟರೇನಿಲಯ್ ವಾಟರ್ ಪ್ಲೇಟ್‌ಫಾರಂ ಹೆಸರಿನಲ್ಲಿ ಏಳು ವರ್ಷದ ಬದ್ಧತೆಯ ಭರವಸೆ ನೀಡಿವೆ. ಇದರ ಅನ್ವಯ ಜಲ ಸಂಪನ್ಮೂಲದ ಸ್ಥಿತಿಗತಿ ಮತ್ತು ಪ್ರವೃತ್ತಿಯನ್ನು ಅಧ್ಯಯನ ಮಾಡುವುದು ಸೇರಿದೆ. ಇದಕ್ಕೆ ಯೂರೋಪಿಯನ್ ಕಮಿಷನ್ ನೆರವು ನೀಡಲಿದೆ.
- ಮೊರಾಕ್ಕೊದಲ್ಲಿ ಕೃಷಿಕ್ಷೇತ್ರದ ಚೇತರಿಕೆಗೆ ಉದ್ದೇಶಿಸಲಾಗಿದ್ದು, ಉತ್ತಮ ನೀರಾವರಿ ಪದ್ಧತಿ ಮೂಲಕ ಇದನ್ನು ಸಾಧಿಸಲು ನಿರ್ಧರಿಸಲಾಗಿದೆ. ಇದಕ್ಕೆ ಐಬಿಆರ್‌ಡಿ ಹಾಗೂ ಮೊರಾಕ್ಕೊ ಸರ್ಕಾರ ನೆರವು ನೀಡಲಿದೆ.
- ಮೆಕ್ಸಿಕೋದಲ್ಲಿ ನಾಲ್ಕು ವರ್ಷಗಳ ನೀರು ಸಂಪನ್ಮೂಲ ನಿರ್ವಹಣೆ ಹಾಗೂ ಮೆಕ್ಸಿಕನ್ ಕಣಿವೆಯಲ್ಲಿ ನೀರಾವರಿ ಸೇವೆ ಸುಧಾರಿಸಲು ನಾಲ್ಕು ವರ್ಷಗಳ ಸಹಭಾಗಿತ್ವ ಯೋಜನೆಗೆ ನಿರ್ಧರಿಸಲಾಗಿದೆ.

- ಪೆರು, ಈಕ್ವೆಡಾರ್, ಬ್ರೆಜಿಲ್ ಹಾಗೂ ಕೊಲಂಬಿಯಾ, ಹವಾಮಾನ ಬದಲಾವಣೆ ತಡೆ ನಿಟ್ಟಿನಲ್ಲಿ ನದಿ ಜಲಾನಯನ ಪ್ರದೇಶದಲ್ಲಿ ಯೋಜನೆಗಳನ್ನು ರೂಪಿಸಲಿವೆ. ಮೂರು ವರ್ಷಗಳ ಈ ಯೋಜನೆಗೆ ಹಣಕಾಸು ವ್ಯವಸ್ಥೆಯನ್ನೂ ಮಾಡಿಕೊಳ್ಳಲಿದ್ದು, ಯೂರೋಪಿಯನ್ ಕಮಿಷನ್ ಇದಕ್ಕೆ ಸಹಕಾರ ನೀಡುತ್ತದೆ.
- ಚೀನಾದಲ್ಲಿ ಮೂರು ವರ್ಷಗಳಲ್ಲಿ ಹಾಯ್ ನದಿ ಜನಾಲಯನ ಪ್ರದೇಶದ ನೀರಾವರಿ ನಿರ್ವಹಣೆಯ ಯೋಜನೆಯ ಬದ್ಧತೆ ಪ್ರದರ್ಶಿಸಲಾಗಿದ್ದು, ಇದಕ್ಕೆ ಫ್ರಾನ್ ನೆರವಾಗಲಿದೆ.
- ಕೇಂದ್ರ ಆಫ್ರಿಕಾದಲ್ಲಿ ಕಾಂಗೊ ಜಲಾನಯನ ಪ್ರದೇಶದಲ್ಲಿ ಜಲಸಂಪನ್ಮೂಲ ಹಾಗೂ ಹವಾಮಾನ ನಿಗಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಇದರಿಂದ 16 ಕೋಟಿ ಮಂದಿಗೆ ಪ್ರಯೋಜನವಾಗಲಿದೆ. ಇದಕ್ಕೆ ಎಎಫ್‌ಡಿ ಹಣಕಾಸು ನೆರವು ನೀಡಲಿದೆ.

**ಜಲಚೇತರಿಕೆಗೆ ನಗರಗಳ ಬದ್ಧತೆ**

- ಎಂಟೂವರೆ ಕೋಟಿ ನಾಗರಿಕರನ್ನು ಒಳಗೊಂಡ 10 ಮಹಾನಗರಗಳ ಮೆಗಾ ನಗರ ಮೈತ್ರಿಕೂಟವು ಜ್ಞಾನ ಹಂಚಿಕೆ ವೇದಿಕೆಯನ್ನು ಆರಂಭಿಸಲಿದೆ. ಜತೆಗೆ ಪರಸ್ಪರ ನೆರವಿನ ಯೋಜನೆಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.
- ಕೀನ್ಯಾದ ಕರಾವಳಿ ಪ್ರದೇಶದಲ್ಲಿ ನೀರಿನ ಭದ್ರತೆ ಹಾಗೂ ಹವಾಮಾನ ಚೇತರಿಕೆಗೆ 200 ದಶಲಕ್ಷ ಡಾಲರ್ ನೆರವು ನಿಡಲು ವಿಶ್ವಬ್ಯಾಂಕ್ ಒಪ್ಪಿಕೊಂಡಿದೆ.
- ಹಣಕಾಸು ಯೋಜನೆಗಳಲ್ಲಿ 50 ದಶಲಕ್ಷ ಯೂರೊವನ್ನು ಎಎಫ್‌ಡಿ, 15 ದಶಲಕ್ಷ ಯೋರೊ ನೆರವನ್ನು ಸೆನೆಗಲ್ ನೀಡಲಿದ್ದು, ಈ ಯೋಜನೆಯಡಿ ಡಾಕರ್ ಉಪನಗರವನ್ನು ಪಿಕಿನೆ ಪ್ರವಾಹದಿಂದ ರಕ್ಷಿಸಿ ಮೂರು ಲಕ್ಷ ಮಂದಿಗೆ ನೆರವಾಗಲು ನಿರ್ಧರಿಸಲಾಗಿದೆ.

**ಕೈಗಾರಿಕೆಗಳಲ್ಲಿ ನೀರಿನ ಬಳಕೆ ಇಳಿಕೆಗೆ ಬದ್ಧತೆ**

- ಖಾಸಗಿ ವಲಯವು ಕಂಪನಿಗಳ ಒಕ್ಕೂಟವನ್ನು ಕ್ರೋಢೀಕರಿಸುವ ಪ್ರಯತ್ನ ನಡೆಸಿದ್ದು, 27 ಕಂಪನಿಗಳು ಈಗಾಗಲೇ ಬದ್ಧತೆ ವ್ಯಕ್ತಪಡಿಸಿವೆ. ಇದಕ್ಕೆ ಬ್ಯುಸಿನೆಸ್ ಅಲೈನ್ಸ್ ಫಾರ್ ವಾಟರ್ ಅಂಡ್ ಕ್ಲೈಮೇಟ್ ಚೇಂಜ್ ಎಂದು ಹೆಸರಿಸಲಾಗಿದೆ.
- ಇದರ ಪ್ರಮುಖ ಉದ್ದೇಶವೆಂದರೆ, ನೀರಿನ ಗುಣಮಟ್ಟ ಹಾಗೂ ಲಭ್ಯತೆಯ ಬಗೆಗಿನ ಅಪಾಯವನ್ನು ಕಡಿಮೆ ಮಾಡುವುದು. ಇದರಲ್ಲಿ ಪ್ರಮುಖ ಕಾರ್ಯಕ್ರಮಗಳೆಂದರೆ ನೀರಿನ

ಪರಿಣಾಮ ಮಾಪನ ಹಾಗೂ ಇಳಿಕೆ; ವರದಿ ಮಾಡುವುದು ಮತ್ತು ಪಾರದರ್ಶಕತೆ; ನದಿ ಜಲಾನಯನ ಪ್ರದೇಶಗಳಲ್ಲಿ ಸಂಘಟಿತ ಕ್ರಿಯಾಯೋಜನೆ, ವ್ಯಾಪಾರ ಮೌಲ್ಯ ಸರಣಿಯ ಮೂಲಕ ನೀರು ಬಳಕೆಯ ಜವಾಬ್ದಾರಿಯನ್ನು ನಿಭಾಯಿಸುವುದು.

- ಈ ಸಂಘಟನೆಯು ಜಾಗತಿಕ ಜಾಲದ ಕ್ರೋಢೀಕರಣದ ಪ್ರಯೋಜನ ಪಡೆದು, ವೈಯಕ್ತಿಕ ನೀರು ನಿರ್ವಹಣೆ ಉಪಕ್ರಮಗಳನ್ನು ಅನುಸರಿಸಲಿವೆ. ಎನ್‌ಎಯ್ಡಿಸಿಎ ಹವಾಮಾನ ಪೋರ್ಟಲ್‌ನ ಸಹಾಯದಿಂದ ಇದರ ಮೇಲ್ವಿಚಾರಣೆ ನಡೆಸಲಿವೆ. ಇಂಥ ಪ್ರಯತ್ನಗಳನ್ನು ಉತ್ತೇಜಿಸುವುದು ಹಾಗೂ ಸಹಭಾಗಿತ್ವದ ಪ್ರಯತ್ನಗಳನ್ನು ನಡೆಸುವುದು ಇದರಲ್ಲಿ ಸೇರಿದೆ.

**ಮುಖಜಭೂಮಿಗಳ ಚೇತರಿಕೆಗೆ ದೇಶಗಳ ಮೈತ್ರಿಕೂಟ**

- ನದಿ ಮುಖಜಭೂಮಿಗಳ ಡೆಲ್ಟಾ ಮೈತ್ರಿಯಲ್ಲಿ ಕೊಲಂಬಿಯಾ, ಈಜಿಪ್ಟ್, ಇಂಡೋನೇಷ್ಯಾ, ಜಪಾನ್, ದಕ್ಷಿಣ ಕೊರಿಯಾ, ಮುಜಾಂಬಿಕ್, ಮ್ಯಾನ್ಮಾರ್, ನೆದರ್ಲೆಂಡ್ಸ್, ಫಿಲಿಫೀನ್ಸ್, ವಿಯೆಟ್ನಾಂ, ಫ್ರಾನ್ಸ್ ಹಾಗೂ ಬಾಂಗ್ಲಾದೇಶ ಹೀಗೆ ಹನ್ನೆರಡು ದೇಶಗಳು ಸೇರಿವೆ.
- ಇವುಗಳ ಮುಖ್ಯ ಉದ್ದೇಶ ಮುಖಜಭೂಮಿಗಳ ಅಭಿವೃದ್ಧಿ. ಜಾಗತಿಕ ಯೋಜನೆಗಳ ಮುಖ್ಯವಾಹಿನಿಗೆ ಈ ವಿಷಯವನ್ನು ತಂದು ಈ ಹನ್ನೆರಡು ದೇಶಗಳ 25 ಕೋಟಿ ಮಂದಿಯನ್ನು ಪಾಲ್ಗೊಳ್ಳುವ ಮುಖಜಭೂಮಿಗಳ ಚೇತರಿಕೆಗೆ ನೆರವು ಪಡೆಯುವುದು ಉದ್ದೇಶ.

**ನಾಗರಿಕ ಸಮಾಜ ಹಾಗೂ ಉನ್ನತ ಮಟ್ಟದ ಕ್ರೋಢೀಕರಣ**

- ನೀರು ಹಾಗೂ ಹವಾಮಾನ ಬದಲಾವಣೆ ಕಾರ್ಯಸೂಚಿಯಲ್ಲಿ ನಾಗರಿಕ ಸಮಾಜ ಮಹತ್ವದ ಪಾತ್ರ ವಹಿಸಲಿದೆ. ಎಸ್‌ಐಡಬ್ಲ್ಯುಐ ಅಥವಾ ವರ್ಲ್ಡ್ ವಾಟರ್ ಕೌನ್ಸಿಲ್, ಫ್ರೆಂಚ್ ವಾಟರ್ ಪಾರ್ಟ್‌ನರ್‌ಶಿಪ್, ಸಿಎಲ್‌ಒಸಿಎಸ್‌ಎಎಸ್-ಎಲ್‌ಎಸಿ ಮತ್ತಿತರ ಸಂಘಟನೆಗಳನ್ನು ಜತೆಗೂಡಿಸಿಕೊಂಡು ಜಲಚೇತರಿಗೆ ಎಲ್ಲರನ್ನೂ ತೊಡಗಿಸಿಕೊಳ್ಳುವ ಪ್ರಯತ್ನ ನಡೆದಿದೆ.

**ಸಾಗರ ಬದಲಾವಣೆ ಪರಿಸ್ಥಿತಿ ಚೇತರಿಕೆ**

- ಹವಾಮಾನ ಬದಲಾವಣೆ ಪರಿಣಾಮ ಸಾಗರ ವಾತಾವರಣದ ಮೇಲೆ ಭೀಕರವಾಗಲಿದ್ದು, ಇದರ ಜತೆಗೆ ಅದನ್ನು ಅವಲಂಬಿಸಿರುವ ಕೋಟ್ಯಂತರ ಮಂದಿಗೂ ಮಾರಕವಾಗಲಿವೆ.
- ರಾಷ್ಟ್ರೀಯ ಹಾಗೂ ಸ್ಥಳೀಯ ಸರ್ಕಾರಗಳು, ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಹಾಗೂ ಖಾಸಗಿ ವಲಯ ಸಂಯುಕ್ತವಾಗಿ ಪ್ರಬಲವಾದ ಕ್ರಮಗಳನ್ನು ಮೂರು ಪ್ರಮುಖ ವಲಯಗಳಲ್ಲಿ ಕೈಗೊಳ್ಳಲು ಉದ್ದೇಶಿಸಿವೆ. ಇವುಗಳೆಂದರೆ, ವಾಣಿಜ್ಯ ಉದ್ದೇಶದ ಹಡಗು ಸೇವೆ, ಸಮುದ್ರ ರಕ್ಷಿತ ವಲಯ ಮತ್ತು ತೀರ ನಿರ್ವಹಣೆ ಸೇರಿದೆ.

- **ವಾಣಿಜ್ಯ ಉದ್ದೇಶದ ಹಡಗುಸೇವೆ**: ಸಾಗರಯಾನ ಸಾರಿಗೆ ಸೇವೆ ಹಸಿರುಮನೆ ಪರಿಣಾಮಕ್ಕೆ ಕಾರಣವಾಗುವ ಅನಿಲ ಹೊರಸೂಸುವಿಕೆಯನ್ನು 2020ರ ವೇಳೆಗೆ ಶೇಕಡ 20ರಷ್ಟು ಕಡಿಮೆ ಮಾಡಲು ಹಾಗೂ 2050ರ ವೇಳೆಗ ಶೇಕಡ 50ರಷ್ಟು ಕಡಿಮೆ ಮಾಡಲು ಉದ್ದೇಶಿಸಿವೆ.
- ವಿಜ್ಞಾನ ಸಮುದಾಯ ಕೂಡಾ ಈ ನಿಟ್ಟಿನಲ್ಲಿ ಕೈಜೋಡಿಸಲಿದ್ದು, ಟಾರಾ ಎಕ್ಸ್‌ಪೆಡಿಯೇಷನ್ಸ್ ಎಂಬ ವಿನೂತನ ಯೋಜನೆ ಹಮ್ಮಿಕೊಳ್ಳಲಾಗಿದೆ. ಇದು ಮುಕ್ತ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ನೀತಿನಿರೂಪಕರಿಗೆ ನೀಡಿ, ಸಾಗರ ಹಾಗೂ ಹವಾಮಾನ ಕುರಿತ ನೀತಿಗಳಿಗೆ ಮಾರ್ಗದರ್ಶ ಮಾಡಲಿವೆ. ಇದರ ಜತೆಗೆ ಹವಾಮಾನ ಬದಲಾವಣೆಗೆ ಸಾಗರ ಉಸ್ತುವಾರಿ ವ್ಯವಸ್ಥೆ ಮೂಲಕ ಪರಿಹಾರ ಕಂಡುಹಿಡಿಯುವ ಸಂಬಂಧ ಜಾಗತಿಕ ಸಹಕಾರ ಯೋಜನೆ ರೂಪಿಸುವುದು ಕೂಡಾ ಸೇರಿದೆ.

SOURCE- http://www.business-standard.com/article/news-cm/cabinet-approves-extension-of-time-period-of-the-scheme-special-industry-initiative-for-j-k-sll-j-k-udaan-117092100169_1.html

**2. ಉಡಾನ್ ಅವಧಿಯ ವಿಸ್ತರಣೆಗೆ ಕ್ಯಾಬಿನೆಟ್ ಅನುಮೋದನೆ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಆರ್ಥಿಕ ಬದಲಾವಣೆ ಕುರಿತು ಕ್ಯಾಬಿನೆಟ್ ಸಮಿತಿ ಗೃಹ ವ್ಯವಹಾರ ಸಚಿವಾಲಯದ ಪ್ರಸ್ತಾವನೆಯನ್ನು ಅಂಗೀಕರಿಸಿದೆ.
- ಜಮ್ಮು ಮತ್ತು ಕಾಶ್ಮೀರಕ್ಕೆ "ವಿಶೇಷ ಉದ್ಯಮ ಉಪಕ್ರಮ" ಯೋಜನೆ (Special Industry Initiative(SII )) - ಉಡಾನ್ ನ್ನು 31 ಡಿಸೆಂಬರ್, 2018 ವರೆಗೆ ಯಾವುದೇ ಮಾರ್ಪಾಡು ಮತ್ತು ವೆಚ್ಚದಲ್ಲಿ ಬದಲಾವಣೆ ಇಲ್ಲದ ಹಾಗೆ ಅವಧಿಯ ವಿಸ್ತರಣೆಗೆ ಅನುಮೋದನೆ ನೀಡಿದೆ. ಆರಂಭದಲ್ಲಿ ಉಡಾನ್ ಯೋಜನೆಯ ಅವಧಿಯು 2016-17ರವರೆಗೂ ಇತ್ತು.

ಮುಖ್ಯ ಪರೀಕ್ಷೆಗಾಗಿ

**ಉಡಾನ್ ಬಗ್ಗೆ:**

- ಉಡಾನ್ ಯೋಜನೆಯು ಕಾರ್ಪೊರೇಟ್ ಭಾರತಕ್ಕೆ ಜಮ್ಮು ಮತ್ತು ಕಾಶ್ಮೀರದಲ್ಲಿರುವ ಪ್ರತಿಭಾವಂತ ಯುವಕರನ್ನು ತೆರೆಸುತ್ತದೆ.ಉಡಾನ್ ಜಮ್ಮು ಮತ್ತು ಕಾಶ್ಮೀರ ಯುವಕರನ್ನು ರಾಷ್ಟ್ರವ್ಯಾಪಿಯಲ್ಲಿರುವ ಯುವಕರ ಮುಖ್ಯವಾಹಿನಿ ಗುರಿಯೊಂದಿಗೆ ರಾಷ್ಟ್ರೀಯ ಏಕೀಕರಣ ಯೋಜನೆ.
- ಈ ಯೋಜನೆಯು ಕೌಶಲ್ಯ ವರ್ಧನೆ ಮತ್ತು ಉದ್ಯೋಗದ ಅವಕಾಶವನ್ನು ಮಾತ್ರ ಒದಗಿಸುವುದಿಲ್ಲ ಅದರ ಜೊತೆಗೆ ಜಮ್ಮು ಕಾಶ್ಮೀರದ ಪ್ರಕಾಶಮಾನ ಯುವಕರನ್ನು ಭಾರತದ ರೋಮಾಂಚಕ ಸಾಂಸ್ಥಿಕ ಕ್ಷೇತ್ರದೊಂದಿಗೆ ಸಂಪರ್ಕಿಸುತ್ತದೆ.

**ಯೋಜನೆಯ ಕಾರ್ಯಕ್ಷಮತೆ:**

- ಇಲ್ಲಿಯವರೆಗೆ 109 ಪ್ರಮುಖ ಸಾಂಸ್ಥಿಕ ಸಂಸ್ಥೆಗಳು UDAAN ಅಡಿಯಲ್ಲಿ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ (ಎನ್ಎಸ್ಡಿಸಿ) ಜೊತೆಗೆ ಸಂಘಟಿತ ರಿಟೇಲ್, ಬ್ಯಾಂಕಿಂಗ್, ಫೈನಾನ್ಷಿಯಲ್ ಸರ್ವೀಸಸ್, ಐಟಿ, ಐಟಿಇಎಸ್, ಇನ್ಫ್ರಾಸ್ಟ್ರಕ್ಚರ್, ಹಾಸ್ಪಿಟಾಲಿಟಿ ಇತ್ಯಾದಿಗಳನ್ನು ಒಳಗೊಂಡ ರಾಜ್ಯದ ಯುವಜನರಿಗೆ ತರಬೇತಿ ನೀಡುವ ಬದ್ಧತೆಯೊಂದಿಗೆ ಪಾಲ್ಗೊಂಡಿದೆ.

- ಇಲ್ಲಿಯವರೆಗೆ 34,587 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಇದರಲ್ಲಿ 31,903 ಅಭ್ಯರ್ಥಿಗಳು ಸೇರಿದ್ದಾರೆ. 22,237 ಅಭ್ಯರ್ಥಿಗಳು ಈ ತರಬೇತಿ ಪೂರ್ಣಗೊಳಿಸಿದ್ದಾರೆ. 7,649 ಮಂದಿ ತರಬೇತಿ ಪಡೆಯುತ್ತಿದ್ದಾರೆ ಮತ್ತು 14,694 ಅಭ್ಯರ್ಥಿಗಳು ಉದ್ಯೋಗವನ್ನು ಪಡೆದಿದ್ದಾರೆ.
- ನಾಲ್ಕು ತಿಂಗಳುಗಳ ಅಶಾಂತಿ ಹೊರತಾಗಿಯೂ, ಯೋಜನೆ ಪ್ರಾರಂಭವಾದಾಗಿನಿಂದ 2016-17ರ ಅವಧಿಯಲ್ಲಿ ಉತ್ತಮ ಆವೇಗ ಮತ್ತು ಅನುಷ್ಠಾನದ ವೇಗವನ್ನು ಪಡೆದಿದೆ. 12,000 ಕ್ಕೂ ಹೆಚ್ಚು ಅಭ್ಯರ್ಥಿಗಳು ತರಬೇತಿ ಪಡೆದರು ಮತ್ತು ಸುಮಾರು 10,000 ಅಭ್ಯರ್ಥಿಗಳಿಗೆ ಉದ್ಯೋಗ ನೀಡಲಾಗಿದೆ.

SOURCE-http://pib.nic.in/newsite/PrintRelease.aspx?relid=170930

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 3. 'BIMSTEC ವಿಪತ್ತು ನಿರ್ವಹಣೆ ಪ್ರಯೋಗ- 2017'

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- ಮೊಟ್ಟಮೊದಲ ಬಿಐಎಂಎಸ್‌ಟೆಇಸಿ ವಿಕೋಪ ನಿರ್ವಹಣೆ ಕಾರ್ಯಾಚರಣೆ ಅಕ್ಟೋಬರ್ 10 ರಿಂದ 13ರವರೆಗೆ ಭಾರತದಲ್ಲಿ ನಡೆಯಲಿದೆ. ರಾಷ್ಟ್ರೀಯ ವಿಕೋಪ ಸ್ಪಂದನೆ ಪಡೆ (ಎನ್‌ಡಿಆರ್‌ಎಫ್) ಇದನ್ನು ಆಯೋಜಿಸುತ್ತಿದೆ.
- ಈ ಕಾರ್ಯಾಚರಣೆಯ ಮುಖ್ಯ ಉದ್ದೇಶವೆಂದರೆ ವಿಕೋಪ ನಿರ್ವಹಣೆಯಲ್ಲಿ ಉತ್ತಮ ರೂಢಿಗಳನ್ನು ವಿನಿಮಯ ಮಾಡಿಕೊಳ್ಳುವುದು. ಇದರ ಜತೆಗೆ ವಿಕೋಪ ಅಪಾಯ ಕಡಿಮೆ ಮಾಡುವುದು ಮತ್ತು ಬಿಐಎಂಎಸ್‌ಟಿಸಿ ( ಬೇ ಆಫ್ ಬೆಂಗಾಲ್ ಇನೀಶಿಯೇಟಿವ್ ಫಾರ್ ಮಲ್ಟಿ ಸೆಕ್ಟರಲ್ ಟೆಕ್ನಿಕಲ್ ಅಂಡ್ ಎಕನಾಮಿಕ್ ಕೋಆಪರೇಶನ್) ದೇಶಗಳ ಪ್ರಾದೇಶಿಕ ಸ್ಪಂದನೆ ಮತ್ತು ಸಮನ್ವಯವನ್ನು ಹೆಚ್ಚಿಸುವುದು ಇದರ ಗುರಿ.

**ಮುಖ್ಯ ಪರೀಕ್ಷೆಗಾಗಿ**

- ಬಿಐಎಂಎಸ್‌ಟಿಸಿ ಸದಸ್ಯದೇಶಗಳಾದ ಭಾರತ, ಬಾಂಗ್ಲಾದೇಶ, ಭೂತಾನ್, ಮ್ಯಾನ್ಮಾರ್, ನೇಪಾಳ, ಶ್ರೀಲಂಕಾ ಮತ್ತು ಥಾಯ್ಲೆಂಡ್ ದೇಶಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸುತ್ತಿದ್ದಾರೆ.
- ಈ ಕಾರ್ಯಾಚರಣೆಯ ಮುಖ್ಯ ಗುರಿ, ವಿಕೋಪ ಪರಿಹಾರ ಸ್ಪಂದನೆಗೆ ಎಷ್ಟರಮಟ್ಟಿಗೆ ಸಜ್ಜಾಗಿದೆ ಎಂದು ತಿಳಿದುಕೊಳ್ಳುವುದು ಮತ್ತು ಉತ್ತಮ ರೂಢಿಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದು.
- ಇದು ಈ ಭಾಗದ ಎಲ್ಲ ದೇಶಗಳ ವಿಕೋಪ ಮತ್ತು ತುರ್ತುಸ್ಪಂದನೆ ಕಾರ್ಯಾಚರಣೆಯ ಶೋಧ ಮತ್ತು ಪರಿಹಾರ ತಂಡ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಪೂರಕವಾಗಲಿದೆ.
- ತುರ್ತು ಕ್ಷಿಪ್ರ ಮೌಲ್ಯಮಾಪನ ತಂಡ ಮತ್ತು ಸಾಮೂಹಿಕ ಹಾನಿಯ ನಿರ್ವಹಣೆಗೆ ಕೂಡಾ ಇದು ನೆರವಾಗಲಿದೆ. ಸಂವಹನ ಸಾಧನಗಳು ಮತ್ತು ಮೂಲಸೌಕರ್ಯ ವ್ಯವಸ್ಥೆ ಕುಸಿದು ಬಿದ್ದಾಗ ಸ್ಪಂದಿಸುವ ಬಗೆಯನ್ನೂ ಇದು ಎಲ್ಲ ದೇಶಗಳಿಗೆ ತಿಳಿಸಿಕೊಡುವಲ್ಲಿ ಮಹತ್ವದ್ದಾಗಿದೆ.
- ಬಿಐಎಂಎಸ್‌ಟಿಇಸಿ ಎನ್ನುವುದು ಉಪ ಪ್ರಾದೇಶಿಕ ಗುಂಪಾಗಿದ್ದು, ದಕ್ಷಿಣ ಏಷ್ಯಾ ಮತ್ತು ಆಗ್ನೇಯ ಏಷ್ಯಾ ಪ್ರದೇಶದ ಏಳು ದೇಶಗಳನ್ನು ಸದಸ್ಯದೇಶಗಳಾಗಿ ಹೊಂದಿದೆ.
- ಈ ಪ್ರದೇಶದಲ್ಲಿ ಸುಮಾರು 150 ಕೋಟಿ ಜನರಿದ್ದು, ಜಾಗತಿಕ ಜನಸಂಖ್ಯೆಯ ಶೇಕಡ 22ರಷ್ಟು ಭಾಗ ಇಲ್ಲಿದೆ. ಈ ದೇಶಗಳ ಒಟ್ಟು ಜಿಡಿಪಿ 27000 ಕೋಟಿ ಡಾಲರ್ ಆಗಿದೆ. ಬಿಐಎಂಎಸ್‌ಟಿಇಸಿಯ ಬಹುತೇಕ ದೇಶಗಳು ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಬರುತ್ತವೆ. ಇದು ಪ್ರವಾಹ, ಬಿರುಗಾಳಿ, ಭೂಕಂಪ, ಹಿಮಪಾತ ಹಾಗೂ ಬರಗಾಲದಂಥ ಭೀಕರ ಪ್ರಾಕೃತಿಕ ವಿಕೋಪಗಳಾಗುವ ಸಂಭಾವ್ಯ ಸ್ಥಳವಾಗಿದೆ.

**SOURCE-** http://indianexpress.com/article/business/business-others/affordable-housing-govt-extends-subsidy-to-units-built-on-private-land-pmay-4855228/

**4. ಖಾಸಗಿ ನಿವೇಶನಕ್ಕೂ ಸಹಾಯಧನ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಅರ್ಹ ಫಲಾನುಭವಿಗಳಿಗಾಗಿ ಕೈಗೆಟುಕುವ ದರದ ಮನೆ ನಿರ್ಮಾಣ ಕ್ಷೇತ್ರದಲ್ಲಿ ಖಾಸಗಿ ಹೂಡಿಕೆಯನ್ನು ಹೆಚ್ಚಿಸುವುದಕ್ಕಾಗಿ ಸರ್ಕಾರ–ಖಾಸಗಿ ಸಹಭಾಗಿತ್ವದ ಹಲವು ಹೊಸ ಮಾದರಿಗಳನ್ನು ಕೇಂದ್ರ ಪ್ರಕಟಿಸಿದೆ.
- ಇದರ ಪ್ರಕಾರ, ಖಾಸಗಿ ನಿವೇಶನದಲ್ಲಿ ಖಾಸಗಿ ಬಿಲ್ಡರ್‌ಗಳು ನಿರ್ಮಿಸುವ ಪ್ರತಿ ಮನೆಗೆ 2.50 ಲಕ್ಷದ ವರೆಗೆ ಸಹಾಯಧನ ನೀಡಲಾಗುವುದು.
- ನಗರ ಪ್ರದೇಶಗಳಲ್ಲಿ ಇರುವ ಸರ್ಕಾರಿ ನಿವೇಶನಗಳಲ್ಲಿ ಮಿತದರದ ಮನೆ ನಿರ್ಮಾಣದಲ್ಲಿ ಖಾಸಗಿಯವರ ಸಹಭಾಗಿತ್ವವನ್ನು ಹೆಚ್ಚಿಸುವುದು ಕೇಂದ್ರದ ಮುಖ್ಯ ಉದ್ದೇಶ. ಇದಕ್ಕಾಗಿ ಒಟ್ಟು ಎಂಟು ಸಹಭಾಗಿತ್ವ ಮಾದರಿಯನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಕೇಂದ್ರ ನಗರಾಭಿವೃದ್ಧಿ ಸಚಿವರು ತಿಳಿಸಿದ್ದಾರೆ.

**ಮುಖ್ಯ ಪರೀಕ್ಷೆಗಾಗಿ**

- '2022ರೊಳಗೆ ಎಲ್ಲರಿಗೂ ಸೂರು ಎಂಬ ಗುರಿಯನ್ನು ಸಾಧಿಸುವ ಹೊಣೆಯನ್ನು ಸರ್ಕಾರ, ಬಿಲ್ಡರ್‌ಗಳು ಮತ್ತು ಹಣಕಾಸು ಸಂಸ್ಥೆಗಳ ನಡುವೆ ಹಂಚುವ ಉದ್ದೇಶವನ್ನು ಹೊಸ ನೀತಿಯು ಹೊಂದಿದೆ. ಜತೆಗೆ, ಬಳಕೆಯೇ ಆಗದ ಮತ್ತು ಅಸಮರ್ಪಕವಾಗಿ ಬಳಕೆಯಾಗಿರುವ ನಿವೇಶನಗಳನ್ನು ಪೂರ್ಣವಾಗಿ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ'
- ಸರ್ಕಾರ ನಿಗದಿ ಮಾಡಿರುವ ವಿವಿಧ ಮಾದರಿಗಳಲ್ಲಿ ಯಾವುದನ್ನಾದರೂ ಬಿಲ್ಡರ್‌ಗಳು ಆಯ್ಕೆ ಮಾಡಿಕೊಳ್ಳಬಹುದು. ಈ ಮಾದರಿಗಳಿಗೆ ಗರಿಷ್ಠ 2.5 ಲಕ್ಷದವರೆಗೆ ಸರ್ಕಾರದ ಸಹಾಯಧನ ದೊರೆಯುತ್ತದೆ. ಈ ಸಹಾಯಧನದ ಫಲಾನುಭವಿಗಳನ್ನು ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ಆಯ್ಕೆ ಮಾಡಲಾಗುತ್ತದೆ.
- ದೊಡ್ಡ ನಗರಗಳಲ್ಲಿ ನಿವೇಶನ ಕೊರತೆಯ ಸಮಸ್ಯೆ ಇದೆ. ಹಾಗಾಗಿ ಅಲ್ಲಿ ಲಭ್ಯ ಇರುವ ನಿವೇಶನಗಳ ಗರಿಷ್ಠ ಪ್ರಯೋಜನ ಪಡೆದುಕೊಳ್ಳುವುದಕ್ಕಾಗಿ ನಿವೇಶನದ ಅಳತೆ ಆಧರಿತ ಕಟ್ಟಡದ ಅಂತಸ್ತುಗಳ ಮಿತಿಯನ್ನು (ಎಫ್‌ಎಆರ್) ಸಡಿಲಿಸಲಾಗಿದೆ. 10ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಮತ್ತು ರಾಜ್ಯ ರಾಜಧಾನಿ ನಗರಗಳಿಗೆ ಇದು ಅನ್ವಯವಾಗುತ್ತದೆ.

➢ ನಗರದ ಹೊರವಲಯದ ಹಳ್ಳಿಗಳಲ್ಲಿ ನಗರದ ಬಡ ಜನರಿಗೆ ಕೈಗೆಟುಕುವ ದರದ ಮನೆಗಳ ನಿರ್ಮಾಣ ಯೋಜನೆ ಕೈಗೆತ್ತಿಕೊಳ್ಳವುದಕ್ಕೆ ಸಂಬಂಧಿಸಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಜತೆಗೆ ಚರ್ಚೆ ನಡೆಸಲಾಗುತ್ತಿದೆ

**ಹಲವು ಮಾದರಿಗಳು**

* ನಗರ ಪ್ರದೇಶದಲ್ಲಿ ಖಾಸಗಿ ನಿವೇಶನದಲ್ಲಿ ನಿರ್ಮಾಣವಾಗುವ ಮಿತದರದ ಮನೆಗಳ ಸಾಲಕ್ಕೆ 2.5 ಲಕ್ಷ ಬಡ್ಡಿ ಸಹಾಯಧನ ನೀಡಿಕೆ

* ಖಾಸಗಿ ಜಮೀನಿನಲ್ಲಿ ನಿರ್ಮಿಸುವ ಮನೆ ಖರೀದಿಸಲು ಅರ್ಹ ಫಲಾನುಭವಿಗಳು ಬ್ಯಾಂಕ್ ಸಾಲ ಪಡೆಯದಿದ್ದರೆ ಅಂಥವರಿಗೆ 1.5 ಲಕ್ಷ ಸಹಾಯಧನ ನೀಡಿಕೆ

* ಸರ್ಕಾರಿ ನಿವೇಶನದಲ್ಲಿ ಖಾಸಗಿ ಬಿಲ್ಡರ್‌ಗಳು ಮನೆ ನಿರ್ಮಾಣ ಮಾಡುವುದಕ್ಕೂ ಅವಕಾಶ ಕಲ್ಪಿಸಲಾಗಿದೆ– ಇದರ ಅಡಿಯಲ್ಲಿ ಆರು ಆಯ್ಕೆಗಳನ್ನು ನೀಡಲಾಗಿದೆ

* ಸರ್ಕಾರಿ ನಿವೇಶನದಲ್ಲಿ ಮನೆಗಳ ವಿನ್ಯಾಸ, ನಿರ್ಮಾಣ ಮತ್ತು ಹಸ್ತಾಂತರ

* ದುಬಾರಿ ವೆಚ್ಚದ ಅಥವಾ ವಾಣಿಜ್ಯ ಉದ್ದೇಶದ ಕಟ್ಟಡ ನಿರ್ಮಾಣದ ಆದಾಯವನ್ನು ಮಿತದರದ ಮನೆಗೆ ಬಳಸುವ ಆಯ್ಕೆ

* ಬಿಲ್ಡರ್‌ಗಳು ನಿರ್ಮಾಣಕ್ಕೆ ಬೇಕಿರುವ ಹಣ ಹೂಡಿಕೆ ಮಾಡಿ ಸರ್ಕಾರದಿಂದ ಬಳಿಕ ಅದನ್ನು ಪಡೆದುಕೊಳ್ಳುವ ವ್ಯವಸ್ಥೆ

* ಸರ್ಕಾರದ ಮಧ್ಯಸ್ಥಿಕೆ ಇಲ್ಲದೆ ನೇರವಾಗಿ ಅರ್ಹ ಫಲಾನುಭವಿಗೆ ಮಿತದರದ ಮನೆಯನ್ನು ಬಿಲ್ಡರ್‌ಗಳು ಮಾರಾಟ ಮಾಡಬಹುದು.

### 5. ತ್ರಿಪುರಾದಲ್ಲಿ ಜಿಲ್ಲಾ ಮಟ್ಟದಲ್ಲೇ ಕುಟುಂಬ ಕಲ್ಯಾಣ ಸಮಿತಿ

**ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ**

- ಕೌಟುಂಬಿಕ ದೌರ್ಜ್ಯನದ ವಿರುದ್ಧ ಮಹಿಳೆಯರಿಗೆ ರಕ್ಷಣೆ ನೀಡುವ ನಿಟ್ಟಿನಲ್ಲಿ ಹೈಕೋರ್ಟ್, ಪ್ರತಿ ಜಿಲ್ಲೆಗಳ ಮಟ್ಟದಲ್ಲಿ ಕುಟುಂಬಕಲ್ಯಾಣ ಸಮಿತಿಯನ್ನು ನೇಮಕ ಮಾಡಿದೆ. ಈ ಮೂಲಕ, ಜಿಲ್ಲಾಮಟ್ಟದಲ್ಲಿ ಕುಟುಂಬ ಕಲ್ಯಾಣ ಸಮಿತಿಗಳನ್ನು ನೇಮಕ ಮಾಡಿದದೇಶದ ಮೊದಲ ರಾಜ್ಯವೆನಿಸಿಕೊಂಡಿದೆ.
- ಅಲ್ಲದೆ, ತ್ರಿಪುರಾ ಹೈಕೋರ್ಟ್ ಸಹ ಇಂಥ ಸಮಿತಿ ನೇಮಕ ಮಾಡಿದ ದೇಶದ ಮೊದಲ ಹೈಕೋರ್ಟ್ ಎನಿಸಿದೆ. ಪತಿ ,ಅತ್ತೆ-ಮಾವಂದಿರು ಸೇರಿದಂತೆ ಮನೆಯವರು ನೀಡುವ ಕಿರುಕುಳದ ಬಗ್ಗೆ ಮಹಿಳೆಯರು ದೂರು ಸಲ್ಲಿಸಿದರೆ ಈ ಸಮಿತಿಗಳೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತವೆ.
- ಅಲ್ಲದೆ, ಮನೆಯವರೊಂದಿಗೆಮಾತುಕತೆ ನಡೆಸುವ ಮೂಲಕ ಸೌಹಾರ್ದವಾಗಿ ಸಮಸ್ಯೆ ಬಗೆಹರಿಸಲು ಯತ್ನಿಸಲಾಗುತ್ತದೆ. ಆರಂಭಿಕವಾಗಿ, ೮ ಜಿಲ್ಲೆಗಳಲ್ಲಿ ಸಮಿತಿ ಆರಂಭಿಸಲಾಗಿದೆ

## 22nd SEPTEMBER

### 1. ಮಹಿಳಾ ಮೀಸಲಾತಿ ಮಸೂದೆ

**ಪ್ರಾಮುಖ್ಯತೆ-ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ (ಪ್ರಬಂಧ ಬರವಣಿಗೆಗಾಗಿ)**

**ಪ್ರಮುಖ ಸುದ್ದಿ**

- ಮುಂಬರುವ ಸಂಸತ್ತಿನ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಪರಿಚಯಿಸಲು ಕೇಂದ್ರ ಸರಕಾರವು ಯೋಜಿಸಿದೆ .

- ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ಶಾಸನ ಸಭೆಗಳ 33% ನಷ್ಟು ಮೀಸಲಾತಿಯನ್ನು ಕಲ್ಪಿಸುವ ಮೂಲ ಪರಿಕಲ್ಪನೆ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರದ್ದು.

- ಮಸೂದೆಯನ್ನು ದೇವೇಗೌಡ ಸರಕಾರ 1996ರಲ್ಲಿ ಜಾರಿಗೆ ತಂದಿತ್ತು. ಮಹಿಳಾ ಮೀಸಲಾತಿ ಮಸೂದೆ 2010ರಲ್ಲೇ ರಾಜ್ಯಸಭೆಯಲ್ಲಿ ಪಾಸಾದರೂ ಸದಾ ವಿವಾದಗಳಿಂದ ಮುಂದೂಡಲ್ಪಟ್ಟಿತ್ತು

ಮುಖ್ಯ ಪರೀಕ್ಷೆಗಾಗಿ

ಬಿಲ್ ನ ಮುಖ್ಯಾಂಶಗಳು:

- 2008 ರ ಸಂವಿಧಾನ (೧೦೮ನೇ ತಿದ್ದುಪಡಿ) ಬಿಲ್, ಲೋಕಸಭೆಯಲ್ಲಿ ಮತ್ತು ಶಾಸನ ಸಭೆಗಳಲ್ಲಿ ಮಹಿಳೆಯರಿಗಾಗಿ ಮೂರನೇ ಒಂದು ಭಾಗದಷ್ಟು ಮೀಸಲು ನೀಡುತ್ತದೆ.
- ಈ ಮೀಸಲಾತಿ ಸ್ಥಾನಗಳ ಹಂಚಿಕೆಯನ್ನು ಸಂಸತ್ತು ಸೂಚಿಸುವಂತ ಅಂತಹ ಪ್ರಾಧಿಕಾರ ನಿರ್ಧರಿಸುತ್ತದೆ.
- ಒಟ್ಟು ಮೀಸಲಾತಿ: ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಒಟ್ಟು ಸ್ಥಾನಗಳ ಮೂರನೇ ಒಂದು ಭಾಗವನ್ನು ಲೋಕಸಭೆ ಮತ್ತು ಶಾಸಕಾಂಗ ಸಭೆಗಳಲ್ಲಿ ಆ ಗುಂಪುಗಳ ಮಹಿಳೆಯರಿಗೆ ಕಾಯ್ದಿರಿಸಲಾಗಿದೆ.
- ಪುನರಾವರ್ತಿತ : ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ವಿಭಿನ್ನ ಕ್ಷೇತ್ರಗಳಿಗೆ ಪುನರ್ವರ್ತಿತ ಆಧಾರದ ಮೇಲೆ ಕಾಯ್ದಿರಿಸಿದ ಸ್ಥಾನಗಳನ್ನು ನೀಡಬಹುದು.
- ಈ ತಿದ್ದುಪಡಿ ಕಾಯಿದೆ ಪ್ರಾರಂಭವಾದ 15 ವರ್ಷಗಳ ನಂತರ ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿಡುವುದು ಸ್ಥಗಿತಗೊಳ್ಳುತ್ತದೆ.

ಪ್ರಬಂಧ ಬರವಣಿಗೆಗಾಗಿ

- ಮಹಿಳೆಯರು ವಿಶ್ವ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಪಾಲು ಹೊಂದಿದ್ದಾರೆ. ಜತೆಗೆ ಒಟ್ಟು ಜಾಗತಿಕ ಮತದಾರರ ಅರ್ಧಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿದ್ದಾರೆ. ಅದಾಗ್ಯೂ ವಿಶ್ವದ ಶಾಸನಸಭೆಗಳಲ್ಲಿ ಇವರ ಪ್ರಾತಿನಿಧ್ಯ ನಗಣ್ಯ.
- 2008ರಲ್ಲಿ ವಿಶ್ವದ ವಿವಿಧ ರಾಷ್ಟ್ರಗಳ ಪಾರ್ಲಿಮೆಂಟ್‌ಗಳಲ್ಲಿ ಮಹಿಳಾ ಪ್ರಾತಿನಿಧ್ಯ ಸರಾಸರಿ ಶೇಕಡ 18ರಷ್ಟಿತ್ತು. ಆದರೆ ಭಾರತ ಈ ಅಸಮತೋಲನವನ್ನು ಸರಿಪಡಿಸಲು ಇದುವರೆಗೂ

ಗಂಭೀರ ಪ್ರಯತ್ನಗಳನ್ನು ಮಾಡಿಲ್ಲ. ಭಾರತದಲ್ಲಿ ಸದ್ಯಕ್ಕೆ ಸಂಸತ್ತಿನಲ್ಲಿ ಕೇವಲ ಶೇಕಡ 8ರಷ್ಟು ಮಹಿಳಾ ಪ್ರಾತಿನಿಧ್ಯವಿದೆ.

- ಮಹಿಳೆಯರಿಗೆ ಮತದಾನದ ಹಕ್ಕನ್ನು ಮಂಜೂರು ಮಾಡಿದ ಮೊದಲ ಪ್ರಜಾಸತ್ತಾತ್ಮಕ ದೇಶ ಭಾರತ. ಆದರೆ ಇಲ್ಲಿ ಶಾಸನಬದ್ಧ ಸ್ಥಾನಗಳಿಗೆ ಮಹಿಳೆಯರ ಪ್ರಾತಿನಿಧ್ಯ ತೀರಾ ಕಡಿಮೆ ಮತ್ತು ರಾಷ್ಟ್ರೀಯ ಕಾನೂನುಗಳನ್ನು ರೂಪಿಸುವಲ್ಲೂ ಇವರ ಪಾತ್ರ ಸೀಮಿತವಾಗಿದೆ.
- ದೇಶದಲ್ಲಿ ಮಹಿಳಾ ಮೀಸಲಾತಿ ಮಸೂದೆ ಸಿದ್ಧವಾಗಿ ಹನ್ನೆರಡು ವರ್ಷಗಳ ಬಳಿಕವೂ ಇನ್ನೂ ಚರ್ಚೆಯ ಹಂತದಲ್ಲೇ ಇದೆ. ರಾಷ್ಟ್ರಮಟ್ಟದಲ್ಲಿ ಕೋಲಾಹಲ ಮತ್ತು ಬಿಸಿ ಬಿಸಿ ಚರ್ಚೆಗಳಿಗೆ ಕಾರಣವಾಗಿದ್ದ ಮಸೂದೆ ಕೊನೆಗೂ 2008ರ ಬಜೆಟ್ ಅಧಿವೇಶನದ ವೇಳೆ ರಾಜ್ಯಸಭೆಯಲ್ಲಿ ಮಂಡನೆಯಾಯಿತು.
- ಇದು ಸಂವಿಧಾನ ತಿದ್ದುಪಡಿ ಮಸೂದೆಯಾಗಿರುವುದರಿಂದ. ಸಂಸತ್ತಿನ ಒಪ್ಪಿಗೆ ಪಡೆಯಲು ಮೂರನೇ ಎರಡರಷ್ಟು ಬಹುಮತ ಸಾಧಿಸಬೇಕು. 2010ರ ಮೇ ತಿಂಗಳಲ್ಲಿ ಈ ವಿವಾದಾತ್ಮಕ ಮತ್ತು ಐತಿಹಾಸಿಕ ಮಹಿಳಾ ಮೀಸಲಾತಿ ಮಸೂದೆಯನ್ನು ರಾಜ್ಯಸಭೆ ಆಂಗೀಕರಿಸಿತು.
- ಪಾರ್ಲಿಮೆಂಟ್ ಮತ್ತು ಎಲ್ಲ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡುವ ಈ ಮಸೂದೆಗೆ ರಾಜ್ಯಸಭೆ ಎರಡು ದಿನಗಳ ನಾಟಕೀಯ ಬೆಳವಣಿಗೆಗಳು ಮತ್ತು ಅಡ್ಡಿ ಆತಂಕಗಳನ್ನು ಎದುರಿಸಿದ ಬಳಿಕ ಆಂಗೀಕರಿಸಿತು.

**ಮಹಿಳಾ ಮೀಸಲಾತಿಯ ಪರವಾದ ವಾದದ ಪ್ರಮುಖ ಅಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.**

ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಅರ್ಧದಷ್ಟು ಪಾಲು ಹೊಂದಿದ್ದಾರೆ. ಆದ್ದರಿಂದ ಅರ್ಧದಷ್ಟು ಶಾಸನಸಭೆ ಸ್ಥಾನಗಳಿಗೆ ಅವರು ಅರ್ಹರಾಗಿದ್ದಾರೆ. ಏಕೆಂದರೆ ಸಂಸತ್ತಿನಲ್ಲಿ ನಡೆಯುವ ಚರ್ಚೆಗಳು ಅವರ ಜೀವನದ ಮೇಲೆ ನೇರ ಪರಿಣಾಮ ಬೀರುವುದರಿಂದ ಅವರಿಗೆ ನ್ಯಾಯಬದ್ಧ ಪ್ರಾತಿನಿಧ್ಯ ಸಿಗಬೇಕು.
- ಮಹಿಳೆಯರಿಗೆ ವಿಭಿನ್ನವಾದ ಸಾಮಾಜಿಕ ಹಾಗೂ ಜೈವಿಕ ಅನುಭವಗಳಿದ್ದು, ಇವು ಆಡಳಿತ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಪಡೆಯಬೇಕು.
- ಮಹಿಳೆಯರು ಹಾಗೂ ಪುರುಷರು ಆಂಶಿಕವಾಗಿ ಸಂಘರ್ಷಾತ್ಮಕ ಆಸಕ್ತಿಗಳನ್ನು ಹೊಂದಿದ್ದಾರೆ.
- ಮಹಿಳೆಯರು ಅಧಿಕಾರದ ಸ್ಥಾನಕ್ಕೆ ಬಂದಾಗ ಇದು ಮತ್ತಷ್ಟು ಮಹಿಳೆಯರು ಆ ಹುದ್ದೆಗೆ ಏರಲು ಪ್ರೇರಣೆ ನೀಡುತ್ತದೆ. ಇಂಥ ಪ್ರಭಾವಿ ಮತ್ತು ನೀತಿನಿರೂಪಣಾ ಪಾತ್ರವನ್ನು ನಿರ್ವಹಿಸಲು ಇದು ಉತ್ತೇಜನ ನೀಡುತ್ತದೆ.

- ಇತರೆಲ್ಲ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಬಹುತೇಕ ಸಮಾನ ನಿಲುವು ಪ್ರದರ್ಶಿಸಿದರೂ, ಕಮ್ಯುನಿಸ್ಟ್ ಪಾರ್ಟಿಗಳು ವಿಶ್ವಾದ್ಯಂತ ಇಂಥ ಬೆಳವಣಿಗೆಗಳನ್ನು ವಿರೋಧಿಸುತ್ತಲೇ ಬಂದಿದ್ದಾರೆ.
- ಇಂದಿಗೂ ಇವು ಮಹಿಳೆಯರನ್ನು ತೀರಾ ಕೆಳಹಂತದ ಕೆಲಸಗಾರರಾಗಿಯೇ ಪರಿಗಣಿಸಿವೆ. ಜತೆಗೆ ಈ ಪಕ್ಷಗಳ ಪಾಲಿಟ್‌ಬ್ಯೂರೊಗಳಲ್ಲಿ ಪುರುಷರ ಪ್ರಾಧಾನ್ಯವೇ ಎದ್ದುಕಾಣುತ್ತಿದೆ. ಜತೆಗೆ ಮಹಿಳೆಯರು ಉನ್ನತ ಹುದ್ದೆಗಳನ್ನು ಅಲಂಕರಿಸಿದರೆ.
- ಲಿಂಗ ತಾರತಮ್ಯವನ್ನು ನಿವಾರಿಸಲು ಮತ್ತು ಮಹಿಳಾ ಸಬಲೀಕರಣವನ್ನು ಉತ್ತೇಜಿಸಲು, ಮಹಿಳೆಯರಲ್ಲಿ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಗೃಹಕೃತ್ಯ, ಕೆಲಸದ ಸ್ಥಳ ಮತ್ತು ರಾಜಕೀಯ ವಲಯದಲ್ಲಿ ಇವರ ಪ್ರಾತಿನಿಧ್ಯ ಹೆಚ್ಚಬೇಕು. ಹೆಚ್ಚುವ ರಾಜಕೀಯ ಪ್ರಭಾವವು ಸಹಜವಾಗಿಯೇ ಮಹಿಳಾ ಸಮಾನತೆಯನ್ನು ಹೆಚ್ಚಿಸಲು ಅನುಕೂಲವಾಗುತ್ತವೆ.
- ಇದರಿಂದ ಭಾರತದ ಆರ್ಥಿಕ ಪ್ರಗತಿಯ ವೇಗವೂ ಹೆಚ್ಚಿ, ದೇಶದ ಕಾರ್ಯಕ್ಷಮತೆ ಮತ್ತು ಒಟ್ಟಾರೆ ರಾಷ್ಟ್ರೀಯ ಆದಾಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ಇದು ಎಲ್ಲ ಸಾಮಾಜಿಕ ಅಭಿವೃದ್ಧಿಯ ಹೊಸ ಮೈಲುಗಲ್ಲುಗಳ ಸ್ಥಾಪನೆಗೆ ಕಾರಣವಾಗುತ್ತದೆ.

- ಶಾಸನಸಭೆಗಳಲ್ಲಿ ಸ್ಥಾನಗಳ ಮೀಸಲಾತಿಯು ಮಹಿಳಾ ಸಬಲೀಕರಣ ಮತ್ತು ಅಭಿವೃದ್ಧಿ ಪಾಲುದಾರಿಕೆಗೆ ಮೂಲ, ನಿರಂತರ ಹಾಗೂ ತಾರ್ಕಿಕ ಕ್ರಮವಾಗಿದೆ. ಅದರಲ್ಲೂ ಮುಖ್ಯವಾಗಿ ಪಾಲ್ಗೊಳ್ಳುವಿಕೆ ಮತ್ತು ನಿರೂಪಣೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ನೀಡಲಾಗುವುದು ಎಂಬ ಭರವಸೆ ನೀಡಿರುವ ಸರ್ಕಾರಕ್ಕೆ ಇದು ಅನಿವಾರ್ಯ.
- ಮಹಿಳೆಯರಿಗೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದುಕಿನಲ್ಲಿ ಸಮಾನ ಸ್ಥಾನ ಕಲ್ಪಿಸುವುದು ಕಾರ್ಯಸೂಚಿಯ ಹೃದಯದಲ್ಲಿದೆ ಎಂದು ಮಹಿಳಾ ಸಬಲೀಕರಣ ಕುರಿತ ರಾಷ್ಟ್ರೀಯ ನೀತಿ 2011ರಲ್ಲಿ ಘೋಷಿಸಿತ್ತು.

ಬಹುತೇಕ ತಜ್ಞರು ಅಭಿಪ್ರಾಯಪಡುವಂತೆ ಮಹಿಳಾ ರಾಜಕಾರಣಿಗಳನ್ನು ರೂಪಿಸುವ ನಿಟ್ಟಿನಲ್ಲಿ ಪಕ್ಷಗಳು ನಾಯಕತ್ವ ತೆಗೆದುಕೊಳ್ಳಬೇಕು. ರಾಜಕೀಯ ಪಕ್ಷಗಳು ತಮ್ಮ ನೇಮಕಾತಿ ಪದ್ಧತಿ ಹಾಗೂ ಕಾರ್ಯಶೈಲಿಯನ್ನು ಬದಲಾಯಿಸಿಕೊಳ್ಳದಿದ್ದರೆ, ಮಹಿಳೆಯರ ರಾಜಕೀಯ ಬದುಕು ಉತ್ತಮಗೊಳ್ಳಲು ಸಾಧ್ಯವಿಲ್ಲ ಹಾಗೂ ದೇಶದಲ್ಲಿ ಅಧಿಕಾರಯುತವಾಗಿ ಅವರು ತಮ್ಮ ಪಾತ್ರವನ್ನು ನಿರ್ವಹಿಸಲು ಅವಕಾಶವಾಗದು. ಆದರೆ ಯಾವ ರಾಜಕೀಯ ಪಕ್ಷಗಳೂ ಈ ನಿಟ್ಟಿನಲ್ಲಿ ಉತ್ಸುಕವಾಗಿಲ್ಲ.

ಮಹಿಳಾ ಮೀಸಲಾತಿ ಬಗೆಗೆ ರಾಜಕೀಯ ಪಕ್ಷಗಳಿಗೆ ಇರುವ ಔದಾಸೀನ್ಯದ ಕಾರಣದಿಂದ ಮಹಿಳೆಯರ ಸ್ಥಾನಮಾನ ಬಲಪಡಿಸುವ ಕಾರ್ಯವನ್ನು ಸರ್ಕಾರದ ಹೆಗಲಿಗೇರಿಸಿ ತಮ್ಮ ಜವಾಬ್ದಾರಿಯಿಂದ

ನುಣುಚಿಕೊಂಡಿವೆ. ರಾಜಕೀಯ ಪಕ್ಷಗಳೇ ತ್ಯಾಗ ಮಾಡಿದ ಕಾರ್ಯವನ್ನು ಸರ್ಕಾರ ಮುಂದುವರಿಸಲು ನಿರ್ಧರಿಸಿದ ಮೇಲೆ ಇಲ್ಲಿ ಯಾವುದೇ ಸಂಘರ್ಷಕ್ಕೆ ಅವಕಾಶ ಇರುವುದಿಲ್ಲ.

ತಜ್ಞರು ಅಭಿಪ್ರಾಯಪಡುವಂತೆ ಮಹಿಳಾ ಮೀಸಲಾತಿ ನಿಗದಿಪಡಿಸುವುದು ಕೇವಲ ತೋರಿಕೆಯ ಬದಲಾವಣೆ ತರಬಹುದೇ ವಿನಃ ಅವರು ರಾಜಕೀಯ ಪ್ರಕ್ರಿಯೆಯಲ್ಲಿ ಪ್ರಭಾವ ಬೀರುವ ವಾತಾವರಣ ನಿರ್ಮಿಸಲಾಗದು. ಮೀಸಲು ಸ್ಥಾನಗಳಿಗೆ ಯಾವ ರೀತಿಯ ಮಹಿಳೆಯರಿಗೆ ಅವಕಾಶ ನೀಡಬೇಕು ಎಂದು ನಿರ್ಧರಿಸುವಲ್ಲೂ ಬಹಳಷ್ಟು ಅಂಶಗಳು ಪ್ರಭಾವ ಬೀರಬಹುದು. ಭಾರತ ಕೇವಲ ಜಾತಿಯಿಂದ ವಿಭಜಿತವಾಗಿರುವ ರಾಷ್ಟ್ರವಷ್ಟೇ ಅಲ್ಲದೇ, ವರ್ಗದಿಂದ ವಿಭಜನೆಯಾಗಿರುವ ಸಮಾಜವೂ ಹೌದು. ಒಂದು ರಾಜಕೀಯ ಪಕ್ಷದ ಸ್ವರೂಪ ಮತ್ತು ಅಂಶಗಳು ಬದಲಾವಣೆಯಾದಾಗ ಮಾತ್ರ ಮಹಿಳೆಯರಿಗೆ ಅವರ ಅರ್ಹತೆಯ ಆಧಾರದಲ್ಲಿ ಟಿಕೆಟ್ ನೀಡಲು ಸಾಧ್ಯ.

ಮಹಿಳೆಯರ ರಾಜಕೀಯ ಸಾಮರ್ಥ್ಯವನ್ನು ಬಲಪಡಿಸಲು ರಾಜಕೀಯ ವ್ಯವಸ್ಥೆಯಲ್ಲಿ ನಗಣ್ಯವಾದ ಪ್ರಯತ್ನಗಳು ನಡೆದಿರುವ ಹಿನ್ನೆಲೆಯಲ್ಲಿ, ತಳಹಂತದಿಂದ ಮೇಲಿನ ಹಂತಕ್ಕೆ ಮಹಿಳಾ ನಾಯಕತ್ವ ರೂಪುಗೊಳ್ಳಬೇಕಾಗಿದೆ. ಸಹಜವಾಗಿಯೇ ಇದು ಉನ್ನತ ಮಟ್ಟದಲ್ಲಿ ಮಹಿಳಾ ನೇತಾರರ ಸ್ಥಾನಗಳನ್ನು ಖಾಲಿಯಾಗಿಸಿದೆ. ಇಂಥ ಖಾಲಿ ಸ್ಥಾನಗಳಿಗೆ ಉನ್ನತ ರಾಜಕಾರಣಿಗಳ ಪತ್ನಿ ಅಥವಾ ಹೆಣ್ಣುಮಕ್ಕಳು ಆಯ್ಕೆಯಾಗುತ್ತಾರೆ. ಇತರ ಸಾಮಾನ್ಯ ಹಿನ್ನೆಲೆಯಿಂದ ಬಂದ ಮಹಿಳೆಯರಿಗೆ ಉನ್ನತ ಹಂತದಲ್ಲಿ ಅವಕಾಶ ಲಭಿಸುವುದು ದುರ್ಲಭವಾಗುತ್ತದೆ.

ಭಾರತೀಯ ಮಹಿಳೆಯರು ಪ್ರಬಲ ಶ್ರೇಣೀಕೃತ ವ್ಯವಸ್ಥೆಯಲ್ಲಿ ಹುಟ್ಟಿರುವುದರಿಂದ, ಹಿಂದೆ ಅವರು ಬೇರೆಯವರ ನಿಯಂತ್ರಣದಲ್ಲಿ ಸಿಲುಕಿ ಹಾಕಿಕೊಂಡ ಪರಿಣಾಮವಾಗಿ, ಅವರು ಉನ್ನತಿ ಸಾಧಿಸಲು ಮುಂದಾದಾಗಲೆಲ್ಲ ಅವರು ತಡೆಗಳನ್ನು ಎರಿಸುವಂತಾಗಿದೆ. ಮತ್ತು ಇಂಥ ತಡೆಗಳನ್ನು ನಿವಾರಿಸಿಕೊಳ್ಳುವ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದು ಕಷ್ಟಸಾಧ್ಯವಾಗುತ್ತಿದೆ.

ಕೇವಲ ಕುಟುಂಬದ ಬೆಂಬಲ ಇದ್ದರೆ ಮಾತ್ರ ಇಂಥ ತಡೆಗಳನ್ನು ಮೀರಿ ಅವರು ಬೆಳೆಯಲು ಸಾಧ್ಯ. ಸುಧೀರ್ಘ ಅವಧಿಯಿಂದ ಮಹಿಳೆಯರಿಗೆ ಉತ್ತೇಜನ ಸಿಕ್ಕದ ಹಿನ್ನೆಲೆಯಲ್ಲಿ ತೀರಾ ಅಪರೂಪದ ವ್ಯಕ್ತಿತ್ವದ ಮತ್ತು ಸಾಮರ್ಥ್ಯ ಹೊಂದಿರುವ ಮಹಿಳೆಯರಷ್ಟೇ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಅವಕಾಶ ಪಡೆಯುತ್ತಾರೆ. ಇದು ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಇದು ಭಾರತದಲ್ಲಿ ಇಂದಿಗೂ ಪ್ರತಿದಿನದ ಕಥೆ.

ಮಹಿಳೆಯರ ಪ್ರಗತಿಗೆ ಇದ್ದ ಅಡ್ಡಿ ಆತಂಕಗಳನ್ನು ಕಳೆದ ಅರುವತ್ತು ವರ್ಷಗಳಲ್ಲಿ ನಿಧಾನವಾಗಿ ನಿವಾರಿಸಲಾಗುತ್ತಿದೆ. ಮಧ್ಯಮವರ್ಗದ ಕುಟುಂಬಗಳು ತಮ್ಮ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪೂರಕವಾಗಿ ಒತ್ತು ನೀಡುತ್ತಿದ್ದು, ಅವರ ಮಹತ್ವಾಕಾಂಕ್ಷಿ ಉದ್ಯೋಗದ ಕನಸಿಗೂ ಪೂರಕ ವಾತಾವರಣ ಕಲ್ಪಿಸಿಕೊಡುತ್ತಿವೆ. ಆದರೆ ಈ ಬದಲಾವಣೆ ತೀರಾ ನಿಧಾನ. ಇದರ ಪ್ರಯೋಜನಗಳು ಮಹಿಳೆಯರ ಸಣ್ಣ ವರ್ಗಕ್ಕಷ್ಟೇ ಸಿಕ್ಕಿವೆ. ಅದರಲ್ಲೂ ಮುಖ್ಯವಾಗಿ ಮಹಾನಗರಗಳ ಸುಶಿಕ್ಷಿತ ಮಧ್ಯಮವರ್ಗದ ಕುಟುಂಬಗಳ ಮಹಿಳೆಯರಿಗಷ್ಟೇ ಇದು ಸೀಮಿತ ಎಂಬಂತಾಗಿದೆ. ತಮ್ಮದೇ ಆಸಕ್ತಿ ಮತ್ತು ಸಾಮರ್ಥ್ಯದಿಂದ ಮಹಿಳೆಯರು ಹಲವು ವೃತ್ತಿಗಳಲ್ಲಿ ಮುಂಚೂಣಿಗೆ ಬಂದಿದ್ದಾರೆ.

ಆದರೆ ಬಹುತೇಕ ಕುಟುಂಬಗಳು ಆ ಕುಟುಂಬದ ಪುರುಷರಿಗೆ ನೀಡಿದಷ್ಟು ಬೆಂಬಲವನ್ನು ಮಹಿಳೆಯರಿಗೆ ನೀಡುತ್ತಿಲ್ಲ ಎನ್ನುವುದು ವಾಸ್ತವ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಎಲ್ಲವೂ ಕುಟುಂಬಗಳ ಬೆಂಬಲದಿಂದ ಆಗಿರುವ ಸಾಧನೆಯೇ ಹೊರತು ಸರ್ಕಾರ ಇಲ್ಲಿ ನಿರ್ವಹಿಸಿರುವ ಪಾತ್ರ ತೀರಾ ನಿರಾಶಾದಾಯಕ.

ಸ್ವಾತಂತ್ರ್ಯ ಬಂದು ಅರುವತ್ತು ವರ್ಷ ಕಳೆದರೂ, ಮಹಿಳೆಯರ ವಿರುದ್ಧದ ಪರಿಸ್ಥಿತಿಗಳು ಇಂದಿಗೂ ಜೀವಂತವಾಗಿ ಇವೆ. ಈ ಕಾರಣದಿಂದಾಗಿ ಅವರು ಸಾರ್ವಜನಿಕ ಜೀವನದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡುವುದು ಸಾಧ್ಯವಾಗುತ್ತಿಲ್ಲ.

ಅವರು ಸಾರ್ವಜನಿಕ ಜೀವನದಲ್ಲಿ ಸಾಧನೆ ಮಾಡಬೇಕಾದರೆ ಇಂಥ ಮೀಸಲಾತಿ ಅನಿವಾರ್ಯವಾಗುತ್ತದೆ. ರಾಜಕೀಯ ಪಕ್ಷಗಳ ನೇತಾರರು, ಮಹಿಳೆಯರ ಕಲ್ಯಾಣಕ್ಕೆ ತೀವ್ರ ಹಾಗೂ ಧೀರ್ಘಾವಧಿ ಆಸಕ್ತಿಯನ್ನು ತೆಗೆದುಕೊಳ್ಳಬೇಕಾಗಿದೆ.

ಕೇವಲ ಅವರನ್ನು ರಾಜಕೀಯ ಚದುರಂಗದಾಟದಲ್ಲಿ ಕಾಲಾಳುಗಳಾಗಿ ಬಳಸಿಕೊಳ್ಳುವ ಮನೋಪ್ರವೃತ್ತಿಯನ್ನು ಬಿಟ್ಟು, ಅವರಿಗೆ ಶಕ್ತಿ ಮತ್ತು ಅಧಿಕಾರವನ್ನು ತುಂಬುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಭಾರತದ ಸಮಾಜದ ಬದಲಾವಣೆಗೆ ಪ್ರಜಾಪ್ರಭುತ್ವ ವ್ಯವಸ್ಥೆ ಸೀಮಿತ ಕೊಡುಗೆಯನ್ನಷ್ಟೇ ನೀಡಬಲ್ಲದು.

ನಮ್ಮ ರಾಜಕೀಯ ಪಕ್ಷಗಳು ನಮ್ಮ ಸಮಾಜದ ಸ್ಥಿತಿಯನ್ನು ಪ್ರತಿಫಲಿಸುತ್ತವೆ ಎನ್ನುವುದನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಸಮಾಜದ ಬಹುತೇಕ ಜನರ ಅಭಿಪ್ರಾಯಗಳು ರಾಜಕೀಯ ಪಕ್ಷಗಳ ಕಾರ್ಯವೈಖರಿಯಲ್ಲಿ ಬಿಂಬಿತವಾಗುತ್ತವೆ.

ಭಾರತದಲ್ಲಿ ಇಂದಿನ ತುರ್ತು ಅಗತ್ಯವೆಂದರೆ ಮಹಿಳೆಯರ ಬಗೆಗಿನ ದೃಷ್ಟಿಕೋನದಲ್ಲಿ ಸಮಗ್ರ ಸುಧಾರಣೆ. ಇದೇ ಬದಲಾವಣೆ ಎಲ್ಲ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ಮುಖಂಡರ ಮನೋಪ್ರವೃತ್ತಿಯಲ್ಲೂ ಆಗಬೇಕಾಗಿದೆ. ಜತೆಗೆ ವಿಧಾನ ಮಂಡಲ ಹಾಗೂ ಸಂಸತ್ತಿನ ಹಂತಕ್ಕೂ ಇದು ವ್ಯಾಪಿಸಬೇಕು.

ಮಹಿಳೆಯರಿಗೆ ಪರಿಣಾಮಕಾರಿ ಉತ್ತೇಜನ ನೀಡುವ ಪ್ರಕ್ರಿಯೆ ಕುಟುಂಬದ ಹಂತದಿಂದಲೇ ಆಗಬೇಕಾಗಿದೆ. ಕುಟುಂಬಗಳು ತಮ್ಮ ಕುಟುಂಬದ ಮಗಳು, ಸಹೋದರಿಯರು ಮತ್ತು ಸೊಸೆಯಂದಿರಿಗೆ ಉತ್ತೇಜನ ನೀಡಿದಾಗ ಮಾತ್ರ, ಭಾರತೀಯ ಮಹಿಳೆಯರ ಪರಿಸ್ಥಿತಿ ಬದಲಾಗಲು ಸಾಧ್ಯ. ವೈಯಕ್ತಿಕ ಘಟನೆಗಳು ಇದನ್ನು ಈಗಾಗಲೇ ಸಮರ್ಥಿಸಿವೆ.

ವೈಯಕ್ತಿಕ ಹಂತದಲ್ಲಿ ಮಹಿಳೆಯರ ಸಬಲೀಕರಣವಾಗಬೇಕು. ಇದು ಕಟುಂಬ ಘಟಕದ ಮಟ್ಟದಲ್ಲಿ ಆರಂಭವಾಗಬೇಕು. ಇದನ್ನು ಆಗ ಸಮಾಜ ಸಾರ್ವತ್ರಿಕವಾಗಿ ಒಪ್ಪಿಕೊಳ್ಳುವ ಹಂತಕ್ಕೆ ಬೆಳೆಯುತ್ತದೆ. ಇದು ಮಹಿಳೆಯರ ಉನ್ನತೀಕರಣದಲ್ಲಿ ಸಮಗ್ರ ಹಾಗೂ ಪವಾಡಸದೃಶ ಬದಲಾವಣೆಗೆ ಕಾರಣವಾಗಲಿದೆ. ಆದರೆ ಇವೆಲ್ಲವೂ ಹೇಳಲು ಸುಲಭ; ಇದನ್ನು ಸಾಧಿಸುವಲ್ಲಿ ಬಹಳಷ್ಟು ಅಡೆ ತಡೆಗಳು ಎದುರಾಗುತ್ತವೆ.

ಮೊಟ್ಟಮೊದಲನೆಯದಾಗಿ ಹೆಣ್ಣುಮಕ್ಕಳ ವಿಚಾರದಲ್ಲಿ ಸಮಾಜದ ಮಾನಸಿಕ ಸ್ಥಿತಿ ಬದಲಾಗಬೇಕು. ಇಲ್ಲೂ ಸರ್ಕಾರ ಮಹತ್ವದ ಪಾತ್ರವನ್ನು ವಹಿಸಲು ಸಾಧ್ಯವಿದೆ. ಹೆಣ್ಣುಮಕ್ಕಳನ್ನು ಹೆರುವ ಕುಟುಂಬಕ್ಕೆ ಉತ್ತೇಜನ ನಿಡುವ ಜತೆಗೆ ಗಂಡುಮಕ್ಕಳ ಪರವಾಗಿ ತಾರತಮ್ಯ ನೀತಿ ಅನುಸರಿಸುವವರಿಗೆ ಶಿಕ್ಷೆ ವಿಧಿಸುವ ಮೂಲಕ ಈ ತಾರತಮ್ಯವನ್ನು ನಿವಾರಿಸಿ ಹೆಣ್ಣುಮಕ್ಕಳಿಗೂ ಸಮಾನ ಅವಕಾಶ ಸೃಷ್ಟಿಸಲು ಮುಂದಾಗಬೇಕು. ಈ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗದಿರುವ ಹಿನ್ನೆಲೆಯಲ್ಲಿ ಅಪೇಕ್ಷಿತ ಫಲಿತಾಂಶ ಬಂದಿಲ್ಲ.

ಮಹಿಳಾ ಜನಸಂಖ್ಯೆ ದೇಶದ ಅನಪೇಕ್ಷಿತ ನಾಗರಿಕರು ಎಂಬ ಮನೋಸ್ಥಿತಿ ಇರುವಲ್ಲಿಯವರೆಗೂ ದೇಶದ ಸಮಗ್ರ ಪ್ರಗತಿಯನ್ನು ಕಲ್ಪಿಸಿಕೊಳ್ಳುವುದು ಹೇಗೆ ಸಾಧ್ಯ? ಮಹಿಳೆಯರು ಉತ್ತಮ ತಾಯಿಯಾಗಬಹುದಾದರೆ ಉತ್ತಮ ಮಗಳೂ ಆಗಬಲ್ಲಳು ಎನ್ನುವುದನ್ನು ಸಮಾಜ ಏಕೆ ಒಪ್ಪಿಕೊಳ್ಳುವುದಿಲ್ಲ? ಭಾರತೀಯ ಸಮಾಜದಲ್ಲಿ ತಾಂಡವವಾಡುತ್ತಿರುವ ಇಂಥ ವೈರುಧ್ಯ ಸ್ಥಿತಿಯ ಬಗ್ಗೆ ಜಾಗೃತಿ ಮೂಡಿಸುವ ಪ್ರಾಮಾಣಿಕ ಪ್ರಯತ್ನ ನಡೆಯಬೇಕು. ಮತ್ತೊಬ್ಬ ಮಹಿಳೆಯ ಉನ್ನತಿಗೆ ಮತ್ತು ಸಾರ್ವತ್ರಿಕವಾಗಿ ಮಹಿಳಾ ಸಬಲೀಕರಣಕ್ಕೆ ಮಹಿಳೆಯರೇ ದೊಡ್ಡ ಹೆಜ್ಜೆ ಇಡಬೇಕು. ಇದಕ್ಕೆ ರಾಜಕೀಯ ಪ್ರಾತಿನಿಧ್ಯ ಮೊದಲ ಹಂತವಾಗಬೇಕು.

ಪ್ರಜಾಪ್ರಭುತ್ವ ವ್ಯವಸ್ಥೆಗೆ ಇರುವ ನಿಜವಾದ ಪರೀಕ್ಷೆ ಎಂದರೆ, ಸಮಾಜದ ದುರ್ಬಲ ಮತ್ತು ತುಳಿತಕ್ಕೆ ಒಳಗಾದ ವರ್ಗಗಳಿಗೆ ಸಮಾನ ಅವಕಾಶವನ್ನು ಸೃಷ್ಟಿಸಿಕೊಡುವುದು. ಈ ಪ್ರಕರಣದಲ್ಲಿ ಅದು ಭಾರತೀಯ ಮಹಿಳೆ. ಇದನ್ನು ಸಾಧಿಸಬೇಕಾದರೆ ಪೂರಕವಾದ ಸಾಮಾಜಿಕ ವಾತಾವರಣ ಮತ್ತು ರಾಜಕೀಯ ಇಚ್ಛಾಶಕ್ತಿ ಅಗತ್ಯ. ಹಿಂದುಳಿದ ಮತ್ತು ಸಂಪ್ರದಾಯವಾದಿ ಎನಿಸಿಕೊಂಡ ಪಾಕಿಸ್ತಾನದಲ್ಲಿ ಮಹಿಳೆಯರಿಗೆ ಶೇಕಡ 33ರ ಮೀಸಲಾತಿ ಕಲ್ಪಿಸಲು ಸಾಧ್ಯವಾಗಿದ್ದರೆ, ಭಾರತದಲ್ಲಿ ಇದು ಏಕೆ ಸಾಧ್ಯವಿಲ್ಲ ಎನ್ನುವ ಬಗ್ಗೆ ಚಿಂತನೆ ನಡೆಯಬೇಕಿದೆ.

## 2. ದೇಶ ಭ್ರಷ್ಟ ಆರ್ಥಿಕ ಅಪರಾಧಿಗಳಿಗೆ ಹೊಸ ಮಸೂದೆ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಆರ್ಥಿಕ ಅಪರಾಧಿಗಳು ಹಾಗೂ ದೇಶದಿಂದ ಪಲಾಯನಗೈದವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ನೀಡುವ ನೂತನ ಮಸೂದೆ ಕರಡು ರಚನೆಗೆ ಕೇಂದ್ರ ಕಾನೂನು ಸಚಿವಾಲಯ ಸಮ್ಮತಿ ನೀಡಿದೆ.
- ಇದನ್ನು ದೇಶ ಭ್ರಷ್ಟ ಆರ್ಥಿಕ ಅಪರಾಧಿಗಳ ಮಸೂದೆ – 2017 ಎಂದು ಹೆಸರಿಸಲಾಗಿದ್ದು, ಈ ಮಸೂದೆಯಲ್ಲಿ ಹಲವು ಹೊಸ ನಿಬಂಧನೆಗಳನ್ನು ಸೇರಿಸಲಾಗುತ್ತದೆ. ಈ ನಿಬಂಧನೆಗಳು ಪ್ರಸ್ತುತ ಜಾರಿಯಲ್ಲಿರುವ ಹಲವು ಹಕ್ಕುಗಳನ್ನು (ಆಧಿಕ ಅಪರಾಧಿಗಳು ಪಾರಾಗಲು ಅವಕಾಶ ನೀಡುವ ಹಕ್ಕುಗಳು) ಮೊಟಕುಗೊಳಿಸಲಿವೆ.

ಮುಖ್ಯ ಪರೀಕ್ಷೆಗಾಗಿ

ಮಸೂದೆಯ ಮುಖ್ಯಾಂಶಗಳು

- ೨೦೧೭-೧೮ರ ಬಜೆಟ್ ಭಾಷಣದಲ್ಲಿ ವಿತ್ತ ಸಚಿವ ಅರುಣ್ ಜೇಟ್ಲಿ ದೇಶದ ಆರ್ಥಿಕತೆಗೆ ಮಸಿ ಬಳಿದು ವಿದೇಶಗಳಿಗೆ ಪಲಾಯನ ಮಾಡುವ ದೇಶಭ್ರಷ್ಟರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಶಾಸನಾತ್ಮಕ ಬದಲಾವಣೆಗಳನ್ನು ತರುವುದಾಗಿ ಘೋಷಿಸಿದರು.
- ದೇಶಬಿಟ್ಟು ಹೋಗುವ ಮೂಲಕ ಇಲ್ಲಿಯ ಕಾನೂನು ಪ್ರಕ್ರಿಯೆಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವ ಆರ್ಥಿಕ ಅಪರಾಧಿಗಳಿಗೆ ತಕ್ಕ ಪಾಠ ಕಲಿಸಲು ಬೇಕಾದ ಷರತ್ತುಗಳನ್ನು ನೂತನ ಮಸೂದೆಯಲ್ಲಿ ಸೇರಿಸಲಾಗಿದೆ.
- ಪ್ರಸ್ತಾಪಿಸಲಾಗಿರುವ ಕಾನೂನುಗಳು ೧೦೦ ಕೋಟಿ ರೂಪಾಯಿಗೂ ಹೆಚ್ಚಿನ ಮೌಲ್ಯದ ಆರ್ಥಿಕ ಅಪರಾಧ ಪ್ರಕರಣಗಳಿಗೆ ಅನ್ವಯವಾಗುತ್ತವೆ.
- ಮಸೂದೆಯ ಹಣಕಾಸು ಸಚಿವಾಲಯದಡಿ 'ಆರ್ಥಿಕ ಗುಪ್ತಚರ ಘಟಕ' ರಚನೆಗೆ ಅವಕಾಶ ಒದಗಿಸಲಿದೆ. ಇದು ದೇಶಭ್ರಷ್ಟ ಆರ್ಥಿಕ ಅಪರಾಧಿಗಳನ್ನು ಅಧಿಕೃತವಾಗಿ ಘೋಷಿಸಲು ಅರ್ಜಿ ನೋಂದಾಯಿಸುತ್ತದೆ. ಈ ಮೂಲಕ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

•

**ಕೆಲವು ಶಾಸನಗಳಿಗೆ ಮಿತಿ ಹೇರಲಾಗುತ್ತದೆ**

- **ಹೊಸ ಕಾನೂನಿನ ಅಗತ್ಯ** : ಈಗಾಗಲೇ ಹಲವಾರು ದೊಡ್ಡ ಉದ್ಯಮಿಗಳು ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿ ವಂಚಿಸಿ ಭಾರತೀಯ ನ್ಯಾಯಾಲಯಗಳ ವ್ಯಾಪ್ತಿಯಿಂದ ತಪ್ಪಿಸಿಕೊಂಡಿದ್ದಾರೆ. ಅವರು ಕೋರ್ಟ್ ವಿಚಾರಣೆಗೂ ಲಭ್ಯವಾಗುತ್ತಿಲ್ಲದಿರುವುದು ಸಮಸ್ಯೆಯಾಗಿದೆ. ಪ್ರಕರಣಗಳ ತನಿಖೆಗೆ ಇದು ಅಡ್ಡಿಯಾಗುತ್ತಿದೆ. ಅಲ್ಲದೆ, ಇಂತಹ ಪ್ರಕರಣಗಳನ್ನು ವಿಚಾರಿಸುವಲ್ಲಿ ನ್ಯಾಯಾಲಯದ ಅಮೂಲ್ಯ ಸಮಯ ವ್ಯರ್ಥವಾಗುತ್ತಿದೆ.

**ದೇಶ ಭ್ರಷ್ಟ ಅಪರಾಧಿಗಳೆಂದರೆ ಯಾರು?**

- ಒಂದು ನಿರ್ಧಿಷ್ಟ ಅಪರಾಧಕ್ಕಾಗಿ ಒಬ್ಬ ವ್ಯಕ್ತಿಯ ಮೇಲೆ ಅರೆಸ್ಟ್ ವಾರಂಟ್ ಜಾರಿಯಾಗಿದ್ದರೂ, ಆ ವ್ಯಕ್ತಿ ಕಾನೂನು ಪ್ರಕ್ರಿಯೆಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ದೇಶದಿಂದ ಪಲಾಯನ ಮಾಡಿದ್ದರೆ ಆ ವ್ಯಕ್ತಿಯನ್ನು ದೇಶಭ್ರಷ್ಟ ಆರ್ಥಿಕ ಅಪರಾಧಿ ಎಂದು ಪರಿಗಣಿಸಲಾಗುತ್ತದೆ.
- ಕ್ರಿಮಿನಲ್ ಪ್ರಕರಣ ದಾಖಲಾಗಿದ್ದರೂ, ಭಾರತಕ್ಕೆ ಬರಲು ನಿರಾಕರಿಸುವ ವ್ಯಕ್ತಿಯನ್ನು ದೇಶಭ್ರಷ್ಟ ಆರ್ಥಿಕ ಅಪರಾಧಿ ಎನ್ನಲಾಗಿದೆ. ವಿಜಯ್ ಮಲ್ಯ ಪ್ರಕರಣ ಇದಕ್ಕೆ ಸೂಕ್ತ ಉದಾಹರಣೆ. ಮಲ್ಯ ಸಾವಿರಾರು ಕೋಟಿ ರೂಪಾಯಿ ವಂಚಿಸಿ ವಿದೇಶಕ್ಕೆ ಪಲಾಯನ ಮಾಡಿದ್ದರಿಂದ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತಿದೆ.

- ಮಹಾರಾಷ್ಟ್ರದ ಅಲಿಬಾಗ್ ನಲ್ಲಿರುವ ೧೦೦ ಕೋಟಿ ರೂ. ಮೌಲ್ಯದ ತೋಟದ ಮನೆಯನ್ನು ಜಾರಿ ನಿರ್ದೇಶನಾಲಯ ಮುಟ್ಟೋಗೋಲು ಹಾಕಿಕೊಂಡಿತ್ತು. ಇತ್ತೀಚೆಗೆ ಮಲ್ಯರಿಗೆ ಸೇರಿದ್ದ ೧೦೦ ಕೋಟಿ,ರೂ. ಮೌಲ್ಯದ ಷೇರುಗಳ ಹಕುಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ)ದ ಶಿಫಾರಸಿನಂತೆ ಹಣಕಾಸು ಅಕ್ರಮ ತಡೆ ಕಾಯ್ದೆಯ ಅಡಿ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಶನ್ ಆಫ್ ಇಂಡಿಯಾ (ಎಸ್ಎಚ್ ಸಿಐಎಲ್) ಕೇಂದ್ರ ಸರ್ಕಾರಕ್ಕೆ ಹಸ್ತಾಂತರಿಸಿದೆ.

SOURCE- http://timesofindia.indiatimes.com/india/resolve-kashmir-issue-bilaterally-with-india-china-tells-pakistan/articleshow/60796366.cms

## 3. ಮಾತುಕತೆ ಮೂಲಕ ಕಾಶ್ಮೀರ ಸಮಸ್ಯೆ ಬಗೆಹರಿಸಿಕೊಳ್ಳಲು - ಚೀನಾ

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

- ಕಾಶ್ಮೀರ ಸಮಸ್ಯೆಯನ್ನು ಭಾರತ ಮತ್ತು ಪಾಕಿಸ್ತಾನ ದ್ವಿಪಕ್ಷೀಯ ಮಾತುಕತೆಯ ಮೂಲಕ ಬಗೆ ಹರಿಸಬೇಕು ಎಂದು ಚೀನಾ ಮಹತ್ವದ ಹೇಳಿಕೆ ನೀಡಿದೆ.
- ಕಾಶ್ಮೀರದ ಮೇಲಿನ ವಿಶ್ವಸಂಸ್ಥೆ ನಿರ್ಣಯದ ಅನುಷ್ಠಾನಕ್ಕಾಗಿ ಇಸ್ಲಾಮಿಕ್ ಸಹಕಾರ ಸಂಘಟನೆಗಳ (OIC) ಒತ್ತಾಯದ ಬಗ್ಗೆ ಹೇಳಿಕೆ ನೀಡಿರುವ ಚೀನಾದ ವಿದೇಶಾಂಗ ವಕ್ತಾರ ಲೂ ಕಾಂಗ್, ಕಾಶ್ಮೀರ ಸಮಸ್ಯೆಯನ್ನು ಭಾರತ ಮತ್ತು ಪಾಕಿಸ್ತಾನ ದ್ವಿಪಕ್ಷೀಯವಾಗಿ ಪರಿಹರಿಸಬೇಕು ಎಂದಿದ್ದಾರೆ.
- ಕಾಶ್ಮೀರ ವಿಷಯ ಸಂಬಂಧ ವರದಿಯನ್ನು ಚೀನಾ ಗಮನಿಸಿದೆ. ಅಲ್ಲದೆ ಕಾಶ್ಮೀರ ಸಮಸ್ಯೆ ಬಗ್ಗೆ ಚೀನಾ ಸ್ಪಷ್ಟ ನಿಲುವನ್ನು ಹೊಂದಿರುವುದಾಗಿ ಸ್ಪಷ್ಟಪಡಿಸಿದರು.
- ಇತಿಹಾಸದಿಂದಲೂ ಕಾಶ್ಮೀರ ವಿವಾದ ಉಳಿದಿದೆ. ಭಾರತ ಮತ್ತು ಪಾಕಿಸ್ತಾನ ಮಾತುಕತೆ ಮತ್ತು ಸಂವಹನ ಹೆಚ್ಚಿಸುವ ಮೂಲಕ ಸಂಬಂಧಿತ ಸಮಸ್ಯೆಗಳನ್ನು ಸರಿಯಾಗಿ ನಿರ್ವಹಿಸಲು ಮತ್ತು ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳುವ ನಿರೀಕ್ಷೆಯನ್ನು ಹೊಂದಿರುವುದಾಗಿ ಭರವಸೆ ವ್ಯಕ್ತಪಡಿಸಿದರು.
- ಕಾಶ್ಮೀರದಲ್ಲಿ ವಿಶ್ವಸಂಸ್ಥೆ ನಿರ್ಣಯದ ಅನುಷ್ಠಾನಕ್ಕಾಗಿ ಪಾಕಿಸ್ತಾನ ಕೂಡಾ ಸದಸ್ಯವಾಗಿರುವ 57 ಸದಸ್ಯರ ಇಸ್ಲಾಮಿಕ್ ಸಹಕಾರ ಸಂಘಟನೆಗಳು ನಿರಂತರವಾಗಿ ಗೊತ್ತುವಳಿ ಮಂಡಿಸುತ್ತಲೇ ಬಂದಿದೆ. ಈ ಸಂಬಂಧ ಎರಡು ದಿನಗಳ ಹಿಂದೆಯಷ್ಟೇ ಒಐಸಿ ಸಭೆ ನಡೆಸಿತ್ತು.

- ಕಾಶ್ಮೀರದಲ್ಲಿ ವಿಶ್ವಸಂಸ್ಥೆ ಭದ್ರತಾ ಪಡೆಯ ನಿರ್ಣಯ ಅನುಷ್ಠಾನಕ್ಕಾಗಿ ಪಾಕಿಸ್ತಾನ ಪ್ರಧಾನಿ ಶಾಹೀದ್ ಖಾಕನ್ ಅಬ್ಬಾಸಿ ಬೇಡಿಕೆ ಮುಂದಿಟ್ಟಿರುವ ಬೆನ್ನಲ್ಲೇ ಚೀನಾದಿಂದ ಮಹತ್ವದ ಹೇಳಿಕೆ.

**SOURCE**- http://pib.nic.in/newsite/PrintRelease.aspx?relid=170946

## 4. ಪ್ರಗತಿಯತ್ತ ರಾಷ್ಟ್ರೀಯ ಅರೋಗ್ಯ ಮಿಷನ್

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟ ರಾಷ್ಟ್ರೀಯ ಆರೋಗ್ಯ ಮಿಷನ್ ಪ್ರಗತಿಯ ಕುರಿತು ಮಾಹಿತಿ ನೀಡಿದೆ. ಜತೆಗೆ ಕಾರ್ಯಕ್ರಮಗಳ ಉನ್ನತಾಧಿಕರ ಸಮಿತಿ ಮತ್ತು ಮಿಷನ್ ಸ್ಟೀರಿಂಗ್ ಗ್ರೂಪ್ ನ ನಿರ್ಧಾರಗಳನ್ನು ತಿಳಿಸಿದೆ.
- 2005ರಲ್ಲೇ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಆರಂಭಿಸಲಾಗಿತ್ತು. ೨೦೧೩ ರಲ್ಲಿ ರಾಷ್ಟ್ರೀಯ ನಗರ ಆರೋಗ್ಯ ಮಿಷನ್ ಆರಂಭಿಸಿದ ನಂತರ ಈ ಎರಡು ಮಿಷನಗಳನ್ನು ಸೇರಿಸಿ ರಾಷ್ಟ್ರೀಯ ಆರೋಗ್ಯ ಮಿಷನ್ ಎಂದು ಮರುನಾಮಕರಣ ಮಾಡಲಾಯಿತು. ಪ್ರಸ್ತುತ ಎರಡನ್ನೂ ರಾಷ್ಟ್ರೀಯ ಆರೋಗ್ಯ ಮಿಷನ್ ನ ಉಪ ಮಿಷನಗಳಾಗಿ ಅನುಷ್ಠಾನಗೊಳಿಸಲಾಗಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಮುಖ್ಯ ಪರೀಕ್ಷೆಗಾಗಿ

- ಎಲ್ಲರಿಗೂ ಗುಣಮಟ್ಟ ಆರೋಗ್ಯ ಸೇವೆ ಒದಗಿಸುವುದು.
- ಕೇಂದ್ರ, ರಾಜ್ಯ, ಸ್ಥಳೀಯ ಸರ್ಕಾರಗಳ ಸಹಯೋಗದಲ್ಲಿ ಮಿಷನ್ ಅನುಷ್ಠಾನ.
- ಪ್ರಾಥಮಿಕ ಆರೋಗ್ಯ ಕಾರ್ಯಕ್ರಮಗಳು ಮತ್ತು ಮೂಲಸೌಕರ್ಯಗಳ ನಿರ್ವಹಣೆಗೆ ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ಸಮುದಾಯದವರ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸುವುದು.
- ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಅವಕಾಶ ಒದಗಿಸುವುದು.

- ಆರೋಗ್ಯ ಸೇವೆ ಉತ್ತೇಜಿಸಲು ಅಂತರ್ -ವಲಯಗಳ ವಿಲಿನಕ್ಕೆ ಚೌಕಟ್ಟು ರೂಪಿಸುವುದು.

### ಮಿಷನ್ ಗುರಿ

- ಸಮಾನವಾದ, ಕೈಗೆಟುಕುವ ದರದಲ್ಲಿ ಗುಣಮಟ್ಟ ಆರೋಗ್ಯ ಸೇವೆ ಸಾರ್ವತ್ರಿಕವಾಗಿ ಲಭ್ಯವಾಗುವಂತಾಗಬೇಕು. ಆರೋಗ್ಯ ಸೇವೆಗಳು ಜವಾಬ್ದಾರಿಯುತ ಹಾಗೂ ಜನರ ಅಗತ್ಯಗಳಿಗೆ ತಕ್ಕಂತಿರಬೇಕು.

### ಮಿಷನ್ ನ ಪ್ರಮುಖ ಪರಿಣಾಮಗಳು

- 5 ವರ್ಷದೊಳಗಿನ ಮಕ್ಕಳ ಮರಣ : 2010 ರಲ್ಲಿ 59 ರಷ್ಟಿದ್ದ (ಪ್ರತಿ 1000 ಮಕ್ಕಳಿಗೆ) 2015 ರಲ್ಲಿ 43 ಕ್ಕೆ ಇಳಿದಿದೆ. 1990 - 2010ರ ಅವಧಿಯಲ್ಲಿ 5 ವರ್ಷದೊಳಗಿನ ಮಕ್ಕಳ ಮರಣ ಕೇವಲ ಶೇ. 3.7 ರಷ್ಟಿತ್ತು. 2010-15ರ ಅವಧಿಯಲ್ಲಿ ಈ ಪ್ರಮಾಣ ಶೇ. 6.1 ರಷ್ಟು ಇಳಿಕೆಯಾಗಿದೆ.
- ತಾಯಂದಿರ ಮರಣ ದರ : 2010 - 12 ರ ಅವಧಿಯಲ್ಲಿ 178 ರಷ್ಟಿದ್ದ ( 1 ಲಕ್ಷ ತಾಯಂದಿರಿಗೆ) ತಾಯಂದಿರ ಮರಣ ಪ್ರಮಾಣ 2011 - 13 ರ ಅವಧಿಯಲ್ಲಿ 167 ಕ್ಕೆ ಇಳಿದಿದೆ. ಮಿಲೆನಿಯಂ ಅಭಿವೃದ್ಧಿ ಗುರಿಗಳ ಪ್ರಕಾರ ತಾಯಂದಿರ ಮರಣ ಪ್ರಮಾಣವನ್ನು 5ಕ್ಕೆ ಇಳಿಸಬೇಕು.
- ಶಿಶು ಮರಣ ದರ :ಒಂದು ವರ್ಷದೊಳಗಿನ ಪ್ರತಿ 1 ಸಾವಿರ ಮಕ್ಕಳಲ್ಲಿ ಮರಣ ಹೊಂದುವ ಮಕ್ಕಳ ಸಂಖ್ಯೆಯೇ ಶಿಶು ಮರಣ ದರ. 2014 ರಲ್ಲಿ 39ರಷ್ಟಿದ್ದ ಈ ಪ್ರಮಾಣ 2015 ರಲ್ಲಿ 37ಕ್ಕೆ ಇಳಿದಿದೆ.
- ಒಟ್ಟು ಫಲವತ್ತತೆ ದರ : ದಂಪತಿಗೆ ಅವರ ಜೀವಿತಾವಧಿಯಲ್ಲಿ ಎಷ್ಟು ಮಕ್ಕಳಾಗುತ್ತವೆ ಎಂಬ ಸರಾಸರಿ ಪ್ರಮಾಣವೇ ಒಟ್ಟು ಫಲವತ್ತತೆ ದರ. 2010 ರಲ್ಲಿ 2.5 ರಷ್ಟಿದ್ದ ಪ್ರಮಾಣ 2015 2.3 ಕ್ಕೆ ಇಳಿದಿದೆ. 2017 ರ ಅಂತ್ಯಕ್ಕೆ 2.1ಕ್ಕೆ ಇಳಿಸುವ ಗುರಿ ಹೊಂದಲಾಗಿದೆ.
- ಮಲೇರಿಯಾ ಎಪಿಐ : ಮಲೇರಿಯಾ ಸೋಂಕು ಹರಡಿಸುವ ವಾರ್ಷಿಕ ದರ ಇದಾಗಿದೆ. 2011 ರಲ್ಲಿ 1.1 ರಷ್ಟಿದ್ದ ಈ ದರ 2016 ರಲ್ಲಿ 0.84 ಕ್ಕೆ ಇಳಿದಿದೆ. 2017ರ ಅಂತ್ಯಕ್ಕೆ ಮಲೇರಿಯಾ ಹರಡುವ ದರವನ್ನು 1ಕ್ಕಿಂತ ಕಡಿಮೆಗೆ (ಪ್ರತಿ 1 ಸಾವಿರ ಜನರಲ್ಲಿ ) ಇಳಿಸುವ ಗುರಿ ಹೊಂದಲಾಗಿದೆ.

.

**SOURCE-** http://www.thehindu.com/news/national/other-states/fdi-in-textile-industry-tripled-in-three-years-smriti-irani/article19733370.ece

**5. ವಸ್ತ್ರ- 2017**

**ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ ಮಾತ್ರ**

**ಪ್ರಮುಖ ಸುದ್ದಿ**

- VASTRA ದ 6 ನೇ ಆವೃತ್ತಿಯ ಅಂದರೆ "ವಸ್ತ್ರ - ಇಂಟರ್ನ್ಯಾಷನಲ್ ಟೆಕ್ಸ್ಟೈಲ್ ಮತ್ತು ಅಪಾರಲ್ ಫೇರ್ 2017" (VASTRA - 2017) ಇತ್ತೀಚೆಗೆ ಜೈಪುರದಲ್ಲಿ ಉದ್ಘಾಟಿಸಲಾಯಿತು.
- ರಾಜಸ್ಥಾನ ರಾಜ್ಯ ಕೈಗಾರಿಕಾ ಅಭಿವೃದ್ಧಿ ಮತ್ತು ಹೂಡಿಕೆ ನಿಗಮ ಲಿಮಿಟೆಡ್ (RIICO) ಆಯೋಜಿಸಿದ್ದು ಭಾರತೀಯ ಸಂಘದ ವಾಣಿಜ್ಯ ಮತ್ತು ಕೈಗಾರಿಕಾ ಸಂಘ (FICCI) ಸಂಘಟನೆ, ಸಹ-ಸಂಘಟಕನೆಯಾಗಿತ್ತು

**ವಸ್ತ್ರ, ಫೇರ್ ಬಗ್ಗೆ:**

- ವಸ್ತ್ರ- ವಸ್ತ್ರಗಳ ಮತ್ತು ಉಡುಪುಗಳ ಮೇಲೆ ವ್ಯಾಪಾರದ ನ್ಯಾಯೋಚಿತ ಸಮ್ಮೇಳನ, ಫೈಬರ್ನಿಂದ ಫ್ಯಾಶನ್, ಸೇವೆಗಳು ಮತ್ತು ತಂತ್ರಜ್ಞಾನದಿಂದ ಅತ್ಯುತ್ತಮವಾದ ಮತ್ತು ಇತ್ತೀಚಿನ ಬಟ್ಟೆಗಳ ಉತ್ಪನ್ನಗಳ ಸಮ್ಮಿಳನವನ್ನು ಒದಗಿಸುತ್ತದೆ.
- ಇದು ವ್ಯಾಪಾರ ಅವಕಾಶಗಳನ್ನು ರಚಿಸಲು ರಚಿಸಲಾದ, ಅಸ್ತಿತ್ವದಲ್ಲಿರುವ ವ್ಯಾಪಾರ ಸಂಬಂಧಗಳನ್ನು ಪುನಶ್ಚೇತನಗೊಳಿಸುವ ಮತ್ತು ಹೊಸ ವ್ಯವಹಾರ ಸಂಬಂಧಗಳನ್ನು ನಿವಾರಿಸುವ ಉದ್ದೇಶ ಹೊಂದಿದೆ.
- ಕಾರ್ಯತಂತ್ರದ ಮೈತ್ರಿಗಳು ಮತ್ತು ಪಾಲುದಾರಿಕೆಗಳನ್ನು ವಿಶ್ವಾದ್ಯಂತ ಪ್ರವೇಶಿಸಲು, ಹೊಸ ಉತ್ಪನ್ನಗಳನ್ನು ಪ್ರಾರಂಭಿಸಲು ಮತ್ತು ಭಾರತದಲ್ಲಿ ವ್ಯವಹಾರಗಳನ್ನು ಸ್ಥಾಪಿಸಲು ಹೊಸ ಸ್ಥಳಗಳನ್ನು ಪ್ರವೇಶಿಸಲು ಇದು ಅತ್ಯುತ್ತಮ ವೇದಿಕೆಯಾಗಿದೆ.
- ಇದು ತಂತ್ರಜ್ಞಾನವನ್ನು ಪ್ರಸಾರ ಮಾಡುವ ಮತ್ತು ತಂತ್ರಜ್ಞಾನ ಮತ್ತು ಇತ್ತೀಚಿನ ಪ್ರವೃತ್ತಿಗಳ ಪರಿಹಾರಕ್ಕಾಗಿ R & D ಲ್ಯಾಬ್ಗಳು ಮತ್ತು ತಜ್ಞರ ಜೊತೆ ಸಂವಹನ ನಡೆಸುವ ಸ್ಥಳವಾಗಿದೆ.
- VASTRA, 2012 ರಲ್ಲಿ ಪ್ರಾರಂಭವಾದಾಗಿನಿಂದ, ಜವಳಿ ಮತ್ತು ಉಡುಪುಗಳ ಮೇಲೆ ಅಂತರರಾಷ್ಟ್ರೀಯ ಪ್ರದರ್ಶನಗಳ ಕ್ಯಾಲೆಂಡರ್ನಲ್ಲಿ ಸ್ವತಃ ಒಂದು ಜಾಗವನ್ನು ಸೃಷ್ಟಿಸಿದೆ.

SOURCE-http://www.thehindu.com/news/national/a-boat-lab-to-study-brahmaputra/article19722816.ece

### 6. ಬ್ರಹ್ಮಪುತ್ರ ನದಿ ಅಧ್ಯಯನಕ್ಕೆ ಬೋಟ್ ಲ್ಯಾಬ್

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರ ವೇಗವಾಗಿ ಸವಕಳಿಯಾಗುತ್ತಿರುವ ವಿಶ್ವದ ಅತಿದೊಡ್ಡ ನದಿ ಅಸ್ಸಾಂನ ಮಜುಲಿ ದ್ವೀಪದಲ್ಲಿ ಸಂಶೋಧನೆ ಕೈಗೊಳ್ಳಲು ವಿಶೇಷವಾದ ಬಿ4 ಬೋಟ್ ಲ್ಯಾಬ್ ಕಾರ್ಯಾಚರಣೆಗೆ ನಿರ್ಧರಿಸಿದೆ. ಇದರ ಅನ್ವಯ ಬ್ರಹ್ಮಪುತ್ರ ಜೀವವೈವಿಧ್ಯ ಮತ್ತು ಜೀವಶಾಸ್ತ್ರ ನೌಕೆ (ಬಿ4)ಯ ಮೂಲಕ ಇಡೀ ಬ್ರಹ್ಮಪುತ್ರ ನದಿಯಲ್ಲಿ ಸಂಶೋಧನೆ ಕೈಗೊಳ್ಳಲು ನಿರ್ಧರಿಸಲಾಗಿದೆ.
- ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ನದಿ ಪರಿಸರದ ಮೇಲೆ ಅಣೆಕಟ್ಟುಗಳು ಹವಾಮಾನ ಬದಲಾವಣೆ, ಮಾನವ ಹಸ್ತಕ್ಷೇಪ, ಘಟನಾವಳಿಗಳ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸುವುದು. ಇದು ಹಲವು ಪರಿಸರ ಹಾಗೂ ಮಾನವಸಂಬಂಧಿ ಅಂಶಗಳ ಪರಿಣಾಮಗಳ ಮೇಲೆ ನಿಗಾ ಇಡುವ ನಿಟ್ಟಿನಲ್ಲಿ ಮತ್ತು ವ್ಯತಿರಿಕ್ತ ಪರಿಣಾಮವನ್ನು ತಡೆಯುವ ಮಾರ್ಗೋಪಾಯಗಳನ್ನು ಕೈಗೊಳ್ಳಲು ಇದು ಮಹತ್ವದ್ದಾಗಲಿದೆ.

ಮುಖ್ಯ ಪರೀಕ್ಷೆಗಾಗಿ

- ಈ ಯೋಜನೆಗಾಗಿ ಅಂತರಶಿಸ್ತೀಯ ಕಾರ್ಯಯೋಜನೆಯನ್ನು ಗುವಾಹತಿ ಐಐಟಿ ನೆರವಿನೊಂದಿಗೆ ಸಿದ್ಧಪಡಿಸಲಾಗಿದೆ. ಇದು ಇಡೀ ಯೋಜನೆಯ ನೊಡೆಲ್ ಏಜೆನ್ಸಿಯಾಗಿರುತ್ತದೆ. ಇದು ಇಡೀ ಈಶಾನ್ಯ ಭಾರತದ ಸಿಹಿನೀರಿನ ಸಂಪನ್ಮೂಲಗಳ ಬಗ್ಗೆ ಅಧ್ಯಯನ ನಡೆಸುವ ಗುರಿಯನ್ನೂ ಹೊಂದಿದೆ.
- ಈ ಸಮಗ್ರ ದೃಷ್ಟಿಕೋನದ ಯೋಜನೆಯಲ್ಲಿ ಮುಖ್ಯವಾಗಿ ಎಲ್ಲ ಲಭ್ಯ ಮಾಹಿತಿ ಅಂಕಿ ಅಂಶಗಳನ್ನು ಕ್ರೋಢೀಕರಿಸುವುದು, ವೈಜ್ಞಾಣಿಕವಾಗಿ ಅದನ್ನು ವಿಶ್ಲೇಷಿಸುವುದು ಹಾಗೂ ನೀತಿಯ ಮೇಲೆ ಪರಿಣಾಮ ಬೀರಬಹುದಾದದ ಅಂಶಗಳ ಬಗ್ಗೆ ತಿಳಿದುಕೊಳ್ಳುವುದು ಸೇರಿದೆ. ಈ ನೌಕೆ 2017ರ ಡಿಸೆಂಬರ್ ಒಳಗಾಗಿ ಕಾರ್ಯಾರಂಭ ಮಾಡಲಿದೆ. ಇದು ಪಸಿಘಾಟ್, ದಿಬ್ರೂಗಢ, ನೀಮತಿ, ತೇಜಪುರ ಮತ್ತು ಗುವಾಹತಿಯಲ್ಲಿ ಅಧ್ಯಯನ ನಡೆಸಲಿದೆ.

**ಬಿ4 ಲ್ಯಾಬ್**

- ಬ್ರಹ್ಮಪಿತ್ರ ಬಯೋಡೈವರ್ಸಿಟಿ ಅಂಡ್ ಬಯಾಲಜಿ ಬೋಟ್ (ಬಿ4) ಲ್ಯಾಬ್ ಎನ್ನುವುದು ನದಿಯಲ್ಲೇ ಅಭಿವೃದ್ಧಿಪಡಿಸುವ ಪ್ರಯೋಗಾಲಯವಾಗಿಗುತ್ತದೆ. ಇದು ಸುಸಜ್ಜಿತ ಪ್ರಯೋಗಾಲಯವಾಗಿದ್ದು, ಮಾದರಿಗಳನ್ನು ನಿರ್ವಹಿಸಲು ಕೋಲ್ಡ್ ಸ್ಟೋರೇಜ್ ವ್ಯವಸ್ಥೆ, ಹಲವು ಉಪ ನಾವೆಗಳನ್ನೂ ಒಳಗೊಂಡಿರುತ್ತವೆ.
- ಇದು ನದಿಯ ತೀರಾ ಇಕ್ಕಟ್ಟಾದ ಹಾಗೂ ಕಡಿಮೆ ನೀರು ಇರುವ ಪ್ರದೇಶಗಳಿಂದ ಮಾದರಿಗಳನ್ನು ಸಂಗ್ರಹಿಸಲು ನೆರವಾಗಲಿದೆ. ಎರಡು ಮಹಡಿಯ ಕಾಯಂ ಪ್ರಯೋಗಾಲಯ ಇದರಲ್ಲಿ ಕಾರ್ಯ ನಿರ್ವಹಿಸುತ್ತದೆ. ಒಂದು ಮಹಡಿ ವಿಜ್ಞಾನಿಗಳಿಗೆ ಮೀಸಲಾಗಿದ್ದು, ಇನ್ನೊಂದು ಮಹಡಿ ಪರಿಸರದ ಬಗ್ಗೆ ತಿಳಿದುಕೊಳ್ಳುವ ಸಾರ್ವಜನಿಕರಿಗೆ ಮುಕ್ತವಾಗಿರುತ್ತದೆ.

ಮಜುಲಿ ದ್ವೀಪ ದಬಗ್ಗೆ

- ಅಸ್ಸಾಂನ ಮಜುಲಿ ದ್ವೀಪ ಪ್ರದೇಶವನ್ನು ವಿಶ್ವದ ಅತಿದೊಡ್ಡ ನದಿ ದ್ವೀಪ ಪ್ರದೇಶವೆಂದು ಗಿನ್ನಿಸ್ ವಿಶ್ವದಾಖಲೆ ಅಧಿಕೃತವಾಗಿ ಘೋಷಿಸಿದೆ. ಮಜುಲಿ ದ್ವೀಪ ಪ್ರದೇಶ ಬ್ರಹ್ಮಪುತ್ರ ನದಿಯಲ್ಲಿದೆ. ಇದು ೮೮೦ ಚದರ ಕಿ.ಮೀ ವಿಸ್ತೀರ್ಣ ಹೊಂದಿದೆ. ಬ್ರೆಜಿಲ್ ನ ಅಮೆಜಾನ್ ನದಿಯಲ್ಲಿರುವ ಮರಜೊ (Marajo) ದ್ವೀಪ ಪ್ರದೇಶ ಇದುವರೆಗೂ ವಿಶ್ವದ ಅತಿದೊಡ್ಡ ದ್ವೀಪ ಪ್ರದೇಶ ಎನಿಸಿತ್ತು.
- ಮಜುಲಿ ದ್ವೀಪ ಪ್ರದೇಶ ಬ್ರಹ್ಮಪುತ್ರ ನದಿಯಿಂದ ಉಂಟಾಗಿರುವ ದ್ವೀಪ ಪ್ರದೇಶವಾಗಿದೆ. ಈ ದ್ವೀಪ ಪ್ರದೇಶವು ಉತ್ತರಕ್ಕೆ ಸುಬನಿಶ್ರಿ ನದಿ, ದಕ್ಷಿಣಕ್ಕೆ ಮೂಲ ಬ್ರಹ್ಮಪುತ್ರ ನದಿ ಮತ್ತು ಈಶಾನ್ಯಕ್ಕೆ ಬ್ರಹ್ಮಪುತ್ರ ನದಿಯ ಕವಲು ಭಾಗದ ಮೂಲಕ ಸುತ್ತುವರೆದಿದೆ.

- ಈ ದ್ವೀಪ ಪ್ರದೇಶದಲ್ಲಿ 144 ಹಳ್ಳಿಗಳಿದ್ದು, 1,60,000 ಜನಸಂಖ್ಯೆಯನ್ನು ಹೊಂದಿದೆ. ಪ್ರತಿ ಚದರ ಕಿ.ಮೀ ಗೆ 300 ಜನಸಾಂದ್ರತೆಯನ್ನು ಹೊಂದಿದೆ.
- ಮಜುಲಿಯಲ್ಲಿ ಹೆಚ್ಚಾಗಿ ಮಿಶಿಂಗ್ (Mishing) ಬುಡಕಟ್ಟು ಜನರು ವಾಸವಾಗಿದ್ದಾರೆ. ಇವರನ್ನು ಹೊರತುಪಡಿಸಿದರೆ ದಿಯೊರಿ (Deori) ಮತ್ತು ಸೊನೊವಾಲ್ ಕಚರಿಸ್ (Sonowal Kacharis) ಬುಡಕಟ್ಟು ಜನರು ಕಂಡುಬರುತ್ತಾರೆ. ಮಿಸಿಂಗ್, ಅಸ್ಸಾಮೀಸ್ ಮತ್ತು ದಿಯೊರಿ ಇಲ್ಲಿನ ಜನರ ಪ್ರಮುಖ ಭಾಷೆ.
- ಮಜುಲಿ ದ್ವೀಪ ಸಮೃದ್ಧವಾದ ಮತ್ತು ಭಿನ್ನವಾದ ಕೃಷಿ ಸಂಪ್ರದಾಯವನ್ನು ಹೊಂದಿದೆ. ಸುಮಾರು 100ಕ್ಕೂ ಹೆಚ್ಚು ಭತ್ತ ತಳಿಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ಅದರಲ್ಲೂ ರಸಗೊಬ್ಬರ ಮತ್ತು ಕೀಟನಾಶಕವನ್ನು ಬಳಸದೇ ಬೆಳೆಯುವುದು ವಿಶೇಷವೆನಿಸಿದೆ.
- 15ನೇ ಶತಮಾನದಲ್ಲಿ ಸಂತ-ಸುಧಾರಕ ಶ್ರೀಮಂತ ಶಂಕರ್ ಆರಂಭಿಸಿದ ನವ ವೈಷ್ಣವ ಸಂಸ್ಕೃತಿ ಆರಂಭದ ಕೇಂದ್ರ ಬಿಂದು ಮಜುಲಿ ಆಗಿದೆ.
- ಮಜುಲಿ ದ್ವೀಪ ಶ್ರೀಮಂತ ಪರಿಸರ ಸಂಪತ್ತನ್ನು ಹೊಂದಿದೆ. ಹಲವಾರು ವಿಶೇಷ, ಅಳಿವಿನಂಚಿನಲ್ಲಿರುವ ಪ್ರಬೇಧಗಳು ಸೇರಿದಂತೆ ವಲಸೆಹಕ್ಕಿಗಳಿಗೆ ಆಶ್ರಯವಾಗಿದೆ.
- ಕಳೆದ 30-40 ವರ್ಷಗಳಿಂದ ಬ್ರಹ್ಮಪುತ್ರ ನದಿಯಲ್ಲಿನ ಪ್ರವಾಹದಿಂದಾಗಿ ಶೇ1/3 ರಷ್ಟು ದ್ವೀಪ ಪ್ರದೇಶದ ಸವಕಳಿಗೆ ಮಜುಲಿ ತುತ್ತಾಗಿದೆ.
- ಇತ್ತೀಚೆಗಷ್ಟೆ ಅಸ್ಸಾಂ ಸರ್ಕಾರ ಮಜುಲಿಗೆ ಜಿಲ್ಲೆಯ ಸ್ಥಾನಮಾನವನ್ನು ನೀಡಲಾಗಿದೆ. ಆ ಮೂಲಕ ದೇಶದ ಮೊದಲ ನದಿ ದ್ವೀಪ ಜಿಲ್ಲೆ ಇದಾಗಿದೆ.ಮಜುಲಿಯನ್ನು ಯುನೆಸ್ಕೋ ತಾತ್ಕಲಿಕ ಪಟ್ಟಿಯಲ್ಲಿ ಸೇರ್ಪಡೆಗೊಂಡಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**23rd SEPTEMBER**

**1. SATH- ಕಾರ್ಯಕ್ರಮಕ್ಕೆ ಚಾಲನೆ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಮಾನವ ಬಂಡವಾಳದ ಪರಿವರ್ತನೆಗೆ ಅಸ್ಸಾಮ್ ಸರಕಾರ ಮತ್ತು ನೀತಿ ಆಯೋಗ ಜಂಟಿಯಾಗಿ ಸಾತ್ ಎಂಬ ಸಮರ್ಥನೀಯ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ .
- ಇದರ ಪ್ರಮುಖ ಉದ್ದೇಶ ವೆಂದರೆ ಇದು ಪ್ರಮುಖ ಆರೋಗ್ಯ ಆದ್ಯತೆಗಳನ್ನು ಗುರುತಿಸಲು ಮತ್ತು ಆರೋಗ್ಯ ವ್ಯವಸ್ಥೆ ಯಲ್ಲಿ ರೂಪಾಂತರಿಸಲು ಮತ್ತು ಅಸ್ಸಾಂ ಜನರ ಯೋಗಕ್ಷೇಮ ಸುಧಾರಿಸುವ ಪರಿಹಾರಗಳನ್ನು ಜಾರಿಗೆ ತರಲು ಮತ್ತು ರಚನಾತ್ಮಕ ಬೆಂಬಲವನ್ನು ಒದಗಿಸುವ ಮುಖ್ಯ ಉದ್ದೇಶ ಹೊಂದಿದೆ

ಮುಖ್ಯ ಪರೀಕ್ಷೆಗಾಗಿ

- ಸಾತ್ ಪ್ರೋಗ್ರಾಂ ಸಹಕಾರ ಫೆಡರಲಿಸಮ್ ನ ತತ್ತ್ವವನ್ನು ಒಳಗೊಂಡಿದೆ. ಇದಕ್ಕೆ 16 ರಾಜ್ಯಗಳು ಆಸಕ್ತಿಯನ್ನು ವ್ಯಕ್ತಪಡಿಸಿದ್ದು, ಇವುಗಳಲ್ಲಿ 14 ರಾಜ್ಯಗಳಾದ ಆಂಧ್ರಪ್ರದೇಶ, ಅಸ್ಸಾಂ, ಬಿಹಾರ, ಚಂಡೀಗಢ, ಗೋವಾ, ಗುಜರಾತ್, ಹರಿಯಾಣ, ಜಾರ್ಖಂಡ್, ಕರ್ನಾಟಕ, ಮಧ್ಯಪ್ರದೇಶ, ಒಡಿಶಾ, ಪಂಜಾಬ್, ತೆಲಂಗಾಣ ಮತ್ತು ಉತ್ತರ ಪ್ರದೇಶ ರಾಜ್ಯಗಳು ಯೋಜನೆಯನ್ನು ಪ್ರಸ್ತಾವಿಸಿವೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ಹದಿನಾಲ್ಕು ರಾಜ್ಯಗಳಿಂದ ನೀತಿ ಆಯೋಗ 5 ರಾಜ್ಯಗಳನ್ನು ಆಯ್ಕೆ ಮಾಡಲಿದೆ. ತರುವಾಯದ ತಪಾಸಣೆ ಮತ್ತು ಮೌಲ್ಯಮಾಪನಗಳ ನಂತರ, ಮೂರು ರಾಜ್ಯಗಳನ್ನು ಆಯ್ಕೆ ಮಾಡಿದೆ .

- ಸಂಭಾವ್ಯ ಪ್ರಭಾವವನ್ನು ನಿರ್ಧರಿಸಲು MMR, IMR, ನಿಯಮಾವಳಿಗಳಂತಹ ಮಾನದಂಡಗಳನ್ನು ಪರಿಗಣಿಸಲಾಗುತ್ತದೆ ಮತ್ತು ವೈದ್ಯರ ಸಾಂದ್ರತೆ ಮತ್ತು ದಾದಿಯರು, IPHS ಮಾನದಂಡಗಳ ಅನುಸರಣೆ ಮುಂತಾದ ಮಾಪನಗಳನ್ನು ಯಶಸ್ಸಿನ ಸಾಧ್ಯತೆಯನ್ನು ನಿರ್ಧರಿಸಲು ಬಳಸಲಾಗುತ್ತದೆ.

- ಈ ಮೂರು ಆಯ್ದ ರಾಜ್ಯಗಳದ ಅಸ್ಸಾಂ, ಉತ್ತರ ಪ್ರದೇಶ ಮತ್ತು ಕರ್ನಾಟಕ ಜೊತೆ ಒಪ್ಪಂದಕ್ಕೆ ಸಹಿ ಮಾಡಿದ ನಂತರ ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.

- ಮೂರು ಮಾದರಿ ರಾಜ್ಯಗಳನ್ನು ಆಯ್ಕೆ ಮಾಡಲು ನೀತಿ ಆಯೋಗ ಮೂರು ಹಂತದ ಪ್ರಕ್ರಿಯೆಯನ್ನು ಉಚ್ಚರಿಸಿದೆ, ಅವುಗಳೆಂದರೆ ಆಸಕ್ತಿಯ ಅಭಿವ್ಯಕ್ತಿ, ರಾಜ್ಯಗಳ ಪ್ರಸ್ತುತಿಗಳು ಮತ್ತು ಆರೋಗ್ಯ ಕ್ಷೇತ್ರ ಸುಧಾರಣೆಗೆ ಬದ್ಧತೆಯ ಮೌಲ್ಯಮಾಪನ.

- ಈ ಮೂರು ರಾಜ್ಯಗಳ ಸರ್ಕಾರಗಳೊಂದಿಗೆ ನಿಕಟ ಸಹಯೋಗದೊಂದಿಗೆ ಕೆಲಸ ಮಾಡಲಿದೆ. ಆ ಮೂಲಕ ದೃಢವಾದ ಮಾರ್ಗಸೂಚಿಯನ್ನು ವಿನ್ಯಾಸಗೊಳಿಸಲು, ಕಾರ್ಯಕ್ರಮದ ಆಡಳಿತ ರಚನೆಯನ್ನು ಅಭಿವೃದ್ಧಿಪಡಿಸುವುದು, ಮೇಲ್ವಿಚಾರಣೆ ಮತ್ತು ಟ್ರ್ಯಾಕಿಂಗ್ ಕಾರ್ಯವಿಧಾನಗಳನ್ನು ಸ್ಥಾಪಿಸುವುದು, ಮತ್ತು ಅಂತಿಮ ಉದ್ದೇಶಗಳನ್ನು ಸಾಧಿಸಲು ರಾಜ್ಯ ಸಂಸ್ಥೆಗಳಿಗೆ ಬೆಂಬಲವನ್ನು ನೀಡಲಿದೆ.

ನೀತಿ ಆಯೋಗದ ಬಗ್ಗೆ

- ನೀತಿ ಆಯೋಗವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿ ನಿಯಮಗಳನ್ನು ರೂಪಿಸಲು ಅಗತ್ಯವಾದ ಪ್ರಮುಖ ದಿಕ್ಸೂಚಿ ಮಾಹಿತಿಗಳನ್ನು ನೀಡುವ ಚಿಂತಕರ ಕೂಟವಾಗಿದೆ.
- ಭಾರತ ಸರ್ಕಾರವು ನೀತಿ ಆಯೋಗವನ್ನು ಚಿಂತಕರ ಚಾವಡಿಯಾಗಿ ರೂಪಿಸಿದ್ದು, ಇದು ನೀತಿಗಳನ್ನು ಹೇರುವ ಅಧಿಕಾರ ಹೊಂದಿಲ್ಲ. ನೀತಿ ಆಯೋಗವನ್ನು ರಚಿಸುವ ಮೂಲಕ, ಇದನ್ನು ಸಹಕಾರ ಮತ್ತು ಸ್ಪರ್ಧಾತ್ಮಕ ಒಕ್ಕೂಟ ವ್ಯವಸ್ಥೆಯ ನಿರ್ಮಾಣ ವೇದಿಕೆಯಾಗಿ ರೂಪಿಸುವ ಗುರಿ ಹೊಂದಿದೆ.

## 2. ಅಂತರರಾಷ್ಟ್ರೀಯ ರಸ್ತೆ ಒಕ್ಕೂಟ ಜತೆ ನೀತಿ ಆಯೋಗ ಒಪ್ಪಂದ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

## ಪ್ರಮುಖ ಸುದ್ದಿ

- ಇಂಟೆಲಿಜೆಂಟ್ ಸಂಚಾರಿ ವ್ಯವಸ್ಥೆ ಕ್ಷೇತ್ರದಲ್ಲಿ ಪರಸ್ಪರ ಸಹಕರಿಸಿಕೊಳ್ಳುವ ಸಂಬಂಧ ನ್ಯಾಷನಲ್ ಇನ್‌ಸ್ಟಿಟ್ಯೂಷನ್ ಫಾರ್ ಟ್ರಾನ್ಸ್‌ಮಿಟಿಂಗ್ ಇಂಡಿಯಾ (ನೀತಿ ಆಯೋಗ )ಮತ್ತು ಜಿನೀವಾ ಮೂಲಕ ಅಂತರರಾಷ್ಟ್ರೀಯ ರಸ್ತೆ ಒಕ್ಕೂಟ (ಐಆರ್‌ಎಫ್) ಒಪ್ಪಂದ ಮಾಡಿಕೊಂಡಿವೆ.
- ಇದರ ಮುಖ್ಯ ಉದ್ದೇಶವೆಂದರೆ, ರಾಷ್ಟ್ರೀಯ ಐಟಿಎಸ್ ನೀತಿಯನ್ನು ಅಭಿವೃದ್ಧಿಪಡಿಸುವ ಸಂಬಂಧ ಎಲ್ಲ ತಾಂತ್ರಿಕ ತಜ್ಞರು ಒಂದೆಡೆ ಸೇರಲು ಅಗತ್ಯ ರಾಷ್ಟ್ರೀಯ ವೇದಿಕೆಯನ್ನು ಸೃಷ್ಟಿಸುವುದು.
- ಇದರಲ್ಲಿ ಕೇಂದ್ರ ಸರ್ಕಾರದ ಎಲ್ಲ ಪ್ರಮುಖ ಹಕ್ಕುದಾರರು ಹಾಗೂ ಈ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಭಾರತೀಯ ಹಾಗೂ ವಿದೇಶಿ ಕಂಪನಿಗಳು ಸೇರಲಿವೆ. ಈ ರಾಷ್ಟ್ರೀಯ ವೇದಿಕೆಯು ಸೂಕ್ತ ಹಾಗೂ ಸಮಗ್ರ ಐಟಿಎಸ್ ನೀತಿಯನ್ನು ಅಭಿವೃದ್ಧಿಪಡಿಸಲಿದೆ.

## ಮುಖ್ಯ ಪರೀಕ್ಷೆಗಾಗಿ

- ರಾಷ್ಟ್ರೀಯ ಇಂಟೆಲಿಜಿಎಂಟ್ ಟ್ರಾಫಿಕ್ ಸಿಸ್ಟಂ (ಐಟಿಎಸ್)ನಲ್ಲಿ ಮುಖ್ಯವಾಗಿ ಸಂಚಾರ ನಿರ್ವಹಣೆ, ವಾಹನ ನಿಲುಗಡೆ ನಿರ್ವಹಣೆ, ಸಂಚಾರ ನಿಯಮಗಳು ಮತ್ತು ನಿಬಂಧನೆಗಳ ಎಲೆಕ್ಟ್ರಾನಿಕ್ಸ್ ಅನುಷ್ಠಾನ, ಸರಕು ಸಾಗಾಣಿಕೆ ನಿರ್ವಹನೆ ಮತ್ತು ಮೇಲುಸ್ತುವಾರಿ, ಐಟಿಎಸ್ ಕ್ಷೇತ್ರದಲ್ಲಿ ಅನುಶೋಧನೆ ಮತ್ತು ಐಟಿಎಸ್ ಕ್ಷೇತ್ರದ ಶಿಕ್ಷಣ ಮತ್ತಿತರ ಅಂಶಗಳು ಸೇರುತ್ತವೆ.
- ಇದರ ಮುಖ್ಯ ಗುರಿ ಎಂದರೆ ನಗರ ಮಟ್ಟದ ವಾಹನಗಳ ದಟ್ಟಣೆಯನ್ನು ಕಡಿಮೆ ಮಾಡಲು ಸಹಕರಿಸುವುದು. ನಗರಗಳಲ್ಲಿ ವಾಹನಗಳ ನಿಲುಗಡೆಯ ಸ್ಥಿತಿಗತಿಯನ್ನು ಉತ್ತಮಪಡಿಸುವುದು, ರಸ್ತೆ ಸುರಕ್ಷತೆಯನ್ನು ಮತ್ತಷ್ಟು ಬಲಪಡಿಸುವುದು, ವಾಹನಗಳಲ್ಲಿ ಪ್ರಯಾಣಿಕರ ಭದ್ರತೆ ಮತ್ತು ಸರಕು ಸಾಗಾಣಿಕೆ ವಲಯದ ಭದ್ರತೆಯನ್ನು ಕಾಪಾಡುವುದು.
- ಅಂತರರಾಷ್ಟ್ರೀಯ ರಸ್ತೆ ಒಕ್ಕೂಟ (ಐಆರ್‌ಎಫ್) ಎನ್ನುವುದು ಜಾಗತಿಕ ಮಟ್ಟದ ಸರ್ಕಾರೇತರ, ಲಾಭರಹಿತ ಸಂಸ್ಥೆಯಾಗಿದ್ದು, ಉತ್ತಮ, ಸುರಕ್ಷಿತ ಮತ್ತು ಸುಸ್ಥಿರ ರಸ್ತೆ ಮತ್ತು ರಸ್ತೆ ಜಾಲವನ್ನು ನಿರ್ವಹಿಸುವ ಮತ್ತು ಅಭಿವೃದ್ಧಿಪಡಿಸುವುದನ್ನು ಉತ್ತೇಜಿಸುವ ಸಂಸ್ಥೆಯಾಗಿದೆ.
- ಇದು 1948ರಲ್ಲಿ ಆರಂಭವಾಗಿದ್ದು, ಇದರ ಮುಖ್ಯ ಉದ್ದೇಶವೆಂದರೆ ಉತ್ತಮ ರಸ್ತೆಗಳು, ಉತ್ತಮ ವಿಶ್ವ. ಇದರ ಕೇಂದ್ರ ಕಚೇರಿ ಅಮೆರಿಕ ವಾಷಿಂಗ್ಟನ್ ಡಿ.ಸಿಯಲ್ಲಿದೆ.

- ಐಆರ್‌ಎಫ್ ಜಾಗತಿಕ ಮಟ್ಟದಲ್ಲಿ ಪರಿಸರಾತ್ಮಕವಾಗಿ ಉತ್ತಮ ರಸ್ತೆ ಸಾಋಇಗೆ ಮೂಲಸೌಕರ್ಯವನ್ನು ಸಮಾಜದ ಎಲ್ಲ ಹಂತಗಳಲ್ಲಿ ಅಭಿವೃದ್ಧಿಪಡಿಸುವ ಮೂಲಕ ಸಮಾಜಕ್ಕೆ ಆರ್ಥಿಕ ಹಾಗೂ ಸಾಮಾಜಿಕವಾಗಿ ಲಾಭದಾಯಕ ಕ್ರಮಗಳನ್ನು ಇದು ಕೈಗೊಳ್ಳುವ ನಿಟ್ಟಿನಲ್ಲಿ ಶ್ರಮಿಸುತ್ತದೆ.
- ರಾಷ್ಟ್ರೀಯ ರಸ್ತೆ ಹೂಡಿಕೆಯಿಂದ ಗರಿಷ್ಠ ಸಾಮಾಜಿಕ ಮತ್ತು ಆರ್ಥಿಕ ಪ್ರತಿಫಲ ದೊಕುವಂತೆ ಮಾಡುವ ನಿಟಿಟನಲ್ಲಿ ಸೂಕ್ತ ತಂತ್ರಜ್ಞಾನ ಪರಿಹಾರಗಳನ್ನು ಒದಗಿಸುವ ನಿಟ್ಟಿನಲ್ಲೂ ಇದು ಕಾರ್ಯ ನಿರ್ವಹಿಸಲಿದೆ.
- ಸರ್ಕಾರಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ರಸ್ತೆ ಅಭಿವೃದ್ಧಿ ತಂತ್ರಗಾರಿಕೆಯ ಯೋಜನೆ ಮತ್ತು ನೀತಿಯನ್ನು ರೂಪಿಸುವಲ್ಲಿ ಸೂಕ್ತ ಪರಿಣತಿಯನ್ನು ಒದಗಿಸುವ ಜತೆಗೆ ರಸ್ತೆ ಅಭಿವೃದ್ಧಿ ನೀತಿಯ ಎಲ್ಲ ಆಯಾಮಗಳಲ್ಲಿ ನೆರವು ನೀಡುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ದಿಲ್ಲಿಯಿಂದ..... ಮಸ್ಸೂರಿಗೆ/ಮೈಸೂರಿಗೆ

## 3. ದೀನ್ ದಯಾಳ್ ಹಸ್ತಕಲಾ ಸಂಕುಲ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಇತ್ತೀಚೆಗೆ ವಾರಣಾಸಿಯಲ್ಲಿ ದೀನ್ ದಯಾಳ್ ಹಸ್ತಕಾಲಾ ಸಂಕುಲ್ - ಕರಕುಶಲ ವಸ್ತುಗಳ ಮಾರಾಟಕ್ಕೆ ಅವಕಾಶ ನೀಡುವ ಕೇಂದ್ರವನ್ನು ಉದ್ಘಾಟಿಸಲಾಯಿತು.
- ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕೈಮಗ್ಗ / ಹಸ್ತಕೃತಿಗಳನ್ನು ಉತ್ತೇಜಿಸುವಲ್ಲಿ ನೇಕಾರರು / ಕುಶಲಕರ್ಮಿಗಳು / ರಫ್ತುದಾರರನ್ನು ಸಂಕುಲ ಸುಲಭಗೊಳಿಸುತ್ತದೆ.

- ಸಂಕುಲ್ ನ ಕರಕುಶಲ ಮ್ಯೂಸಿಯಂ ವಾರಣಾಸಿಯ ಸಾಂಪ್ರದಾಯಿಕ ಕೈಮಗ್ಗ/ ಕರಕುಶಲ ಉತ್ಪನ್ನಗಳನ್ನು ಸಂರಕ್ಷಿಸುತ್ತದೆ ಮತ್ತು ಹೊಸ ಪೀಳಿಗೆಗೆ ಮತ್ತು ವಿದ್ವಾಂಸರಿಗೆ, ವಿನ್ಯಾಸಕರಿಗೆ ಮತ್ತು ಪ್ರವಾಸಿಗರಿಗೆ ಸ್ಫೂರ್ತಿಯಾಗಿರುವ ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳನ್ನು ಪ್ರದರ್ಶಿಸುತ್ತದೆ.

ಮುಖ್ಯ ಪರೀಕ್ಷೆಗಾಗಿ

- 2014-15ರ ಬಜೆಟ್ನಲ್ಲಿ ಹಣಕಾಸು ಮಂತ್ರಿಯವರು ವಾರಣಾಸಿಯಲ್ಲಿ ಕೈಚೀಲಗಳನ್ನು , ಕರಕುಶಲ ಮತ್ತು ರೇಷ್ಮೆ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮತ್ತು ಉತ್ತೇಜಿಸಲು ವ್ಯಾಪಾರ ಸೌಕರ್ಯ ಕೇಂದ್ರ ಮತ್ತು ಕರಕುಶಲ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಘೋಷಿಸಿದ್ದರು.
- ನೇಕಾರರು, ಕುಶಲಕರ್ಮಿಗಳು ಮತ್ತು ವಾರಣಾಸಿಯ ಉದ್ಯಮಿಗಳಿಗೆ ತಮ್ಮ ಸಹಾಯವನ್ನು ಬಲಪಡಿಸಲು ದೇಶೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರುಕಟ್ಟೆ ಚಟುವಟಿಕೆಗಳಲ್ಲಿ ಸಹಾಯ ಮಾಡಲು ಮತ್ತು ವಾರಣಾಸಿಯಲ್ಲಿ ಕೈಮಗ್ಗಗಳ ಸಮೃದ್ಧ ಸಂಪ್ರದಾಯವನ್ನು ಮುಂದುವರಿಸುವರಿಸಲು ಈ ಕಾರ್ಯಕ್ರಮವನ್ನು ಘೋಷಿಸಿದ್ದರು . .

ಈ ಕ್ರಮದ ಪ್ರಯೋಜನಗಳು:

- ಪ್ರಾಚೀನ ವಾರಣಾಸಿಯ ಶ್ರೀಮಂತ ಸಾಂಪ್ರದಾಯಿಕ ಕರಕುಶಲತೆಯನ್ನು ಉತ್ತೇಜಿಸುತ್ತದೆ.
- ಭಾರತೀಯ ಕೈಮಗ್ಗ ಮತ್ತು ಕರಕುಶಲ ವಸ್ತುಗಳನ್ನು ಪ್ರದರ್ಶಿಸಲು ವೇದಿಕೆ ಮತ್ತು ಪರಿಸರವನ್ನು ಸಕ್ರಿಯಗೊಳಿಸುತ್ತದೆ.
- ದೇಶೀಯ ಮತ್ತು ವಿದೇಶಿ ಖರೀದಿದಾರರಿಗೆ ಪೂರೈಕೆ ಸರಣಿ ಸಂಪರ್ಕಗಳನ್ನು ಒದಗಿಸುತ್ತದೆ.
- ದೇಶೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುತ್ತದೆ.
- ವಾರಣಾಸಿ ಮತ್ತು ದೇಶದ ಪೂರ್ವ ಭಾಗಗಳ ವ್ಯಾಪಾರ ಮತ್ತು ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುತ್ತದೆ.

## 4. ವಿಶ್ವದ ಮೊಟ್ಟಮೊದಲ ಕಣ ರೊಬೋಟ್ ಅಭಿವೃದ್ಧಿ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

## ಪ್ರಮುಖ ಸುದ್ದಿ

- ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ವಿಶ್ವದ ಮೊಟ್ಟಮೊದಲ ಕಣ ರೊಬೋಟ್ ಅಭಿವೃದ್ಧಿಪಡಿಸಿದ್ದಾರೆ. ಇದು ಒಂದು ಮಿಲಿಮೀಟರ್‌ನ ಹತ್ತುಲಕ್ಷನೇ ಒಂದು ಪಾಲಿನಷ್ಟು ಸೂಕ್ಷ್ಮ ಗಾತ್ರದ್ದಾಗಿದೆ.
- ಇದನ್ನು ಕಣಗಳನ್ನು ಕಟ್ಟಲು ಬಳಸಬಹುದಾಗಿದ್ದು, ವಿನೂತನ ಔಷಧಗಳ ಸಂಶೋಧನೆಗೆ ಇದು ಸಹಕಾರಿಯಾಗುವ ನಿರೀಕ್ಷೆ ಇದೆ.

## ಮುಖ್ಯ ಪರೀಕ್ಷೆಗಾಗಿ

- ಕಣ ರೊಬೋಟ್, ಒಂದು ಮಿಲಿಮೀಟರ್‌ನ ಹತ್ತುಲಕ್ಷನೇ ಒಂದು ಪಾಲಿನಷ್ಟು ಸೂಕ್ಷ್ಮ ಗಾತ್ರದ್ದಾಗಿದೆ. ಕಣಗಳ ಸಂರಚನೆಗೆ ಅಗತ್ಯವಾದ 150 ಇಂಗಾಲ, ಜಲಜನಕ, ಆಮ್ಲಜನಕ ಹಾಗೂ ಸಾರಜನಕ ಕಣಗಳಿಂದ ಇದನ್ನು ಅಭಿವೃದ್ಧಿಪಡಿಸಲಾಗಿದೆ.
- ಪುಟ್ಟ ರೊಬೋಟಿಕ್ ಆರ್ಮ್ ಬಳಿಸಿಕೊಂಡು ಇದು ಯಾವುದೇ ಕಣಗಳ ಸಮೂಹವನ್ನು ಜೋಡಿಸುವಲ್ಲಿ ಸಹಕಾರಿಯಾಗಲಿದೆ.

- ರಾಸಾಯನಿಕ ಕ್ರಿಯೆಗಳನ್ನು ವಿಶೇಷ ಸೊಲ್ಯೂಶನ್ಸ್‌ಗಳಲ್ಲಿ ನಿರ್ವಹಿಸುವ ಮೂಲಕ ಈ ರೊಬೋಟ್ ಕಾರ್ಯ ನಿರ್ವಹಿಸುತ್ತದೆ. ಮೂಲಭೂತ ಕಾರ್ಯಗಳನ್ನು ನಿರ್ವಹಿಸುವ ಅಗತ್ಯಕ್ಕೆ ತಕ್ಕಂತೆ ವಿಜ್ಞಾಣಿಗಳು ಇದನ್ನು ನಿಯಂತ್ರಿಸಲು ಮತ್ತು ಪ್ರೋಗ್ರಾಂ ಮಾಡಲು ಅವಕಾಶ ಇರುತ್ತದೆ.

- ಇದು ಹಲವರು ಸರಳ ಸರಣಿ ಕಮಾಂಡ್‌ಗಳನ್ನು ಹೊಂದಿದ್ದು, ರಾಸಾಯನಿಕ ಸಾಧನಗಳ ಪ್ರೋಗ್ರಾಮಿಂಗ್ ಮಾಡಿಕೊಂಡು ಇದನ್ನು ಅಭಿವೃದ್ಧಿಪಡಿಸಲಾಗಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಪ್ರತಿ ರೊಬೋಟ್ ಕೂಡಾ ಪ್ರತಿಯೊಂದು ಕಣವನ್ನು ಅಗತ್ಯಕ್ಕೆ ತಕ್ಕಂತೆ ಪರಿವರ್ತಿಸುವ ಸಾಮರ್ಥ್ಯ ಹೊಂದಿದೆ. ಗಾತ್ರದ ಅನವಯ ಹೇಳುವುದಾದರೆ ಇಂಥ ಒಂದು ಕೋಟಿ ಕಣ ರೊಬೋಟ್‌ಗಳನ್ನು ಸೇರಿಸಿದರೆ, ಉಪ್ಪಿನ ಒಂದು ಕಾಳಿನಷ್ಟು ಗಾತ್ರದ್ದಾಗುತ್ತದೆ.

- ಈ ಕಣ ರೊಬೋಟ್ ಅತ್ಯಂತ ಸೂಕ್ಷ್ಮ ಗಾತ್ರದ್ದಾಗಿದ್ದು, ಉತ್ಪಾದನಾ ವಸ್ತುಗಳ ಬೇಡಿಕೆಯನ್ನು ಕಡಿಮೆ ಮಾಡುವಲ್ಲಿ ಮಹತ್ವದ್ದಾಗಲಿದೆ. ಜತೆಗೆ ವಿದ್ಯುತ್ ಅಗತ್ಯತೆಯನ್ನು ಕೂಡಾ ಗಣನೀಯವಾಗಿ ಕಡಿಮೆ ಮಾಡುತ್ತದೆ. ಇದು ಔಷಧ ಸಂಶೋಧನೆಯನ್ನು ಸುಧಾರಿಸುವಲ್ಲಿ ಮತ್ತು ಅದಕ್ಕೆ ವೇಗ ನೀಡುವಲ್ಲೂ ಮಹತ್ವದ್ದಾಗಲಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**5. INS ಕಲವರಿ ಭಾರತೀಯ ನೌಕಾಪಡೆಗೆ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಭಾರತದ ಮೊಟ್ಟಮೊದಲ ದೇಶೀಯವಾಗಿ ಅಭಿವೃದ್ಧಿಪಡಿಸಿದ ಐಎನ್‌ಎಸ್ ಕಲವರಿ ಸಬ್‌ಮೆರಿನ್ ಅನ್ನು ಭಾರತಿಯ ನೌಕಾಪಡೆಗೆ ಹಸ್ತಾಂತರಿಸಲಾಗಿದೆ. ಇದನ್ನು ಅಭಿವೃದ್ಧಿಪಡಿಸಿದ ಸರ್ಕಾರಿ ಸ್ವಾಮ್ಯದ ಮಡಗಾಂ ಡಾಕ್ ಲಿಮಿಟೆಡ್ ಸಂಸ್ಥೆ ನೂತನ ಸಬ್‌ಮೆರಿನ್ ಹಸ್ತಾಂತರಿಸಿದೆ. ಮಹಾರಾಷ್ಟ್ರದ ಮುಂಬೈನಲ್ಲಿ ಇದನ್ನು ಸಿದ್ಧಪಡಿಸಲಾಗಿತ್ತು.
- ಇದು ಎರಡು ದಶಕಗಳಲ್ಲಿ ಭಾರತೀಯ ನೌಕಾಪಡೆ ಹೊಂದುತ್ತಿರುವ ಮೊಟ್ಟಮೊದಲ ಸಾಂಪ್ರದಾಯಿಕ ಸಬ್‌ಮೆರಿನ್ ಆಗಿದೆ. ಇದನ್ನು ದೇಶದ ಸೇವೆಗೆ ಸಮರ್ಪಿಸಿರುವುದು ಅತಿದೊಡ್ಡ ಸಾಧನೆಯಾಗಿದೆ. ಮುಖ್ಯವಾಗಿ ಚೀನಾ ಹಾಗೂ ಪಾಕಿಸ್ತಾನವನ್ನು ದೃಷ್ಟಿಯಲ್ಲಿಟ್ಟುಕೊಂಡು,

ಜಲಾಂತರ್ಗಾಮಿ ಹೋರಾಟಕ್ಕೆ ಭಾರತದ ನೌಕಾಪಡೆಯನ್ನು ಸಜ್ಜುಗೊಳಿಸುವಲ್ಲಿ ಇದು ನೆರವಾಗಲಿದೆ.

## ಮುಖ್ಯ ಪರೀಕ್ಷೆಗಾಗಿ

- ಪ್ರಾಜೆಕ್ಟ್-75 ಯೋಜನೆಯಡಿ ಮಡಗಾಂ ಡೆಕ್ಸ್ ಲಿಮಿಟೆಡ್ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಆರು ಐಎನ್ಎಸ್ ಸ್ಕಾರ್ಪಿನ್ ಕ್ಲಾಸ್ ಸಬ್‌ಮೆರಿನ್ ಪೈಕಿ ಐಎನ್ಎಸ್ ಕರವರಿ ಮೊದಲನೆಯದ್ದಾಗಿದೆ.
- ಫ್ರಾನ್ಸ್‌ನ ಡಿಸಿಎನ್ಎಸ್ (ಡೈರೆಕ್ಷನ್ ಡೆಸ್ ಕನ್‌ಸ್ಟ್ರಕ್ಷನ್ಸ್ ನೇವಲ್ಸ್ ಸರ್ವೀಸಸ್) ಶಿಪ್‌ಬಿಲ್ಡರ್ ಇದಕ್ಕೆ ತಂತ್ರಜ್ಞಾನ ವರ್ಗಾಯಿಸಿದೆ.
- ಇದು ಡೀಸೆಲ್- ಎಲೆಕ್ಟ್ರಿಕ್ ದಾಳಿ ಸಬ್‌ಮೆರಿನ್ ಆಗಿದ್ದು, ಇದಕ್ಕೆ ಟೈಗರ್ ಶಾರ್ಕ್ ಹೆಸರು ಇಡಲಾಗಿದೆ.
- ಇದು ರಹಸ್ಯ ಸಬ್‌ಮೆರಿನ್ ಆಗಿದ್ದು, ವಿರೋಧಿ ಪಡೆಗಳು ಇದನ್ನು ಪತ್ತೆ ಮಾಡುವುದು ಕಷ್ಟಸಾಧ್ಯ. ಬಿರುಗಾಳಿ ಸೇರಿದಂತೆ ಯಾವುದೇ ಹವಾಮಾನ ಪರಿಸ್ಥಿತಿಯಲ್ಲೂ ಇದು ಕಾರ್ಯಾಚರಣೆ ಮಾಡಲು ಸಮರ್ಥವಾಗಿರುತ್ತದೆ. ಇದು 1550 ಟನ್ ತೂಕವಿದ್ದು, ಆರು 533 ಮಿಲಿಮೀಟರ್ ಟಾರ್ಪೆಡೊ ಟ್ಯೂಬ್‌ಗಳನ್ನು ಹೊಂದಿದ್ದು, ಇದು ಹಡಗು ನಿರೋಧಕ ಟಾರ್ಪೆಡೊ, ಕ್ಷಿಪಣಿ ಮತ್ತು ಸ್ಫೋಟಕ ಉಡಾಯಿಸಲು ಸಹಕರಿಸುತ್ತದೆ.
- ಇದು ಬಹುಮುಖಿ ಯುದ್ಧ, ಸಬ್‌ಮೆರಿನ್ ನಿಗ್ರಹ ಯುದ್ಧ, ರಹಸ್ಯ ಮಾಹಿತಿ ಕಲೆ ಹಾಕುವುದು, ಸಾಗರ ಸ್ಫೋಟ, ಭಾರತೀಯ ಜಲಪ್ರದೇಶದ ಕಣ್ಗಾವಲು ಸೇರಿದಂತೆ ಹಲವು ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಇದು ವಿರೋಧಿಗಳ ಮೇಲೆ ನಿಖರವಾಗಿ ನಿರ್ದೇಶಿಸಲ್ಪಟ್ಟ ಶಸ್ತ್ರಾಸ್ತ್ರ ಮತ್ತು ದಾಳಿಯನ್ನು ನಿರ್ವಹಿಸಲು ಸಮರ್ಥವಾಗಿದೆ.

## ಹಿನ್ನೆಲೆ

- ಫ್ರಾನ್ಸ್‌ನ ಡಿಸಿಎನ್‌ಎಸ್‌ಗೆ 416 ಕೋಟಿ ಡಾಲರ್ ಮೊತ್ತದಲ್ಲಿ ಆರು ಹೊಸ ಪೀಳಿಗೆಯ ಸ್ಕಾರ್ಪಿನ್ ಕ್ಲಾಸ್ ಸಬ್‌ಮೆರಿನ್‌ಗಳನ್ನು ಮಡಗಾಂ ಡಕ್ ಲಿಮಿಟೆಡ್ ಸಹಯೋಗದಲ್ಲಿ ಪೂರೈಸಲು ಪ್ರಾಜೆಕ್ಟ್-75 ಅಡಿಯಲ್ಲಿ 2005ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಎಲ್ಲ ಸಬ್‌ಮೆರಿಗ್‌ಗಳಿಗೆ ದೇಶೀಯವಾಗಿ ಅಭಿವೃದ್ಧಿಪಡಿಸಿದ ವಾಯು ಸ್ವತಂತ್ರ ಪ್ರೊಪಲ್ಷನ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.
- ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಇದನ್ನು ಅಭಿವೃದ್ಧಿಪಡಿಸಿದೆ. ಈ ವ್ಯವಸ್ಥೆಯಡಿ, ಸಾಂಪ್ರದಾಯಿಕ ಸಬ್‌ಮೆರಿನ್‌ಗಳು ನೀರಿನ ಕೆಳಭಾಗದಲ್ಲಿ ಸುಧೀರ್ಘಕಾಲದ ವರೆಗೆ ಉಳಿಯುವ ಸಾಮರ್ಥ್ಯ ಹೊಂದಿವೆ. ಜತೆಗೆ ಇದರ ಬೇಹುಗಾರಿಕೆ ಹಾಗೂ ದಾಳಿ ಸಾಮರ್ಥ್ಯಗಳನ್ನು ಕೂಡಾ ಹೆಚ್ಚಿಸಿಕೊಳ್ಳಲಿದೆ.
- ಈ ಸರಣಿಯ ಎರಡನೇ ಸಬ್‌ಮೆರಿನ್ ಐಎನ್‌ಎಸ್ ಖಂಡೇರಿಗೆ 2017ರ ಜನವರಿಯಲ್ಲಿ ಚಾಲನೆ ನೀಡಲಾಗಿತ್ತು. 2016ರ ಆಗಸ್ಟ್‌ನಲ್ಲಿ ಇದರ ತಾಂತ್ರಿಕ ರಹಸ್ಯ ಮಾಹಿತಿ ಬಹಿರಂಗವಾಗಿ ದೊಡ್ಡ ವಿವಾದ ಉದ್ಭವಿಸಿತ್ತು.

- ಸ್ಕಾರ್ಪಿನ್ ಮಾಹಿತಿ ಸೋರಿಕೆ ಪ್ರಕರಣದಲ್ಲಿ ಇದರ ಬೇಹುಗಾರಿಕೆ ಸಾಮರ್ಥ್ಯವನ್ನು ವಿವರಿಸುವ 22400 ದಾಖಲೆಗಳು ಸೋರಿಕೆಯಾಗಿದ್ದವು. ಇದು ಎಷ್ಟು ಆಳದವರೆಗೆ ಜಿಗಿಯಬಲ್ಲದು, ಟಾರ್ಪೆಡೊ ಉಡಾವಣಾ ವ್ಯವಸ್ಥೆ ಮತ್ತಿರರ ವಿವರಗಳು ಸೋರಿಕೆಯಾಗಿದ್ದವು. ಇದರ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಂತೆ ಮಾಹಿತಿಗಳು ಡಿಸಿಎನ್‌ಎಸ್‌ನ ಫ್ರಾನ್ಸ್ ಕಚೇರಿಯಿಂದ ಸೋರಿಕೆಯಾಗಿದ್ದವು.

## 6. ಮುಂಬೈ ಹೈನಲ್ಲಿ ನೂತನ ತೈಲ ನಿಕ್ಷೇಪ ಪತ್ತೆ

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಸರ್ಕಾರೀ ಸ್ವಾಮ್ಯದ ONGC , ಅರಬ್ಬೀ ಸಮುದ್ರದ ಮುಂಬೈ ಹೈ ಸಮೀಪದಲ್ಲಿ ತೈಲ ನಿಕ್ಷೇಪವನ್ನು ಪತ್ತೆ ಮಾಡಿದೆ. ಡಬ್ಲ್ಯೂ-೨೪-೩ ಎನ್ನುವ ಒರತೆಯಲ್ಲಿ ೨ ಕೋಟಿ ಟನ್ ತೈಲ ಸಂಗ್ರಹವಾಗಿದೆ ಎಂದು ಅಂದಾಜಿಸಿದೆ.
- ಮುಂಬೈ ಹೈನಲ್ಲಿ ONGC ಕಳೆದ ೫೦ ವರ್ಷಗಳಿಂದಲೂ ತೈಲ ಉತ್ಪಾದನೆ ಮಾಡುತ್ತಿದ್ದು, ಇದೆ ಮೊದಲ ಬಾರಿಗೆ ಹೊಸ ತೈಲಮೂಲದ ಆವಿಷ್ಕಾರ ಮಾಡಿದೆ.
- ಮುಂಬೈ ಹೈ ಭಾರತದ ಅತಿದೊಡ್ಡ ಹಾಗೂ ಅತಿ ಹಳೆಯ ತೈಲ ನಿಕ್ಷೇಪವಾಗಿದ್ದು, ೧೬೫೯ ಮಿಲಿಯನ್ ಮೆಟ್ರಿಕ್ ಟನ್ ತೈಲ ಹೊಂದಿದ್ದು, ವಾರ್ಷಿಕ ೧೨ ಮಿಲಿಯನ್ ಮೆ೩೫ಟ್ರಿಕ್ ಟನ್ ತೈಲೋತ್ಪಾದನೆ ಮಾಡುತ್ತಿದೆ.
- ಇದೊಂದೇ ಪ್ರದೇಶ ೨೦೦೪ರಲ್ಲಿ ಭಾರತದ ಶೇ.೧೪ರಷ್ಟು ತೈಲ ಅಗತ್ಯವನ್ನು ಪೂರೈಸಿತ್ತು. ಹಾಗೂ ದೇಶಿಯ ತೈಲ ಉತ್ಪಾದನೆಯಲ್ಲಿ ಶೇ. ೩೮ರಷ್ಟು ಪ್ರಮಾಣ ಹೊಂದಿತ್ತು. ೨೦೦೯ರಲ್ಲಿ ಈ ದಾಖಲೆಯನ್ನು ಮುರಿದು, ದೇಶದ ಅರ್ಧದಷ್ಟು ಬೇಡಿಕೆಯ ತೈಲ ಪೂರೈಸಿತ್ತು. ಪ್ರಸ್ತುತ ೨೦೫,೦೦೦ ಬ್ಯಾರೆಲ್ ತೈಲವನ್ನು ಪ್ರತಿನಿತ್ಯ ಉತ್ಪಾದಿಸುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 7. ಚಾರ್ ಧಾಮ್ ಹೆದ್ದಾರಿ ವಿಸ್ತರಣೆ

### ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

### ಪ್ರಮುಖ ಸುದ್ದಿ

- ರಾಷ್ಟ್ರೀಯ ಹಸಿರು ನ್ಯಾಯಾಧಿಕಾರಣವು ಚಾರ್ ಧಾಮ್ ಹೆದ್ದಾರಿ ವಿಸ್ತರಣೆ ಹಾದಿಯನ್ನು ಸುಗಮಗೊಳಿಸಿದೆ. ಆದರೆ, ಇಲ್ಲಿ ಭಾಗೀರಥಿ ಜೈವಿಕ ವಲಯಕ್ಕೆ ಧಕ್ಕೆಯಾಗುತ್ತದೆ ಎನ್ನುವ ಹಿನ್ನಲೆಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಾಧಿಕಾರಣಕ್ಕೆ ಅರ್ಜಿ ಸಲ್ಲಿಕೆಯಾಗಿತ್ತು.
- ಇದರ ವಿಚಾರಣೆ ನಡೆಸಿದ ಎನ್ ಜಿಟಿ, ಇದೀಗ ಹೆದ್ದಾರಿ ವಿಸ್ತರಣೆಗೆ ಅನುಮತಿ ನೀಡಿದ್ದು, ಇದಕ್ಕಾಗಿ ಇರುವ ಕಾನೂನುಗಳನ್ನು ನಿಖರವಾಗಿ ಪಾಲಿಸುವುದಾಗಿ ಉತ್ತರಾಖಂಡ ಸರ್ಕಾರ ಹಾಗೂ ಗಡಿ ರಸ್ತೆ ಸಂಸ್ಥೆ ಭರವಸೆ ನೀಡಿದೆ.

➢ ೨೦೧೬ರ ಡಿಸೆಂಬರ್ ನಲ್ಲಿ ಚಾರ್ ಧಾಮ್ ಹೆದ್ದಾರಿ ಪ್ರಧಾನಿ ನರೇಂದ್ರ ಮೋದಿ ಶಿಲಾನ್ಯಾಸ ನೆರವೇರಿಸಿದ್ದರು. ಒಟ್ಟು ೯೦೦ ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿಯನ್ನು ೧೨ ಸಾವಿರ ಕೋಟಿ.ರೂ ವೆಚ್ಚದಲ್ಲಿ ವಿಸ್ತರಣೆ ಮಾಡುವುದು ಯೋಜನೆಯ ಉದ್ದೇಶ. ಇದು, ಬದರೀನಾಥ, ಕೇದಾರನಾಥ, ಗಂಗೋತ್ರಿ, ಯಮುನೋತ್ರಿಗಳನ್ನು ಬೆಸೆಯುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 8. ಭಾರತದ ಮೊದಲ ಇ-ಬಸ್

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

➢ ಭಾರತದ ಮೊಟ್ಟಮೊದಲ ಎಲೆಕ್ಟ್ರಿಕ್ ಬಸ್ ಸೇವೆಯನ್ನು ಹಿಮಾಚಲ ಪ್ರದೇಶದ ರೋಹ್ಟಂಗ್‌ಪಾಸ್ ಪ್ರದೇಶದಲ್ಲಿ ಆರಂಭಿಸಲಾಗಿದೆ. ಭಾರತದ ಯಾವುದೇ ಪ್ರವಾಸಿ ತಾಣಗಳಲ್ಲಿ ಈ ಸೇವೆ ಆರಂಭವಾಗಿರುವುದು ಇದೇ ಮೊದಲು.

➢ ಸಮುದ್ರಮಟ್ಟದಿಂದ 13 ಸಾವಿರ ಅಡಿ ಎತ್ತರದ ಪ್ರದೇಶದಲ್ಲಿ ಈ ಸೇವೆ ಆರಂಭಿಸಿರುವುದು ವಿಶ್ವದಲ್ಲೇ ಮೊದಲು.

➢ ಮನಾಲಿ ಮತ್ತು ರೋಹ್ಟಂಗ್ ಪಟ್ಟಣಗಳ ನಡುವೆ ಇಂಥ 10 ಬಸ್ಸುಗಳು ಓಡಾಡುತ್ತವೆ. ರೋಹ್ಟಂಗ್ ಪ್ರದೇಶದಲ್ಲಿ ಡೀಸೆಲ್ ಕಾರುಗಳ ಅತಿಯಾದ ಓಡಾಟದಿಂದಾಗಿ ಪರಿಸರಕ್ಕೆ ತೀವ್ರ

ಹಾನಿಯಾಗುತ್ತಿದೆ ಎಂಬ ಆರೋಪ ವ್ಯಾಪಕವಾಗಿ ಕೇಳಿಬಂದಿರುವ ಹಿನ್ನೆಲೆಯಲ್ಲಿ ಇ-ಬಸ್‌ಗಳಿಗೆ ಚಾಲನೆ ನೀಡಲಾಗಿದೆ.

- ಹಿಮಾಲಯದ ಹಿಮನದಿ ಕರಗಲು ಪ್ರಮುಖ ಕಾರಣವಾಗಿರುವ ಇಂಗಾಲದ ಉಗುಳುವಿಕೆ ಕಡಿಮೆ ಮಾಡುವಲ್ಲಿ ಇದು ಮಹತ್ವದ ಪಾತ್ರ ವಹಿಸಲಿದೆ.
- ಹಿಮಾಲಯದ ಹಿಮಕರಗಲು ಕಾರಣವಾಗುವ ಇಂಗಾಲದ ಡೈ ಆಕ್ಸೈಡ್ ಕಡಿಮೆ ಮಾಡುವ ನಿಟ್ಟಿನಲ್ಲಿ ರೋಹ್ತಂಗ್ ಪಾಸ್ ಪ್ರದೇಶಕ್ಕೆ ವಾಹನಗಳ ಸಂಚಾರವನ್ನು ರದ್ದುಪಡಿಸಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಹಿಮಾಚಲ ಪ್ರದೇಶ ಎಲೆಕ್ಟ್ರಿಕ್ ವಾಹನಗಳನ್ನು ಆರಂಭಿಸುವುದು ಅನಿವಾರ್ಯವಾಯಿತು.
- ಈ ಪ್ರದೇಶದಲ್ಲಿ ಪ್ರತಿ ವರ್ಷ 19-20 ಮೀಟರ್‌ನಷ್ಟು ಹಿಮ ಕರಗುತ್ತಿರುವ ಹಿನ್ನೆಲೆಯಲ್ಲಿ ಇದನ್ನು ಗಂಭೀರವಾಗಿ ಪರಿಗಣಿಸಿದ ಎನ್‌ಜಿಟಿ ಇದರ ತಡೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಆದೇಶ ನೀಡಿತ್ತು. ಆ ಬಳಿಕ ಪ್ರತಿದಿನ ಎಲ್ಲ ಡೀಸೆಲ್, ಪೆಟ್ರೋಲ್, ಎಲೆಕ್ಟ್ರಿಕ್ ಮತ್ತು ಸಿಎನ್‌ಜಿ ವಾಹನಗಳು ಸೇರಿದಂತೆ 1000 ವಾಹನಗಳಿಗೆ ಮಿತಿ ವಿಧಿಸಲಾಗಿತ್ತು.

- ರೋಹ್ತಂಗ್ ಪಾಸ್ ಸಮುದ್ರಮಟ್ಟದಿಂದ 3978 ಮೀಟರ್ ಎತ್ತರದಲ್ಲಿದ್ದು, ಇದು ಹಿಮಾಲಯದ ಪೂರ್ವ ಪಿರ್‌ಪಂಜಾಲ್ ಸರಣಿಯ ಶಿಖರ ಪ್ರದೇಶವಾಗಿದೆ. ಮನಾಲಿಯಿಂದ ಸುಮಾರು 51 ಕಿಲೋಮೀಟರ್ ದೂರದಲಿದೆ. ಇದು ಲಹೌಲ್ ಮತ್ತು ಸ್ಪಿತಿ ಕಣಿವೆಗಳು ಮತ್ತು ಕುಲು ಮಧ್ಯೆ ಸಂಪರ್ಕ ಕಲ್ಪಿಸುತ್ತದೆ.

**23rd SEPTEMBER**

**1. SATH- ಕಾರ್ಯಕ್ರಮಕ್ಕೆ ಚಾಲನೆ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಮಾನವ ಬಂಡವಾಳದ ಪರಿವರ್ತನೆಗೆ ಅಸ್ಸಾಮ್ ಸರಕಾರ ಮತ್ತು ನೀತಿ ಆಯೋಗ ಜಂಟಿಯಾಗಿ ಸಾತ್ ಎಂಬ ಸಮರ್ಥನೀಯ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದಾರೆ .
- ಇದರ ಪ್ರಮುಖ ಉದ್ದೇಶ ವೆಂದರೆ ಇದು ಪ್ರಮುಖ ಆರೋಗ್ಯ ಆದ್ಯತೆಗಳನ್ನು ಗುರುತಿಸಲು ಮತ್ತು ಆರೋಗ್ಯ ವ್ಯವಸ್ಥೆ ಯಲ್ಲಿ ರೂಪಾಂತರಿಸಲು ಮತ್ತು ಅಸ್ಸಾಂ ಜನರ ಯೋಗಕ್ಷೇಮ ಸುಧಾರಿಸುವ ಪರಿಹಾರಗಳನ್ನು ಜಾರಿಗೆ ತರಲು ಮತ್ತು ರಚನಾತ್ಮಕ ಬೆಂಬಲವನ್ನು ಒದಗಿಸುವ ಮುಖ್ಯ ಉದ್ದೇಶ ಹೊಂದಿದೆ

ಮುಖ್ಯ ಪರೀಕ್ಷೆಗಾಗಿ

- ಸಾತ್ ಪ್ರೋಗ್ರಾಂ ಸಹಕಾರ ಫೆಡರಲಿಸಮ್ ನ ತತ್ತ್ವವನ್ನು ಒಳಗೊಂಡಿದೆ. ಇದಕ್ಕೆ 16 ರಾಜ್ಯಗಳು ಆಸಕ್ತಿಯನ್ನು ವ್ಯಕ್ತಪಡಿಸಿದ್ದು, ಇವುಗಳಲ್ಲಿ 14 ರಾಜ್ಯಗಳಾದ ಆಂಧ್ರಪ್ರದೇಶ, ಅಸ್ಸಾಂ, ಬಿಹಾರ, ಚಂಡೀಗಢ, ಗೋವಾ, ಗುಜರಾತ್, ಹರಿಯಾಣ, ಜಾರ್ಖಂಡ್, ಕರ್ನಾಟಕ, ಮಧ್ಯಪ್ರದೇಶ, ಒಡಿಶಾ, ಪಂಜಾಬ್, ತೆಲಂಗಾಣ ಮತ್ತು ಉತ್ತರ ಪ್ರದೇಶ ರಾಜ್ಯಗಳು ಯೋಜನೆಯನ್ನು ಪ್ರಸ್ತಾವಿಸಿವೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ಹದಿನಾಲ್ಕು ರಾಜ್ಯಗಳಿಂದ ನೀತಿ ಆಯೋಗ 5 ರಾಜ್ಯಗಳನ್ನು ಆಯ್ಕೆ ಮಾಡಲಿದೆ. ತರುವಾಯದ ತಪಾಸಣೆ ಮತ್ತು ಮೌಲ್ಯಮಾಪನಗಳ ನಂತರ, ಮೂರು ರಾಜ್ಯಗಳನ್ನು ಆಯ್ಕೆ ಮಾದಿದೆ .

- ಸಂಭಾವ್ಯ ಪ್ರಭಾವವನ್ನು ನಿರ್ಧರಿಸಲು MMR, IMR, ನಿಯಮಾವಳಿಗಳಂತಹ ಮಾನದಂಡಗಳನ್ನು ಪರಿಗಣಿಸಲಾಗುತ್ತದೆ ಮತ್ತು ವೈದ್ಯರ ಸಾಂದ್ರತೆ ಮತ್ತು ದಾದಿಯರು, IPHS ಮಾನದಂಡಗಳ ಅನುಸರಣೆ ಮುಂತಾದ ಮಾಪನಗಳನ್ನು ಯಶಸ್ಸಿನ ಸಾಧ್ಯತೆಯನ್ನು ನಿರ್ಧರಿಸಲು ಬಳಸಲಾಗುತ್ತದೆ.

- ಈ ಮೂರು ಆಯ್ದ ರಾಜ್ಯಗಳದ ಅಸ್ಸಾಂ, ಉತ್ತರ ಪ್ರದೇಶ ಮತ್ತು ಕರ್ನಾಟಕ ಜೊತೆ ಒಪ್ಪಂದಕ್ಕೆ ಸಹಿ ಮಾಡಿದ ನಂತರ ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.

- ಮೂರು ಮಾದರಿ ರಾಜ್ಯಗಳನ್ನು ಆಯ್ಕೆ ಮಾಡಲು ನೀತಿ ಆಯೋಗ ಮೂರು ಹಂತದ ಪ್ರಕ್ರಿಯೆಯನ್ನು ಉಚ್ಚರಿಸಿದೆ, ಅವುಗಳೆಂದರೆ ಆಸಕ್ತಿಯ ಅಭಿವ್ಯಕ್ತಿ, ರಾಜ್ಯಗಳ ಪ್ರಸ್ತುತಿಗಳು ಮತ್ತು ಆರೋಗ್ಯ ಕ್ಷೇತ್ರ ಸುಧಾರಣೆಗೆ ಬದ್ಧತೆಯ ಮೌಲ್ಯಮಾಪನ.

- ಈ ಮೂರು ರಾಜ್ಯಗಳ ಸರ್ಕಾರಗಳೊಂದಿಗೆ ನಿಕಟ ಸಹಯೋಗದೊಂದಿಗೆ ಕೆಲಸ ಮಾಡಲಿದೆ. ಆ ಮೂಲಕ ದೃಢವಾದ ಮಾರ್ಗಸೂಚಿಯನ್ನು ವಿನ್ಯಾಸಗೊಳಿಸಲು, ಕಾರ್ಯಕ್ರಮದ ಆಡಳಿತ ರಚನೆಯನ್ನು ಅಭಿವೃದ್ಧಿಪಡಿಸುವುದು, ಮೇಲ್ವಿಚಾರಣೆ ಮತ್ತು ಟ್ರ್ಯಾಕಿಂಗ್ ಕಾರ್ಯವಿಧಾನಗಳನ್ನು ಸ್ಥಾಪಿಸುವುದು, ಮತ್ತು ಅಂತಿಮ ಉದ್ದೇಶಗಳನ್ನು ಸಾಧಿಸಲು ರಾಜ್ಯ ಸಂಸ್ಥೆಗಳಿಗೆ ಬೆಂಬಲವನ್ನು ನೀಡಲಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ನೀತಿ ಆಯೋಗದ ಬಗ್ಗೆ

- ನೀತಿ ಆಯೋಗವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿ ನಿಯಮಗಳನ್ನು ರೂಪಿಸಲು ಅಗತ್ಯವಾದ ಪ್ರಮುಖ ದಿಕ್ಸೂಚಿ ಮಾಹಿತಿಗಳನ್ನು ನೀಡುವ ಚಿಂತಕರ ಕೂಟವಾಗಿದೆ.
- ಭಾರತ ಸರ್ಕಾರವು ನೀತಿ ಆಯೋಗವನ್ನು ಚಿಂತಕರ ಚಾವಡಿಯಾಗಿ ರೂಪಿಸಿದ್ದು, ಇದು ನೀತಿಗಳನ್ನು ಹೇರುವ ಅಧಿಕಾರ ಹೊಂದಿಲ್ಲ. ನೀತಿ ಆಯೋಗವನ್ನು ರಚಿಸುವ ಮೂಲಕ, ಇದನ್ನು ಸಹಕಾರ ಮತ್ತು ಸ್ಪರ್ಧಾತ್ಮಕ ಒಕ್ಕೂಟ ವ್ಯವಸ್ಥೆಯ ನಿರ್ಮಾಣ ವೇದಿಕೆಯಾಗಿ ರೂಪಿಸುವ ಗುರಿ ಹೊಂದಿದೆ.

**2. ಅಂತರರಾಷ್ಟ್ರೀಯ ರಸ್ತೆ ಒಕ್ಕೂಟ ಜತೆ ನೀತಿ ಆಯೋಗ ಒಪ್ಪಂದ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಇಂಟೆಲಿಜೆಂಟ್ ಸಂಚಾರಿ ವ್ಯವಸ್ಥೆ ಕ್ಷೇತ್ರದಲ್ಲಿ ಪರಸ್ಪರ ಸಹಕರಿಸಿಕೊಳ್ಳುವ ಸಂಬಂಧ ನ್ಯಾಷನಲ್ ಇನ್‌ಸ್ಟಿಟ್ಯೂಷನ್ ಫಾರ್ ಟ್ರಾನ್ಸ್‌ಮಿಟಿಂಗ್ ಇಂಡಿಯಾ (ನೀತಿ ಆಯೋಗ )ಮತ್ತು ಜಿನೀವಾ ಮೂಲಕ ಅಂತರರಾಷ್ಟ್ರೀಯ ರಸ್ತೆ ಒಕ್ಕೂಟ (ಐಆರ್‌ಎಫ್) ಒಪ್ಪಂದ ಮಾಡಿಕೊಂಡಿವೆ.
- ಇದರ ಮುಖ್ಯ ಉದ್ದೇಶವೆಂದರೆ, ರಾಷ್ಟ್ರೀಯ ಐಟಿಎಸ್ ನೀತಿಯನ್ನು ಅಭಿವೃದ್ಧಿಪಡಿಸುವ ಸಂಬಂಧ ಎಲ್ಲ ತಾಂತ್ರಿಕ ತಜ್ಞರು ಒಂದೆಡೆ ಸೇರಲು ಅಗತ್ಯ ರಾಷ್ಟ್ರೀಯ ವೇದಿಕೆಯನ್ನು ಸೃಷ್ಟಿಸುವುದು.
- ಇದರಲ್ಲಿ ಕೇಂದ್ರ ಸರ್ಕಾರದ ಎಲ್ಲ ಪ್ರಮುಖ ಹಕ್ಕುದಾರರು ಹಾಗೂ ಈ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಭಾರತೀಯ ಹಾಗೂ ವಿದೇಶಿ ಕಂಪನಿಗಳು ಸೇರಲಿವೆ. ಈ ರಾಷ್ಟ್ರೀಯ ವೇದಿಕೆಯು ಸೂಕ್ತ ಹಾಗೂ ಸಮಗ್ರ ಐಟಿಎಸ್ ನೀತಿಯನ್ನು ಅಭಿವೃದ್ಧಿಪಡಿಸಲಿದೆ.

ಮುಖ್ಯ ಪರೀಕ್ಷೆಗಾಗಿ

- ರಾಷ್ಟ್ರೀಯ ಇಂಟೆಲಿಜಿಎಂಟ್ ಟ್ರಾಫಿಕ್ ಸಿಸ್ಟಂ (ಐಟಿಎಸ್)ನಲ್ಲಿ ಮುಖ್ಯವಾಗಿ ಸಂಚಾರ ನಿರ್ವಹಣೆ, ವಾಹನ ನಿಲುಗಡೆ ನಿರ್ವಹಣೆ, ಸಂಚಾರ ನಿಯಮಗಳು ಮತ್ತು ನಿಬಂಧನೆಗಳ ಎಲೆಕ್ಟ್ರಾನಿಕ್ಸ್ ಅನುಷ್ಠಾನ, ಸರಕು ಸಾಗಾಣಿಕೆ ನಿರ್ವಹನೆ ಮತ್ತು ಮೇಲುಸ್ತುವಾರಿ, ಐಟಿಎಸ್ ಕ್ಷೇತ್ರದಲ್ಲಿ ಅನುಶೋಧನೆ ಮತ್ತು ಐಟಿಎಸ್ ಕ್ಷೇತ್ರದ ಶಿಕ್ಷಣ ಮತ್ತಿತರ ಅಂಶಗಳು ಸೇರುತ್ತವೆ.
- ಇದರ ಮುಖ್ಯ ಗುರಿ ಎಂದರೆ ನಗರ ಮಟ್ಟದ ವಾಹನಗಳ ದಟ್ಟಣೆಯನ್ನು ಕಡಿಮೆ ಮಾಡಲು ಸಹಕರಿಸುವುದು. ನಗರಗಳಲ್ಲಿ ವಾಹನಗಳ ನಿಲುಗಡೆಯ ಸ್ಥಿತಿಗತಿಯನ್ನು ಉತ್ತಮಪಡಿಸುವುದು, ರಸ್ತೆ ಸುರಕ್ಷತೆಯನ್ನು ಮತ್ತಷ್ಟು ಬಲಪಡಿಸುವುದು, ವಾಹನಗಳಲ್ಲಿ ಪ್ರಯಾಣಿಕರ ಭದ್ರತೆ ಮತ್ತು ಸರಕು ಸಾಗಾಣಿಕೆ ವಲಯದ ಭದ್ರತೆಯನ್ನು ಕಾಪಾಡುವುದು.
- ಅಂತರರಾಷ್ಟ್ರೀಯ ರಸ್ತೆ ಒಕ್ಕೂಟ (ಐಆರ್‌ಎಫ್) ಎನ್ನುವುದು ಜಾಗತಿಕ ಮಟ್ಟದ ಸರ್ಕಾರೇತರ, ಲಾಭರಹಿತ ಸಂಸ್ಥೆಯಾಗಿದ್ದು, ಉತ್ತಮ, ಸುರಕ್ಷಿತ ಮತ್ತು ಸುಸ್ಥಿರ ರಸ್ತೆ ಮತ್ತು ರಸ್ತೆ ಜಾಲವನ್ನು ನಿರ್ವಹಿಸುವ ಮತ್ತು ಅಭಿವೃದ್ಧಿಪಡಿಸುವುದನ್ನು ಉತ್ತೇಜಿಸುವ ಸಂಸ್ಥೆಯಾಗಿದೆ.
- ಇದು 1948ರಲ್ಲಿ ಆರಂಭವಾಗಿದ್ದು, ಇದರ ಮುಖ್ಯ ಉದ್ದೇಶವೆಂದರೆ ಉತ್ತಮ ರಸ್ತೆಗಳು, ಉತ್ತಮ ವಿಶ್ವ. ಇದರ ಕೇಂದ್ರ ಕಚೇರಿ ಅಮೆರಿಕ ವಾಷಿಂಗ್ಟನ್ ಡಿ.ಸಿಯಲ್ಲಿದೆ.

- ಐಆರ್‌ಎಫ್ ಜಾಗತಿಕ ಮಟ್ಟದಲ್ಲಿ ಪರಿಸರಾತ್ಮಕವಾಗಿ ಉತ್ತಮ ರಸ್ತೆ ಸಾಮರ್ಥ್ಯ ಮೂಲಸೌಕರ್ಯವನ್ನು ಸಮಾಜದ ಎಲ್ಲ ಹಂತಗಳಲ್ಲಿ ಅಭಿವೃದ್ಧಿಪಡಿಸುವ ಮೂಲಕ ಸಮಾಜಕ್ಕೆ ಆರ್ಥಿಕ ಹಾಗೂ ಸಾಮಾಜಿಕವಾಗಿ ಲಾಭದಾಯಕ ಕ್ರಮಗಳನ್ನು ಇದು ಕೈಗೊಳ್ಳುವ ನಿಟ್ಟಿನಲ್ಲಿ ಶ್ರಮಿಸುತ್ತದೆ.
- ರಾಷ್ಟ್ರೀಯ ರಸ್ತೆ ಹೂಡಿಕೆಯಿಂದ ಗರಿಷ್ಠ ಸಾಮಾಜಿಕ ಮತ್ತು ಆರ್ಥಿಕ ಪ್ರತಿಫಲ ದೊರಕುವಂತೆ ಮಾಡುವ ನಿಟಿಟನಲ್ಲಿ ಸೂಕ್ತ ತಂತ್ರಜ್ಞಾನ ಪರಿಹಾರಗಳನ್ನು ಒದಗಿಸುವ ನಿಟ್ಟಿನಲ್ಲೂ ಇದು ಕಾರ್ಯ ನಿರ್ವಹಿಸಲಿದೆ.
- ಸರ್ಕಾರಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ರಸ್ತೆ ಅಭಿವೃದ್ಧಿ ತಂತ್ರಗಾರಿಕೆಯ ಯೋಜನೆ ಮತ್ತು ನೀತಿಯನ್ನು ರೂಪಿಸುವಲ್ಲಿ ಸೂಕ್ತ ಪರಿಣತಿಯನ್ನು ಒದಗಿಸುವ ಜತೆಗೆ ರಸ್ತೆ ಅಭಿವೃದ್ಧಿ ನೀತಿಯ ಎಲ್ಲ ಆಯಾಮಗಳಲ್ಲಿ ನೆರವು ನೀಡುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ದಿಲ್ಲಿಯಿಂದ..... ಮಸ್ಸೂರಿಗೆ/ಮೈಸೂರಿಗೆ

### 3. ದೀನ್ ದಯಾಳ್ ಹಸ್ತಕಲಾ ಸಂಕುಲ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಇತ್ತೀಚೆಗೆ ವಾರಣಾಸಿಯಲ್ಲಿ ದೀನ್ ದಯಾಳ್ ಹಸ್ತಕಾಲಾ ಸಂಕುಲ್ - ಕರಕುಶಲ ವಸ್ತುಗಳ ಮಾರಾಟಕ್ಕೆ ಅವಕಾಶ ನೀಡುವ ಕೇಂದ್ರವನ್ನು ಉದ್ಘಾಟಿಸಲಾಯಿತು.
- ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕೈಮಗ್ಗ / ಹಸ್ತಕೃತಿಗಳನ್ನು ಉತ್ತೇಜಿಸುವಲ್ಲಿ ನೇಕಾರರು / ಕುಶಲಕರ್ಮಿಗಳು / ರಫ್ತುದಾರರನ್ನು ಸಂಕುಲ ಸುಲಭಗೊಳಿಸುತ್ತದೆ.

- ಸಂಕುಲ್ ನ ಕರಕುಶಲ ಮ್ಯೂಸಿಯಂ ವಾರಣಾಸಿಯ ಸಾಂಪ್ರದಾಯಿಕ ಕೈಮಗ್ಗ/ ಕರಕುಶಲ ಉತ್ಪನ್ನಗಳನ್ನು ಸಂರಕ್ಷಿಸುತ್ತದೆ ಮತ್ತು ಹೊಸ ಪೀಳಿಗೆಗೆ ಮತ್ತು ವಿದ್ವಾಂಸರಿಗೆ, ವಿನ್ಯಾಸಕರಿಗೆ ಮತ್ತು ಪ್ರವಾಸಿಗರಿಗೆ ಸ್ಪೂರ್ತಿಯಾಗಿರುವ ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳನ್ನು ಪ್ರದರ್ಶಿಸುತ್ತದೆ.

ಮುಖ್ಯ ಪರೀಕ್ಷೆಗಾಗಿ

- 2014-15ರ ಬಜೆಟ್ನಲ್ಲಿ ಹಣಕಾಸು ಮಂತ್ರಿಯವರು ವಾರಣಾಸಿಯಲ್ಲಿ ಕೈಚೀಲಗಳನ್ನು , ಕರಕುಶಲ ಮತ್ತು ರೇಷ್ಮೆ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮತ್ತು ಉತ್ತೇಜಿಸಲು ವ್ಯಾಪಾರ ಸೌಕರ್ಯ ಕೇಂದ್ರ ಮತ್ತು ಕರಕುಶಲ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಘೋಷಿಸಿದ್ದರು.
- ನೇಕಾರರು, ಕುಶಲಕರ್ಮಿಗಳು ಮತ್ತು ವಾರಣಾಸಿಯ ಉದ್ಯಮಿಗಳಿಗೆ ತಮ್ಮ ಸಹಾಯವನ್ನು ಬಲಪಡಿಸಲು ದೇಶೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರುಕಟ್ಟೆ ಚಟುವಟಿಕೆಗಳಲ್ಲಿ ಸಹಾಯ ಮಾಡಲು ಮತ್ತು ವಾರಣಾಸಿಯಲ್ಲಿ ಕೈಮಗ್ಗಗಳ ಸಮೃದ್ಧ ಸಂಪ್ರದಾಯವನ್ನು ಮುಂದುವರಿಸುವರಿಸಲು ಈ ಕಾರ್ಯಕ್ರಮವನ್ನು ಘೋಷಿಸಿದ್ದರು . .

ಈ ಕ್ರಮದ ಪ್ರಯೋಜನಗಳು:

- ಪ್ರಾಚೀನ ವಾರಣಾಸಿಯ ಶ್ರೀಮಂತ ಸಾಂಪ್ರದಾಯಿಕ ಕರಕುಶಲತೆಯನ್ನು ಉತ್ತೇಜಿಸುತ್ತದೆ.
- ಭಾರತೀಯ ಕೈಮಗ್ಗ ಮತ್ತು ಕರಕುಶಲ ವಸ್ತುಗಳನ್ನು ಪ್ರದರ್ಶಿಸಲು ವೇದಿಕೆ ಮತ್ತು ಪರಿಸರವನ್ನು ಸಕ್ರಿಯಗೊಳಿಸುತ್ತದೆ.
- ದೇಶೀಯ ಮತ್ತು ವಿದೇಶಿ ಖರೀದಿದಾರರಿಗೆ ಪೂರೈಕೆ ಸರಣಿ ಸಂಪರ್ಕಗಳನ್ನು ಒದಗಿಸುತ್ತದೆ.
- ದೇಶೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುತ್ತದೆ.
- ವಾರಣಾಸಿ ಮತ್ತು ದೇಶದ ಪೂರ್ವ ಭಾಗಗಳ ವ್ಯಾಪಾರ ಮತ್ತು ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುತ್ತದೆ.

## 4. ವಿಶ್ವದ ಮೊಟ್ಟಮೊದಲ ಕಣ ರೊಬೋಟ್ ಅಭಿವೃದ್ಧಿ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ವಿಶ್ವದ ಮೊಟ್ಟಮೊದಲ ಕಣ ರೊಬೋಟ್ ಅಭಿವೃದ್ಧಿಪಡಿಸಿದ್ದಾರೆ. ಇದು ಒಂದು ಮಿಲಿಮೀಟರ್‌ನ ಹತ್ತುಲಕ್ಷನೇ ಒಂದು ಪಾಲಿನಷ್ಟು ಸೂಕ್ಷ್ಮ ಗಾತ್ರದ್ದಾಗಿದೆ.
- ಇದನ್ನು ಕಣಗಳನ್ನು ಕಟ್ಟಲು ಬಳಸಬಹುದಾಗಿದ್ದು, ವಿನೂತನ ಔಷಧಗಳ ಸಂಶೋಧನೆಗೆ ಇದು ಸಹಕಾರಿಯಾಗುವ ನಿರೀಕ್ಷೆ ಇದೆ.

ಮುಖ್ಯ ಪರೀಕ್ಷೆಗಾಗಿ

- ಕಣ ರೊಬೋಟ್, ಒಂದು ಮಿಲಿಮೀಟರ್‌ನ ಹತ್ತುಲಕ್ಷನೇ ಒಂದು ಪಾಲಿನಷ್ಟು ಸೂಕ್ಷ್ಮ ಗಾತ್ರದ್ದಾಗಿದೆ. ಕಣಗಳ ಸಂರಚನೆಗೆ ಅಗತ್ಯವಾದ 150 ಇಂಗಾಲ, ಜಲಜನಕ, ಆಮ್ಲಜನಕ ಹಾಗೂ ಸಾರಜನಕ ಕಣಗಳಿಂದ ಇದನ್ನು ಅಭಿವೃದ್ಧಿಪಡಿಸಲಾಗಿದೆ.
- ಪುಟ್ಟ ರೊಬೋಟಿಕ್ ಆರ್ಮ್ ಬಳಿಸಿಕೊಂಡು ಇದು ಯಾವುದೇ ಕಣಗಳ ಸಮೂಹವನ್ನು ಜೋಡಿಸುವಲ್ಲಿ ಸಹಕಾರಿಯಾಗಲಿದೆ.

- ರಾಸಾಯನಿಕ ಕ್ರಿಯೆಗಳನ್ನು ವಿಶೇಷ ಸೊಲ್ಯೂಶನ್ಸ್‌ಗಳಲ್ಲಿ ನಿರ್ವಹಿಸುವ ಮೂಲಕ ಈ ರೊಬೋಟ್ ಕಾರ್ಯ ನಿರ್ವಹಿಸುತ್ತದೆ. ಮೂಲಭೂತ ಕಾರ್ಯಗಳನ್ನು ನಿರ್ವಹಿಸುವ ಅಗತ್ಯಕ್ಕೆ ತಕ್ಕಂತೆ ವಿಜ್ಞಾಣಿಗಳು ಇದನ್ನು ನಿಯಂತ್ರಿಸಲು ಮತ್ತು ಪ್ರೋಗ್ರಾಂ ಮಾಡಲು ಅವಕಾಶ ಇರುತ್ತದೆ.

- ಇದು ಹಲವರು ಸರಳ ಸರಣಿ ಕಮಾಂಡ್‌ಗಳನ್ನು ಹೊಂದಿದ್ದು, ರಾಸಾಯನಿಕ ಸಾಧನಗಳ ಪ್ರೋಗ್ರಾಮಿಂಗ್ ಮಾಡಿಕೊಂಡು ಇದನ್ನು ಅಭಿವೃದ್ಧಿಪಡಿಸಲಾಗಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಪ್ರತಿ ರೊಬೋಟ್ ಕೂಡಾ ಪ್ರತಿಯೊಂದು ಕಣವನ್ನು ಅಗತ್ಯಕ್ಕೆ ತಕ್ಕಂತೆ ಪರಿವರ್ತಿಸುವ ಸಾಮರ್ಥ್ಯ ಹೊಂದಿದೆ. ಗಾತ್ರದ ಅನವಯ ಹೇಳುವುದಾದರೆ ಇಂಥ ಒಂದು ಕೋಟಿ ಕಣ ರೊಬೋಟ್‌ಗಳನ್ನು ಸೇರಿಸಿದರೆ, ಉಪ್ಪಿನ ಒಂದು ಕಾಳಿನಷ್ಟು ಗಾತ್ರದ್ದಾಗುತ್ತದೆ.

- ಈ ಕಣ ರೊಬೋಟ್ ಅತ್ಯಂತ ಸೂಕ್ಷ್ಮ ಗಾತ್ರದ್ದಾಗಿದ್ದು, ಉತ್ಪಾದನಾ ವಸ್ತುಗಳ ಬೇಡಿಕೆಯನ್ನು ಕಡಿಮೆ ಮಾಡುವಲ್ಲಿ ಮಹತ್ವದ್ದಾಗಲಿದೆ. ಜತೆಗೆ ವಿದ್ಯುತ್ ಅಗತ್ಯತೆಯನ್ನು ಕೂಡಾ ಗಣನೀಯವಾಗಿ ಕಡಿಮೆ ಮಾಡುತ್ತದೆ. ಇದು ಔಷಧ ಸಂಶೋಧನೆಯನ್ನು ಸುಧಾರಿಸುವಲ್ಲಿ ಮತ್ತು ಅದಕ್ಕೆ ವೇಗ ನೀಡುವಲ್ಲೂ ಮಹತ್ವದ್ದಾಗಲಿದೆ.

**5. INS ಕಲವರಿ ಭಾರತೀಯ ನೌಕಾಪಡೆಗೆ**

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಭಾರತದ ಮೊಟ್ಟಮೊದಲ ದೇಶೀಯವಾಗಿ ಅಭಿವೃದ್ಧಿಪಡಿಸಿದ ಐಎನ್‌ಎಸ್ ಕಲವರಿ ಸಬ್‌ಮೆರಿನ್ ಅನ್ನು ಭಾರತಿಯ ನೌಕಾಪಡೆಗೆ ಹಸ್ತಾಂತರಿಸಲಾಗಿದೆ. ಇದನ್ನು ಅಭಿವೃದ್ಧಿಪಡಿಸಿದ ಸರ್ಕಾರಿ ಸ್ವಾಮ್ಯದ ಮಡಗಾಂ ಡಾಕ್ ಲಿಮಿಟೆಡ್ ಸಂಸ್ಥೆ ನೂತನ ಸಬ್‌ಮೆರಿನ್ ಹಸ್ತಾಂತರಿಸಿದೆ. ಮಹಾರಾಷ್ಟ್ರದ ಮುಂಬೈನಲ್ಲಿ ಇದನ್ನು ಸಿದ್ಧಪಡಿಸಲಾಗಿತ್ತು.
- ಇದು ಎರಡು ದಶಕಗಳಲ್ಲಿ ಭಾರತೀಯ ನೌಕಾಪಡೆ ಹೊಂದುತ್ತಿರುವ ಮೊಟ್ಟಮೊದಲ ಸಾಂಪ್ರದಾಯಿಕ ಸಬ್‌ಮೆರಿನ್ ಆಗಿದೆ. ಇದನ್ನು ದೇಶದ ಸೇವೆಗೆ ಸಮರ್ಪಿಸಿರುವುದು ಅತಿದೊಡ್ಡ ಸಾಧನೆಯಾಗಿದೆ. ಮುಖ್ಯವಾಗಿ ಚೀನಾ ಹಾಗೂ ಪಾಕಿಸ್ತಾನವನ್ನು ದೃಷ್ಟಿಯಲ್ಲಿಟ್ಟುಕೊಂಡು,

ಜಲಾಂತರ್ಗಾಮಿ ಹೋರಾಟಕ್ಕೆ ಭಾರತದ ನೌಕಾಪಡೆಯನ್ನು ಸಜ್ಜುಗೊಳಿಸುವಲ್ಲಿ ಇದು ನೆರವಾಗಲಿದೆ.

### ಮುಖ್ಯ ಪರೀಕ್ಷೆಗಾಗಿ

- ಪ್ರಾಜೆಕ್ಟ್-75 ಯೋಜನೆಯಡಿ ಮಡಗಾಂ ಡೆಕ್ಸ್ ಲಿಮಿಟೆಡ್ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಆರು ಐಎನ್‌ಎಸ್ ಸ್ಕಾರ್ಪಿನ್ ಕ್ಲಾಸ್ ಸಬ್‌ಮೆರಿನ್ ಪೈಕಿ ಐಎನ್‌ಎಸ್ ಕರವರಿ ಮೊದಲನೆಯದ್ದಾಗಿದೆ.
- ಫ್ರಾನ್ಸ್‌ನ ಡಿಸಿಎನ್‌ಎಸ್ (ಡೈರೆಕ್ಷನ್ ಡೆಸ್ ಕನ್‌ಸ್ಟ್ರಕ್ಷನ್ಸ್ ನೇವಲ್ಸ್ ಸರ್ವೀಸಸ್) ಶಿಪ್‌ಬಿಲ್ಡರ್ ಇದಕ್ಕೆ ತಂತ್ರಜ್ಞಾನ ವರ್ಗಾಯಿಸಿದೆ.
- ಇದು ಡೀಸೆಲ್- ಎಲೆಕ್ಟ್ರಿಕ್ ದಾಳಿ ಸಬ್‌ಮೆರಿನ್ ಆಗಿದ್ದು, ಇದಕ್ಕೆ ಟೈಗರ್ ಶಾರ್ಕ್ ಹೆಸರು ಇಡಲಾಗಿದೆ.
- ಇದು ರಹಸ್ಯ ಸಬ್‌ಮೆರಿನ್ ಆಗಿದ್ದು, ವಿರೋಧಿ ಪಡೆಗಳು ಇದನ್ನು ಪತ್ತೆ ಮಾಡುವುದು ಕಷ್ಟಸಾಧ್ಯ. ಬಿರುಗಾಳಿ ಸೇರಿದಂತೆ ಯಾವುದೇ ಹವಾಮಾನ ಪರಿಸ್ಥಿತಿಯಲ್ಲೂ ಇದು ಕಾರ್ಯಾಚರಣೆ ಮಾಡಲು ಸಮರ್ಥವಾಗಿರುತ್ತದೆ. ಇದು 1550 ಟನ್ ತೂಕವಿದ್ದು, ಆರು 533 ಮಿಲಿಮೀಟರ್ ಟಾರ್ಪೆಡೊ ಟ್ಯೂಬ್‌ಗಳನ್ನು ಹೊಂದಿದ್ದು, ಇದು ಹಡಗು ನಿರೋಧಕ ಟಾರ್ಪೆಡೊ, ಕ್ಷಿಪಣಿ ಮತ್ತು ಸ್ಫೋಟಕ ಉಡಾಯಿಸಲು ಸಹಕರಿಸುತ್ತದೆ.
- ಇದು ಬಹುಮುಖಿ ಯುದ್ಧ, ಸಬ್‌ಮೆರಿನ್ ನಿಗ್ರಹ ಯುದ್ಧ, ರಹಸ್ಯ ಮಾಹಿತಿ ಕಲೆ ಹಾಕುವುದು, ಸಾಗರ ಸ್ಫೋಟ, ಭಾರತೀಯ ಜಲಪ್ರದೇಶದ ಕಣ್ಗಾವಲು ಸೇರಿದಂತೆ ಹಲವು ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಇದು ವಿರೋಧಿಗಳ ಮೇಲೆ ನಿಖರವಾಗಿ ನಿರ್ದೇಶಿಸಲ್ಪಟ್ಟ ಶಸ್ತ್ರಾಸ್ತ್ರ ಮತ್ತು ದಾಳಿಯನ್ನು ನಿರ್ವಹಿಸಲು ಸಮರ್ಥವಾಗಿದೆ.

### ಹಿನ್ನೆಲೆ

- ಫ್ರಾನ್ಸ್‌ನ ಡಿಸಿಎನ್‌ಎಸ್‌ಗೆ 416 ಕೋಟಿ ಡಾಲರ್ ಮೊತ್ತದಲ್ಲಿ ಆರು ಹೊಸ ಪೀಳಿಗೆಯ ಸ್ಕಾರ್ಪಿನ್ ಕ್ಲಾಸ್ ಸಬ್‌ಮೆರಿನ್‌ಗಳನ್ನು ಮಡಗಾಂ ಡಕ್ ಲಿಮಿಟೆಡ್ ಸಹಯೋಗದಲ್ಲಿ ಪೂರೈಸಲು ಪ್ರಾಜೆಕ್ಟ್-75 ಅಡಿಯಲ್ಲಿ 2005ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಎಲ್ಲ ಸಬ್‌ಮೆರಿಗ್‌ಗಳಿಗೆ ದೇಶೀಯವಾಗಿ ಅಭಿವೃದ್ಧಿಪಡಿಸಿದ ವಾಯು ಸ್ವತಂತ್ರ ಪ್ರೊಪಲ್ಷನ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.
- ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಇದನ್ನು ಅಭಿವೃದ್ಧಿಪಡಿಸಿದೆ. ಈ ವ್ಯವಸ್ಥೆಯಡಿ, ಸಾಂಪ್ರದಾಯಿಕ ಸಬ್‌ಮೆರಿನ್‌ಗಳು ನೀರಿನ ಕೆಳಭಾಗದಲ್ಲಿ ಸುಧೀರ್ಘಕಾಲದ ವರೆಗೆ ಉಳಿಯುವ ಸಾಮಥ್ರ್ಯ ಹೊಂದಿವೆ. ಜತೆಗೆ ಇದರ ಬೇಹುಗಾರಿಕೆ ಹಾಗೂ ದಾಳಿ ಸಾಮಥ್ರ್ಯಗಳನ್ನು ಕೂಡಾ ಹೆಚ್ಚಿಸಿಕೊಳ್ಳಲಿದೆ.
- ಈ ಸರಣಿಯ ಎರಡನೇ ಸಬ್‌ಮೆರಿನ್ ಐಎನ್‌ಎಸ್ ಖಂಡೇರಿಗೆ 2017ರ ಜನವರಿಯಲ್ಲಿ ಚಾಲನೆ ನೀಡಲಾಗಿತ್ತು. 2016ರ ಆಗಸ್ಟ್‌ನಲ್ಲಿ ಇದರ ತಾಂತ್ರಿಕ ರಹಸ್ಯ ಮಾಹಿತಿ ಬಹಿರಂಗವಾಗಿ ದೊಡ್ಡ ವಿವಾದ ಉದ್ಭವಿಸಿತ್ತು.

- ಸ್ಕಾರ್ಪಿನ್ ಮಾಹಿತಿ ಸೋರಿಕೆ ಪ್ರಕರಣದಲ್ಲಿ ಇದರ ಬೇಹುಗಾರಿಕೆ ಸಾಮಥ್ರ್ಯವನ್ನು ವಿವರಿಸುವ 22400 ದಾಖಲೆಗಳು ಸೋರಿಕೆಯಾಗಿದ್ದವು. ಇದು ಎಷ್ಟು ಆಳದವರೆಗೆ ಜಿಗಿಯಬಲ್ಲದು, ಟಾರ್ಪೆಡೊ ಉಡಾವಣಾ ವ್ಯವಸ್ಥೆ ಮತ್ತಿರರ ವಿವರಗಳು ಸೋರಿಕೆಯಾಗಿದ್ದವು. ಇದರ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಂತೆ ಮಾಹಿತಿಗಳು ಡಿಸಿಎನ್‌ಎಸ್‌ನ ಫ್ರಾನ್ಸ್ ಕಚೇರಿಯಿಂದ ಸೋರಿಕೆಯಾಗಿದ್ದವು.

**6. ಮುಂಬೈ ಹೈನಲ್ಲಿ ನೂತನ ತೈಲ ನಿಕ್ಷೇಪ ಪತ್ತೆ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಸರ್ಕಾರೀ ಸ್ವಾಮ್ಯದ ONGC , ಅರಬ್ಬೀ ಸಮುದ್ರದ ಮುಂಬೈ ಹೈ ಸಮೀಪದಲ್ಲಿ ತೈಲ ನಿಕ್ಷೇಪವನ್ನು ಪತ್ತೆ ಮಾಡಿದೆ. ಡಬ್ಲ್ಯೂ-೨೪-೩ ಎನ್ನುವ ಒರತೆಯಲ್ಲಿ ೨ ಕೋಟಿ ಟನ್ ತೈಲ ಸಂಗ್ರಹವಾಗಿದೆ ಎಂದು ಅಂದಾಜಿಸಿದೆ.
- ಮುಂಬೈ ಹೈನಲ್ಲಿ ONGC ಕಳೆದ ೫೦ ವರ್ಷಗಳಿಂದಲೂ ತೈಲ ಉತ್ಪಾದನೆ ಮಾಡುತ್ತಿದ್ದು, ಇದೆ ಮೊದಲ ಬಾರಿಗೆ ಹೊಸ ತೈಲಮೂಲದ ಆವಿಷ್ಕಾರ ಮಾಡಿದೆ.
- ಮುಂಬೈ ಹೈ ಭಾರತದ ಅತಿದೊಡ್ಡ ಹಾಗೂ ಅತಿ ಹಳೆಯ ತೈಲ ನಿಕ್ಷೇಪವಾಗಿದ್ದು, ೧೬೫೯ ಮಿಲಿಯನ್ ಮೆಟ್ರಿಕ್ ಟನ್ ತೈಲ ಹೊಂದಿದ್ದು, ವಾರ್ಷಿಕ ೧೨ ಮಿಲಿಯನ್ ಮೆ೩೫ಟ್ರಿಕ್ ಟನ್ ತೈಲೋತ್ಪಾದನೆ ಮಾಡುತ್ತಿದೆ.
- ಇದೊಂದೇ ಪ್ರದೇಶ ೨೦೦೪ರಲ್ಲಿ ಭಾರತದ ಶೇ.೧೪ರಷ್ಟು ತೈಲ ಅಗತ್ಯವನ್ನು ಪೂರೈಸಿತ್ತು. ಹಾಗೂ ದೇಶಿಯ ತೈಲ ಉತ್ಪಾದನೆಯಲ್ಲಿ ಶೇ. ೩೮ರಷ್ಟು ಪ್ರಮಾಣ ಹೊಂದಿತ್ತು. ೨೦೦೯ರಲ್ಲಿ ಈ ದಾಖಲೆಯನ್ನು ಮುರಿದು, ದೇಶದ ಅರ್ಧದಷ್ಟು ಬೇಡಿಕೆಯ ತೈಲ ಪೂರೈಸಿತ್ತು. ಪ್ರಸ್ತುತ ೨೦೫,೦೦೦ ಬ್ಯಾರೆಲ್ ತೈಲವನ್ನು ಪ್ರತಿನಿತ್ಯ ಉತ್ಪಾದಿಸುತ್ತದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### 7. ಚಾರ್ ಧಾಮ್ ಹೆದ್ದಾರಿ ವಿಸ್ತರಣೆ

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ರಾಷ್ಟ್ರೀಯ ಹಸಿರು ನ್ಯಾಯಾಧಿಕಾರಣವು ಚಾರ್ ಧಾಮ್ ಹೆದ್ದಾರಿ ವಿಸ್ತರಣೆ ಹಾದಿಯನ್ನು ಸುಗಮಗೊಳಿಸಿದೆ. ಆದರೆ, ಇಲ್ಲಿ ಭಾಗೀರಥಿ ಜೈವಿಕ ವಲಯಕ್ಕೆ ಧಕ್ಕೆಯಾಗುತ್ತದೆ ಎನ್ನುವ ಹಿನ್ನಲೆಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಾಧಿಕಾರಣಕ್ಕೆ ಅರ್ಜಿ ಸಲ್ಲಿಕೆಯಾಗಿತ್ತು.
- ಇದರ ವಿಚಾರಣೆ ನಡೆಸಿದ ಎನ್ ಜಿಟಿ, ಇದೀಗ ಹೆದ್ದಾರಿ ವಿಸ್ತರಣೆಗೆ ಅನುಮತಿ ನೀಡಿದ್ದು, ಇದಕ್ಕಾಗಿ ಇರುವ ಕಾನೂನುಗಳನ್ನು ನಿಖರವಾಗಿ ಪಾಲಿಸುವುದಾಗಿ ಉತ್ತರಾಖಂಡ ಸರ್ಕಾರ ಹಾಗೂ ಗಡಿ ರಸ್ತೆ ಸಂಸ್ಥೆ ಭರವಸೆ ನೀಡಿದೆ.

- ೨೦೧೭ರ ಡಿಸೆಂಬರ್ ನಲ್ಲಿ ಚಾರ್ ಧಾಮ್ ಹೆದ್ದಾರಿ ಪ್ರಧಾನಿ ನರೇಂದ್ರ ಮೋದಿ ಶಿಲಾನ್ಯಾಸ ನೆರೆವೇರಿಸಿದ್ದರು. ಒಟ್ಟು ೯೦೦ ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿಯನ್ನು ೧೨ ಸಾವಿರ ಕೋಟಿ.ರೂ ವೆಚ್ಚದಲ್ಲಿ ವಿಸ್ತರಣೆ ಮಾಡುವುದು ಯೋಜನೆಯ ಉದ್ದೇಶ. ಇದು, ಬದರೀನಾಥ, ಕೇದಾರನಾಥ, ಗಂಗೋತ್ರಿ, ಯಮುನೋತ್ರಿಗಳನ್ನು ಬೆಸೆಯುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 8. ಭಾರತದ ಮೊದಲ ಇ-ಬಸ್

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಭಾರತದ ಮೊಟ್ಟಮೊದಲ ಎಲೆಕ್ಟ್ರಿಕ್ ಬಸ್ ಸೇವೆಯನ್ನು ಹಿಮಾಚಲ ಪ್ರದೇಶದ ರೋಹ್ತಂಗ್‌ಪಾಸ್ ಪ್ರದೇಶದಲ್ಲಿ ಆರಂಭಿಸಲಾಗಿದೆ. ಭಾರತದ ಯಾವುದೇ ಪ್ರವಾಸಿ ತಾಣಗಳಲ್ಲಿ ಈ ಸೇವೆ ಆರಂಭವಾಗಿರುವುದು ಇದೇ ಮೊದಲು.
- ಸಮುದ್ರಮಟ್ಟದಿಂದ 13 ಸಾವಿರ ಅಡಿ ಎತ್ತರದ ಪ್ರದೇಶದಲ್ಲಿ ಈ ಸೇವೆ ಆರಂಭಿಸಿರುವುದು ವಿಶ್ವದಲ್ಲೇ ಮೊದಲು.
- ಮನಾಲಿ ಮತ್ತು ರೋಹ್ತಂಗ್ ಪಟ್ಟಣಗಳ ನಡುವೆ ಇಂಥ 10 ಬಸ್ಸುಗಳು ಓಡಾಡುತ್ತವೆ. ರೋಹ್ತಂಗ್ ಪ್ರದೇಶದಲ್ಲಿ ಡೀಸೆಲ್ ಕಾರುಗಳ ಅತಿಯಾದ ಓಡಾಟದಿಂದಾಗಿ ಪರಿಸರಕ್ಕೆ ತೀವ್ರ

ಹಾನಿಯಾಗುತ್ತಿದೆ ಎಂಬ ಆರೋಪ ವ್ಯಾಪಕವಾಗಿ ಕೇಳಿಬಂದಿರುವ ಹಿನ್ನೆಲೆಯಲ್ಲಿ ಇ-ಬಸ್‌ಗಳಿಗೆ ಚಾಲನೆ ನೀಡಲಾಗಿದೆ.

- ಹಿಮಾಲಯದ ಹಿಮನದಿ ಕರಗಲು ಪ್ರಮುಖ ಕಾರಣವಾಗಿರುವ ಇಂಗಾಲದ ಉಗುಳುವಿಕೆ ಕಡಿಮೆ ಮಾಡುವಲ್ಲಿ ಇದು ಮಹತ್ವದ ಪಾತ್ರ ವಹಿಸಲಿದೆ.
- ಹಿಮಾಲಯದ ಹಿಮಕರಗಲು ಕಾರಣವಾಗುವ ಇಂಗಾಲದ ಡೈ ಆಕ್ಸೈಡ್ ಕಡಿಮೆ ಮಾಡುವ ನಿಟ್ಟಿನಲ್ಲಿ ರೋಹ್ಟಂಗ್ ಪಾಸ್ ಪ್ರದೇಶಕ್ಕೆ ವಾಹನಗಳ ಸಂಚಾರವನ್ನು ರದ್ದುಪಡಿಸಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಹಿಮಾಚಲ ಪ್ರದೇಶ ಎಲೆಕ್ಟ್ರಿಕ್ ವಾಹನಗಳನ್ನು ಆರಂಭಿಸುವುದು ಅನಿವಾರ್ಯವಾಯಿತು.
- ಈ ಪ್ರದೇಶದಲ್ಲಿ ಪ್ರತಿ ವರ್ಷ 19-20 ಮೀಟರ್‌ನಷ್ಟು ಹಿಮ ಕರಗುತ್ತಿರುವ ಹಿನ್ನೆಲೆಯಲ್ಲಿ ಇದನ್ನು ಗಂಭೀರವಾಗಿ ಪರಿಗಣಿಸಿದ ಎನ್‌ಜಿಟಿ ಇದರ ತಡೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಆದೇಶ ನೀಡಿತ್ತು. ಆ ಬಳಿಕ ಪ್ರತಿದಿನ ಎಲ್ಲ ಡೀಸೆಲ್, ಪೆಟ್ರೋಲ್, ಎಲೆಕ್ಟ್ರಿಕ್ ಮತ್ತು ಸಿಎನ್‌ಜಿ ವಾಹನಗಳು ಸೇರಿದಂತೆ 1000 ವಾಹನಗಳಿಗೆ ಮಿತಿ ವಿಧಿಸಲಾಗಿತ್ತು.

- ರೋಹ್ಟಂಗ್ ಪಾಸ್ ಸಮುದ್ರಮಟ್ಟದಿಂದ 3978 ಮೀಟರ್ ಎತ್ತರದಲ್ಲಿದ್ದು, ಇದು ಹಿಮಾಲಯದ ಪೂರ್ವ ಪಿರ್‌ಪಂಜಾಲ್ ಸರಣಿಯ ಶಿಖರ ಪ್ರದೇಶವಾಗಿದೆ. ಮನಾಲಿಯಿಂದ ಸುಮಾರು 51 ಕಿಲೋಮೀಟರ್ ದೂರದಲಿದೆ. ಇದು ಲಹೌಲ್ ಮತ್ತು ಸ್ಪಿತಿ ಕಣಿವೆಗಳು ಮತ್ತು ಕುಲು ಮಧ್ಯೆ ಸಂಪರ್ಕ ಕಲ್ಪಿಸುತ್ತದೆ.

26th SEPTEMBER

1. ರಾಜೀವ್ ಮಹರ್ಷಿ- ಭಾರತದ ನೂತನ ಸಿಎಜಿ ಯಾಗಿ ನೇಮಕ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಭಾರತದ 13 ನೇ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ (ಸಿಎಜಿ) ಆಗಿ ರಾಜೀವ್ ಮಹರ್ಷಿ ಅಧಿಕಾರ ವಹಿಸಿಕೊಂಡಿದ್ದಾರೆ.
- ಶಶಿಕಾಂತ್ ಶರ್ಮಾ ಅವರಿಂದ ತೆರವಾದ ಸ್ಥಾನಕ್ಕೆ ರಾಜೀವ್ ಮಹರ್ಷಿ ನೇಮಕಗೊಂಡಿದ್ದಾರೆ. ರಾಜಸ್ಥಾನ ಕೇಡರ್‌ನ 1978ನೇ ಬ್ಯಾಚ್ ಐಎಎಸ್ ಅಧಿಕಾರಿ ಮಹರ್ಷಿ ಅವರು ಕೇಂದ್ರ ಗೃಹ ಖಾತೆ ಕಾರ್ಯದರ್ಶಿಯಾಗಿ ಎರಡು ವರ್ಷಗಳ ಅವಧಿಯನ್ನು ಕಳೆದ ತಿಂಗಳು ಪೂರ್ತಿಗೊಳಿಸಿದ್ದರು.
- ಮುಂದಿನ ಮೂರು ವರ್ಷಗಳ ಅವಧಿಗೆ ಮಹರ್ಷಿ ಮಹಾಲೇಖಪಾಲರಾಗಿ ಕಾರ್ಯನಿರ್ವಹಿಸಲಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಖಾತೆಗಳ ಲೆಕ್ಕ ಪರಿಶೋಧನೆ ನಡೆಸುವುದು ಸಿಎಜಿ ಪ್ರಾಥಮಿಕ ಕಾರ್ಯವಾಗಿದೆ.
- **ನೇಮಕ** :ಪ್ರಧಾನ ಮಂತ್ರಿಯವರ ಶಿಫಾರಸಿನ ಮೇರೆಗೆ ಸಿಎಜಿಯನ್ನು ರಾಷ್ಟ್ರಪತಿಯವರು ನೇಮಕ ಮಾಡುತ್ತಾರೆ. ಸಿಎಜಿ ರವರು ರಾಷ್ಟ್ರಪತಿ ರವರ ಮುಂದೆ ಪ್ರಮಾಣ ಅಥವಾ ದೃಢೀಕರಣವನ್ನು ಮಾಡಬೇಕಾಗಿದೆ.
- **ತೆಗೆಯುವಿಕೆ:** ಸಾಬೀತಾದ ದುರಾಡಳಿತ ಅಥವಾ ಅಸಮರ್ಥತೆಯ ಆಧಾರದ ಮೇಲೆ ಕೇವಲ ಸಂಸತ್ತಿನ ಅಧಿಕಾರ ಉಪಯೋಗಿಸಿ ಸಿಎಜಿ ಅನ್ನು ತೆಗೆದುಹಾಕಬಹುದು. ಸಿಎಜಿಯ 6 ವರ್ಷಗಳ ಅವಧಿ ಮುಗಿಯಬೇಕು ಇಲ್ಲವೇ 65 ವರ್ಷ ವಯಸ್ಸಗಿರಬೇಕು ಆಗ ಅವರು ನಿವೃತ್ತಿ ಹೊಂದುತ್ತಾರೆ .

ಮುಖ್ಯ ಪರೀಕ್ಷೆಗಾಗಿ

- ಸಂವಿಧಾನದ 148ನೇ ವಿಧಿ ಅನ್ವಯ ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಹುದ್ದೆಗೆ ನೇಮಕ ಮಾಡಲಾಗುತ್ತದೆ. ಇದು ಸಂವಿಧಾನಾತ್ಮಕ ಹುದ್ದೆಯಾಗಿದ್ದು, ಇವರ ಅಧಿಕಾರಾವಧಿ ಆರು ವರ್ಷ ಅಥವಾ 65 ವರ್ಷ ವಯಸ್ಸಾಗುವವರೆಗೆ ಇರುತ್ತದೆ.
- ಸಿಎಜಿ ಸೇವೆಗಳು ಹಾಗೂ ಷರತ್ತುಗಳನ್ನು ಸಂಸತ್ತು ಸಿಎಜಿ (ಷರತ್ತು ಮತ್ತು ಸೇವೆ) ಕಾಯ್ದೆ-1953ರಲ್ಲಿ ನಿದಿಷ್ಟಪಡಿಸಿದೆ. ಇದನ್ನು 1971ರಲ್ಲಿ ತಿದ್ದುಪಡಿ ಮಾಡಲಾಗಿದೆ. ಈ ಹುದ್ದೆಯಲ್ಲಿರುವವರಿಗೆ ಭತ್ಯೆಗಳನ್ನು ಹಾಗೂ ಪಿಂಚಣಿಯನ್ನು ಭಾರತದ ಕ್ರೋಢೀಕೃತ ನಿಧಿಯಿಂದ ನೀಡಲಾಗುತ್ತದೆ.
- ಸಿಎಜಿಯವರ ಪದಚ್ಯುತಿ ಕಷ್ಟಕರ ಹಾಗೂ ಇದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ಪದಚ್ಯುತಿಯಂತೇ ವಿಧಿವಿಧಾನಗಳನ್ನು ಅನುಸರಿಸಬೇಕಾಗುತ್ತದೆ. ಸಿಎಜಿ ಆಗಿದ್ದವರು ನಿವೃತ್ತಿಯ ಬಳಿಕ ಯಾವುದೇ ಭಾರತ ಸರ್ಕಾರಿ ಸೇವಾ ಉದ್ಯೋಗವನ್ನು ನಿರ್ವಹಿಸುವಂತಿಲ್ಲ.
- ಸಿಎಜಿ ಕಚೇರಿಗೆ ನೀಡಿರುವ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಈ ಷರತ್ತು ವಿಧಿಸಲಾಗಿದೆ. ಸಿಎಜಿ ವರದಿಗೆ ತನ್ನದೇ ಆದ ಘನತೆ ಇದ್ದು, ಇದನ್ನು ಪರಾಮರ್ಶನಾ ವರದಿಯಾಗಿ ಪರಿಗಣಿಸಲಾಗುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಸಿಎಜಿ ಕಾರ್ಯಗಳು

- ಸಿಎಜಿ ಕೇಂದ್ರ ಹಾಗೂ ರಾಜ್ಯಕ್ಕೆ ಸೂಕ್ತ ಲೆಕ್ಕಪತ್ರಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ರಾಷ್ಟ್ರಪತಿಯವರ ಅನುಮೋದನೆ ಮೇರೆಗೆ ಸಲಹೆ ಸೂಚನೆಗಳನ್ನು ನೀಡುತ್ತದೆ. ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಲೆಕ್ಕಪತ್ರಗಳ ಮೇಲೆ ಮಾತ್ರವಲ್ಲದೇ, ಭಾರತ ಸರ್ಕಾರದಿಂದ ನೆರವು ಪಡೆಯುವ ಯಾವುದೇ ಸಂಘ ಸಂಸ್ಥೆಗಳ ಲೆಕ್ಕಪತ್ರಗಳ ಮೇಲೂ ನಿಯಂತ್ರಣ ಹೊಂದಿರುತ್ತದೆ.
- ಇದನ್ನು ಸಂಸತ್ತಿನಲ್ಲಿ ಅಂಗೀಕರಿಸಲಾದ ಕಾನೂನಿನಲ್ಲಿ ಸ್ಪಷ್ಟಪಡಿಸಲಾಗಿದೆ. ಸಿಎಜಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬಗೆಗಿನ ವರದಿಯನ್ನು ಕ್ರಮವಾಗಿ ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ನೀಡುತ್ತಾರೆ. ರಾಷ್ಟ್ರಪತಿಗಳು ಈ ವರದಿಯನ್ನು ಸಂಸತ್ತಿಗೆ ನೀಡುತ್ತಾರೆ.

- 1976ರಲ್ಲಿ ಲೆಕ್ಕಪತ್ರವನ್ನು ಸಿಎಜಿ ಕರ್ತವ್ಯವಾದ ಲೆಕ್ಕ ಪರಿಶೋಧನೆಯಿಂದ ಪ್ರತ್ಯೇಕಿಸಲಾಗಿದೆ. ಇದೀಗ ಲೆಕ್ಕಪತ್ರವನ್ನು ಇತರ ಏಜೆನ್ಸಿಗಳು ನಿರ್ವಹಿಸುತ್ತವೆ.

SOURCE-http://www.thehindubusinessline.com/info-tech/tribes-india-products-to-be-sold-on-amazon/article9872734.ece

## 2. ಭಾರತದ ಬುಡಕಟ್ಟು ಜನರ ಉತ್ಪನ್ನಗಳನ್ನು ಅಮೆಜಾನ್ ನಲ್ಲಿ ಮಾರಾಟ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 'ಟ್ರೈಬ್ಸ್ ಇಂಡಿಯಾ' ಬ್ರಾಂಡ್ ಅನ್ನು ಜನಪ್ರಿಯಗೊಳಿಸಲು ಆನ್‌ಲೈನ್ ಮಾರಾಟ ಸಂಸ್ಥೆಯಾದ ಅಮೆಜಾನ್ ಮೂಲಕ ಬುಡಕಟ್ಟು ಉತ್ಪನ್ನಗಳನ್ನು ಮಾರಾಟ ಮಾಡುವ ಸಂಬಂಧ ಭಾರತದ ಬುಡಕಟ್ಟು ಸಹಕಾರ ಮಾರುಕಟ್ಟೆ ಅಭಿವೃದ್ಧಿ ಒಕ್ಕೂಟ (TRIFED) ಒಪ್ಪಂದ ಮಾಡಿಕೊಂಡಿದೆ.
- ಈ ಯೋಜನೆಯ ಮುಖ್ಯ ಉದ್ದೇಶವೆಂದರೆ, ಕೈಮಗ್ಗ ಉತ್ಪನ್ನಗಳು, ಬಿದಿರು ಮತ್ತು ಬೆತ್ತದ ಉತ್ಪನ್ನಗಳು, ಬುಡಕಟ್ಟು ಆಭರಣಗಳು, ಧೋಕ್ರಾ ಕುಶಲಕಲೆ, ಬುಡಕಟ್ಟು ನೆಯ್ಗೆ ಮತ್ತು ಕಸೂತಿ, ಬುಡಕಟ್ಟು ಚಿತ್ರಕಲೆಯಂಥ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವುದು.

ಮುಖ್ಯ ಪರೀಕ್ಷೆಗಾಗಿ

- ಈ ಒಪ್ಪಂದದ ಭಾಗವಾಗಿ, ಬುಡಕಟ್ಟು ಜನರೇ ಸಿದ್ಧಪಡಿಸಿದ ಆಕರ್ಷಕವಾದ ಹಾಗೂ ಅಧಿಕೃತ ಬುಡಕಟ್ಟು ಕಲೆ ಹಾಗೂ ಕುಶಲಕಲೆ ವಸ್ತುಗಳನ್ನು ದೇಶಾದ್ಯಂತ ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ಅಮೆಜಾನ್‌ಗೆ ಅಧಿಕಾರ ಇರುತ್ತದೆ.
- ಅಮೆಜಾನ್‌ನ ಎಲ್ಲ ಗ್ರಾಹಕರು ಸುಲಭ ಹಾಗೂ ಸುಲಲಿತವಾಗಿ, 100ಕ್ಕೂ ಹೆಚ್ಚು ವರ್ಗಗಳ 65 ದಶಲಕ್ಷ ಉತ್ಪನ್ನಗಳನ್ನು ಈ ಮೂಲಕ ಪಡೆಯಲು ಅವಕಾಶವಾಗಲಿದೆ. ಈ ಯೋಜನೆಯ

ಮೂಲಕ ಟ್ರೈಬ್ ಇಂಡಿಯಾ ಹರವನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶ ಕೇಂದ್ರ ಸರ್ಕಾರದ್ದಾಗಿದೆ. ಚಿಲ್ಲರೆ ಮಾರಾಟದ ಮೂಲಕ ಪ್ರತಿ ಮನೆ ಮನೆಗೆ ಇದನ್ನು ತಲುಪುವಂತೆ ಮಾಡುವುದು ಕೇಂದ್ರ ಸರ್ಕಾರದ ಮಹತ್ವದ ಗುರಿಯಾಗಿದೆ.

**ಭಾರತದ ಬುಡಕಟ್ಟು ಸಹಕಾರ ಮಾರುಕಟ್ಟೆ ಅಭಿವೃದ್ಧಿ ಒಕ್ಕೂಟ (TRIFED) ಬಗ್ಗೆ**

- ಭಾರತದ ಬುಡಕಟ್ಟು ಸಹಕಾರ ಮಾರುಕಟ್ಟೆ ಅಭಿವೃದ್ಧಿ ಒಕ್ಕೂಟ, ರಾಷ್ಟ್ರಮಟ್ಟದ ಅತ್ಯುನ್ನತ ಸಂಸ್ಥೆಯಾಗಿದ್ದು, ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಆಡಳಿತ ನಿಯಂತ್ರಣದಲ್ಲಿದೆ. ಇದನ್ನು 1987ರಲ್ಲಿ ಅಂದಿನ ಕಲ್ಯಾಣ ಖಾತೆ ಸಚಿವರು ಉದ್ಘಾಟಿಸಿದ್ದರು, ಇದಕ್ಕಾಗಿಯೇ ಬಹು ರಾಜ್ಯ ಸಹಕಾರ ಸೊಸೈಟಿಗಳ ಕಾಯ್ದೆ- 1984ನ್ನು ಅನುಷ್ಠಾನಕ್ಕೆ ತರಲಾಗಿತ್ತು. ಇದನ್ನು 2002ರಲ್ಲಿ ಬಳಿಕ ಪರಿಷ್ಕರಿಸಲಾಗಿದೆ.
- ಕಿರು ಅರಣ್ಯ ಉತ್ಪನ್ನಗಳ ಮತ್ತು ಕಾಡಿನಲ್ಲಿ ಸಂಗ್ರಹವಾದ ಅಥವಾ ಬೆಳೆದ ಹೆಚ್ಚುವರಿ ಕೃಷಿ ಉತ್ಪನ್ನಗಳನ್ನು ಮಾರಾಟವನ್ನು ಸಾಂಸ್ಥೀಕರಿಸುವ ಮೂಲ ಉದ್ದೇಶವೆಂದರೆ, ಇವುಗಳಿಗೆ ಒಳ್ಳೆಯ ಮಾರುಕಟ್ಟೆ ಸೌಲಭ್ಯ ಕಲ್ಪಿಸುವುದು.
- ಏಕೆಂದರೆ ಬಹುತೇಕ ಇಂಥ ಬುಡಕಟ್ಟು ಕುಟುಂಬಗಳು ತಮ್ಮ ಜೀವನಾಧಾರಕ್ಕಾಗಿ ಇಂಥ ವಸ್ತುಗಳನ್ನೇ ಅವಲಂಬಿಸಿದ್ದಾರೆ. ಭಾರತದ ಬುಡಕಟ್ಟು ಸಹಕಾರ ಮಾರುಕಟ್ಟೆ ಅಭಿವೃದ್ಧಿ ಒಕ್ಕೂಟ , ಎಫ್‌ಸಿಐಗೆ ಅಕ್ಕಿ ಮತ್ತು ಗೋಧಿ ಖರೀದಿ ಏಜೆನ್ಸಿಯಾಗಿಯೂ ಕಾರ್ಯ ನಿರ್ವಹಿಸುತ್ತಿದೆ.

**SOURCE- http://pib.nic.in/newsite/PrintRelease.aspx?relid=171124**

## 3. 'ಪೆನ್ಸಿಲ್ '- ಬಾಲ ಕಾರ್ಮಿಕ ನಿಷೇದಕ್ಕೆ ಪೋರ್ಟಲ್

**ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ**

**ಪ್ರಮುಖ ಸುದ್ದಿ**

- ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯ (NCLP) ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸರ್ಕಾರವು 'ಪೆನ್ಸಿಲ್' ಎಂಬ ವೆಬ್ ಪೋರ್ಟಲ್ ಅನ್ನು ಪ್ರಾರಂಭಿಸಿದೆ.

- ಪೆನ್ಸಿಲ್ ( Platform for Effective Enforcement for No Child Labour- ಬಾಲಕಾರ್ಮಿಕರ ಪರಿಣಾಮಕಾರಿ ನಿಷೇಧಕ್ಕಾಗಿ ಜಾರಿಗೊಳಿಸುವ ವೇದಿಕೆ) - ಕೇಂದ್ರ ಕಾರ್ಮಿಕ ಸಚಿವಾಲಯವು ದೇಶದಲ್ಲಿ ಯಾವುದೇ ಮಕ್ಕಳು ಬಾಲಕಾರ್ಮಿಕರಗಬಾರದೆಂದು ವಿದ್ಯುನ್ಮಾನ ವೇದಿಕೆಯನ್ನು ಅಭಿವೃದ್ಧಿಪಡಿಸುತ್ತಿದೆ.
- ಪೆನ್ಸಿಲ್ ಪೋರ್ಟಲ್ ಐದು ಘಟಕಗಳನ್ನು ಹೊಂದಿದೆ - ಚೈಲ್ಡ್ ಟ್ರಾಕಿಂಗ್ ಸಿಸ್ಟಮ್, ದೂರು ವಿಭಾಗ , ರಾಜ್ಯ ಸರ್ಕಾರ, ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಮತ್ತು ಕನ್ವರ್ಜೆನ್ಸ್.

ಮುಖ್ಯ ಪರೀಕ್ಷೆಗಾಗಿ

ರಾಷ್ಟ್ರೀಯ ಮಕ್ಕಳ ಬಾಲ ಕಾರ್ಮಿಕ ಯೋಜನೆ (NCLP) ಬಗ್ಗೆ

- 1986 ರಲ್ಲಿ ಬಾಲ ಕಾರ್ಮಿಕ (ತಡೆ ಮತ್ತು ನಿಯಂತ್ರಣ) ಕಾಯ್ದೆ ಜಾರಿಗೆ ಗೊಳಿಸಲಾಯಿತು ಇದರ ಪ್ರಕಾರ 14 ವರ್ಷದ ಒಳಗಿನ ಮಕ್ಕಳನ್ನು ದುಡಿಸಿಕೊಳ್ಳುವಂತಿಲ್ಲ. ಈ ಕಾಯ್ದೆಯ ಮೂರನೇ ಪರಿಚ್ಛೇದ, ಮಕ್ಕಳು ದುಡಿಯಬಾರದ 18 ಅಪಾಯಕಾರಿ ವೃತ್ತಿಗಳು ಮತ್ತು 65 ಸಂಸ್ಕರಣಾ ಘಟಕಗಳನ್ನು ಗುರುತಿಸಿದೆ.
- ಕಾಯ್ದೆ ಉಲ್ಲಂಘಿಸಿ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳುವ ವ್ಯಕ್ತಿಗಳಿಗೆ 3 ತಿಂಗಳಿನಿಂದ ಒಂದು ವರ್ಷದವರೆಗೆ ಜೈಲು ಶಿಕ್ಷೆ, ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ.

**ಮಕ್ಕಳ ದುಡಿಮೆಗೆ ತಡೆ ಒಡ್ಡುವ ಇತರ ಕಾಯ್ದೆಗಳು:**

*ಗಣಿ ಕಾಯ್ದೆ 1952: 18 ವರ್ಷಕ್ಕಿಂತ ಕೆಳಗಿನವರಿಗೆ ಗಣಿಯ ಯಾವುದೇ ಭಾಗಕ್ಕೂ ಪ್ರವೇಶವಿಲ್ಲ.

*ಕಾರ್ಖಾನೆಗಳ ಕಾಯ್ದೆ 1948, ವ್ಯಾಪಾರಿ ಹಡಗು ಕಾಯ್ದೆ

*1958, ಮೋಟಾರು ವಾಹನಗಳ ಕಾಯ್ದೆ 1961, ಬೀಡಿ ಮತ್ತು ಸಿಗಾರು ಕಾರ್ಮಿಕರ (ಉದ್ಯೋಗದ ಸ್ಥಿತಿಗತಿ) ಕಾಯ್ದೆ 1966: ಈ ಎಲ್ಲ ಕಾಯ್ದೆಗಳ ವ್ಯಾಪ್ತಿಯಡಿಯೂ 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳುವಂತಿಲ್ಲ.

*ಜೀತ ಕಾರ್ಮಿಕ ವ್ಯವಸ್ಥೆ (ನಿರ್ಮೂಲನೆ) ಕಾಯ್ದೆ 1976: ಮಕ್ಕಳು ಸೇರಿದಂತೆ ಯಾವ ವ್ಯಕ್ತಿಯನ್ನೂ ಜೀತಕ್ಕೆ ಇಟ್ಟುಕೊಳ್ಳುವಂತಿಲ್ಲ.

*ಸ್ಫೋಟಕ ಕಾಯ್ದೆ 1984:18 ವರ್ಷದ ಒಳಗಿನವರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತಿಲ್ಲ.

*ಮಹಿಳೆಯರು ಮತ್ತು ಮಕ್ಕಳ ಅಕ್ರಮ ಸಾಗಣೆ ತಡೆ ಕಾಯ್ದೆ 1956, ಬಾಲಕಾರ್ಮಿಕ (ತಡೆ ಮತ್ತು ನಿಯಂತ್ರಣ) ಕರ್ನಾಟಕ ನಿಯಮಗಳು 1997: ಇವು ಸಹ ಬಾಲಕಾರ್ಮಿಕ ವಿರೋಧಿಯಾಗಿವೆ.

*ಅಪರಾಧ ಕಾನೂನು (ತಿದ್ದುಪಡಿ) ಕಾಯ್ದೆ 2013: ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ, ಒತ್ತಾಯವಾಗಿ ದುಡಿಸಿಕೊಳ್ಳುವುದರಿಂದ ರಕ್ಷಿಸುತ್ತದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**4. ತೈಲ ಬೆಲೆನೀತಿ ಸುಧಾರಣೆ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಇತ್ತೀಚೆಗೆ ಪೆಟ್ರೋಲ್, ಡೀಸೆಲ್ ಬೆಲೆಗಳ ದಿಢೀರ್ ಏರಿಕೆ ಹಿನ್ನಲೆಯಲ್ಲಿ ತೈಲ ಬೆಲೆ ನೀತಿಗೆ ವ್ಯಾಪಕ ವಿರೋಧ ವ್ಯಕ್ತವಾಗಿದೆ. ಆದರೆ, ಕೆಲ ತಿಂಗಳ ಹಿಂದಷ್ಟೇ ಜಾರಿಗೊಳಿಸಲಾಗಿದ್ದ ಪ್ರತಿದಿನವೂ ತೈಲಬೆಲೆ ಪರಿಷ್ಕರಿಸುವ ನೀತಿ ರದ್ದುಗೊಳಿಸುವ ಸಾಧ್ಯತೆಯನ್ನು ಕೇಂದ್ರ ಸರ್ಕಾರ ತಳ್ಳಿಹಾಕಿದೆ.

- ಕಳೆದ ಜೂನ್ ೧೬ರಿಂದಲೂ ದೇಶಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪ್ರತಿದಿನವೂ ಪರಿಷ್ಕರಣೆಯಾಗುತ್ತಿದೆ. ಅದಕ್ಕೂ ಹಿಂದೆ ಪ್ರತಿ ೧೫ ದಿನಕ್ಕೊಮ್ಮೆಯಷ್ಟೇ ತೈಲ ಬೆಲೆ ಪರಿಶರಣೆಗೆ ಅವಕಾಶ ಇತ್ತು. ನೂತನ ನೀತಿ ಅಳವಡಿಕೆ ಮೂಲಕ ಇದೆ ಮಾದರಿಯ ರೀತಿ ಅಳವಡಿಸಿಕೊಂಡಿರುವ ಅಮೇರಿಕ ಮೊದಲಾದ ರಾಷ್ಟ್ರಗಳ ಸಲಿಗೆ ಭಾರತವು ಸೇರಿತ್ತು.
- ೨೦೧೦ರಲ್ಲಿಯೇ ಭಾರತದಲ್ಲಿ ತೈಲ ಬೆಲೆಯನ್ನು ಅನಿಯಂತ್ರಗೊಳಿಸಲಾಯಿತು. ನಂತರದಲ್ಲಿ ೨೦೧೪ ರಲ್ಲೂ ತೈಲ ಬೆಲೆ ಅನಿಯಂತ್ರಣಗೊಳಿಸಿ ೧೫ ದಿನಕ್ಕೊಮ್ಮೆ ಪರಿಷ್ಕರಿಸಲು ಅವಕಾಶ ನೀಡಲಾಗಿತ್ತು.

### ಮುಖ್ಯ ಪರೀಕ್ಷೆಗಾಗಿ

- ಕಚ್ಚಾ ತೈಲ ಬೆಲೆಯಲ್ಲಿನ ಏರಿಳತಕ್ಕೆ ತಕ್ಕಂತೆ ಕಂಪನಿಗಳು ಪ್ರತಿದಿನವೂ ಸೂಕ್ತ ಬೆಲೆ ನಿಗದಿ ಮಾಡಲು ನೂತನ ನೀತಿಯಿಂದ ಸಾಧ್ಯವಾಗಿದೆ. ಇದರಿಂದ ನ್ಯಾಯಯುತ ಬೆಲೆ ನಿಗದಿ ಮಾಡಬಹುದು. ಹಿಂದೆಲ್ಲ ಕಚ್ಚಾತೈಲ ಬೆಲೆಯಲ್ಲಿ ಇಳಿಕೆಯಾದರೆ,ಪೆಟ್ರೋಲ್, ಡೀಸೆಲ್ ಬೆಲೆ ಇಳಿಕೆ ಮಾಡಲು ೧೫ ದಿನ ಕಾಯಬೇಕಿತ್ತು. ಜನರಿಗೆ ನಷ್ಟವಾಗುತ್ತಿತ್ತು. ನೂತನ ನೀತಿಯಿಂದ ಈ ನಷ್ಟ ತಪ್ಪಲಿದೆ ಎಂದು ಸರ್ಕಾರ ವಾದಿಸಿತ್ತು.

### ವಿರೋಧಕ್ಕೆ ಕಾರಣಗಳೇನು?

- ಕಳೆದ ಕೆಲ ವಾರಗಳಿಂದ ಪ್ರತಿದಿನದ ತೈಲ ಪರಿಷ್ಕರಣೆ ನೀತಿ ಟೀಕೆಗೊಳಗಾಗುತ್ತಿದೆ. ತೈಲ ಬೆಲೆಗಳ ತೀವ್ರ ಹೆಚ್ಚಳವೇ ಇದಕ್ಕೆ ಕಾರಣ. ಹೊಸ ನೀತಿ ಜಾರಿಯಾದ ಪ್ರಾರಂಭದಲ್ಲಿ ತೈಲ ಬೆಲೆ ಕಡಿಮೆಯಾದರೂ, ನಂತರದಲ್ಲಿ ಬೆಲೆ ಏರಿಕೆಯಾಗುತ್ತಲೇ ಸಾಗಿದೆ.
- ದೆಹಲಿ, ಕೋಲ್ಕತ್ತಾ ಮೊದಲಾದ ಮೆಟ್ರೋಪಾಲಿಟನ್ ನಗರಗಳಲ್ಲಿ ತೈಲ ಬೆಲೆ ಏರಿಕೆ ಹೆಚ್ಚಿನ ಪ್ರಮಾಣದಲ್ಲಿದೆ. ಅಮೇರಿಕಾದಲ್ಲಿ ಉಂಟಾಗಿರುವ ಚಂಡಮಾರುತದ ಪರಿಣಾಮ ಕಚ್ಚಾ ತೈಲ ಪೂರೈಕೆಯ ಕೊರತೆಯೇ ತೈಲ ಬೆಲೆ ಏರಿಕೆಗೆ ಕಾರಣ ಎಂದು ಸರ್ಕಾರ ಸಮಾಧಾನ ಹೇಳಿದೆ.

- ಕಳೆದ ಕೆಲ ವರ್ಷಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತೈಲಬೆಲೆಗಳಲ್ಲಿ ತೀವ್ರ ಇಳಿಕೆ ಕಂಡಿದ್ದರೂ, ಅದಕ್ಕೆ ತಕ್ಕಂತೆ ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಬೆಳೆಗಳಲ್ಲಿ ಇಳಿಕೆಯಾಗಿಲ್ಲ ಎಂಬುದು ಟೀಕಾಕಾರ ಕೋಪಕ್ಕೆ ಕಾರಣವಾಗಿದೆ.

ಪರಿಹಾರಕ್ಕೆ ಮಾರ್ಗೋಪಾಯ

- ಅಂತಾರಾಷ್ಟ್ರೀಯ ಕಚ್ಚಾತೈಲ ಬೆಲೆ ಏರಿಳಿತಕ್ಕೆ ನುಗುಣವಾಗಿ ಪೆಟ್ರೋಲ್, ಡೀಸೆಲ್ ಬೆಲೆಯನ್ನು ನಿಗದಿಮಾಡಲು ಇಲ್ಲಿನ ತೆರಿಗೆ ನೀತಿ ಬಹುದೊಡ್ಡ ತೊಡಕಾಗಿದೆ. ಭಾರತದ ತೈಲ ಗ್ರಾಹಕರು ಮಾರುಕಟ್ಟೆ ಬೆಲೆಯ ಸುಮಾರು ಅರ್ಧದಷ್ಟು ಮೊತ್ತವನ್ನು ತರಿಗೆ ರೂಪದಲ್ಲೇ ಪಾವತಿಸುತ್ತಾರೆ.
- ಅಬಕಾರಿ ಸುಂಕ ಹಾಗೂ ವ್ಯಾಟ್ (ಮೌಲ್ಯವರ್ಧಿತ ತೆರಿಗೆ) ಎಲ್ಲವು ಸೇರಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಗೆ ಕಾರಣವಾಗಿದೆ. ಇದರೊಂದಿಗೆ ಪೂರೈಕೆ ಮೇಲಿನ ನಿಯಂತ್ರಣವೂ ಬೆಲೆಯೇರಿಕೆಗೆ ಕಾರಣವಾಗುತ್ತದೆ.
- ವ್ಯಾಟ್ ಹಾಗೂ ಅಬಕಾರಿ ಸುಂಕಗಳನ್ನು ತಗ್ಗಿಸುವ ಮೂಲಕ ತೈಲ ಬೆಲೆಯನ್ನು ಕಡಿಮೆ ಮಾಡಬಹುದು. ಇದಲ್ಲದೆ ತೈಲ ಬೆಲೆಗಳನ್ನು ಜಿಎಸಟಿ ವ್ಯಾಪ್ತಿಗೆ ತರುವುದರಿಂದ ಪರಿಣಾಮಕಾರಿಯಾಗಿ ತಗ್ಗಿಸಬಹುದಾಗಿದೆ. ಆದರೆ, ಇದು ತೈಲ ಕ್ಷೇತ್ರದಲ್ಲಿ ಉತ್ತಮ ಸ್ಪರ್ಧೆ ಇದ್ದಾಗ ಮಾತ್ರ ಸಾಧ್ಯವಾಗುತ್ತದೆ. ಸ್ಪರ್ಧೆ ಇಲ್ಲದ ಪರಿಸ್ಥಿತಿಯಲ್ಲಿ ತೆರಿಗೆ ಸುಧಾರಣೆಯಿಂದ ಗ್ರಾಹಕರಿಗೆ ಲಾಭವಾಗುವ ಬದಲು ತೈಲ ಕಂಪನಿಗಳಿಗೆ ಲಾಭ ಹೆಚ್ಚುತ್ತದೆ.

## 5. ಪ್ರಧಾನ್ ಮಂತ್ರಿ ಸಹಜ್ ಬಿಜ್ಲಿ ಹರ್ ಘರ್ ಯೋಜನೆ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಗ್ರಾಮೀಣ ಮತ್ತು ನಗರ ಪ್ರದೇಶಗಳ ಎಲ್ಲ ಬಡ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ನೀಡುವ ಪ್ರಧಾನ್ ಮಂತ್ರಿ ಸಹಜ್ ಬಿಜ್ಲಿ ಹರ್ ಘರ್ ಯೋಜನೆ (ಸೌಭಾಗ್ಯ ಯೋಜನೆ)ಯನ್ನು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ.

- ಇದು ಗ್ರಾಮೀಣ ಹಾಗೂ ನಗರ ಪ್ರದೇಶಗಳ ಕಟ್ಟಕಡೆಯ ಕುಟುಂಬಕ್ಕೂ ವಿದ್ಯುತ್ ಸಂಪರ್ಕ ಕಲ್ಪಿಸುವ ಯೋಜನೆಯಾಗಿದೆ.
- ಇದು ಕೇಂದ್ರದ ವಿದ್ಯುತ್ ಸಚಿವಾಲಯದ ಅಡಿಯಲ್ಲಿ ಬರುತ್ತದೆ

ಮುಖ್ಯ ಪರೀಕ್ಷೆಗಾಗಿ

- ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಪ್ರತಿ ಹಳ್ಳಿಯನ್ನೂ ಕತ್ತಲಿನಿಂದ ಬೆಳಕಿನೆಡೆಗೆ ತಂದು ಭಾರತವನ್ನು ಪ್ರಕಾಶಿಸುವ ಪ್ರಧಾನಿ ನರೇಂದ್ರ ಮೋದಿ ಕನಸಿಗೆ ಚಾಲನೆ ದೊರೆತಿದೆ. ರಾಷ್ಟ್ರವಾದಿ ಮತ್ಸದ್ದಿ, ಜನಸಂಘ, ಆರೆಸ್ಸೆಸ್ ಮುಖಂಡ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಜನ್ಮಶತಾಬ್ದಿ ಅಂಗವಾಗಿ ಸೋಮವಾರ ದೆಹಲಿಯಲ್ಲಿ ಒಎನ್‌ಜಿಸಿಯ ದೀನ್‌ದಯಾಳ್ ಊರ್ಜಾ ಭವನ ಉದ್ಘಾಟಿಸಿದ ಮೋದಿ, 2018ರ ಅಂತ್ಯದ ವೇಳೆಗೆ ಪ್ರತಿ ಮನೆಗೂ ವಿದ್ಯುತ್ ನೀಡುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ 'ಸೌಭಾಗ್ಯ' ಯೋಜನೆಗೂ ಚಾಲನೆ ನೀಡಿದರು.
- ಯೋಜನೆಯಡಿ ದೇಶದ ಕಡುಬಡವರಿಗೆ ಉಚಿತ ವಿದ್ಯುತ್ ದೊರೆತರೆ, ಕತ್ತಲಲ್ಲಿರುವ ದೇಶದ ನಾಲ್ಕು ಕೋಟಿ ಕುಟುಂಬಗಳಿಗೆ ವಿದ್ಯುತ್ ಭಾಗ್ಯ ಸಿಗಲಿದೆ. ವಿದ್ಯುತ್ ಸೌಲಭ್ಯವಿಲ್ಲದ ಗ್ರಾಮಗಳನ್ನು ಸೋಲಾರ್ ಬೆಳಕು ಬೆಳಗಿಸಲಿದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಏನಿದು ಸೌಭಾಗ್ಯ?

- ಸಹಜ ಬಿಜಲಿ ಹರ್ ಘರ್ ಯೋಜನಾ (ಎಲ್ಲ ಮನೆಗಳಿಗೂ ಸಹಜ ವಿದ್ಯುತ್ ಯೋಜನೆ) ಇದರ ವಿಸ್ತೃತ ಹೆಸರು. ದೇಶದ ಪ್ರತಿ ಹಳ್ಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸಿ, ದಿನದ 24 ಗಂಟೆ ವಿದ್ಯುತ್ ಪೂರೈಸುವುದು ಯೋಜನೆಯ ಮುಖ್ಯ ಗುರಿ.
- ಬಿಪಿಎಲ್ ಕಾರ್ಡ್ ಹೊಂದಿದ ಬಡವರಿಗೆ ಯೋಜನೆ ಅಡಿ ಉಚಿತ ವಿದ್ಯುತ್ ಲಭ್ಯವಾಗಲಿದೆ. 2018ರ ಅಂತ್ಯದ ವೇಳೆಗೆ ದೇಶಾದ್ಯಂತ ದಿನದ 24 ಗಂಟೆ ವಿದ್ಯುತ್ ಪೂರೈಸುವ ಹಾಗೂ ಈ ವರ್ಷಾಂತ್ಯದ ವೇಳೆಗೆ ಎಲ್ಲ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಗುರಿಯನ್ನು ಸರ್ಕಾರ ಹೊಂದಿದೆ.

- ಯೋಜನೆಯ ಅಂದಾಜು ವೆಚ್ಚ 16,320 ಕೋಟಿ ರೂ. ಆಗಿದ್ದು, ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು 14 ಸಾವಿರ ಕೋಟಿ ರೂ. ಮೀಸಲಿಡ ಲಾಗಿದೆ. ಯೋಜನೆಯ ಒಟ್ಟು ಮೊತ್ತದಲ್ಲಿ ಶೇ. 60 ಕೇಂದ್ರ ಭರಿಸುತ್ತದೆ. ಶೇ. 10ನ್ನು ರಾಜ್ಯಗಳು ಭರಿಸಬೇಕು.
- ಇನ್ನುಳಿದ ಮೊತ್ತಕ್ಕೆ ಸಾಲ ಪಡೆಯಲಾಗುವುದು. ವಿಶೇಷ ಸ್ಥಾನಮಾನ ಹೊಂದಿದ ರಾಜ್ಯಗಳಿಗೆ ಕೇಂದ್ರ ಶೇ. 85 ಮೊತ್ತವನ್ನು ಅನುದಾನವಾಗಿ ನೀಡಲಿದೆ. ಆಯಾ ರಾಜ್ಯ ಸರ್ಕಾರಗಳು ಶೇ. 5 ವೆಚ್ಚ ಭರಿಸಿದರೆ ಸಾಕು.
- ವಿದ್ಯುತ್ ಟ್ರಾನ್ಸ್‌ಫಾರ್ಮರ್, ಮೀಟರ್ ಮತ್ತಿತರ ವಿದ್ಯುತ್ ಸಂಬಂಧಿತ ವಸ್ತುಗಳ ಖರೀದಿಗೆ ಯೋಜನೆಯಡಿ ಸಬ್ಸಿಡಿ ಕೂಡ ಲಭ್ಯವಾಗಲಿದೆ. ಆದರೆ ಯಾವ ಸಾಮಗ್ರಿಗೆ ಎಷ್ಟು ಸಬ್ಸಿಡಿ ನೀಡಬೇಕು ಎಂಬುದನ್ನು ಮುಂದಿನ ದಿನಗಳಲ್ಲಿ ಸರ್ಕಾರ ಅಧಿಕೃತವಾಗಿ ಘೋಷಣೆ ಮಾಡಲಿದೆ.

- ಮೊದಲ ಹಂತದಲ್ಲಿ ಬಿಹಾರ, ಒಡಿಶಾ, ಈಶಾನ್ಯ ರಾಜ್ಯಗಳು, ಉತ್ತರ ಪ್ರದೇಶ, ರಾಜಸ್ಥಾನ, ಜಾರ್ಖಂಡ್, ಮಧ್ಯಪ್ರದೇಶ, ಜಮ್ಮು-ಕಾಶ್ಮೀರ ರಾಜ್ಯಗಳಲ್ಲಿ ಸೌಭಾಗ್ಯ ಯೋಜನೆ ಜಾರಿಯಾಗಲಿದೆ.
- ವಿದ್ಯುತ್ ಸಂಪರ್ಕ ನೀಡಲು ಅಸಾಧ್ಯ ವಾದ, ಅತ್ಯಂತ ದುರ್ಗಮ ಪ್ರದೇಶದಲ್ಲಿರುವ ಹಳ್ಳಿಗಳಿಗೆ ಸೌರ ವಿದ್ಯುತ್ ಒದಗಿಸಲು ನಿರ್ಧರಿಸಲಾಗಿದೆ. 200-300 ಡಬ್ಲ್ಯೂ ಪಿ ಸಾಮರ್ಥ್ಯದ ಸೋಲಾರ್ ವ್ಯವಸ್ಥೆ ಜತೆಗೆ 5 ಎಲ್‌ಇಡಿ ಬಲ್ಬ್, ಒಂದು ಫ್ಯಾನ್ ಹಾಗೂ ಬ್ಯಾಟರಿಯನ್ನು ನೀಡಲಾಗುತ್ತದೆ.
- ಕಂತು ಪಾವತಿ ಸೌಲಭ್ಯ: ಬಡತನ ರೇಖೆಗಿಂತ ಮೇಲ್ಪಟ್ಟವರು ಹೊಸ ವಿದ್ಯುತ್ ಸಂಪರ್ಕ ಪಡೆಯುವುದಕ್ಕೆ ತಿಂಗಳಿಗೆ 500 ರೂ.ನಂತೆ 10 ಕಂತುಗಳಲ್ಲಿ 5 ಸಾವಿರ ರೂ. ಪಾವತಿಸಲು ಅವಕಾಶ ಸಿಗಲಿದೆ.
- ಸೌಭಾಗ್ಯ ಯೋಜನೆಯಡಿ ಇನ್ನುಂದೆ ವಿದ್ಯುತ್ ಕೂಡ ಮೊಬೈಲ್ ಕರೆನ್ಸಿಯಂತೆ ಸಿಗಲಿದೆ. ಪ್ರತಿ ಹಳ್ಳಿಗೂ ಸ್ಮಾರ್ಟ್ ಹಾಗೂ ಇ-ಮೀಟರ್ ಅಳವಡಿಕೆ ಆಗಲಿದ್ದು, ಕನಿಷ್ಠ 50 ರೂ.ನಂತೆ ವಿದ್ಯುತ್ ರೀಚಾರ್ಜ್ ಮಾಡಿಕೊಳ್ಳಬಹುದು.

ಬಡವರಿಗೆ ಹೇಗೆ ಅನುಕೂಲ?

- ಗ್ರಾಮೀಣ ಭಾಗಗಳಲ್ಲಿ ಸೀಮೆಎಣ್ಣೆ ಬಳಕೆಗೆ ಕಡಿವಾಣ
- ಹಳ್ಳಿಗಳಲ್ಲಿ ಶಿಕ್ಷಣ, ಆರೋಗ್ಯ ಸೇವೆಗಳಲ್ಲಿ ಸುಧಾರಣೆ ಸಾಧ್ಯ
- ರೇಡಿಯೊ, ಟಿವಿ, ಮೊಬೈಲ್, ಅಂತರ್ಜಾಲ ಬಳಕೆಗೆ ಅನುಕೂಲ
- ಆರ್ಥಿಕ ಪ್ರಗತಿ, ಉದ್ಯೋಗಾವಕಾಶ ಹೆಚ್ಚಳ
- ಮಹಿಳೆಯರ ಜೀವನಮಟ್ಟದಲ್ಲಿ ಸುಧಾರಣೆ

**6. ಮಂಗಳ ಕಕ್ಷೆಯಲ್ಲಿ 3 ವರ್ಷ ಪೂರೈಸಿದ 'ಮಾಮ್'**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಮಂಗಳ ಗ್ರಹದ ಕಕ್ಷೆಯಲ್ಲಿ ಪರಿಭ್ರಮಣ ನಡೆಸುತ್ತಿರುವ ಇಸ್ರೊ ಬಾಹ್ಯಾಕಾಶ ನೌಕೆ ಮಾಮ್ (ಮಾರ್ಸ್ ಆರ್ಬಿಟರ್ ಮಿಷನ್) ಮೂರು ವರ್ಷ ಪೂರೈಸಿದೆ
- 2013ರ ನವೆಂಬರ್ 5ರಂದು ಆಂಧ್ರಪ್ರದೇಶದ ಶ್ರೀಹರಿಕೋಟಾದಿಂದ ಧ್ರುವಗಾಮಿ ರಾಕೆಟ್ ಮೂಲಕ ಮಂಗಳಯಾನ (ಅಂತರಿಕ್ಷ ನೌಕೆ)ವನ್ನು ಉಡಾವಣೆ ಮಾಡಲಾಗಿತ್ತು. ಭೂಕಕ್ಷೆ, ಸೂರ್ಯಕಕ್ಷೆಯಲ್ಲಿ 300ಕ್ಕೂ ಹೆಚ್ಚು ದಿನ ಕ್ರಮಿಸಿ ಮಂಗಳಯಾನ 2014ರ ಸೆಪ್ಟೆಂಬರ್ 5ರಂದು ಯಶಸ್ವಿಯಾಗಿ ಮಂಗಳಕಕ್ಷೆ ಪ್ರವೇಶಿಸಿತ್ತು.

ಮುಖ್ಯ ಪರೀಕ್ಷೆಗಾಗಿ

- ಮಂಗಳ ಗ್ರಹ ಇನ್ನೊಂದು ಗ್ರಹಕ್ಕೆ ಹೋಲಿಸಿದರೆ ಪೃಥ್ವಿಗೆ ಅತೀ ಹತ್ತಿರವಾಗಿರುವಂತಹದ್ದು. ಆದ್ದರಿಂದ ಮಂಗಳ ಗ್ರಹದ ಬಗ್ಗೆ ಮೊದಿಲಿನಿಂದಲೂ ಒಂದು ಕುತೂಹಲ ಇದ್ದೇ ಇತ್ತು. ೧೯೬೦ರಕ್ಕಿಂತಲೂ ಮುಂಚೆಯಿಂದ ಮಂಗಳಕ್ಕೆ ಹೋಗುವ ಪ್ರಯತ್ನ ನಡೆಯುತ್ತಲೇ ಇದೆ.

ಅದೆಷ್ಟು ಮಾನವರಹಿತ ಉಪಗ್ರಹಗಳಾದವೋ, ಅಂತರಿಕ್ಷ ನೌಕೆಗಳಾದವೋ ಎಲ್ಲವೂ ಒಂದಲ್ಲಾ ಒಂದು ಹೊಸ ರೀತಿಯ ಮಾಹಿತಿಯನ್ನು ಕೊಡುತ್ತಲೇ ಇವೆ.

- MoM ( Mars Orbieter Mission) ಮಂಗಳ ಗ್ರಹದ ಕಕ್ಷೆಯನ್ನು ಮುಟ್ಟಿದಾಗಿನಿಂದ ಭಾರತವೂ ಈ ಪ್ರಯತ್ನದಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡಿದೆ.

**MOM ಕೃತಕ ಉಪಗ್ರಹದಿಂದ ಏನೇನು ಮಾಹಿತಿ ಲಭ್ಯವಾಯಿತು ಅದರ ಪ್ರಯೋಜನಗಳೇನು?**

- MOM ಐದು ರೀತಿಯ ಉಪಕರಣಗಳನ್ನು ಕೊಂಡೊಯ್ದಿದ್ದು (MCC- ಕ್ಯಾಮರಾ, MSM – ಮೀಥೇನ್ ಸಂವೇದಕ, LAP- ಫೋಟೊಮೀಟರ್ , MENCA- ಸೂಕ್ಮ.ರೀತಿಯತೂಕ ಮಾಪನ, TIS- ಉಷ್ಣತೆಯ ಅಧ್ಯಯನಕ್ಕಾಗಿ ಸಾಧನ) ಅದರಿಂದ ಸಾಕಷ್ಟು ಮಾಹಿತಿಯನ್ನು ಒಂದು ವರ್ಷದಿಂದ ಕಳಿಸುತ್ತಿದೆ.
- ಮಂಗಳದಿಂದ ಬಂದ ಆ ಮಾಹಿತಿಗಳನ್ನು ಭಾರತೀಯ ಅಂತರಿಕ್ಷ ಮಾಹಿತಿ ಕೇಂದ್ರವು ಸ್ವೀಕರಿಸಿ, ಪರಿಶೀಲಿಸಿ ನಂತರ ಅದನ್ನು ಬೇರೆ ಬೇರೆ ವಿಭಾಗಗಳಿಗೆ ವರ್ಗಾಯಿಸಲಾಗುತ್ತದೆ.
- ಮಂಗಳಯಾನದಲ್ಲಿರುವ ಮಾನವರಹಿತ ಉಪಗ್ರಹದ ಉಪಕರಣಗಳು ಭೂವಿಜ್ಞಾನ, ಆಕೃತಿವಿಜ್ಞಾನ, ವಾತಾವರಣದಲ್ಲಿ ಆಗುವ ಪ್ರಕ್ರಿಯೆ, ಮೇಲ್ಮೈನಲ್ಲಾಗುವ ತಾಪಮಾನದ ಬದಲಾವಣೆ ಮತ್ತು ಮಂಗಳದ ವಾತಾವರಣದಿಂದ ಹೊರಗಡೆ ಬರುವ ವಿಧಾನಗಳ ಬಗ್ಗೆ ಮಾಹಿತಿಗಳನ್ನು ಕೊಡುತ್ತಿರುತ್ತದೆ. ಅದನ್ನು ವಿಜ್ಞಾನಿಗಳು ಸಂಗ್ರಹಿಸಿ ವಿಶ್ಲೇಷಿಸಿ ಅಧ್ಯಯನ ನಡೆಸುತ್ತಾರೆ.
- MCC ( Mars Colour Camera) ಹಲವಾರು ದೈಶಿಕ ರೆಸುಲ್ಯೂಶನ್'ನಲ್ಲಿ ತೆಗೆದ ಚಿತ್ರಗಳು ಅನನ್ಯ ಮಾಹಿತಿಗಳನ್ನು ಭೂಮಿಗೆ ರಾವಾನಿಸಿದೆ. ಚಿತ್ರಗಳ ಅಧ್ಯಯನ ಇಸ್ರೋದ ಬೇರೆ ಬೇರೆ ಅಂಗ ಸಂಸ್ಥೆಗಳಲ್ಲಿ ನಡೆಯುತ್ತಿದ್ದು ಅನೇಕ ಹೊಸ ಮಾಹಿತಿಗಳು ಲಭ್ಯವಾಗಿವೆ. ಮಾಹಿತಿಗಳನ್ನು ಹಾಗೂ ಚಿತ್ರಗಳನ್ನು ಪರಿಷ್ಕರಿಸಿ ಇಸ್ರೋದ ಅಂಗ ಸಂಸ್ಥೆಯಾದ 'ಅಂತರಿಕ್ಷ ಉಪಯೋಗ ಕೇಂದ್ರ'ವು ೧೨೯ ಪುಟಗಳ 'ಮಂಗಳದ ವೈಜ್ಞಾನಿಕ ಅಟ್ಲಾಸ್' ಬಿಡುಗಡೆ ಮಾಡಿದೆ.
- ಕೆಲವೊಂದು ಹತ್ತಿರದಿಂದ ತೆಗೆದ ಚಿತ್ರಗಳು ಬಹಳ ಆಶ್ಚರ್ಯಕಾರಿಯಾಗಿದೆ. ಮಂಗಳದ ಧ್ರುವಗಳಲ್ಲಿ ಇಂಗಲಾಮ್ಲಗಳು ಮಂಜಿನ ರೂಪದಲ್ಲಿ ಶೇಖರಣೆಯಾಗಿ ನಂತರ ಬಿಸಿಲಿಗೆ

ಆವಿಯಾಗುವ ಪ್ರಕ್ರಿಯೆಗಳ ಬಗ್ಗೆ ಮಾಹಿತಿಗಳು ಸಿಕ್ಕಿವೆ. ಅದೇ ಅಲ್ಲದೆ 'ಲಾಡೊನ್ ವೆಲ್ಲಿ'ಯ ಚಿತ್ರಗಳು ಒಂದು ಕಾಲದಲ್ಲಿ ಮಂಗಳದ ನೆಲದಲ್ಲಿ ಪ್ರವಾಹ ಆಗಿದ್ದರ ಬಗ್ಗೆ ದೃಢೀಕರಿಸುತ್ತವೆ.

- ನಾಸಾ ಮಂಗಳದಲ್ಲಿ ನೀರು ಇದೆ ಎಂದು ಸ್ಪಷ್ಟಪಡಿಸುವುದಕ್ಕಿಂತ ಮುಂಚೆಯೇ ನಮ್ಮ MOM ನ ಮಾಹಿತಿಗಳು ನೀರಿರುವ ಬಗ್ಗೆ ಸಾಕಷ್ಟು ಮಾಹಿತಿ ನೀಡಿವೆ.
- ಇನ್ನು ಮಂಗಳದಿಂದ ಬಂದ ಚಿತ್ರಗಳಲ್ಲಿ ಅಲ್ಲಿನ ವಾಯುಗುಣದ ಬದಲಾವಣೆ, ಮೋಡಗಳು, ಮೇಲ್ಮೈನಲ್ಲಿರುವ ಧೂಳಿನ ಬಗ್ಗೆ ಉಪಯುಕ್ತ ಮಾಹಿತಿಯಿದೆ. 1000-2000 ಕಿ.ಮೀ. ಅಂತರದಲ್ಲಿ ತೆಗೆದ ಚಿತ್ರಗಳು ಗಾಳಿ ಬೀಸುತ್ತಿರುವುದನ್ನು ಹಾಗೆಯೇ ಅದರ ದಿಕ್ಕನ್ನೂ ತೋರಿಸುತ್ತಿವೆ.
- ಇದು ಅಲ್ಲಿ ವಾತಾವರಣ ಇದೇ ಅನ್ನುವ ಪುಷ್ಟಿ ಅಲ್ಲದೆ ಇದರ ಆಳವಾದ ಅಧ್ಯಯನ ವಿಜ್ಞಾನಿಗಳಿಗೆ ಬೇಕಾದ ಮಹತ್ವದ ಮಾಹಿತಿಯಾಗಿ ಪರಿವರ್ತನೆಗೊಳ್ಳಲಿದೆ.
- ಹಾಗೆಯೇ ಜೀವಸ್ಥಾನಕ್ಕೆ ಅನೂಕೂಲವಾಗಲು ಬೇಕಾದ ಮಾಹಿತಿಗಳಲ್ಲಿ ಒಂದಾದ ಮೇಲ್ಮೈ ಅಲ್ಬಿಡೊ ( ಸೌರ ಕಾಂತೀಯ) ವೈಪರೀತ್ಯಗಳ ಬಗ್ಗೆಯೂ ಸಾಕಷ್ಟು ವಿಷಯ ಕಕ್ಷೆಯಿಂದ 72000 ಕಿ.ಮೀ. ದೂರದಿಂದ ತೆಗೆದ ಫೋಟೊಗಳಲ್ಲಿ.ಲಭಿಸಿದೆ.
- ಥರ್ಮಲ್ ಕ್ಯಾಮರಾದಿಂದ ಅಲ್ಲಿಯ ತಾಪಮಾನದ ವಿಪರೀತತೆಯ ಬಗ್ಗೆ ಅರಿವಾಗಿದೆ, ಮಂಗಳದ ಸರಾಸರಿ ತಾಪಮಾನ -65 ಸೆಲ್ಸಿಯಸ್ (ಕನಿಷ್ಠ -143 ಗರಿಷ್ಠ 20 ಸೆಲ್ಸಿಯಸ್ ). ಮೀಥೇನ್ ಸೆನ್ಸಾರ್ ಗಳು ಮಂಗಳದ ಭೂ ಸಂಯೋಜನೆಯ ಬಗ್ಗೆ ಒಂದು ವರ್ಷದಲ್ಲಿ ಸಾಕಷ್ಟು ಮಾಹಿತಿಯನ್ನು ನೀಡಿವೆ. ಅದರ ಪ್ರಕಾರ ಮಂಗಳದ ಕೆಲವು ಭಾಗ ಕಲ್ಲು ಹಾಗೂ ಶಿಲೆಗಳಿಂದಾಗಿದ್ದರೆ ಇನ್ನು ಕೆಲವು ಭಾಗ ಮರಳಿನಿಂದಾಗಿದೆ.
- ಮಂಗಳದ ಮೇಲ್ಭಾಗದ ಹತ್ತಿರದಿಂದ ಹೆಚ್ಚು ರೆಸುಲ್ಯೂಷನ್ನಿನಲ್ಲಿ (periapsis) ತೆಗೆದ ಚಿತ್ರಗಳು ಮಂಗಳದ ಆಕೃತಿಗಳ (morphological) ವೈಶಿಷ್ಟ್ಯವನ್ನು ಸಂಗ್ರಹಿಸಿದೆ. ಅಗ್ನಿಪರ್ವತಗಳು ಅದರ ಚಟುವಟಿಕೆಗಳು ಹಾಗೆಯೇ ಅದರ ಸುತ್ತಲೂ ಆವರಿಸಿರುವ ನೀರಾವಿಯಿಂದ ಮೋಡಗಳ ಚಿತ್ರಗಳು ಲಭ್ಯವಾಗಿವೆ.
- ಈ ತರಹದ ಆಕೃತಿಗಳ ವಿವರವನ್ನು ಮಂಗಳದ ಮೇಲ್ಮಟ್ಟದ ದೃಷ್ಟಿಯಿಂದ ಹಾಗೂ ವಾತಾವರಣದಲ್ಲಿ ಆಗುವ ಪ್ರಕ್ರಿಯೆಗನುಗುಣವಾಗಿ ವಿಂಗಡಿಸಲಾಗಿದೆ. ಇದರಿಂದ ಸಾಕಷ್ಟು ವಿವರಣೆ ಮುಂಬರುವ ದಿನಗಳಲ್ಲಿ ಸಿಗಬಹುದು.

ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸೂರಿಗೆ/ಮೈಸೂರಿಗೆ

- MOM ಕಳಿಸಿರುವ ಮಾಹಿತಿಗಳು ಮಂಗಳದ ಹೊರನೋಟ, ನೀರು ಹಾಗೂ ಧೂಳಿರುವ ಸಂಕೇತಗಳು, ಮಂಗಳ ಗ್ರಹದ ಮೂರು ಬಣ್ಣಗಳು, ಅಗ್ನಿಪರ್ವತಗಳ ಮುಖಗಳು, ಕಾಲುವೆಗಳು, ಮಣ್ಣಿನ ರೂಪಲಕ್ಷಣಗಳು, ಗಾಳಿಯ ರೇಖೆಗಳು, ಮಂಗಳದ ಹೊರಪದರಿನ ಲಕ್ಷಣಗಳು, ಜ್ವಾಲಾಮುಖಿಯ ರೂಪವೈಖರಿಗಳು ಅದಷ್ಟೇ ಅಲ್ಲದೆ ಮಂಗಳದ ಉಪಗ್ರಹಗಳು, ಹವಾಮಾನ ಹಾಗೂ ತಾಪಮಾನಗಳ ಬಗ್ಗೆ ಸಂಬಂಧಿಸಿದ್ದಾಗಿದೆ.

## 7. 4ನೇ ಬಾರಿಗೆ ಚಾನ್ಸೆಲರ್ ಆಗಿ ಮಾರ್ಕೆಲಾ ಆಯ್ಕೆ

### ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

- ಜರ್ಮನಿ ಸಂಸತ್ತಿನ ಕೆಳಮನೆ (ಬುಂಡೇಸ್ಟ್ಯಾಗ್)ಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ನಾಲ್ಕನೇ ಬರಿ ಅಧ್ಯಕ್ಷರಾಗಿ ಏಂಜೆಲಾ ಮರ್ಕೆಲ್ ಪುನರಾಯ್ಕೆಯಾಗಿದ್ದರೆ. ಈ ಮೂಲಕ ಐತಿಹಾಸಿಕ ಗೆಲುವು ಪಡೆದಿದ್ದಾರೆ.
- ಏಂಜೆಲಾ ನೇತೃತ್ವದ ಕ್ರಿಶ್ಚಿಯನ್ ಡೆಮಾಕ್ರಟಿಕ್ ಯೂನಿಯನ್ (ಸಿಡಿಯು) ಮತ್ತು ಕ್ರಿಶ್ಚಿಯನ್ ಸೋಷಿಯಲ್ ಯೂನಿಯನ್ (ಸಿಎಸಯು) ಮೈತ್ರಿಕೂಟ ಜಯಗಳಿಸಿದೆ. ಆಡಳಿತಾರೂಢ ಮೈತ್ರಿಕೂಟ ಶೇ. ೩೩ರಷ್ಟು ಮತಗಳನ್ನು ಪಡೆದುಕೊಂಡು ಜಯ ಸಾಧಿಸಿದೆ.

ನಮ್ಮ ಐಎಎಸ್ ಅಕಾಡೆಮಿ IAS/KAS ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 8.ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದ ಭಾರತದ ಮೊದಲ ಮಹಿಳೆ

### ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

- ಭಾರತದ ವಿಜ್ಞಾನಿ ಅಸೀಮಾ ಚಟರ್ಜಿ ಜನ್ಮಶತಮಾನೋತ್ಸವ ವರ್ಷದ ಸಂಭ್ರಮವನ್ನು ಇತ್ತೀಚೆಗೆ ಆಚರಿಸಲಾಯಿತು. ಗೂಗಲ್ ಸಂಸ್ಥೆ ಕೂಡಾ ಅಸೀಮಾಗೆ ಗೌರವಾರ್ಥವಾಗಿ ಡೂಡಲ್ ರಚಿಸಿತ್ತು.
- ಅಸೀಮಾ ಭಾರತದ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪಡೆದ ಮೊದಲ ಮಹಿಳೆಯಾಗಿದ್ದಾರೆ. ಔಷಧೀಯ ರಸಾಯನಶಾಸ್ತ್ರದಲ್ಲಿ ಪರಿಣತಿ ಹೊಂದಿರುವ ಅಸೀಮಾ ಮೂಲತಃ ಕೋಲ್ಕತ್ತದವರು. ಆನಿಸಿದ್ದು 1917ರ ಸೆಪ್ಟಂಬರ್ 23ರಂದು. ಅಪಸ್ಮಾರ ನಿರೋಧಕ ಔಷಧವನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಿದ ಕೀರ್ತಿ ಅಸೀಮಾಗೆ ಸಲ್ಲುತ್ತದೆ.

- ಭಾರತೀಯ ವಿಜ್ಞಾನ ಕಾಂಗ್ರೆಸ್ ಅಸೋಸಿಯೇಷನ್‌ಗೆ ಅಧ್ಯಕ್ಷೆಯಾಗಿ ಆಯ್ಕೆಯಾಗುವ ಮೂಲಕ ಈ ಪ್ರತಿಷ್ಟಿತ ಸ್ಥಾನ ಪಡೆದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಇವರಿಗೆ 1975ರಲ್ಲಿ ಪದ್ಮಭೂಷಣ ಗೌರವ ಸಂದಿದ್ದು, ವಿಜ್ಞಾನದ ಪ್ರಮುಖ ಪ್ರಶಸ್ತಿಗಳಲ್ಲೊಂದಾದ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ ಪಡೆದ ಮೊದಲ ಮಹಿಳೆ ಆಗಿದ್ದಾರೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**27th SEPTEMBER**

**1. ವಿಶ್ವ ಆರ್ಥಿಕ ವೇದಿಕೆಯ ಜಾಗತಿಕ ಸ್ಪರ್ಧಾತ್ಮಕತೆ ಸೂಚ್ಯಂಕದಲ್ಲಿ 40 ನೇ ಸ್ಥಾನ ಪಡೆದ -ಭಾರತ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ವಿಶ್ವ ಆರ್ಥಿಕ ವೇದಿಕೆಯ ಜಾಗತಿಕ ಸ್ಪರ್ಧಾತ್ಮಕತೆ ಸೂಚ್ಯಂಕದಲ್ಲಿ ಭಾರತವು 40 ನೇ ಸ್ಥಾನಪಡೆದಿದೆ. ಕಳೆದ ವರ್ಷದ ಶ್ರೇಯಾಂಕದಿಂದ ಒಂದು ಸ್ಥಾನವನ್ನು ಭಾರತ ಇಳಿಮುಖಗೊಳಿಸಿದೆ. ಕಳೆದ ವರ್ಷ 39ನೇ ಸ್ಥಾನ ಪಡೆದಿತ್ತು.
- ಬ್ರಿಕ್ ರಾಷ್ಟ್ರಗಳ ಪೈಕಿ ಭಾರತ 3ನೇ ಸ್ಥಾನವನ್ನು ಪಡೆದುಕೊಂಡಿದೆ.

- ಗ್ಲೋಬಲ್ ಕಾಂಪಿಟಿಟಿವ್ ಇಂಡೆಕ್ಸ್‌ನಲ್ಲಿನ ಒಟ್ಟು 137 ರಾಷ್ಟ್ರಗಳ ಪೈಕಿ ಭಾರತದ 40ನೇ ಸ್ಥಾನ ಪಡೆದಿದೆ ಎಂದು ವರ್ಲ್ಡ್ ಎಕನಾಮಿಕ್ ಫೋರಂ ಘೋಷಣೆ ಮಾಡಿದೆ.

- ಸ್ವಿಟ್ಜರ್‌ಲ್ಯಾಂಡ್, ಅಮೆರಿಕಾ, ಸಿಂಗಾಪುರು ಈ ಬಾರಿಯೂ ಟಾಪ್ 3 ಸ್ಥಾನವನ್ನು ಪಡೆದುಕೊಂಡಿವೆ, ಚೀನಾ 27ನೇ ಸ್ಥಾನ, ರಷ್ಯಾ 38ನೇ ಸ್ಥಾನ ಪಡೆದುಕೊಂಡಿದೆ.

- ಭಾರತದ ದಕ್ಷಿಣ ಏಷ್ಯಾದಲ್ಲಿ ಅತ್ಯುನ್ನತ ಆರ್ಥಿಕತೆಯನ್ನು ಹೊಂದಿದೆ, ಮೂಲಸೌಕರ್ಯ, ಶಿಕ್ಷಣ ಮತ್ತು ಕಾರ್ಮಿಕ ಮಾರುಕಟ್ಟೆ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಸುಧಾರಿಸಿದೆ ಎಂದು ವರ್ಲ್ಡ್ ಎಕನಾಮಿಕ್ ಫೋರಂ ಅಭಿಪ್ರಾಯಪಟ್ಟಿದೆ.

ಮುಖ್ಯ ಪರೀಕ್ಷೆಗಾಗಿ

**ಸ್ಯೂಚಂಕಕ್ಕೆ ಸಂಬಂಧಿಸಿದಂತೆ ಭಾರತದ ಪ್ರಗತಿ:**

- ಐಸಿಟಿ (ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳು) ಸುಧಾರಣೆಯಾಗಿರುವುದು ಭಾರತ ಸೂಚ್ಯಂಕದಲ್ಲಿ ಕಾರಣವಾಗಿದೆ.
- ಆರ್ಥಿಕ ವ್ಯವಸ್ಥೆಯಲ್ಲಿ ಪಾರದರ್ಶಕತೆ, ಸರ್ಕಾರಿ ಸಂಸ್ಥೆಗಳಲ್ಲಿ ಸುಧಾರಣೆಗೆ ಕ್ರಮ, ವಿದೇಶಿ ಹೂಡಿಕೆ ಮತ್ತು ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ತೆಗೆದುಕೊಂಡಿರುವ ಕ್ರಮಗಳಿಂದ ಭಾರತ ಒಟ್ಟಾರೆಯಾಗಿ ಗಮನೀಯ ಸಾಧನೆ ಮಾಡಿದೆ.
- ಭಾರತದ ಆರ್ಥಿಕತೆಯು ಜಿ20 ರಾಷ್ಟ್ರಗಳ ಪೈಕಿ ಅತಿ ಹೆಚ್ಚಿನ ಪ್ರಗತಿ ಸಾಧಿಸಿದೆ. ಆರ್ಥಿಕ ಮತ್ತು ವಿತ್ತೀಯ ಸುಧಾರಣೆಯಿಂದ ಭಾರತದ ಅರ್ಥವ್ಯವಸ್ಥೆಯನ್ನು ಸ್ಥಿರತೆಯತ್ತ ಕೊಂಡೊಯುವತ್ತ ಸಹಕಾರಿಯಾಗಿದೆ ಎಂದು ಸಮೀಕ್ಷೆಯಲ್ಲಿ ತಿಳಿಸಲಾಗಿದೆ.
- ಭಾರತಕ್ಕೆ ಮತ್ತೊಂದು ದೊಡ್ಡ ಕಾಳಜಿ ಎಂದರೆ ನವೀನ ಶಕ್ತಿ ಮತ್ತು ಅದರ ತಾಂತ್ರಿಕ ಸಿದ್ಧತೆ ನಡುವಿನ ಸಂಪರ್ಕವನ್ನು ಕಡಿತಗೊಂಡಿರುವುದು : ಈ ಅಂತರವು ಹೆಚ್ಚಾಗಿರುವವರಿಗೂ , ವ್ಯಾಪಕ ಆರ್ಥಿಕತೆಯ ಮೇಲೆ ಭಾರತವು ತನ್ನ ತಾಂತ್ರಿಕ ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ನಿಭಾಯಿಸಲು ಸಾಧ್ಯವಾಗುವುದಿಲ್ಲ.
- ಭಾರತದ ಕಾರ್ಮಿಕ ಮಾರುಕಟ್ಟೆಯಲ್ಲಿರುವ ಇನ್ನು ಅಸ್ತಿತ್ವದಲ್ಲಿರುವ ಕೆಲವು ಕಠಿಣ ನಿಯಂತ್ರಣ ಕ್ರಮಗಳು ವ್ಯವಸ್ಥೆಯೂ ಪ್ರಗತಿಗೆ ಅಡ್ಡಿಯಾಗಿದೆ ಎಂದು ವರದಿ ವಿಶ್ಲೇಷಣೆ ಮಾಡಿದೆ.

ಜಾಗತಿಕ ಸ್ಪರ್ಧಾತ್ಮಕ ಸೂಚ್ಯಂಕದ ಬಗ್ಗೆ:

- ಜಾಗತಿಕ ಸ್ಪರ್ಧಾತ್ಮಕ ಸೂಚ್ಯಂಕವನ್ನು ವಿಶ್ವ ಆರ್ಥಿಕ ಸಂಸ್ಥೆ ಹೊರತರುತ್ತಿದೆ.
- ಜಾಗತಿಕ ಮಟ್ಟದಲ್ಲಿ 12 ಮಾನದಂಡಗಳನ್ನು ಪರಿಗಣನೆಗೆ ತೆಗೆದುಕೊಂಡು ಈ ಸೂಚ್ಯಂಕವನ್ನು ಸಿದ್ಧಪಡಿಸಲಾಗುವುದು. ಈ 12 ಮಾನದಂಡಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಜಾಗತಿಕ ಮಟ್ಟದಲ್ಲಿ ದೇಶದವೊಂದರ ಸ್ಪರ್ಧಾತ್ಮಕತೆ ಮೇಲೆ ಪರಿಣಾಮ ಬೀರುವಂತವಾಗಿವೆ.
- ಸಂಘ–ಸಂಸ್ಥೆಗಳು, ಮೂಲಸೌಕರ್ಯ, ಆರ್ಥಿಕ ಸ್ಥಿತಿ, ಆರೋಗ್ಯ, ಪ್ರಾಥಮಿಕ ಶಿಕ್ಷಣ, ಹಣಕಾಸು ಮಾರುಕಟ್ಟೆ ಅಭಿವೃದ್ಧಿ, ತಂತ್ರಜ್ಞಾನ, ಮಾರುಕಟ್ಟೆ ಗಾತ್ರ, ವ್ಯಾಪಾರ, ಹೊಸತನ ಸೇರಿದಂತೆ ಒಟ್ಟು 12 ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಜಾಗತಿಕ ಸ್ಪರ್ಧಾತ್ಮಕ ಸೂಚ್ಯಂಕ (ಜಿಸಿಐ) ನಿರ್ಧರಿಸಲಾಗುತ್ತದೆ.

IAS/KAS

**2. ದಿವ್ಯಾಂಗ ಸಾರಥಿ**

ಪ್ರಾಮುಖ್ಯತೆ-ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ದಿವ್ಯಾಂಗ ಸಾರಥಿ ಎಂಬ ಮೊಬೈಲ್ ಅಪ್ಲಿಕೇಶನ್‌ಗೆ ಚಾಲನೆ ನೀಡಿದೆ.
- 2011 ರ ಜನಗಣತಿಯ ಪ್ರಕಾರ, ಭಾರತದಲ್ಲಿ 2.68 ಕೋಟಿ ದಿವ್ಯಾಂಗ ಜನಸಂಖ್ಯೆ ಇದೆ. ದಿವ್ಯಾಂಗ ಜನರಿಗೆ ಸುಲಭವಾಗಿ ಲಭ್ಯವಾಗುವ ಮಾಹಿತಿಗಳನ್ನು ರವಾನಿಸುವ ಹಾಗೂ ಸಮಗ್ರ ಮೊಬೈಲ್ ಅಪ್ಲಿಕೇಶನ್

ಮುಖ್ಯ ಪರೀಕ್ಷೆಗಾಗಿ

- ಈ ಮೊಬೈಲ್ ಅಪ್ಲಿಕೇಶನ್‌ನ ಪ್ರಮುಖ ಗುರಿ ಎಂದರೆ ದಿವ್ಯಾಂಗ ಜನರ ಸಬಲೀಕರಣ. ಇವರಿಗೆ ಸುಲಭವಾಗಿ ಹಾಗೂ ಸಾಂಪ್ರದಾಯಿಕವಾಗಿ ಮಾಹಿತಿಗಳು ಲಭ್ಯವಾಗುವುದು ಕಷ್ಟಸಾಧ್ಯ ಎಂಬ

ಕಾರಣಕ್ಕೆ, ವಿವಿಧ ಸರ್ಕಾರಿ ಯೋಜನೆಗಳು, ವಿದ್ಯಾರ್ಥಿವೇತನಗಳು, ಕಾನೂನುಗಳು, ಸಾಂಸ್ಥಿಕ ಬೆಂಬಲ ವ್ಯವಸ್ಥೆ, ಉದ್ಯೋಗ ಮತ್ತು ಇತರ ಮಹತ್ವದ ಮಾಹಿತಿಗಳನ್ನು ಒದಗಿಸುವ ಸಲುವಾಗಿ ಈ ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಲಾಗಿದೆ.

- ಈ ನೂತನ ಮೊಬೈಲ್ ಅಪ್ಲಿಕೇಶನ್, 2015ರ ಡಿಸೆಂಬರ್‌ನಲ್ಲಿ ಜಾರಿಗೊಂಡ ಆಕ್ಸಸಿಬಲ್ ಇಂಡಿಯಾ ಕ್ಯಾಂಪೇನ್ (ಸುಗಮ್ಯ ಭಾರತ ಅಭಿಯಾನ)ದ ಐಸಿಟಿ ವಿಭಾಗದ ಅವಿಭಾಜ್ಯ ಅಂಗವಾಗಿದೆ. ಇದು ಅಂಗವಿಕಲರ ಸಾರ್ವತ್ರಿಕ ಲಭ್ಯತೆ ಕುರಿತ ವಿಶ್ವಸಂಸ್ಥೆ ಒಪ್ಪಂದದ ತತ್ವಗಳಿಗೆ ಅನುಗುಣವಾಗಿದ್ದು, ಅಂಗವಿಲಕರ ಹಕ್ಕುಗಳ ಕಾಯ್ದೆ- 2016ರ ಅನುಸಾರವಾಗಿ ಇದನ್ನು ಅಭಿವೃದ್ಧಿಪಡಿಸಲಾಗಿದೆ.
- ಈ ಒಪ್ಪಂದ ಹಾಗೂ ಕಾಯ್ದೆ ಅನ್ವಯ ಎಲ್ಲ ಅಂಗವಿಕಲರಿಗೆ ಸೂಕ್ತ ಮಾಹಿತಿಗಳನ್ನು ಸಮರ್ಪಕವಾಗಿ ಒದಗಿಸುವುದು ಅಗತ್ಯ.
- ಈ ಮೊಬೈಲ್ ಅಪ್ಲಿಕೇಶನ್ ಅಂತರ್ಗತವಾದ ವಿಶಿಷ್ಟ ಆಡಿಯೊ ನೋಟ್ ಗುಣಲಕ್ಷಣವನ್ನು (ಬರಹದಿಂದ ಧ್ವನಿಯಾಗಿ ಪರಿವರ್ತಿಸುವ ಸಾಫ್ಟ್‌ವೇರ್) ಹೊಂದಿದೆ. ಇದು ಲಿಖಿತ ಮಾಹಿತಿಯನ್ನು ಧ್ವನಿ ರೂಪದಲ್ಲಿ ನೀಡಲು ಮತ್ತು ಅಗತ್ಯಕ್ಕೆ ತಕ್ಕಂತೆ ಅಕ್ಷರದ ಗಾತ್ರವನ್ನು ಪರಿವರ್ತಿಸಲು ಕೂಡಾ ನೆರವಾಗುತ್ತದೆ. ಇದನ್ನು ಹಿಂದಿ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಅಭಿವೃದ್ಧಿಪಡಿಸಲಾಗಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### 3. ಅಣು ಉದ್ಯಮದಲ್ಲಿ ಭಾರತಕ್ಕೆ 3ನೇ ಸ್ಥಾನ.

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಇತ್ತಿಚ್ಚೆಗಷ್ಟೇ  ವಿಶ್ವ ಪರಮಾಣು ಉದ್ಯಮ ಸ್ಥಿತಿ ವರದಿ ಬಿಡುಗಡೆಯಾಗಿದ್ದು, ಅಣು ವಿದ್ಯುತ್ ಸ್ಥಾವರಗಳನ್ನು ಅನುಷ್ಠಾನ ಗೊಳಿಸುತ್ತಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತದ 3ನೇ ಸ್ಥಾನದಲ್ಲಿದೆ .
- ಚೀನಾ ಒಟ್ಟು 20 ,ಅಣುಸ್ಥಾವರಗಳನ್ನು ನಿರ್ಮಾಣ ಮಾಡುತಿದ್ದು ಮೊದಲ ಸ್ಥಾನದಲ್ಲಿದೆ. ಆದರೆ ಕಳೆದ ನಾಲ್ಕು ವರ್ಷಗಳಿಂದ ವಿಶ್ವದಾದ್ಯಂತ ನಿರ್ಮಿಸಲಾಗುತ್ತಿರುವ ಒಟ್ಟು ,ಅಣುಸ್ಥಾವರಗಳ ಸಂಖ್ಯೆಯಲ್ಲಿ ಇಳಿಮುಖ ಕಂಡಿದೆ .

- 2013ರಲ್ಲಿ ವಿಶ್ವದಾದ್ಯಂತ 68 ಅಣುಸ್ಥಾವರಗಳು ನಿರ್ಮಾಣವಾಗುತಿದ್ದವು .2017ರಲ್ಲಿ ಈ ಸಂಖ್ಯೆ 53ಕ್ಕೆ ಇಳಿದಿದೆ. 37 ಘಟಕಗಳ ನಿಗದಿತ ಅವಧಿ ಮುಗಿದಿದ್ದರೂ ಅನುಷ್ಠನ ವಿಳಂಬವಾಗಿದೆ.
- 19 ಸ್ಥಾವರಗಳ ಯೋಜನೆಗಳು ದೀರ್ಘಾವಧಿವರೆಗೆ ನನೆಗುದಿಗೆ ಬಿದ್ದಿವೆ .ಇದರಿಂದ ನಿರ್ಮಾಣ ವೆಚ್ಚ ಹಾಗೂ ವಿದ್ಯುತ್ ತಯಾರಿಕೆ ವೆಚ್ಚದಲ್ಲಿಯು ಹೆಚ್ಚಳವಾಗುತ್ತದೆ. ಭಾರತದಲ್ಲಿಯೂ ಒಟ್ಟು 6 ಸ್ಥಾವರಗಳು ನಿರ್ಮಾಣ ಹಂತದಲ್ಲಿದ್ದು .ಈ ಪೈಕಿ 5 ಸ್ಥಾವರಗಳ ಪೂರ್ವ ನಿಗದಿತ ಅವಧಿ ಮುಗಿದಿದ್ದರೂ ,ಅನುಷ್ಟಾನ ಗೊಳಿಸುವಲ್ಲಿ ವಿಳಂಬವಾಗುತ್ತಿದೆ.
- ಜಾಗತಿಕವಾಗಿ 8 ಅಣುಸ್ಥಾವರಗಳು ದಶಕಗಳಿಗೂ ಹೆಚ್ಚು ಕಾಲ ನಿರ್ಮಾಣ ಹಂತದಲ್ಲೇ ಇವೆ .ಮೂರು ಸ್ಥಾವರಗಳಗಳು 30 ವರ್ಷಗಳಿಂದಲ್ಲೂ ನನೆಗುದಿಗೆ ಬಿದ್ದಿವೆ ಎಂದು ವರದಿ ತಿಳಿಸಲಾಗಿದೆ .

ಮುಖ್ಯ ಪರೀಕ್ಷೆಗಾಗಿ

- 2016 ರಲ್ಲಿ ಚೀನಾ ಒಂದರಲ್ಲೇ ಶೇ,23 ರಷ್ಟು ಅಣು ವಿದ್ಯುತ್ ಉತ್ಪಾದನೆ ಹೆಚ್ಚಾದ ಕಾರಣ ಜಾಗತಿಕವಾಗಿ ಶೇ,1.4 ರಷ್ಟು ಹೆಚ್ಚಳ ಕಂಡಿದೆ .ಆದರೂ ವಿದ್ಯುತ್ ತಯಾರಿಕಾ ಕ್ಷೇತ್ರದಲ್ಲಿ ಅಣುಶಕ್ತಿಯ ಪಾಲು ಶೇ 10.5.ಕ್ಕೆ ಸ್ಥಿರವಾಗಿದೆ.
- ಜಾಗತಿಕ ಮಟ್ಟದಲ್ಲಿ ಪವನಶಕ್ತಿ ಉತ್ಪಾನೆಯಲ್ಲಿ ಶೇ, 16 ರಷ್ಟು ಬೆಳವಣಿಕೆ ಕಂಡಿದೆ. ಇದೇ ಸಂದರ್ಭ ಸೋಲಾರ್ ವಿದ್ಯುತ್ ಉತ್ಪಾದನೆಯಲ್ಲಿ ಶೇ,30ರಷ್ಟು ಬೆಳವಣಿಕೆ ಕಂಡಿದೆ . ಅಣು ವಿದ್ಯುತ್ ಉತ್ಪಾದನೆಗೆ ಹೋಲಿಸಿದರೆ, ಪವನ ವಿದ್ಯುತ್ 3.8.ಪಟ್ಟು ಹಾಗೂ ಸೌರ ವಿದ್ಯುತ್ 2.2.ಪಟ್ಟು ಹೆಚ್ಚು ಉತ್ಪಾದನೆ ಕಂಡಿದೆ .ಒಟ್ಟಾರೆ ಜಾಗತಿಕ ವಿದ್ಯುತ್ ಉತ್ಪಾದನೆಯಲ್ಲಿ ನವೀಕರಿಸಬಹುದಾದ ಶಕ್ತಿ ಮೂಲಗಳು ಶೇ, 62ರಷ್ಟು ಪಾಲು ಹೊಂದಿವೆ .
- ವಿಶ್ವದ ಶಕ್ತಿ ರಾಷ್ಟ್ರ ಗಲೆನಿಸಿರುವ ರಷ್ಯಾ ಮತ್ತು ಅಮೇರಿಕಾಗಳೆರಡು 2016 ರಲ್ಲಿಯೇ ತಮ್ಮ ಎಲ್ಲಾ ಅಣುವಿದ್ಯುತ್ ಸ್ಥಾವರಗಳನ್ನು ಸ್ಥಗಿತಗೊಳಿಸಿವೆ. ಈ ಬೆನಲ್ಲೇ 2017ರ ಆರಂಭದಲ್ಲಿಯೇ ಸ್ವಿಡನ್ ಮತ್ತು ದಕ್ಷಿಣ ಕೊರಿಯ ರಾಷ್ಟ್ರಗಳು ತಮ್ಮ ಹಳೆಯ ಅಣುವಿದ್ಯುತ್ ಸ್ಥಾವರಗಳನ್ನು ಸ್ಥಗಿತಗೊಳಿಸಿವೆ.
- ಸ್ಥಾವರಗಳ ನಿರ್ಮಾಣ ವಿಳಂಬವಾಗುತ್ತಿರುವ 5 ರಾಷ್ಟ್ರಗಳು : ಚೀನಾ , ರಷ್ಯಾ ,ಭಾರತ , ಯುಎಇ ,ಅಮೇರಿಕಾ .

- ಜಿಮ್ಮಿ ಕಾರ್ಟರ್ ಅಮೇರಿಕಾದ ಅಧ್ಯಕ್ಷರಾಗಿದ್ದ ಕಾಲದಲ್ಲಿ,ಅಮೇರಿಕದ ಇಂಧನ ನೀತಿ ತಜ್ಞರಾಗಿದ್ದ ಎಸ್ ,ಡೇವಿಡ್ ಫ್ರಿಮನ್ ಭವಿಷ್ಯದ ಅಣುವಿದ್ಯುತ್ ಕುರಿತು 2 ದಶಕಗಳಷ್ಟು ಹಿಂದೆಯೇ ತಮ್ಮ ವರದಿಯಲ್ಲಿ ವಿವರಿಸಿದ್ದಾರೆ .
- ಅಣುಶಕ್ತಿ v/s ನವೀಕರಿಸಲಾಗುವ ಇಂಧನಗಳ ಅಭಿರುದ್ದಿ ಎಂಬ ಭಾಗ ಅತಿ ಪ್ರಮುಖವಾಗಿದೆ . 1997ರಿಂದ ಉತ್ಪಾದಿಸಲಾದ ನವೀಕರಿಸಬಹುದಾದ ಇಂಧನದ ಪ್ರಮಾಣ ಅಣುವಿದ್ಯುತ್ ಗಿಂತಲೂ ಹೆಚ್ಚಿದೆ ಎಂಬ ಅಂಶವನ್ನು ಬೆಳಕಿಗೆ ತಂದಿದ್ದರು .
- ವರದಿಯ ಕೊನೆಯಲ್ಲಿ "ವಿಶ್ವವು ಇನ್ನೂ ಮುಂದೆ ಅಣುವಿದ್ಯುತ್ ಸ್ಥಾವರ ಸ್ಥಾಪಿಸುವ ಅಗತ್ಯವಿಲ್ಲ.ಇದು ಹಣ ಉಳಿಸುವ ಉದ್ದೇಶಕ್ಕಾಗಿ ಅಲ್ಲ.ಬದಲಿಗೆ ಹವಾಮಾನ ಬದಲಾವಣೆಯ ನಿಯಂತ್ರಣಕ್ಕಾಗಿ" ಎಂದು ಅವರು ಉಲ್ಲೇಖಿಸಿದ್ದಾರೆ.

## 4. ಐಎಎನ್ಎಸ್ ತರಸ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ವಾಟರ್ ಜೆಟ್ ಫಾಸ್ಟ್ ಅಟ್ಯಾಕ್ ಕ್ರಾಫ್ಟ್ ಸರಣಿಯ ನಾಲ್ಕನೇ ಹಾಗೂ ಕೊನೆಯ ಹಡಗು ಐಎನ್ಎಸ್ ತರಸ ಇದೀಗ ಭಾರತೀಯ ನೌಕಾಪಡೆಗೆ ನಿಯೋಜನೆಯಾಗಿದೆ. ಮುಂಬೈನ ನೌಕಾಪಡೆ ಡೆಕ್‌ಯಾರ್ಡ್‌ನಲ್ಲಿ ಇದನ್ನು ಸೇವೆಗೆ ನಿಯೋಜಿಸಲಾಗಿದೆ.
- ಇದು ಕಾರ್ ನಿಕೋಬಾರ್ ಕ್ಲಾಸ್ ಅಧಿಕ ವೇಗದ ಸಮುದ್ರ ಕಿನಾರೆ ಗಸ್ತು ನೌಕೆಯ ಸುಧಾರಿತ ಅವತರಣಿಕೆಯಾಗಿದ್ದು, ಸಂಪೂರ್ಣವಾಗಿ ದೇಶೀಯವಾಗಿ ಇದನ್ನು ಅಭಿವೃದ್ಧಿಪಡಿಸಲಾಗಿದೆ.
- ಪಶ್ಚಿಮ ಬಂಗಾಳದ ಕೊಲ್ಕತ್ತಾ ಮೂಲದ ಗೋಲ್ಡನ್‌ರೀಚ್ ಶಿಪ್‌ಬಿಲ್ಡರ್ಸ್ ಅಂಡ್ ಎಂಜಿನಿಯರ್ಸ್ ಲಿಮಿಟೆಡ್, ಭಾರತೀಯ ನೌಕಾಪಡೆಗಾಗಿ ಇದನ್ನು ಅಭಿವೃದ್ಧಿಪಡಿಸಿದೆ.

ಮುಖ್ಯ ಪರೀಕ್ಷೆಗಾಗಿ

- ಐಎನ್‌ಎಸ್ ತರಸ ಹಡಗು ಬಂಗಾಳಕೊಲ್ಲಿಯ ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ ಪಿಕ್ಚರ್‌ಸ್ಕ್ವೇರ್‌ನಿಂದ ಹೆಸರು ಪಡೆದಿದೆ. ಇದು ಅತ್ಯಾಧುನಿಕ 4000- ಸರಣಿಯ ಎಂಟಿಯು ಎಂಜಿನ್ ಬಲವನ್ನು ಹೊಂದಿದ್ದು, ಇದರ ಸಾಗಾಣಿಕೆ ಸಾಮರ್ಥ್ಯ 315 ಟನ್‌ಗಳಾಗಿವೆ.
- ಇದಕ್ಕೆ ಅತ್ಯಾಧುನಿಕ ಯಾಂತ್ರಿಕ ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇದನ್ನು ಗರಿಷ್ಠ 35 ನಾಟಿಕಲ್ ಮೈಲು ವೇಗವನ್ನು ಪಡೆಯುವಂತೆ ಅಭಿವೃದ್ಧಿಪಡಿಸಲಾಗಿದೆ. 12-14 ನಿಲುಗಡೆಯಲ್ಲಿ 2000 ನಾಟಿಕಲ್ ಮೈಲುವರೆಗೂ ಇದು ಪ್ರಯಾಣ ಬೆಳೆಸಬಲ್ಲದು.
- ಈ ಹಡಗಿಗೆ ಸಿಆರ್‌ಎನ್-91 ದೇಶೀಯವಾಗಿ ನಿರ್ಮಿಸಿದ 30 ಎಂಎಂ ಬಂದೂಕು ಮತ್ತು ಆಪ್ಟೋಟಿಕ್ ಪೆಡೆಸ್ಟಾನ್ ಅಳವಡಿಸಲಾಗಿದೆ. ಈ ಹಡಗು ಅತ್ಯಾಧುನಿಕ ಸಂಪರ್ಕ ಸಾಧನಗಳು ಮತ್ತು ರಾಡಾರ್ ಹೊಂದಿದ್ದು, ಇದು ಪರಿಣಾಮಕಾರಿ ನಿಗಾ ವ್ಯವಸ್ಥೆಗೆ ಪೂರಕವಾಗಿರುತ್ತದೆ.
- ಐಎನ್‌ಎಸ್ ತರಸ ಮುಂಬೈನಲ್ಲಿ ನೆಲೆಗೊಂಡಿರುತ್ತದೆ ಹಾಗೂ ಪಶ್ಚಿಮ ನೌಕಾ ಕಮಾಂಡ್‌ನ ಕಾರ್ಯಾಚರಣೆ ನಿಯಂತ್ರಣದಲ್ಲಿರುತ್ತದೆ. ಇದನ್ನು ಕರಾವಳಿ ಮತ್ತು ಕಡಲ ತೀರದ ಕಣ್ಗಾವಲು, ಇಇಝೆಡ್ ಗಸ್ತು ಮತ್ತು ಕಾನೂನು ಜಾರಿ ಉದ್ದೇಶಕ್ಕೆ ಬಳಸಬಹುದಾಗಿದೆ.
- ಇದು ಮಿಲಿಟರಿ ಯೋಜನೆಗಳಲ್ಲದೇ ಶೋಧ ಮತ್ತು ಪರಿಹಾರ, ಮಾನವೀಯ ನೆರವು ಮತ್ತು ವಿಕೋಪ ಪರಿಹಾದಂಥ ಕಾರ್ಯಗಳಿಗೂ ಬಳಕೆಯಾಗಲಿದೆ.
- ಡಬ್ಲ್ಯುಜೆಎಫ್‌ಎಸಿಗಳನ್ನು ಸಾಮಾನ್ಯವಾಗಿ ವೇಗವಾಗಿ ಚಲಿಸುವ ಮೇಲ್ಮೈ ಸಂಚಾರ ಸಾಧನಗಳ ಇಂಟರ್‌ಸೆಪ್ಷನ್‌ಗೆ ಬಳಸಲಾಗುತ್ತದೆ. ಕೊಲ್ಕತ್ತಾದ ಜಿಆರ್‌ಎಸ್‌ಇ ದೇಶೀಯವಾಗಿ ಅಭಿವೃದ್ಧಿಪಡಿಸಿದ, ಡಬ್ಲ್ಯುಜೆಎಫ್‌ಎಸಿ ಸರಣಿಯ ಕೊನೆಯ ಹಡಗು ಇದಾಗಿದೆ.
- ಮೊದಲ ಎರಡು ಹಡಗುಗಳಾದ ಐಎನ್‌ಎಸ್ ತರ್ಮುಗ್ಲಿ ಹಾಗೂ ಐಎನ್‌ಎಸ್ ತಿಹಾಯು 2016ರಲ್ಲಿ ನೌಕಾಪಡೆಗೆ ನಿಯೋಜನೆಗೊಂಡಿದುದ, ಇವು ವಿಶಾಖಪಟ್ಟಣದಲ್ಲಿ ನೆಲೆಗೊಂಡಿವೆ. ಮೂರನೇ ಹಡಗು ಐಎನ್‌ಎಸ್ ತಿಲಾಂಚಂಗ್ 2017ರ ಮಾರ್ಚ್‌ನಲ್ಲಿ ಸೇವೆಗೆ ನಿಯೋಜನೆಗೊಂಡಿದ್ದು, ಕಾರವಾರದಲ್ಲಿ ಕಾರ್ಯನಿರ್ವಹಿಸುತ್ತಿದೆ.

## 5. ಎಲೆಕ್ಟ್ರಾನಿಕ್ ನೆಗೊಶಿಯೇಬಲ್ ಉಗ್ರಾಣ ರಸೀತಿ ವ್ಯವಸ್ಥೆಗೆ ಕೇಂದ್ರ ಸರಕಾರ ಚಾಲನೆ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯ, ನೂತನವಾಗಿ ಅಭಿವೃದ್ಧಿಪಡಿಸಿದ ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ (WDRA) ವೆಬ್‌ಪೋರ್ಟಲ್ ಹಾಗೂ ಎಲೆಕ್ಟ್ರಾನಿಕ್ ಬದಲಿಸಬಹುದಾದ ಉಗ್ರಾಣ ರಸೀದಿ (E -NWDRA) ವ್ಯವಸ್ಥೆಯನ್ನು ಡಿಜಿಟಲ್ ಇಂಡಿಯಾ ಮಿಷನ್ ಯೋಜನೆಯಡಿ ಆರಂಭಿಸಿದೆ.
- ಈ ಎರಡು ವಿಶಿಷ್ಟ ಯೋಜನೆಗಳ ಪ್ರಮುಖ ಉದ್ದೇಶವೆಂದರೆ, ಉಗ್ರಾಣ ನೋಂದಣಿ ನಿಯಮಾವಳಿಯನ್ನು ಸರಳಗೊಳಿಸುವುದು, ಇಡೀ ನೋಂದಣಿ ಪ್ರಕ್ರಿಯೆಯನ್ನು ಡಿಜಿಟಲೀಕರಿಸುವುದು, ಮೇಲುಸ್ತುವಾರಿ ಹಾಗೂ ನಿಗಾ ವ್ಯವಸ್ಥೆ, ಎನ್‌ಡಬ್ಲುಆರ್ ಸೃಷ್ಟಿ ಮತ್ತು ನಿರ್ವಹಣೆಯನ್ನು ಎಲೆಕ್ಟ್ರಾನಿಕ್ ವಿಧಾನದಲ್ಲೇ ನಿರ್ವಹಿಸುವುದು ಇದರ ಉದ್ದೇಶ.

ಮುಖ್ಯ ಪರೀಕ್ಷೆಗಾಗಿ

- ಬದಲಿಸಬಹುದಾದ ಉಗ್ರಾಣ ರಸೀದಿ (NWDRA)ಯನ್ನು ಉಗ್ರಾಣಗಳು ವಸ್ತುಗಳನ್ನು ದಾಸ್ತಾನು ಮಾಡಿದ ವ್ಯಕ್ತಿಗಳಿಗೆ ನೀಡುತ್ತವೆ. ಇದಕ್ಕೆ ಉಗ್ರಾಣಗಳು ಹೊಣೆಗಾರಿಕೆ ಹೊಂದಿರುತ್ತವೆ.
- ಇವರು ವಿತರಣೆಯನ್ನು ಖಾತ್ರಿಪಡಿಸಿರುತ್ತಾರೆ ಹಾಗೂ ಮೂಲ ಠೇವಣಿದಾರರು ಅಥವಾ ಅದನ್ನು ಸಾಗಾಣಿಕೆ ಮಾಡಿದ ವ್ಯಕ್ತಿ ಉಗ್ರಾಣದಿಂದ ಅದನ್ನು ವಾಪಾಸು ಪಡೆಯುವ ಕ್ಲೇಮ್ ಸಲ್ಲಿಸಲು ಇದು ಅಗತ್ಯ ದಾಖಲೆಯಾಗುತ್ತದೆ.

- NWDRAಗಳನ್ನು ವ್ಯಾಪಾರ, ಮಾರಾಟ, ವಿನಿಮಯಕ್ಕೆ ಬಳಸಿಕೊಳ್ಳಬಹುದಾಗಿದ್ದು, ಇದು ಬ್ಯಾಂಕುಗಳಿಂದ ಸಾಲ ಪಡೆಯಲು ಭದ್ರತೆಯಾಗಿಯೂ ಬಳಕೆಯಾಗುತ್ತದೆ. ಈ ರಸೀದಿಗಳನ್ನು ಉಗ್ರಾಣ (ಅಭಿವೃದ್ಧಿ & ನಿಯಂತ್ರಣ) ಕಾಯ್ದೆ- 2007ರ ಅನ್ವಯ ಪರಿವರ್ತಿಸಲು ಅವಕಾಶ ಮಾಡಿಕೊಡಲಾಗಿದೆ. ಇದನ್ನು ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ ನಿರ್ವಹಿಸುತ್ತದೆ ಹಾಗೂ ನಿಯಂತ್ರಿಸುತ್ತದೆ.

- E -NWDRAಗಳನ್ನು ಯಾವುದೇ ರೀತಿಯಲ್ಲಿ ತಿದ್ದಲು, ಬದಲಿಸಲು, ನಕಲಿ ಸೃಷ್ಟಿಸಲು, ಕಳೆದುಕೊಳ್ಳಲು ಮತ್ತು ಹಾನಿಪಡಿಸಲು ಅವಕಾಶವಿಲ್ಲ. ಜತೆಗೆ ಬಹು ಹಣಕಾಸು ವ್ಯವಸ್ಥೆಗೆ ಇದನ್ನು ಬಳಸಿಕೊಳ್ಳುವಂತಿಲ್ಲ. ಆದ್ದರಿಂದ ಇದು ಬ್ಯಾಂಕುಗಳಿಗೆ ಸುಲಭ ಭದ್ರತಾ ಸಾಧನವಾಗಿ ಬಳಕೆ ಮಾಡಿಕೊಳ್ಳಲು ಅವಕಾಶವಿದ್ದು, ವಸ್ತುಗಳ ವಿನಿಮಯ, ಎಲೆಕ್ಟ್ರಾನಿಕ್ ರಾಷ್ಟ್ರೀಯ ಕರಷಿ ಮಾರುಕಟ್ಟೆ ಮತ್ತು ಇತರ ಎಲೆಕ್ಟ್ರಾನಿಕ್ ವೇದಿಕೆಗಳಲ್ಲಿ ಸುಲಭ ಹಾಗೂ ಸುಲಲಿತವಾಗಿ ವಹಿವಾಟು ನಡೆಸಲು ಇದು ಅನುಕೂಲ ಮಾಡಿಕೊಡುತ್ತದೆ.

- E -NWDRAಗಳು ದಾಸ್ತಾನು ವಸ್ತುಗಳ ಅನಗತ್ಯ ಸಾಗಾಣಿಕೆ ವೆಚ್ಚವನ್ನು ನಿಯಂತ್ರಿಸಲು ಕೂಡಾ ಸಹಕಾರಿಯಾಗಲಿದೆ. ಹಲವು ಮಂದಿ ಖರೀದಿದಾರರು, ಇದರ ಭೌತಿಕ ಸಾಗಾಣಿಕೆ ಇಲ್ಲದೇ ಇದರ ವಹಿವಾಟು ನಡೆಸಲು ಅವಕಾಶವಾಗುತ್ತದೆ. ಇದನ್ನು ವಿಭಜಿಸಿ ಭಾಗಶಃ ವರ್ಗಾವಣೆ ಅಥವಾ ಹಿಂಪಡೆಯುವಿಕೆಗೆ ಕೂಡಾ ಅವಕಾಶವಿದೆ.

- ಸರ್ಕಾರದ ಈ ವಿಶಿಷ್ಟ ಯೋಜನೆ ಕೃಷಿ ವಸ್ತುಗಳ ಮಾರುಕಟ್ಟೆಯನ್ನು ಕ್ರಾಂತಿಕಾರಕವಾಗಿ ಮಾಡುವ ಸಾಧ್ಯತೆ ಇದೆ ಹಾಗೂ ರೈತರು ತಮ್ಮ ಉತ್ಪನ್ನಗಳಿಗೆ ಸೂಕ್ತ ಬೆಲೆಯನ್ನು ಪಡೆಯುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ. 2022ರ ಒಳಗಾಗಿ ರೈತರ ಆದಾಯವನ್ನು ದ್ವಿಗುಣಗೊಳಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಅಂಗ ಇದಾಗಿದೆ.

- ಇದರ ಪ್ರಮುಖ ಉದ್ದೇಶ ಇಡೀ ಪ್ರಕ್ರಿಯೆಯನ್ನು ಸರಳಗೊಳಿಸುವುದು ಮತ್ತು ಆನ್‌ಲೈನ್ ವ್ಯವಸ್ಥೆಯ ಮೂಲಕ ಡಬ್ಲ್ಯುಡಿಆರ್‌ಎ ನಿಯಂತ್ರಣ ಕಾರ್ಯಗಳನ್ನು ಡಿಜಿಟಲೀಕರಿಸುವುದು.

- ಜತೆಗೆ ಇದು ಬ್ಯಾಂಕ್‌ಗಳು ಹಾಗೂ ಹಣಕಾಸು ಸಂಸ್ಥೆಗಳಿಗೆ ಖಾತ್ರಿ ಭದ್ರತೆಯನ್ನು ನೀಡಲು ಕೂಡಾ ಅನುಕೂಲವಾಗಿದ್ದು, ಠೇವಣಿದಾರರು ಹಾಗೂ ವ್ಯಾಪಾರಸ್ಥರು ಇ- ಎನ್‌ಡಬ್ಲ್ಯುಆರ್ ವ್ಯವಸ್ಥೆ ಮೂಲಕವೇ ವಹಿವಾಟು ನಡೆಸಲು ಅವಕಾಶವಾಗಲಿದೆ.

**6.ವಿಶ್ವ ಪ್ರವಾಸ ಮತ್ತು ಪ್ರವಾಸೋದ್ಯಮ ಮಂಡಳಿ (WTTC)**

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಮುಖ ಸುದ್ದೀ

- WTTCಯು ಪ್ರಯಾಣ ಮತ್ತು ಪ್ರವಾಸೋದ್ಯಮದ ಒಂದು ವೇದಿಕೆ. ಎದು ಜಾಗತಿಕ ವ್ಯಾಪಾರ ಸಮುದಾಯದಿಂದ ಸದಸ್ಯರನ್ನು ಹೊಂದಿದೆ ಮತ್ತು ಉದ್ಯಮದ ಬಗ್ಗೆ ಅರಿವು ಮೂಡಿಸಲು ಸರ್ಕಾರಗಳೊಂದಿಗೆ ಕಾರ್ಯನಿರ್ವಹಿಸುತ್ತದೆ.
- ಇದರ ಪ್ರಧಾನ ಕಚೇರಿ ಲಂಡನ್ನಲ್ಲಿದೆ ಮತ್ತು ಪ್ರತಿವರ್ಷವೂ ಜಾಗತಿಕ ಶೃಂಗಸಭೆಯನ್ನು ಏರ್ಪಡಿಸುತ್ತದೆ.
- ವಿಶ್ವಾದ್ಯಂತ ಪ್ರಯಾಣ ಮತ್ತು ಪ್ರವಾಸೋದ್ಯಮದ ಎಲ್ಲಾ ಭಾಗಗಳಲ್ಲಿ ಖಾಸಗಿ ವಲಯವನ್ನು ಪ್ರತಿನಿಧಿಸುವ ಏಕೈಕ ವೇದಿಕೆಯಾಗಿ ಇದು ಹೆಸರುವಾಸಿಯಾಗಿದೆ.
- ಇದು ಉದ್ಯಮದ ಆರ್ಥಿಕ ಮತ್ತು ಸಾಮಾಜಿಕ ಪ್ರಭಾವದ ಮೇಲೆ ಆಕ್ಸ್ಫರ್ಡ್ ಅರ್ಥಶಾಸ್ತ್ರದೊಂದಿಗೆ ಸಂಶೋಧನೆಯನ್ನು ಪ್ರಕಟಿಸುತ್ತದೆ.
- ಅದರ ಇತ್ತೀಚಿನ ವರದಿಯಲ್ಲಿ ಕೆರಿಬಿಯನ್ ಪ್ರದೇಶದಲ್ಲಿ ಪೋರ್ಟೊ ರಿಕೊ ಡೊಮಿನಿಕವನ್ನು ಆಕ್ರಮಿಸಿದ ಇರ್ಮಾ ಮತ್ತು ಮಾರಿಯಾ ಚಂಡಮಾರುತಗಳು ಅದರ ಪ್ರವಾಸೋದ್ಯಮ ಸಾಮರ್ಥ್ಯದಲ್ಲಿ ವ್ಯಾಪಕ ಹಾನಿಯನ್ನು ಉಂಟುಮಾಡಿದೆ ಎಂದು ಹೇಳುತ್ತದೆ.
- ಕೆರಿಬಿಯನ್ ಪ್ರದೇಶದಲ್ಲಿ, ಪ್ರಪಂಚದ ಇತರ ಪ್ರದೇಶಗಳಿಗಿಂತಲೂ ಪ್ರಯಾಣ ಮತ್ತು ಪ್ರವಾಸೋದ್ಯಮ ಖಾತೆಗಳು ಜಿಡಿಪಿಯ ಹೆಚ್ಚಿನ ಪಾಲನ್ನು ಹೊಂದಿವೆ.

**7.ಕಾಂಡ್ಲಾ ಇನ್ನು ದೀನ್ ದಯಾಳ್ ಬಂದರು.**

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

- ಗುಜರಾತಿನ ಕಂಡ್ಲಾ ಬಂದರಿಗೆ ದೀನ್ ದಯಾಳ್ ಬಂದರು ಎಂದು ಮರುನಾಮಕರಣ ಮಾಡಲಾಗಿದೆ .ಈ ಕುರಿತು ನೌಕಾ ಸಚಿವಾಲಯ ಅಧಿಸೂಚನೆ ಹೊರಡಿಸಿದೆ .
- ಗುಜರಾತ್ ಕಚ್ ನಲ್ಲಿರುವ ಈ ಬಂದರು ದೇಶದ ಪ್ರಮುಖ 12 ಬಂದರುಗಳಲ್ಲಿ ಒಂದಾಗಿದ್ದು ಸೆಪ್ಟೆಂಬರ್ 25 ರಿಂದಲೇ ನೂತನ ಹೆಸರು ಜಾರಿಗೆ ಬಂದಿದೆ.
- ಸಚಿವಾಲಯ ಅಧಿಸೂಚನೆಯ ಪ್ರಕಾರ ಕೇಂದ್ರ ಸರ್ಕಾರವು ಭಾರತೀಯ ಬಂದರುಗಳ ಕಾಯ್ದೆ 1908ರ ಅಡಿಯಲ್ಲಿ ಕಾಂಡ್ಲಾ ಬಂದರನ್ನು ದೀನ್ ದಯಾಳ್ ಬಂದರು ಎಂದು ತಿದ್ದುಪಡಿ ಮಾಡಿದೆ.

**28th SEPTEMBER**

**1.ಮಹಿಳೆಯರಿಗೆ ವಾಹನ ಚಾಲನೆಗೆ ಅವಕಾಶ ನೀಡಿದ ಸೌದಿ ಅರೇಬಿಯಾ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಮಹಿಳೆಯರ ದೀರ್ಘಕಾಲೀನ ಬೇಡಿಕೆಗೆ ಸೌದಿ ಅರೇಬಿಯಾ ಮಹಿಳೆಯರಿಗೆ ವಾಹನ ಚಾಲನೆಗೆ ಅನುಮತಿ ನೀಡಲು ಸಮ್ಮತಿಸಿದೆ.
- ಮಹಿಳೆಯರಿಗೆ ವಾಹನ ಚಾಲನೆಗೆ ಅವಕಾಶ ನೀಡುವ ಸಲುವಾಗಿ ಸೌದಿ ಸರ್ಕಾರ ಸಮಿತಿಯೊಂದನ್ನು ರಚಿಸಿದ್ದು, ಹೊಸ ಕಾನೂನು ಜಾರಿಗೆ ತರುವ ಉಸ್ತುವಾರಿಯನ್ನು ಸಮಿತಿಗೆ ವಹಿಸಲಾಗಿದೆ. 30 ದಿನಗಳಲ್ಲಿ ಸಲಹೆಯನ್ನು ನೀಡಲು ಸಮಿತಿಗೆ ಸೂಚಿಸಲಾಗಿದೆ

- ಸೌದಿ ಸಂಚಾರ ನಿಯಮಗಳಲ್ಲಾಗಲಿ ಮಹಿಳೆಯರು ವಾಹನ ಚಲಾಯಿಸುವುದನ್ನು ನಿಷೇಧಿಸಿರಲಿಲ್ಲವಾದರೂ ಅವರಿಗೆ ಚಾಲನಾ ಪರವಾನಗಿಯನ್ನು ನೀಡುತ್ತಿರಲಿಲ್ಲ. ಕಾರು ಚಲಾಯಿಸಲು ಪ್ರಯತ್ನಿಸುವ ಮಹಿಳೆಯರನ್ನು ಬಂಧಿಸಲಾಗುತ್ತಿತ್ತು.
- ಇದರಿಂದಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸೌದಿ ಕುರಿತು ನಕಾರಾತ್ಮಕ ಅಭಿಪ್ರಾಯ ವ್ಯಕ್ತವಾಗುತ್ತಿತ್ತು. ಜತೆಗೆ ಮಹಿಳೆಯರಿಗೆ ವಾಹನ ಚಾಲನೆಗೆ ಅವಕಾಶ ನೀಡಬೇಕು ಎಂದು ಮಹಿಳೆಯರು 1990 ರಿಂದಲೂ ನಿರಂತರವಾಗಿ ಒತ್ತಾಯಿಸುತ್ತಿದ್ದರು. ಈ ಹಿನ್ನಲೆಯಲ್ಲಿ ಸೌದಿ ಸರ್ಕಾರ ಈ ಮಹತ್ವದ ತೀರ್ಮಾನವನ್ನು ತೆಗೆದುಕೊಂಡಿದೆ.

ಮುಖ್ಯ ಪರೀಕ್ಷೆಗಾಗಿ

- ಮಹಿಳೆಯರು ವಾಹನ ಚಲಾಯಿಸುವುದನ್ನು ನಿಷೇಧಿಸಿದ್ದ ಏಕೈಕ ರಾಷ್ಟ್ರವಾದ ಸೌದಿ ಅರೆಬಿಯಾದಲ್ಲಿ ಸತತ ಮೂರು ದಶಕಗಳ ನಿರಂತರ ಹೋರಾಟದ ಬಳಿಕ ನಿಷೇಧವನ್ನು ತೆರವುಗೊಂಡಿದೆ. 2018ರ ಬೇಸಿಗೆಯಿಂದ ಈ ಆದೇಶ ಜಾರಿಗೆ ಬರಲಿದೆ.
- ಸೌದಿಯ ಮಹಿಳಾ ಹಕ್ಕುಗಳ ಹೋರಾಟಗಾರರು ಈ ಕುರಿತಂತೆ ಆನ್‌ಲೈನ್ ಆಂದೋಲನವನ್ನು ಪ್ರಾರಂಭಿಸಿದ್ದು, 2013 ರಲ್ಲಿ ಕೆಲವು ಮಹಿಳೆಯರು ಕಾರು ಚಲಾಯಿಸುತ್ತಿರುವ ವಿಡಿಯೊ ಅಪ್ ಲೋಡ್ ಮಾಡಿದ್ದರು. ಕೆಲವು ವಿಡಿಯೊಗಳಲ್ಲಿ ಮಹಿಳೆಯರ ಪಕ್ಕ ಕುಳಿತು ಬೆಂಬಲ ಸೂಚಿಸಿದ್ದ ಪುರುಷರು ಬದಲಾವಣೆಗೆ ತಾವು ಸಿದ್ಧ ಎಂಬ ಸಂದೇಶವನ್ನು ಸಾರಿದ್ದರು.
- ಈ ಐತಿಹಾಸಿಕ ನಿರ್ಧಾರಕ್ಕೆ ಜಗತ್ತಿನಾದ್ಯಂತ ಮುಕ್ತ ಸ್ವಾಗತ ದೊರಕಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ "ಸೌದಿ ಅರೆಬಿಯಾದಲ್ಲಿ ಮಹಿಳೆಯರಿಗೆ ಸಮಾನ ಹಕ್ಕು ಹಾಗೂ ಅವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಪ್ರಮುಖ ನಡೆ," ಎಂದಿದ್ದಾರೆ. ಅಮೆರಿಕದ ಪ್ರಧಾನ ಕಾರ್ಯದರ್ಶಿ ಅಂಟೊನಿಯೊ ಗುಟೆರಸ್, ಬ್ರಿಟಿಷ್ ಪ್ರಧಾನಿ ಥೆರೆಸಾ ಮೇ, ದೇಶದ ಅಭಿವೃದ್ಧಿಗೆ ಮಹಿಳಾ ಸಬಲೀಕರಣ ಪ್ರಮುಖ ಹೆಜ್ಜೆ ಎಂದಿದ್ದಾರೆ.

ಹಿನ್ನಲೆ

- 1990ರಲ್ಲಿ ವಾಹನ ಚಲಾಯಿಸಿದ್ದ 50 ಮಹಿಳೆಯರನ್ನು ಬಂಧಿಸಿ ಅವರ ಪಾಸ್‌ಪೋರ್ಟ್‌ಗಳನ್ನು ಕಿತ್ತುಕೊಳ್ಳಲಾಗಿತ್ತು. ಜತೆಗೆ ಅವರು ಉದ್ಯೋಗಗಳನ್ನೂ ಕಳೆದುಕೊಂಡಿದ್ದರು. 2011ರಲ್ಲಿ ವಾಹನ ಚಲಾಯಿಸಿದ ಮಹಿಳೆಯೊಬ್ಬಳನ್ನು ಶಿಕ್ಷಿಸಲಾಯಿತಾದರೂ ದೊರೆ ಅಬ್ದುಲ್ಲಾ ಶಿಕ್ಷೆಯನ್ನು ಹಿಂಪಡೆದಿದ್ದರು.
- 2014 ರಲ್ಲೂ ಮಹಿಳೆಯೊಬ್ಬರು 2 ತಿಂಗಳು ಸೆರೆವಾಸ ಅನುಭವಿಸಿದ್ದರು. ಈ ಸುದೀರ್ಘ ಹೋರಾಟದ ಫಲವಾಗಿ ಈಗ ಸೌದಿ ಮಹಿಳೆಯರು ಅಧಿಕೃತವಾಗಿ ವಾಹನ ಚಲಾಯಿಸಲು ಪರವಾನಗಿ ಪಡೆದಂತಾಗಿದೆ.
- ಇಷ್ಟು ದಿನ ಎಲ್ಲಾ ಕೆಲಸಗಳಿಗೂ ಗಂಡಸರನ್ನೆ ನೆಚ್ಚಿಕೊಂಡಿದ್ದ ಮಹಿಳೆಯರು ಈಗ ಸ್ವತಂತ್ರರಾಗಿದ್ದಾರೆ. ಇದು ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ನೀಡಿದ್ದು, ದೊಡ್ಡ ನಗರಗಳಲ್ಲಿ ಮಹಿಳಾ ಉಬರ್ ಡ್ರೈವರ್‌ಗಳನ್ನು ಕಾಣುವುದು ದೂರವಿಲ್ಲ ಎನ್ನಲಾಗಿದೆ.

## 2. ಕೇಂದ್ರದಿಂದ ಆರ್ಥಿಕ ಸಲಹಾ ಮಂಡಳಿ ರಚನೆ

ನಮ್ಮ ಐಎಎಸ್ ಅಕಾಡೆಮಿ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ನಮ್ಮಿಂದ..... ಮಸ್ಸೂರಿಗೆ/ಮೈಸೂರಿಗೆ

ಪ್ರಮುಖ ಸುದ್ದಿ

- ಪ್ರಧಾನಿ ನರೇಂದ್ರ ಮೋದಿಯವರು ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ (ಇಎಸಿ-ಪಿಎಂ) ರಚಿಸಿದ್ದಾರೆ.
- ನೀತಿ ಆಯೋಗದ ಸದಸ್ಯ ಬಿಬೇಕ್ ದೇಬ್ರಾಯ್ರನ್ನು ಇದಕ್ಕೆ ಮುಖ್ಯಸ್ಥರನ್ನಾಗಿ ನೇಮಕ ಮಾಡಿದ್ದಾರೆ. ನೀತಿ ಆಯೋಗದ ಮುಖ್ಯ ಸಲಹೆಗಾರ ಹಾಗೂ ಹಣಕಾಸು ಇಲಾಖೆಯ ಮಾಜಿ ಕಾರ್ಯದರ್ಶಿ ರತನ್ ವತಲ್ ಈ ಸಮಿತಿಯ ಸದಸ್ಯ ಹಾಗೂ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.
- ಆರ್ಥಿಕ ತಜ್ಞ ಸುರ್ಜಿತ್ ಬಲ್ಲಾ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫೈನಾನ್ಸ್ ಆಂಡ್ ಪಾಲಿಸಿಯ ನಿರ್ದೇಶಕ ರತಿನ್ ರಾಯ್ ಹಾಗೂ ಇಂದಿರಾ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್

ರಿಸರ್ಚ್‌ನ ಪ್ರಾಧ್ಯಾಪಕಿ ಅಶೀಮಾ ಗೊಯೆಲ್ ಸದಸ್ಯರಾಗಿದ್ದಾರೆ.ಈ ಮಂಡಳಿಯ ಇತರ ಸದಸ್ಯರೆಂದರೆ ಡಾ.ಸುರ್ಜೀತ್ ಭಲ್ಲಾ, ಡಾ.ರತಿನ್ ರಾಯ್, .ಅಶೀಮಾ ಗೋಯಲ್ ಮತ್ತು ರತಲ್ ವಟಾಲ್. ಇದು ಪ್ರಧಾನಮಂತ್ರಿ ನೀಡುವ ಆರ್ಥಿಕ ಹಾಗೂ ಇತರ ಯಾವುದೇ ವಿಷಯಗಳ ಬಗ್ಗೆ ಸಲಹೆ ನೀಡುತ್ತದೆ.

ಮುಖ್ಯ ಪರೀಕ್ಷೆಗಾಗಿ

- ಆರ್ಥಿಕ ಸಲಹಾ ಸಮಿತಿ ಅಸ್ತಿತ್ವಕ್ಕೆ ಬಂದಿದ್ದು 37 ವರ್ಷಗಳ ಹಿಂದೆ. ಆರ್ಥಿಕ ಸಂಕಷ್ಟ, ಗಂಭೀರ ಸವಾಲುಗಳು ಎದುರಾದಾಗ ಅವುಗಳನ್ನು ಎದುರಿಸಿ, ದೇಶ ಆರ್ಥಿಕತೆಗೆ ಮತ್ತೆ ಚೈತನ್ಯವನ್ನು ತುಂಬಲು ಶ್ರಮಿಸಿದ ಸಾಕಷ್ಟು ಉದಾಹರಣೆಗಳಿವೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಆರ್ಥಿಕ ಸಲಹಾ ಸಮಿತಿ ನಡೆದು ಬಂದ ದಾರಿ

- 1980ರಲ್ಲಿ ಅಧಿಕಾರಕ್ಕೆ ಮರಳಿದ ಇಂದಿರಾ ಗಾಂಧಿಗೆ ಕಠಿಣ ಸವಾಲುಗಳು ಎದುರಾಗಿದ್ದವು. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ಭಾರಿ ಏರಿಕೆ ಕಂಡಿತ್ತು. ಮತ್ತೊಂದೆಡೆ ದೇಶಾದ್ಯಂತ ಬರಗಾಲ ಉಂಟಾಗಿ ಆರ್ಥಿಕತೆ ನೆಲಕಚ್ಚಿತ್ತು. ದಿನಬಳಕೆಯ ವಸ್ತುಗಳು ಗಗನಕ್ಕೇರಿ ಜನರು ತೀವ್ರ ಸಂಕಷ್ಟ ಎದುರಿಸುತ್ತಿದ್ದರು.
- ಅಂದಿನ ಹಣಕಾಸು ಸಚಿವ ಆರ್. ವೆಂಕಟರಾಮನ್ ಆರ್ಥಿಕ ಸುಧಾರಣೆಯ ಪ್ರಸ್ತಾವನೆ ಮುಂದಿಟ್ಟರು. ಇದರಂತೆ ಅಂದಿನ ಯೋಜನಾ ಆಯೋಗದಲ್ಲಿದ್ದ ಸುಖಾಮೊಯ್ ಚಕ್ರವರ್ತಿ, ದೆಹಲಿ ಸ್ಕೂಲ್ ಆಫ್ ಇಕಾನಮಿಕ್ಸ್‌ನಲ್ಲಿ ಆರ್ಥಿಕ ತಜ್ಞರಾಗಿದ್ದ ಅಮರ್ತ್ಯ ಸೇನ್ ಹಾಗೂ ಮನಮೋಹನ್ ಸಿಂಗ್‌ರನ್ನು ಒಳಗೊಂಡ ಆರ್ಥಿಕ ಸಲಹಾ ಸಮಿತಿಯನ್ನು ಇಂದಿರಾ ಗಾಂಧಿ ಅಸ್ತಿತ್ವಕ್ಕೆ ತಂದರು.

- ಈ ಸಮಿತಿ ಕಾಲಕಾಲಕ್ಕೆ ಆರ್ಥಿಕ ಸ್ಥಿತಿ ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪ್ರಧಾನಿಗೆ ಮಾಹಿತಿ ನೀಡುತ್ತಿತ್ತು. ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗಲೂ ಈ ಸಮಿತಿಯಿಂದ ಸಲಹೆಗಳನ್ನು ಪಡೆದುಕೊಳ್ಳುತ್ತಿದ್ದರು.
- 1986-87ರಲ್ಲಿ ಭಾರತ ಜಾಗತೀಕರಣ ಹಾಗೂ ಉದಾರೀಕರಣಕ್ಕೆ ತೆರೆದುಕೊಳ್ಳುವಾಗ ಈ ಸಮಿತಿ ಸಮಗ್ರ ಅಧ್ಯಯನ ಕೈಗೊಂಡು ಸರ್ಕಾರಕ್ಕೆ ವರದಿ ನೀಡಿತ್ತು. ಈ ಕ್ರಮದಿಂದ ವಿತ್ತೀಯ ಕೊರತೆ ಹೆಚ್ಚಾಗಬಹುದು ಎಂದು ಆತಂಕ ವ್ಯಕ್ತಪಡಿಸಿತ್ತು. ಚಂದ್ರಶೇಖರ್ ಪ್ರಧಾನಿಯಾಗಿದ್ದಾಗ ಮನಮೋಹನ್ ಸಿಂಗ್ ಆರ್ಥಿಕ ಸಮಿತಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು.
- 1991ರಲ್ಲಿ ರೂ.ಮೌಲ್ಯ ಪಾತಾಳಕ್ಕಿಳಿದು ವಿದೇಶಿ ಕರೆನ್ಸಿ ವಿನಿಮಯ ಹಾಗೂ ಪಾವತಿ ಸಮಸ್ಯೆ ದೇಶವನ್ನು ವ್ಯಾಪಕವಾಗಿ ಕಾಡಿತು. ಆಗ ಮನಮೋಹನ್ ಸಿಂಗ್, ಪ್ರಧಾನಿಯ ಸಲಹೆಗಾರರಾಗಿ ಸಮಸ್ಯೆ ಹರಿಹರಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು.
- 1998ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ಅವರಿಗೆ ಸಾಲು ಸಾಲು ಸವಾಲುಗಳು ಎದುರಾದವು. ಆರ್ಥಿಕ ಕುಸಿತಕ್ಕೆ ಇಡೀ ಏಷ್ಯಾ ಖಂಡವೇ ತತ್ತರಿಸಿತ್ತು.
- ಈ ಸಂದರ್ಭದಲ್ಲಿ ಆರ್ಥಿಕ ಸಮಿತಿಯನ್ನು ವಿಸ್ತರಿಸಿ 12 ತಜ್ಞರನ್ನು ಸದಸ್ಯರನ್ನಾಗಿ ನೇಮಿಸಿದರು. ಸಮಿತಿಗೆ ಸ್ವತಃ ವಾಜಪೇಯಿ ಮುಖ್ಯಸ್ಥರಾದರು. 2002ರಲ್ಲಿ ಅವರು ಮಹತ್ವದ ಆರ್ಥಿಕ ನೀತಿಯನ್ನು ಘೋಷಣೆ ಮಾಡಿದರು. ಪ್ರಗತಿಯ ದರವನ್ನು ಶೇ. 8ಕ್ಕೆ ಹೆಚ್ಚಿಸುವುದು, 1 ಕೋಟಿ ಹೊಸ ಉದ್ಯೋಗ ಒದಗಿಸುವುದು, ಆರ್ಥಿಕ ಉತ್ತೇಜನ, ಯೋಜನೆಗಳ ಸಮರ್ಪಕ ಜಾರಿ ಸಹಿತ ಹಲವು ಕ್ರಮಗಳನ್ನು ಕೈಗೊಂಡರು. ಇವುಗಳಿಗೆ ಆರ್ಥಿಕ ಸಲಹಾ ಸಮಿತಿ ಬೆನ್ನೆಲುಬಾಗಿ ನಿಂತಿತ್ತು.
- ಆರ್ಥಿಕ ತಜ್ಞರಾದ ಮನಮೋಹನ್ ಸಿಂಗ್ ಪ್ರಧಾನಿಯಾದ ಬಳಿಕ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ರಂಗರಾಜನ್‌ರನ್ನು ಆರ್ಥಿಕ ಸಲಹಾ ಸಮಿತಿಯ ಮುಖ್ಯಸ್ಥರನ್ನಾಗಿ ನೇಮಿಸಿದರು. ಸಮಿತಿಯ ಸದಸ್ಯರ ಸಂಖ್ಯೆಯನ್ನು 6ಕ್ಕೆ ಇಳಿಕೆ ಮಾಡಿದರು.
- ಈ ವೇಳೆ ಪಿ. ಚಿದಂಬರಂ, ನಂತರ ಪ್ರಣಬ್ ಮುಖರ್ಜಿ ಹಣಕಾಸು ಸಚಿವರಾಗಿದ್ದರು. ಯೋಜನಾ ಆಯೋಗಕ್ಕೆ ಮಾಂಟೆಕ್ ಸಿಂಗ್ ಅಹ್ಲುವಾಲಿಯಾ ಮುಖ್ಯಸ್ಥರಾಗಿದ್ದರು. ಮನಮೋಹನ್ ಸಿಂಗ್ ಆಡಳಿತದಲ್ಲಿದ್ದ ಸಮಿತಿ ಇತಿಹಾಸದಲ್ಲೇ ಅತ್ಯಂತ ಬಲಿಷ್ಠ ಹಾಗೂ ಪರಿಣಾಮಕಾರಿಯಾಗಿತ್ತು

- ಕಳೆದ ತ್ರೈಮಾಸಿಕದಿಂದ ಕುಸಿಯುತ್ತಿರುವ ಆರ್ಥಿಕತೆಯನ್ನು ಮೇಲೆತ್ತಿ, ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಸಮಿತಿ ಅತ್ಯಂತ ಮಹತ್ವ ಪಡೆದಿದೆ. ಹಿಂದಿನ ತ್ರೈಮಾಸಿಕದ ಪ್ರಗತಿ ದರ ಶೇ. 5.7ಕ್ಕೆ ಇಳಿಕೆಯಾಗಿದೆ.
- ಕಳೆದ ವರ್ಷ ಇದು ಶೇ. 7.9 ಇತ್ತು. ಆರ್ಥಿಕ ಸ್ಥಿತಿಯನ್ನು ಮತ್ತೆ ಇದೇ ಮಟ್ಟಕ್ಕೆ ತರಲು ಕಠಿಣ ಆರ್ಥಿಕ ನೀತಿ ರೂಪಿಸುವುದು ಅನಿವಾರ್ಯವಾಗಿದೆ. ಈ ಪ್ರಕ್ರಿಯೆಯಲ್ಲಿ ಆರ್ಥಿಕ ಸಲಹಾ ಸಮಿತಿ ಮೇಲೆ ಹೆಚ್ಚಿನ ಜವಾಬ್ದಾರಿ ಇರಲಿದೆ.

**ಸಮಿತಿ ಕೆಲಸವೇನು?**

- ಆರ್ಥಿಕತೆ ಹಾಗೂ ಸುಧಾರಣಾ ಕ್ರಮಗಳ ಬಗ್ಗೆ ಸಮಗ್ರ ಅಧ್ಯಯನ ನಡೆಸಿ ಪ್ರಧಾನಿಗೆ ಸಲಹೆ, ಶಿಫಾರಸುಗಳನ್ನು ನೀಡುವುದು.
- ಕೆಲ ಪ್ರಮುಖ ವಿಚಾರಗಳ ಕುರಿತು ಅಧ್ಯಯನ ನಡೆಸುವಂತೆ ಪ್ರಧಾನಿಯೇ ಸಮಿತಿಗೆ ಸೂಚಿಸುತ್ತಾರೆ. ವಿಷಯ ಕುರಿತು ಅಧ್ಯಯನ ನಡೆಸಿ ಸಮಿತಿ ಪ್ರಧಾನಿ ಕಚೇರಿಗೆ ವರದಿ ಸಲ್ಲಿಸುತ್ತದೆ.
- ಪ್ರಮುಖ ಯೋಜನೆ, ಮಹತ್ವದ ಆರ್ಥಿಕ ನಿರ್ಧಾರಗಳನ್ನು ಕೈಗೊ ಳ್ಳುವ ಮುನ್ನ ಪ್ರಧಾನಿ ಅಥವಾ ಹಣಕಾಸು ಸಚಿವಾಲಯ ಆರ್ಥಿಕ ಸಮಿತಿಯ ಜತೆ ಚರ್ಚೆ ನಡೆಸುತ್ತದೆ. ಈ ವೇಳೆ ಉದ್ದೇಶಿತ ಯೋಜನೆ ಅಥವಾ ಕ್ರಮದ ಕುರಿತು ಸಮಿತಿ ಸಮಗ್ರ ವಿಶ್ಲೇಷಣೆ ಕೈಗೊಂಡು ಇದರ ಪರಿಣಾಮಗಳು, ನಾಭ-ನಷ್ಟಗಳ ಬಗ್ಗೆ ವರದಿ ನೀಡುತ್ತದೆ.
- ಇದು ಸ್ವತಂತ್ರ ಹಾಗೂ ಸಲಹಾ ಸಮಿತಿಯಾಗಿದ್ದು, ಯಾವುದೇ ಯೋಜನೆ ಅಥವಾ ಆರ್ಥಿಕ ಕ್ರಮಗಳನ್ನು ಸ್ವಯಂ ಜಾರಿಗೊಳಿಸುವ ಅಧಿಕಾರವಿಲ್ಲ.

ಅಭ್ಯರ್ಥಿಗಳ ಯೋಚನೆಗೊಂದು ಯೋಜನೆ

- ✓ ನಿರಂತರವಾಗಿ ಕುಸಿಯುತ್ತಿರುವ ದೇಶದ ಆರ್ಥಿಕ ಸ್ಥಿತಿ ಆತಂಕ ಹುಟ್ಟಿಸಿರುವ ಬೆನ್ನಲ್ಲೇ, ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದು ಆರ್ಥಿಕತೆಗೆ ಟಾನಿಕ್ ನೀಡುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಆರ್ಥಿಕ ಸಲಹಾ ಸಮಿತಿಯನ್ನು ಪುನಃ ಅಸ್ತಿತ್ವಕ್ಕೆ ತಂದಿದ್ದಾರೆ. ನಿಮ್ಮ ಪ್ರಕಾರ ಇದರಿಂದ ಆರ್ಥಿಕತೆಗೆ ತಿರುವು ಸಿಗುತ್ತದೆಯೇ ?

**3. ಮೌಢ್ಯ ಪ್ರತಿಬಂಧಕ ವಿಧೇಯಕಕ್ಕೆ ಕರ್ನಾಟಕ ರಾಜ್ಯ ಸಚಿವ ಸಂಪುಟ ಅನುಮೋದನೆ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ➢ ವಿವಾದಿತ ಹಾಗೂ ಬಹು ಚರ್ಚಿತ ಮೌಢ್ಯ ಪ್ರತಿಬಂಧಕ ವಿಧೇಯಕವನ್ನು ಮುಂದಿನ ಚಳಿಗಾಲದ ಅಧಿವೇಶನದಲ್ಲೇ ಮಂಡಿಸಲು ಕರ್ನಾಟಕ ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ.
- ➢ ಮಡೆ ಸ್ನಾನ ಹಾಗೂ ದೆವ್ವ, ಭೂತದ ಹೆಸರಿನಲ್ಲಿ ದೈಹಿಕ ಹಿಂಸೆ ನೀಡುವ ಸಂಪ್ರದಾಯಗಳಿಗೆ ನಿರ್ಬಂಧ ಸೇರಿ ಒಟ್ಟು 16 ಅಂಶಗಳನ್ನು ವಿಧೇಯಕದಲ್ಲಿ ಸೇರಿಸಲಾಗಿದೆ. ಆದರೆ, ಪೂಜೆ ಪುನಸ್ಕಾರಗಳಂಥ ಧಾರ್ಮಿಕ ಆಚರಣೆಗಳು ಹಾಗೂ ವಾಸ್ತು-ಜ್ಯೋತಿಷಗಳಂಥ ಸಾಂಪ್ರದಾಯಿಕ ಪದ್ಧತಿಗಳಿಗೆ ಯಾವುದೇ ಅಭ್ಯಂತರವಿಲ್ಲ ಎಂದು ಸ್ಪಷ್ಟವಾಗಿ ಉದ್ದೇಶಿತ ವಿಧೇಯಕದಲ್ಲಿ ಹೇಳಲಾಗಿದೆ.
- ➢ ಮಹಾರಾಷ್ಟ್ರ ಮಾದರಿಯಲ್ಲಿ 'ಅಮಾನವೀಯ ದುಷ್ಟ ಮತ್ತು ವಾಮಾಚಾರ ಪ್ರತಿಬಂಧಕ ಮತ್ತು ನಿರ್ಮೂಲನೆ ವಿಧೇಯಕ-2017' ಮಂಡಿಸಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಮುಖ್ಯ ಪರೀಕ್ಷೆಗಾಗಿ

ಯಾವುದಕ್ಕೆಲ್ಲ ವಿನಾಯಿತಿ ನೀಡಲಾಗಿದೆ..?

- ವಾಸ್ತು ಹಾಗೂ ಜ್ಯೋತಿಷಗಳಂಥ ಸಾಂಪ್ರದಾಯಿಕ ಪದ್ಧತಿಗಳಿಗೆ ಅಭ್ಯಂತರವಿಲ್ಲ.
- ಕಿವಿ-ಮೂಗು ಚುಚ್ಚುವ, ಚೌಲ ಅಥವಾ ಮುಂಡನದಂಥ ಧಾರ್ಮಿಕ ಆಚರಣೆಗಳಿಗೂ ಯಾವುದೇ ನಿರ್ಬಂಧಗಳಿಲ್ಲ.
- ಹಬ್ಬ, ಜಾತ್ರೆಗಳ ಸಂದರ್ಭ ಸ್ವಯಂ ಪ್ರೇರಿತವಾಗಿ ಬೆಂಕಿ ಮೇಲೆ ನಡೆಯುವ ಅಥವಾ ಕೆಂಡ ಹಾಯುವ ಆಚರಣೆಗೂ ನಿಷೇಧವಿಲ್ಲ.
- ಮನೆ, ದೇಗುಲ, ಮಸೀದಿ, ಗುರುದ್ವಾರ, ಪಗೋಡ, ಚರ್ಚ್‌ಗಳಲ್ಲಿ ಧಾರ್ಮಿಕ ಆಚರಣೆಗಳಾದ ಪ್ರಾರ್ಥನೆ, ಉಪಾಸನೆ, ಪರಿಕ್ರಮ, ಹರಿಕಥೆ, ಕೀರ್ತನೆ, ಭಜನೆ, ಪ್ರವಚನಗಳು ಅಬಾಧಿತ.
- ಪವಾಡಗಳ ಕುರಿತು ಸನ್ಯಾಸಿ ಅಥವಾ ಧರ್ಮಗುರುಗಳು ಪ್ರಚಾರ ಮಾಡುವುದು, ಮುದ್ರಣ ರೂಪದಲ್ಲಿ ಪ್ರಚಾರ ಮಾಡಲು ಅಡ್ಡಿ ಇಲ್ಲ.

ನಮ್ಮ ಐಎಎಸ್ ಅಕಾಡೆಮಿ

ಯಾವುದನ್ನು ಅಪರಾಧ ಎಂದು ಪರಿಗಣಿಸಲಾಗಿದೆ ?

- ದೆವ್ವ ಬಿಡಿಸುವ ಹೆಸರಲ್ಲಿ ವಿವಸ್ತ್ರಗೊಳಿಸುವುದು. ಹಗ್ಗದಲ್ಲಿ ಅಥವಾ ಕಬ್ಬಿಣದ ಸರಳುಗಳಲ್ಲಿ ಕಟ್ಟಿ ಹಾಕಿ ಚಾಟಿಯಲ್ಲಿ ಹೊಡೆಯುವುದು. ಪಾದರಕ್ಷೆ ಮುಳುಗಿಸಿದ ನೀರನ್ನು ಕುಡಿಸುವುದು. ಛಾವಣಿಗೆ ನೇತು ಹಾಕಿ ಮೆಣಸಿನಕಾಯಿ ಹೊಗೆ ಹಾಕುವುದು. ಅಂಗಾಂಗದ ಮೇಲೆ ಬರೆ ಹಾಕುವುದು. ಬಲವಂತವಾಗಿ ಹಾಗೂ ಬಹಿರಂಗವಾಗಿ ಲೈಂಗಿಕಕ್ರಿಯೆ ನಡೆಸುವಂತೆ ಪ್ರಚೋದಿಸುವುದು. ಒತ್ತಾಯಪೂರ್ವಕವಾಗಿ ಮಲ ಅಥವಾ ಮೂತ್ರ ಕುಡಿಸುವುದು.
- ಯಾವುದೇ ವ್ಯಕ್ತಿಗೆ ನೀನು ದುರದೃಷ್ಟವಂತ, ನಿನ್ನಿಂದಲೇ ಸಮಸ್ಯೆಯಾಗುತ್ತಿದೆ ಎಂದು ದೆವ್ವ ಅಥವಾ ಸೈತಾನ್ ಹೆಸರಿನಲ್ಲಿ ಪಟ್ಟ ಕಟ್ಟುವಂತಿಲ್ಲ.

- ವೈದ್ಯಕೀಯ ಚಿಕಿತ್ಸೆಗೆ ಪರ್ಯಾಯವಾಗಿ ಕೈ ಬೆರಳಿನಲ್ಲಿಯೇ ಚಿಕಿತ್ಸೆ ನಡೆಸುವುದಾಗಿ ತಿಳಿಸುವುದು ಅಥವಾ ಗರ್ಭದಲ್ಲಿರುವ ಭ್ರೂಣ ಬದಲಾವಣೆ ಮಾಡುವುದಾಗಿ ವಂಚಿಸುವುದು.

- ಅತಿಮಾನುಷ ಶಕ್ತಿ, ಆತ್ಮ ಮತ್ತಿತರ ಹೆಸರಿನಲ್ಲಿ ಹಿಂದಿನ ಜನ್ಮದ ನೆಪಗಳನ್ನು ಹೇಳಿ ಲೈಂಗಿಕ ಚಟುವಟಿಕೆಗೆ ಒತ್ತಾಯಿಸುವುದು.

- ಯಾವುದೇ ವ್ಯಕ್ತಿಯು ಭಕ್ತಿ ಹೆಸರಿನಲ್ಲಿ ತನ್ನನ್ನು ಗಾಯಗೊಳಿಸಿ ಕೊಳ್ಳುವುದು, ಹುಕ್‌ನಲ್ಲಿ ನೇತಾಡುವುದು ಮತ್ತು ದೇಹಕ್ಕೆ ಚುಚ್ಚಿಕೊಂಡು ರಥ ಎಳೆಯುವುದು.

- ನಾಯಿ, ಹಾವು ಅಥವಾ ಚೇಳು ಕಡಿತಕ್ಕೆ ವೈದ್ಯಕೀಯ ಚಿಕಿತ್ಸೆ ಬದಲಿಗೆ ಮಂತ್ರ-ತಂತ್ರ ಅಥವಾ ಯಂತ್ರಗಳನ್ನು ಹಾಕಿಸಿಕೊಳ್ಳುವಂತೆ ಒತ್ತಾಯಿಸುವುದು.

- ಸಾರ್ವಜನಿಕ ಅಥವಾ ಧಾರ್ಮಿಕ ಕ್ಷೇತ್ರಗಳಲ್ಲಿ ಬೇರೆಯವರು ಊಟ ಮಾಡಿದ ಎಲೆ ಮೇಲೆ ಉರುಳುವುದು, ಅಥವಾ ಅದೇ ರೀತಿಯ ಇತರೆ ಚಟುವಟಿಕೆ.

- ಮಕ್ಕಳ ರೋಗ ಗುಣಪಡಿಸುವುದಕ್ಕಾಗಿ ಒತ್ತಾಯಪೂರ್ವಕವಾಗಿ ಅಥವಾ ಮನವೊಲಿಸಿಯಾದರೂ ಮಕ್ಕಳನ್ನು ದೇಗುಲಗಳ ಮೇಲಿಂದ ಎಸೆಯುವುದು.

- ಗರ್ಭವತಿ ಅಥವಾ ಋತುಮತಿ ಸಂದರ್ಭ ದಲ್ಲಿ ಮಹಿಳೆಯನ್ನು ಗ್ರಾಮದಿಂದ ಹೊರ ಹಾಕುವುದು, ಒತ್ತಾಯ ಪೂರ್ವಕವಾಗಿ ಪ್ರತ್ಯೇಕವಾಗಿ ದೂರ ಇಡುವುದು, ನಂಬಿಕೆ ಹೆಸರಲ್ಲಿ ಬೆತ್ತಲೆ ಸೇವೆ, ಪ್ರಾಣಿಗಳ ಕತ್ತನ್ನು ಕಚ್ಚುವ (ಗಾವು)ಮೂಲಕ ಸಾರ್ವಜನಿಕವಾಗಿ ಉಪದ್ರವ ನೀಡುವ ದುಷ್ಟ ಪದ್ಧತಿಗೆ ನಿಷೇಧ.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಜಾತ್ರೆ ಅಥವಾ ಹಬ್ಬಗಳಲ್ಲಿ ಕೆಂಡದ ಮೇಲೆ ನಡೆಯುವಂತೆ ಒತ್ತಾಯಿಸುವುದು. ಲೋಹದಿಂದ 2 ಕೆನ್ನೆಗಳ ನಡುವೆ ಚುಚ್ಚಿಕೊಳ್ಳುವುದು.

- ರಾತ್ರಿ ಅಥವಾ ಹಗಲಿನ ವೇಳೆಯಲ್ಲಿ ಬಾನಾಮತಿ, ಮಾಟ ಮಂತ್ರದ ನೆಪದಲ್ಲಿ ಮನೆ ಮೇಲೆ ಕಲ್ಲು ತೂರುವುದು.

- **ಒಂದು ವೇಳೆ ಆರೋಪ ಸಾಬೀತಾದರೆ ಕನಿಷ್ಠ ಒಂದು ವರ್ಷದಿಂದ 7 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ 5 ಸಾವಿರ ರೂ.ನಿಂದ 50 ಸಾವಿರ ರೂ.ವರೆಗೆ ದಂಡ.**

## 4. ಜನ್ ಸಂಪರ್ಕ್ ಕಾರ್ಯಕ್ರಮ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಕೇಂದ್ರ ದತ್ತು ಸ್ವೀಕಾರ ಸಂಪನ್ಮೂಲ ಪ್ರಾಧಿಕಾರವು (CARA) ಮಾಸಿಕ "ಜನಸಂಪರ್ಕ" ಕಾರ್ಯಕ್ರಮವನ್ನು ಆರಂಭಿಸಿದೆ.
- ಇದರ ಮುಖ್ಯ ಉದ್ದೇಶವೆಂದರೆ ಸಾರ್ವಜನಿಕರಿಗೆ ದತ್ತು ಮತ್ತು ಅದರ ಕಾಳಜಿಯ ಬಗ್ಗೆ ಮಾಹಿತಿ ಪಡೆಯಲು ಹಾಗು ಅಧಿಕಾರಿಗಳು ಮತ್ತು ಸಿಬ್ಬಂದಿಗಳೊಂದಿಗೆ ಪರಸ್ಪರ ಸಂಪರ್ಕವನ್ನು ಕಲ್ಪಿಸುವುದು.

ಮುಖ್ಯ ಪರೀಕ್ಷೆಗಾಗಿ

**ಪ್ರಮುಖ ಸಂಗತಿಗಳು:**

- ಈ ರೀತಿಯ ಮೊದಲ ಕಾರ್ಯಕ್ರಮವು ಇತ್ತೀಚೆಗೆ ನವದೆಹಲಿಯಲ್ಲಿ ನಡೆಯಿತು.
- ಜೈವಿಕ ಪೋಷಕರು ಅಥವಾ ದತ್ತು ಸ್ವೀಕರಿಸಲ್ಪಟ್ಟ ಪೋಷಕರು ಮತ್ತು ಏಜೆನ್ಸಿಗಳ ಪ್ರತಿನಿಧಿಗಳು ಈ ಸಂದರ್ಭದಲ್ಲಿ ಭಾಗವಹಿಸುತ್ತಾರೆ.
- ವಿಶೇಷ ಅಗತ್ಯಗಳಿಗೆ ಸಂಬಂಧಿಸಿದ ವಿವರಗಳು ನೀಡುವ ಮಕ್ಕಳ ಅನುದಾನದ ಸಂಪನ್ಮೂಲ ಮಾಹಿತಿ ಮತ್ತು ಮಾರ್ಗದರ್ಶನ ವ್ಯವಸ್ಥೆ (CARINGS) ಜೊತೆಗೆ ಹೊಸದಾಗಿ ಬಿಡುಗಡೆಯಾದ ದೂರು / ಪ್ರಶ್ನೆ ಪೋರ್ಟಲ್ ಅನ್ನು ಈ ಸಂದರ್ಭದಲ್ಲಿ ಎಲ್ಲ ಪಾಲುದಾರರೊಂದಿಗೆ ಹಂಚಿಕೊಳ್ಳಲಾಗುವುದು.
- ವಯಸ್ಕ ಮಕ್ಕಳನ್ನು ಅಳವಡಿಸಿಕೊಳ್ಳಲು ಸಲಹೆ ನೀಡುವ ಮತ್ತು ಪ್ರೇರೇಪಿಸುವ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

**ಕೇಂದ್ರೀಯ ದತ್ತು ಸಂಪನ್ಮೂಲ ಪ್ರಾಧಿಕಾರ (CARA)ದ ಬಗ್ಗೆ**

- ಇದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ, ಬಾಲನ್ಯಾಯ ಕಾಯ್ದೆ- 2015ರ ಅನ್ವಯ ಕಾರ್ಯ ನಿರ್ವಹಿಸುವ ಶಾಸನಬದ್ಧ ಸಂಸ್ಥೆಯಾಗಿರುತ್ತದೆ.
- ಇದು ಭಾರತೀಯ ಮಕ್ಕಳ ದತ್ತು ಪ್ರಕ್ರಿಯೆಗೆ ನೋಡಲ್ ಸಂಸ್ಥೆಯಾಗಿರುತ್ತದೆ.
- ಇದು ನಿರ್ಗತಿಕ, ಪರಿತ್ಯಕ್ತ ಅಥವಾ ಶರಣಾದ ಮಕ್ಕಳ ದತ್ತು ಪ್ರಕ್ರಿಯೆ ವಿಧಿವಿಧಾನಗಳನ್ನು ನೆರವೇರಿಸುವ ಸಂಸ್ಥೆಯಾಗಿದೆ.
- ಇದು ಪರಸ್ಪರ ದೇಶಗಳ ನಡುವಿನ ದತ್ತು ಸ್ವೀಕಾರವನ್ನು ಅಂತರ ರಾಷ್ಟ್ರೀಯ ದತ್ತು ಸ್ವೀಕಾರದ ಹೇಗ್ ಒಪ್ಪಂದ- 1993ರಡಿ ನಿರ್ವಹಿಸುತ್ತದೆ.

**ಬಾಲನ್ಯಾಯ ಕಾಯ್ದೆ- 2015ರ ಸೆಕ್ಷನ್ 68ರ ಅನ್ವಯ ಸಿಎಆರ್ಎ ಹೊಣೆಗಾರಿಕೆ ಈ ಕೆಳಗಿನಂತಿದೆ.**

- ಇದು ದೇಶದೊಳಗಿನ ಹಾಗೂ ಅಂತರರಾಜ್ಯ ದತ್ತು ಸ್ವೀಕಾರವನ್ನು ಉತ್ತೇಜಿಸುತ್ತದೆ.

- ದತ್ತು ಸ್ವೀಕಾರಕ್ಕೆ ಇರುವ ನಿಬಂಧನೆಗಳನ್ನು ಇದು ಸಿದ್ಧಪಡಿಸುತ್ತದೆ.
- ಅಂತರ ದೇಶೀಯ ದತ್ತು ಸ್ವೀಕಾರ ಪ್ರಕ್ರಿಯೆಯನ್ನು ಅಂತರ ರಾಷ್ಟ್ರೀಯ ದತ್ತು ಸ್ವೀಕಾರದ ಹೇಗ್ ಒಪ್ಪಂದ- 1993ರಡಿ ನಿರ್ವಹಿಸುತ್ತದೆ.

**5. ಪೊಲೀಸ್ ಪಡೆಗಳ ಆಧುನಿಕರಣ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ದೇಶದ ಆಂತರಿಕ ಭದ್ರತೆಗೆ ಅಗತ್ಯವಾಗಿರುವ 25 ಸಾವಿರ ಕೋಟಿ ರೂ. ಮೊತ್ತದ ಯೋಜನೆಗೆ ಕೇಂದ್ರ ಸಂಪುಟ  ಅನುಮೋದನೆ ನೀಡಿದೆ. ಈ ಕ್ರಮದಿಂದ ಕಾನೂನು ಸುವ್ಯವಸ್ಥೆ ಬಲಪಡಿಸಲು, ಪೊಲೀಸ್ ವ್ಯವಸ್ಥೆಯ ಆಧುನೀಕರಣ ಸೇರಿದಂತೆ ಹಲವು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಈ ಯೋಜನೆ ನೆರವಾಗಲಿದೆ.
- ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಭದ್ರತಾ ವ್ಯವಹಾರಗಳಿಗಾಗಿನ ಕೇಂದ್ರ ಸಂಪುಟ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪೊಲೀಸ್ ಪಡೆಗಳ ಆಧುನೀಕರಣ (ಎಂಪಿಎಫ್) ಅದನ್ನು ಜಾರಿ ಮಾಡಲಾಗುತ್ತದೆ.
- ಇತ್ತೀಚಿನ ವರ್ಷಗಳಲ್ಲಿ ಆಂತರಿಕ ಭದ್ರತೆಗಾಗಿ 25,060 ಕೋಟಿ ರೂ. ಭಾರಿ ಮೊತ್ತವನ್ನು ನಿಗದಿ ಮಾಡಿರುವುದು ಇದೇ ಮೊದಲು. 2019-20ನೇ ವರ್ಷದ ವರೆಗೆ ಈ ಯೋಜನೆಯನ್ವಯ ಪೊಲೀಸ್ ಪಡೆಗಳ ಆಧುನೀಕರಣಕ್ಕೆ ಮೊತ್ತವನ್ನು ವಿನಿಯೋಗ ಮಾಡಲಾಗುತ್ತದೆ. ಕೇಂದ್ರ ಸರಕಾರ 18,636 ಕೋಟಿ ನೀಡಿದರೆ, ರಾಜ್ಯಗಳು 6,424 ಕೋಟಿ ರೂ. ಪಾಲು ನೀಡಬೇಕಾಗುತ್ತದೆ.

ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಲಕ್ಷಣಗಳು

- **ಮಹಿಳೆಯರ ಸುರಕ್ಷತೆಗೆ ಆದ್ಯತೆ**: ಪೊಲೀಸ್ ಇಲಾಖೆ ಅತ್ಯಾಧುನಿಕ ಆಯುಧಗಳು, ಮಹಿಳೆಯರಿಗೆ ರಕ್ಷಣೆ, ತುರ್ತು ಸಂದರ್ಭಗಳಲ್ಲಿ ಹೆಲಿಕಾಪ್ಟರ್‌ಗಳನ್ನು ಬಾಡಿಗೆಗೆ ಪಡೆಯುವುದು, ಪೊಲೀಸ್ ವೈರ್‌ಲೆಸ್ ವ್ಯವಸ್ಥೆ ಮೇಲ್ದರ್ಜೆಗೆ ಏರಿಸುವಿಕೆ, ರಾಷ್ಟ್ರೀಯ ಉಪಗ್ರಹ ಜಾಲ ವ್ಯವಸ್ಥೆ ಸೇರಿದಂತೆ ಹಲವು ವಿಶೇಷ ವ್ಯವಸ್ಥೆಗಳನ್ನು ಮಾಡಲು ಅದು ನೆರವಾಗಲಿದೆ.
- ಜಮ್ಮು ಮತ್ತು ಕಾಶ್ಮೀರ, ನಕ್ಸಲೀಯ ಸಮಸ್ಯೆ ಹೆಚ್ಚಾಗಿರುವ ರಾಜ್ಯಗಳಿಗೆ ವಿಶೇಷ ನೆರವು ರೂಪಿಸುವ ನಿಟ್ಟಿನಲ್ಲಿ 10, 132 ಕೋಟಿ ರೂ. ಮೀಸಲು ಇರಿಸಲಾಗಿದೆ. 100 ಕೋಟಿ ರೂ.ಗಳನ್ನು ಪೊಲೀಸ್ ಇಲಾಖೆಯ ಮೂಲ ಸೌಲಭ್ಯ ಮೇಲ್ದರ್ಜೆಗೆ ಏರಿಸುವಿಕೆ, ತರಬೇತಿ ಸಂಸ್ಥೆಗಳ ಸುಧಾರಣೆ, ತನಿಖೆ ಕೈಗೊಳ್ಳಲು ಬೇಕಾದ ವ್ಯವಸ್ಥೆಗಳನ್ನು ಪೂರೈಸಲು ಬಳಕೆ ಮಾಡಲಾಗುತ್ತದೆ.
- **ವಿಶೇಷ ಯೋಜನೆ:** ನಕ್ಸಲೀಯ ಪಿಡುಗು ಇರುವ 35 ಜಿಲ್ಲೆಗಳಿಗೆ 3 ಸಾವಿರ ಕೋಟಿ ರೂ. ಮೊತ್ತದ ವಿಶೇಷ ಯೋಜನೆಯನ್ನೂ ಆರಂಭಿಸಲು ಭದ್ರತಾ ಸಮಿತಿ ಒಪ್ಪಿಗೆ ನೀಡಿದೆ. ಇಂಥ ಕ್ರಮಗಳ ಮೂಲಕ ರಾಜ್ಯಗಳ ಪೊಲೀಸ್ ಇಲಾಖೆಗಳ ಬಲವರ್ಧನೆಗೆ ಕ್ರಮ ಕೈಗೊಳ್ಳಲು ಕೇಂದ್ರ ಉದ್ಯುಕ್ತವಾಗಿದೆ.
- **ಕಂಟೋನ್ಮೆಂಟ್‌ಗಳಲ್ಲಿ ಟವರ್ ಅನುಮತಿ** -ದೇಶಾದ್ಯಂತ ಮೊಬೈಲ್ ಸಂಪರ್ಕ ವೃದ್ಧಿಗಾಗಿ ಸೇನಾಪಡೆಗಳು ಹೆಚ್ಚಾಗಿರುವ ಕಂಟೋನ್ಮೆಂಟ್ ಪ್ರದೇಶಗಳಲ್ಲಿಯೂ ಟವರ್‌ಗಳನ್ನು ಸ್ಥಾಪಿಸಲು ಸರಕಾರ ಅನುಮತಿ ನೀಡಿದೆ. ಕೇಂದ್ರ ದೂರಸಂಪರ್ಕ ಸಚಿವ ರವಿಶಂಕರ ಪ್ರಸಾದ್ ಈ ಮಾಹಿತಿ ನೀಡಿದ್ದಾರೆ. ದೂರಸಂಪರ್ಕ ಕಂಪನಿಗಳು ಟವರ್ ಅಳವಡಿಸಲು ಸ್ಥಳಾವಕಾಶದ ಕೊರತೆ ಬಗ್ಗೆ ಪ್ರಸ್ತಾಪಿಸಿದ್ದ ಹಿನ್ನೆಲೆಯಲ್ಲಿ ಈಕ್ರಮ ಕೈಗೊಳ್ಳಲಾಗಿದೆ.

- **ನಿವೃತ್ತಿ ವಯಸ್ಸು ಏರಿಕೆ:** ಮತ್ತೂಂದು ಪ್ರಮುಖ ನಿರ್ಣಯದಲ್ಲಿ ಕೇಂದ್ರದ ಆಯುಷ್ ಇಲಾಖೆಯ ವೈದ್ಯರ ನಿವೃತ್ತಿ ವಯಸ್ಸನ್ನು 65ಕ್ಕೆ ಏರಿಸಲಾಗಿದೆ.

- ರಾಷ್ಟ್ರೀಯ ಮಟ್ಟದಲ್ಲಿ ಅಪರಾಧ ಮತ್ತು ಕ್ರಿಮಿನಲ್‌ಗಳ ವಿವರಗಳ ದತ್ತಾಂಶ ಸಂಗ್ರಹಕ್ಕಾಗಿ ಎಲ್ಲ ಪೊಲೀಸ್ ಠಾಣೆಗಳನ್ನು ಪರಸ್ಪರ ಸಂಪರ್ಕಿಸಲಾಗುತ್ತದೆ.

- ಈ ವಿವರಗಳನ್ನು ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯ ಆಧಾರ ಸ್ತಂಭಗಳಾದ ಕಾರಾಗೃಹಗಳು, ವಿಧಿ ವಿಜ್ಞಾನ ಪ್ರಯೋಗಾಲಯಗಳು ಮತ್ತು ಸರ್ಕಾರಿ ವಕೀಲರ ಕಚೇರಿಗಳೊಂದಿಗೆ ಹಂಚಿಕೊಳ್ಳುವ ವ್ಯವಸ್ಥೆ ಅಭಿವೃದ್ಧಿ

- ಆಂಧ್ರ ಪ್ರದೇಶದ ಅಮರಾವತಿಯಲ್ಲಿ ಅತ್ಯಾಧುನಿಕ ವಿಧಿ ವಿಜ್ಞಾನ ಪ್ರಯೋಗಾಲಯ ಸ್ಥಾಪನೆ

- ಜೈಪುರದಲ್ಲಿರುವ ಸರ್ದಾರ್ ಪಟೇಲ್ ಜಾಗತಿಕ ಭದ್ರತೆ ಮತ್ತು ಭಯೋತ್ಪಾದನಾ ನಿಗ್ರಹ ಕೇಂದ್ರ ಮೇಲ್ದರ್ಜೆಗೆ.

- ಗುಜರಾತ್‌ನ ಗಾಂಧಿನಗರದಲ್ಲಿ ವಿಧಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ಥಾಪನೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### 6. ಇನ್ಕ್ರೆಡಿಬಲ್ ಇಂಡಿಯಾ 2.0 ಕ್ಯಾಂಪೇನ್

**ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ**

- ವಿಶ್ವ ಪ್ರವಾಸೋದ್ಯಮ ದಿನದ ಸಂದರ್ಭದಲ್ಲಿ ಭಾರತ ಅಧ್ಯಕ್ಷ ಇನ್ಕ್ರೆಡಿಬಲ್ ಇಂಡಿಯಾ 2.0 ಪ್ರಚಾರ ಮತ್ತು "ಅಡಾಪ್ಟ್ ಎ ಹೆರಿಟೇಜ್" ಯೋಜನೆಗೆ ಚಾಲನೆ ನೀಡಿದರು
- ಈ ಅಭಿಯಾನವು ಕನಿಷ್ಠ 10 ನಗರಗಳನ್ನು ಅಭಿವೃದ್ಧಿಪಡಿಸುವುದರ ಮೇಲೆ ಕೇಂದ್ರೀಕರಿಸುತ್ತದೆ, ಅಲ್ಲಿ ಆಧ್ಯಾತ್ಮಿಕತೆ ವೈದ್ಯಕೀಯ ಮತ್ತು ಕ್ಷೇಮ ಸಾಮರ್ಥ್ಯಗಳನ್ನು ಉತ್ತೇಜಿಸಲಾಗುವುದು.

- ಪ್ರಸ್ತುತ ಯುಪಿ - ಅಯೋಧ್ಯಾ, ಆಗ್ರಾ, ಮಥುರಾ, ವಾರಣಾಸಿ-ಸಾರನಾಥ್ ಮತ್ತು ಗೋರಖ್ಪುರ್, ಹರಿಯಾಣ -ಕುರ್ಕ್ಷೇತ್ರಾ, ಅಸ್ಸಾಂ-ಗುವಾಹಾಟಿ, ಮತ್ತು ತಮಿಳುನಾಡು-ಕನ್ಯಾಕುಮಾರಿಯಿಂದ ಅಭಿವೃದ್ಧಿಶೀಲ ಪ್ರವಾಸಿ ಸರ್ಕ್ಯೂಟ್ಗಳನ್ನು ಗುರುತಿಸಲಾಗಿದೆ.
- ಪ್ರವಾಸೋದ್ಯಮ ಇಲಾಖೆಯು ಅಕ್ಟೋಬರ್ 2018 ರ ಹೊತ್ತಿಗೆ ನಗರಗಳನ್ನು ಅಭಿವೃದ್ಧಿಪಡಿಸುವ ಈ ವ್ಯಾಯಾಮವನ್ನು ಪೂರೈಸುವ ಗುರಿಯನ್ನು ಹೊಂದಿದೆ.
- "ಅಡಾಪ್ಟ್ ಎ ಹೆರಿಟೇಜ್" ಯೋಜನೆಯು ಭಾರತೀಯ ಪರಂಪರೆಯನ್ನು ನಿರ್ವಹಿಸುವಲ್ಲಿ ಪ್ರೋತ್ಸಾಹಿಸುವ ವಿದ್ಯಾರ್ಥಿಗಳು, ಸಾರ್ವಜನಿಕ ವಲಯ ಮತ್ತು ಖಾಸಗಿ ಸಂಸ್ಥೆಗಳು ಹೆಚ್ಚು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುತ್ತದೆ.

IAS/KAS

## 29th SEPTEMBER

### 1. ಭಾರತಕ್ಕೆ 4$ಶತಕೋಟಿ ನಷ್ಟು ಸಾಲವನ್ನು ನೀಡಲು ಯೋಜಿಸಿದ ಎಡಿಬಿ

ನಮ್ಮ ಐಎಎಸ್ ಅಕಾಡೆಮಿ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

ಪ್ರಮುಖ ಸುದ್ದಿ

- ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ತನ್ನ ವಾರ್ಷಿಕ ಸಾಲವನ್ನು ಭಾರತಕ್ಕೆ ಗರಿಷ್ಠ 4 ಶತಕೋಟಿ ಡಾಲರ್ಗೆ ಹೆಚ್ಚಿಸಲು ನಿರ್ಧರಿಸಿದೆ. 2018-2022 ಕ್ಕೆ ಮಧ್ಯಮ-ಆದಾಯದ ಸ್ಥಿತಿಗೆ ಒಳಗಾಗುವ ಅಂತರ್ಗತ ಆರ್ಥಿಕ ರೂಪಾಂತರವನ್ನು ಹೆಚ್ಚಿಸಲು ದೇಶವನ್ನು ಬೆಂಬಲಿಸುವುದು ಹೊಸ ಎಡಿಬಿ ದೇಶದ ಸಹಭಾಗಿತ್ವ ತಂತ್ರ (ಸಿಪಿಎಸ್) ) ಇತ್ತೀಚೆಗೆ ಅನುಮೋದಿಸಲಾಗಿದೆ.

ಮುಖ್ಯ ಪರೀಕ್ಷೆಗಾಗಿ

- ಭಾರತದಲ್ಲಿ ಎಡಿಬಿ ಕಾರ್ಯಕ್ರಮವು 5 ವರ್ಷಗಳ ಅವಧಿಯಲ್ಲಿ ಚಟುವಟಿಕೆಯ ಮೂರು ಪ್ರಮುಖ ಆಧಾರಸ್ತಂಭಗಳಾದ - ಹೆಚ್ಚಿನ ಮತ್ತು ಉತ್ತಮ-ವೇತನದ ಉದ್ಯೋಗಗಳನ್ನು ಸೃಷ್ಟಿಸುವುದು , ಮೂಲಸೌಕರ್ಯ ಮತ್ತು ಸೇವೆಗಳಿಗೆ ಸುಧಾರಿತ ಪ್ರವೇಶ ಹಾಗು ಹವಾಮಾನ ಬದಲಾವಣೆಗೆ ಮತ್ತು ವಾತಾವರಣದ ಸ್ಥಿತಿಸ್ಥಾಪಕತ್ವವನ್ನು ಸುಧಾರಿಸಲು ಆರ್ಥಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು.
- ಖಾಸಗಿ ವಲಯದ ಕಾರ್ಯಾಚರಣೆಗಳನ್ನು ಒಳಗೊಂಡಿರುವ ಯೋಜಿತ ಸಾಲ ಹಂತವು, 2012-2016ರ ಅವಧಿಯಲ್ಲಿ ವಿಸ್ತರಿಸಿದ ಸಾಲಗಳಲ್ಲಿ ವರ್ಷಕ್ಕೆ ಸರಾಸರಿ $ 2.65 ಬಿಲಿಯನ್ಗೆ ಹೋಲಿಸುತ್ತದೆ.
- ಆ ಹಣಕಾಸು ಸಾರ್ವಜನಿಕ ವಲಯ ನಿರ್ವಹಣೆ, ಕೃಷಿ, ನೈಸರ್ಗಿಕ ಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಕೌಶಲ್ಯ ಅಭಿವೃದ್ಧಿ ಮತ್ತು ನಗರ ಆರೋಗ್ಯಕ್ಕೆ ನೆರವು ನೀಡಲಿದೆ ಎಂದು ತಿಳಿಸಿದೆ.
- ಸಾಲವನ್ನು ಕಾರ್ಯತಂತ್ರದ ಅಧ್ಯಯನಗಳನ್ನು ಕೈಗೊಳ್ಳಲು, ಸಾಮರ್ಥ್ಯಗಳನ್ನು ನಿರ್ಮಿಸಲು ಮತ್ತು ಯೋಜನೆಗಳನ್ನು ತಯಾರಿಸಲು ತಾಂತ್ರಿಕ ನೆರವು ಪೂರಕವಾಗಿರುತ್ತದೆ.
- ಸಂಬಂಧಿತ ಯೋಜನೆಗಳಿಗೆ ಹವಾಮಾನ ನಿಧಿ ಸೇರಿದಂತೆ ಹಣಕಾಸು ಅವಕಾಶಗಳನ್ನು ಕೂಡಾ ಇದು ಅನ್ವೇಷಿಸುತ್ತದೆ ಎಂದು ಎಡಿಬಿ ತಿಳಿಸಿದೆ.

ನಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಎಡಿಬಿ (ಏಷ್ಯನ್ ಅಭಿವೃದ್ಧಿ ಬ್ಯಾಂಕ್) ಬಗ್ಗೆ

- ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಎನ್ನುವುದು ಪ್ರಾದೇಶಿಕ ಅಭಿವೃದ್ಧಿ ಬ್ಯಾಂಕ್ ಆಗಿದ್ದು, 1966ರ ಆಗಸ್ಟ್ 22ರಂದು ಉದ್ಘಾಟನೆಗೊಂಡಿತು. ಇದರ ಕೇಂದ್ರ ಕಚೇರಿ ಫಿಲಿಫೀನ್ಸ್‌ನ ಮೆಟ್ರೊ ನಗರವಾದ ಮನಿಲಾದಲ್ಲಿದೆ. ಏಷ್ಯಾದ ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳಿಗೆ ನೆರವು ನೀಡುವ ಸಲುವಾಗಿ ಇದನ್ನು ರಚಿಸಲಾಗಿದೆ.
- ಈ ಬ್ಯಾಂಕ್ ಏಷ್ಯಾ ಫೆಸಿಫಿಕ್ ದೇಶಗಳಿಗಾಗಿ ಇರುವ ವಿಶ್ವಸಂಸ್ಥೆ ಆರ್ಥಿಕ ಹಾಗೂ ಸಾಮಾಜಿಕ ಆಯೋಗದ ಸದಸ್ಯರಾಷ್ಟ್ರಗಳಿಗೆ ಮತ್ತು ಪ್ರಾದೇಶಿಕವಲ್ಲದ ಅಭಿವೃದ್ಧಿ ದೇಶಗಳಿಗೆ ಸದಸ್ಯತ್ವ ನೀಡುತ್ತದೆ. ಇದೀಗ ಎಡಿಬಿ 67 ಸದಸ್ಯರನ್ನು ಹೊಂದಿದೆ.

- ಏಷ್ಯನ್ ಅಭಿವೃದ್ಧಿ ಬ್ಯಾಂಕನ್ನು ವಿಶ್ವಬ್ಯಾಂಕಿನ ಮಾದರಿಯಲ್ಲೇ ರಚಿಸಲಾಗಿದ್ದು, ಇದರ ಮತದಾನ ವಿಧಾನ ಸದಸ್ಯದೇಶಗಳ ಬಂಡವಾಳ ಹೂಡಿಕೆಗೆ ಅನುಗುಣವಾಗಿ ಇರುತ್ತದೆ.
- 2013ನೇ ಇಸ್ವಿಯ ಕೊನೆಯ ವೇಳೆಗೆ ಜಪಾನ್ ಎಡಿಬಿಯಲ್ಲಿ ಅತಿದೊಡ್ಡ ಪಾಲು ಹೊಂದಿರುವ ಸದಸ್ಯರಾಷ್ಟ್ರವಾಗಿದೆ. ಒಟ್ಟು ಬಂಡವಾಳದ ಶೇಕ 15.67 ಪಾಲನ್ನು ಜಪಾನ್ ಹೊಂದಿದೆ. ಅಮೆರಿಕ- 15.56, ಚೀನಾ 6.47, ಭಾರತ- 6.36 ಮತ್ತು ಆಸ್ಟ್ರೇಲಿಯಾ 5.81 ಶೇಕಡ ಪಾಲು ಹೊಂದಿವೆ.ಏಷ್ಯನ್ ಅಭಿವೃದ್ಧಿ ಬ್ಯಾಂಕ್‌ನ ಹಾಲಿ ಅಧ್ಯಕ್ಷರಾಗಿ ಟೆಖಿಕೊ ನಕಾವೊ ಕಾರ್ಯ ನಿರ್ವಹಿಸುತ್ತಿದ್ದಾರೆ.
- ಇದರ ಟೀಕಾಕಾರರ ಆರೋಪದ ಪ್ರಕಾರ, ಎಡಿಬಿಯ ಸಾಲ ನೀಡಿಕೆ ನಿರ್ಧಾರದ ಮೇಲೆ ಅತಿಹೆಚ್ಚು ಪಾಲು ಹೊಂದಿರುವ ದೇಶಗಳಾದ ಜಪಾನ್ ಮತ್ತು ಅಮೆರಿಕ ಪ್ರಭಾವ ದಟ್ಟವಾಗಿದೆ. ಬ್ಯಾಂಕಿನ ನೀತಿ ನಿಯಮಾವಳಿ ಮತ್ತು ಸಿಬ್ಬಂದಿ ನೇಮಕಾತಿ ವಿಚಾರದಲ್ಲೂ ಇವು ಮಹತ್ವದ ಪಾತ್ರ ವಹಿಸುತ್ತಿವೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**2.ಡೈಮಂಡ್ ಜುಬಿಲೀವನ್ನು ಆಚರಿಸಿಕೊಂಡ ಡೈರೆಕ್ಟರ್ ಜನರಲ್ ಆಫ್ ಕ್ವಾಲಿಟಿ ಅಶ್ಯೂರೆನ್ಸ್,**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಡೈರೆಕ್ಟರೇಟ್ ಜನರಲ್ ಆಫ್ ಕ್ವಾಲಿಟಿ ಅಶ್ಯೂರೆನ್ಸ್ (DGQA) 60 ವರ್ಷಗಳ ಪೂರ್ಣಗೊಳಿಸಿದೆ ಸಂಸ್ಥೆಯು 2016-17ರ ಹಣಕಾಸು ವರ್ಷದಲ್ಲಿ 28,878 ಕೋಟಿ ರೂ ಮೌಲ್ಯದ ಗುಣಮಟ್ಟದ ಭರವಸೆ ರಕ್ಷಣಾ ಅಂಗಡಿಗಳನ್ನು ಹೊಂದಿದೆ. .
- ಇದರ ಜೊತೆಗೆ, ಕಷ್ಟ ಮತ್ತು ಪ್ರಯತ್ನದ ಸಂದರ್ಭಗಳಲ್ಲಿ ಬಳಕೆದಾರರ ಮತ್ತು ತಯಾರಕರಿಗೆ ಸಂಘಟನೆ ನೆರವು ಒದಗಿಸುತ್ತಿದೆ.

ಮುಖ್ಯ ಪರೀಕ್ಷೆಗಾಗಿ

**DGQA ಬಗ್ಗೆ:**

- ಡೈರೆಕ್ಟರೇಟ್ ಜನರಲ್ ಆಫ್ ಕ್ವಾಲಿಟಿ ಅಶ್ಯೂರೆನ್ಸ್ (ಡಿಜಿಕ್ಯುಎ) ರಕ್ಷಣಾ ಇಲಾಖೆಯ ಅಡಿಯಲ್ಲಿ ಬರುತ್ತದೆ . ಈ ಸಂಸ್ಥೆಯು ನೂರು ವರ್ಷಗಳಿಗಿಂತ ಹೆಚ್ಚು ಹಳೆಯದಾಗಿದೆ ಮತ್ತು ಶಸ್ತ್ರಾಸ್ತ್ರ ಪಡೆಗಳಿಗೆ ಸರಬರಾಜು ಮಾಡಲಾದ ಶಸ್ತ್ರಾಸ್ತ್ರ , ಸಲಕರಣೆಗಳ ಸಂಪೂರ್ಣ ಶ್ರೇಣಿಗಾಗಿ ಕ್ವಾಲಿಟಿ ಅಶ್ಯೂರೆನ್ಸ್ (QA) ಅನ್ನು ಒದಗಿಸುತ್ತದೆ.

ಇದರ ಕಾರ್ಯಗಳು:

- ಕ್ವಾಲಿಟಿ ಅಶ್ಯೂರೆನ್ಸ್ ಚಟುವಟಿಕೆಗಳ ಹೊರತಾಗಿ, ಅಭಿವೃದ್ಧಿ ಯೋಜನೆಗಳಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಜೊತೆ ಆಮದು ಪರ್ಯಾಯ ಮತ್ತು ಸಹಾಯಕರಿಗೆ ಈ ಸಂಸ್ಥೆ ಕಾರಣವಾಗಿದೆ.
- ವಿವಿಧ ಘಟಕಗಳು / ಸಲಕರಣೆಗಳನ್ನು ಕಡಿಮೆ ಮಾಡಲು ಡಾಕ್ಯುಮೆಂಟೇಶನ್, ಕೊಡಿಫಿಕೇಶನ್ ಮತ್ತು ಸ್ಟ್ಯಾಂಡರ್ಡೈಸೇಶನ್ ಆಕ್ಷನ್ ಸಹ ಖಾತ್ರಿಗೊಳಿಸುತ್ತದೆ.
- ಇತರ ಸೇವೆಗಳು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ , ದೋಷಪೂರಿತ ತನಿಖೆಗಳು ಮತ್ತು ತಾಂತ್ರಿಕ ಸಲಹಾ ಕಂಪನಿಗಳಿಗೆ ಮತ್ತು ಉತ್ಪಾದನೆ ಏಜೆನ್ಸಿಗಳಿಗೆ ಉತ್ತೇಜನ ನೀಡಿವೆ.

## 3.ವಿಜ್ಞಾನ ಗ್ರಾಮ ಸಂಕುಲ ಪರಿಯೋಜನೆ

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಮಹತ್ವಾಕಾಂಕ್ಷಿ ಪಂಡಿತ್ ದೀನದಯಾಳ್ ಉಪಾಧ್ಯಾಯ ವಿಜ್ಞಾನ ಗ್ರಾಮ ಸಂಕುಲ ಪರಿಯೋಜನಾ ಎಂಬ ವಿಶಿಷ್ಟ ಕಾರ್ಯಕ್ರಮಕ್ಕೆ ಚಾಲನೆ

ನೀಡಿದೆ. ಹಳ್ಳಿಗಳಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನದ ಮಹತ್ವವನ್ನು ತಿಳಿಸಿ ಅನುಷ್ಠಾನಕ್ಕೆ ತರುವಂತೆ ಮಾಡುವುದು ಇದರ ಉದ್ದೇಶವಾಗಿದೆ.

- ಉತ್ತರಾಖಂಡದಲ್ಲಿ ಗ್ರಾಮಗಳ ಗುಚ್ಛಮಟ್ಟದಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ವಿಜ್ಞಾನ ಹಾಗೂ ತಂತ್ರಜ್ಞಾನದ ನೆರವು ಪಡೆಯಲು ಈ ಯೋಜನೆ ಪೂರಕವಾಗಲಿದೆ.

ಮುಖ್ಯ ಪರೀಕ್ಷೆಗಾಗಿ

- ಈ ಯೋಜನೆಯಡಿ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯು ಉತ್ತರಾಖಂಡದ ಕೆಲ ಗ್ರಾಮಗುಚ್ಛಗಳನ್ನು ಆಯ್ಕೆ ಮಾಡಿಕೊಂಡು, ಇವುಗಳನ್ನು ನಿಗದಿತ ಕಾಲಮಿತಿಯಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ಮತ್ತು ಸ್ಥಳೀಯವಾಗಿ ಲಭ್ಯವಿರುವ ಕೌಶಲವನ್ನು ಸಾಧನವಾಗಿ ಬಳಸಿಕೊಂಡು ಸ್ವಾವಲಂಬಿ ಹಾಗೂ ಸುಸ್ಥಿರ ಗ್ರಾಮಗಳಾಗಿ ಪರಿವರ್ತಿಸಲಾಗುತ್ತದೆ.
- ಇದರ ಅನ್ವಯ ಸ್ಥಳೀಯ ಉತ್ಪನ್ನಗಳ ಮೌಲ್ಯವರ್ಧನೆ ಮಾಡಲಾಗುತ್ತದೆ. ಇದು ಗ್ರಾಮೀಣ ಜನತೆಯ ಸುಸ್ಥಿರ ಅಭಿವೃದ್ಧಿಗೆ ಪೂರಕವಾಗಲಿದೆ.
- ಈ ಯೋಜನೆಯಡಿ ಆಯ್ಕೆಯಾದ ಗ್ರಾಮಗುಚ್ಛಗಳಲ್ಲಿ ಹಾಲನ್ನು ಸಂಸ್ಕರಿಸುವುದು ಮತ್ತು ಮೌಲ್ಯವರ್ಧನೆ ಮಾಡುವುದು, ಜೇನು, ತೋಟಗಾರಿಕೆ ಮತ್ತು ಸ್ಥಳೀಯ ಬೆಳೆಗಳಾದ ಚಹಾ, ಅಣಬೆ, ಅರಣ್ಯ ಉತ್ಪನ್ನಗಳು, ವೈದ್ಯಕೀಯ ಮತ್ತು ಸುಗಂಧಿತ ಗಿಡಗಳು ಮತ್ತು ಸಾಂಪ್ರದಾಯಿಕ ಕರಕುಶಲಕಲೆ ಮತ್ತು ಕೈಮಗ್ಗವನ್ನು ವ್ಯವಸ್ಥಿತವಾಗಿ ಹಾಗೂ ವೈಜ್ಞಾನಿಕವಾಗಿ ಉತ್ಪಾದಿಸುವಂತೆ ಮಾಡುವುದು ಇದರ ಉದ್ದೇಶ. ಇದರ ಜತೆಗೆ ಪರಿಸರ ಹಾಗೂ ಜಲಸಂರಕ್ಷಣಾ ವಿಧಾನಗಳ ಬಗ್ಗೆಯೂ ಅರಿವು ಮೂಡಿಸಲಾಗುತ್ತದೆ.
- ಈ ಯೋಜನೆಯು ಕೃಷಿ, ಕೃಷಿ ಆಧರಿತ ಗ್ರಾಮೋದ್ಯೋಗ ಮತ್ತು ಪಶುಸಂಗೋಪನೆಯನ್ನು ಪರಿಸರ ಸ್ನೇಹಿ ವಿಧಾನದಲ್ಲಿ ಅನುಸರಿಸಲು ಕೂಡಾ ನೆರವಾಗಲಿದೆ. ಇದು ಮುಖ್ಯವಾಗಿ ಕಿವಿ, ಚೆರ್ರಿ, ಸ್ಟ್ರಾಬೆರಿ, ತುಳಸಿ, ಅದ್ರಕ, ದೊಡ್ಡ ಏಲಕ್ಕಿ ಮತ್ತಿತರ ಬೆಳೆಗಳ ಕೊಯ್ಲೋತ್ತರ ಸಂಸ್ಕರಣೆಗೆ ಕ್ರಮಗಳನ್ನು ಕೈಗೊಳ್ಳಲಿದೆ. ಇದರಲ್ಲಿ ಪ್ರಮುಖವಾಗಿ ಕೃಷಿ ಉತ್ಪನ್ನಗಳನ್ನು ಒಣಗಿಸಲು ಸೌರ

ತಂತ್ರಜ್ಞಾನ ಬಳಸುವುದು, ಶೀತ ಪ್ರಕ್ರಿಯೆ ತಂತ್ರಜ್ಞಾನದ ಮೂಲಕ ಖಾದ್ಯತೈಲ ಉತ್ಪಾದನೆಯಂಥ ತಂತ್ರಜ್ಞಾನವನ್ನು ಇದು ಬಳಸಲಿದೆ.

ಇದರಿಂದಾಗುವ ಪ್ರಯೋಜನಗಳು..?

- ಇದು ಉತ್ತರ ಪ್ರದೇಶದ 60 ಗ್ರಾಮಗಳ ಗುಚ್ಛದ ಸುಮಾರು ಒಂದು ಲಕ್ಷ ಮಂದಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೆರವಾಗಲಿದೆ. ವಿವಿಧ ರಾಜ್ಯಗಳ ವಿವಿಧ ಎತ್ತರದ ಪ್ರದೇಶದಲ್ಲಿ ವಾಸದ ಜನರಿಗೆ ಸುಸ್ಥಿರ ಅಭಿವೃದ್ಧಿ ಯೋಜನೆಯ ಮಾದರಿಯನ್ನು ರೂಪಿಸುವಲ್ಲೂ ಇದು ನೆರವಾಗಲಿದೆ.
- ಇದು ಸುಸ್ಥಿರವಾದ ಉದ್ಯೋಗ ಮತ್ತು ಜೀವನಾಧಾರ ಆಯ್ಕೆಯನ್ನೂ ಕಲ್ಪಿಸಿಕೊಡಲಿದೆ. ಪರಿಸರ ಸ್ನೇಹಿ ಪ್ರವಾಸೋದ್ಯಮ, ನಿಸರ್ಗಚಿಕಿತ್ಸೆ ಮತ್ತು ಯೋಗದಂಥ ವಿಶೇಷ ಕಾರ್ಯಕ್ಷೇತ್ರಗಳ ಅಭಿವೃದ್ಧಿಗೆ ನೆರವಾಗಲಿದೆ. ಇದರ ಜತೆಗೆ ಸ್ಥಳೀಯ ಜನರು ತಮ್ಮ ಉದ್ಯೋಗ ಹಾಗೂ ಜೀವನಾಧಾರಕ್ಕಾಗಿ ವಲಸೆ ಹೋಗುವುದನ್ನು ತಡೆಯಲು ಕೂಡಾ ಈ ಯೋಜನೆ ಮಹತ್ವದ್ದಾಗಿದೆ.

**4. ವರ್ಲ್ಡ್ ಮ್ಯಾರಿಟೈಮ್ ಡೇ 2017**

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- 28 ಮಾರ್ಚ್ 2017 ರಂದು ಇಂಟರ್ನ್ಯಾಷನಲ್ ಮೆರಿಟೈಮ್ ಆರ್ಗನೈಸೇಶನ್ (IMO) ವಿಶ್ವ ಸಮುದ್ರ ದಿನವನ್ನು ಅಧಿಕೃತವಾಗಿ ಆಚರಿಸಲಾಗುತ್ತದೆ. ವಿಶ್ವ ಕಡಲ ದಿನವು ಅಧಿಕೃತ ವಿಶ್ವಸಂಸ್ಥೆಯ ದಿನವಾಗಿದೆ.
- ಪ್ರತಿ ವರ್ಷ, ಹಡಗು ಮತ್ತು ಇತರ ಕಡಲ ಚಟುವಟಿಕೆಗಳ ಮಹತ್ವವನ್ನು ಕೇಂದ್ರೀಕರಿಸಲು ಮತ್ತು ಐಎಂಒನ ಕೆಲಸದ ಒಂದು ನಿರ್ದಿಷ್ಟ ಅಂಶವನ್ನು ಒತ್ತು ಮಾಡಲು ಇದು ಒಂದು ಅವಕಾಶವನ್ನು ಒದಗಿಸುತ್ತದೆ.
- **THEME OF 2017-Connecting Ships, Ports and People"**

**5. ರೋಹಿಂಗ್ಯ ಸಮಸ್ಯೆಗೆ ಪರಿಹಾರಸೂತ್ರ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ, ರೋಹಿಂಗ್ಯ ಸಮಸ್ಯೆಗೆ ಕಾಯಂ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ಐದು ಅಂಶಗಳ ಪರಿಹಾರ ಸೂತ್ರವನ್ನು ವಿಸ್ವಸಂಸ್ಥೆಯ ಮುಂದೆ ಪ್ರಸ್ತಾವಿಸಿದ್ದಾರೆ.
- ರೋಹಿಂಗ್ಯ ಸಮುದಾಯದ ವಿರುದ್ಧ ನಡೆಯುತ್ತಿರುವ ಜನಾಂಗೀಯ ಹಿಂಸೆಯ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಇದು ಬಾಂಗ್ಲಾದೇಶದ ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣಕ್ಕೆ ಕಾರಣವಾಗಿದೆ. ಮ್ಯಾನ್ಮಾರ್‌ನಿಂದ ಈಗಾಗಲೇ 4.30 ಲಕ್ಷ ನಿರ್ವಸತಿಗರು 2017ರ ಆಗಸ್ಟ್‌ನಿಂದೀಚೆಗೆ ಮ್ಯಾನ್ಮಾರ್‌ನ ರಖೀನ್ ರಾಜ್ಯದಿಂದ ಆಶ್ರಯ ಬಯಸಿ ಬಾಂಗ್ಲಾದೇಶದ ಗಡಿಯೊಳಕ್ಕೆ ಬಂದಿದ್ದಾರೆ,

ಮುಖ್ಯ ಪರೀಕ್ಷೆಗಾಗಿ

- ಮ್ಯಾನ್ಮಾರ್ ತಕ್ಷಣ ಹಿಂಸೆಯನ್ನು ಕೈಬಿಟ್ಟು, ಜನಾಂಗೀಯ ಸ್ವಚ್ಛಗೊಳಿಸುವಿಕೆ ಕಾರ್ಯವನ್ನು ರಖೀನ್ ರಾಜ್ಯದಲ್ಲಿ ಬೇಷರತ್ತಾಗಿ ಸ್ಥಗಿತಗೊಳಿಸಬೇಕು. ಇದನ್ನು ತಕ್ಷಣ ಹಾಗೂ ಕಾಯಂ ಆಗಿ ಜಾರಿಗೆ ತರುವಂತಾಗಬೇಕು.
- ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ತಕ್ಷಣ ಮ್ಯಾನ್ಮಾರ್‌ಗೆ ಸತ್ಯಶೋಧನಾ ತಂಡವನ್ನು ಅಧ್ಯಯನಕ್ಕಾಗಿ ಕಳುಹಿಸಿಕೊಡಬೇಕು.
- ಧರ್ಮ ಹಾಗೂ ಜನಾಂಗಗಳ ಬೇಧವಿಲ್ಲದೇ ಎಲ್ಲ ನಾಗರಿಕರಿಗೆ ಮ್ಯಾನ್ಮಾರ್‌ನಲ್ಲಿ ಸುರಕ್ಷೆ ನೀಡಬೇಕು. ಇದಕ್ಕಾಗಿ ವಿಶ್ವಸಂಸ್ಥೆಯ ಮೇಲುಸ್ತುವಾರಿಯಲ್ಲಿ ಮ್ಯಾನ್ಮಾರ್‌ನಲ್ಲೇ ಸುರಕ್ಷಿತ ವಲಯಗಳನ್ನು ಸ್ಥಾಪನೆ ಮಾಡಬೇಕು.
- ಬಾಂಗ್ಲಾದಲ್ಲಿ ಆಶ್ರಯ ಪಡೆದಿರುವ ನಿರಾಶ್ರಿತ ರೋಹಿಂಗ್ಯ ಜನರಿಗೆ ಅವರ ಮ್ಯಾನ್ಮಾರ್ ಮನೆಗಳಲ್ಲಿ ಸೂಕ್ತವಾಗಿ ಜೀವಿಸಲು ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು.
- ಕೋಫಿ ಅನ್ನನ್ ಆಯೋಗದ ವರದಿಯನ್ನು ತಕ್ಷಣ, ಬೇಷರತ್ತಾಗಿ ಮತ್ತು ಸಂಪೂರ್ಣವಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು.

### ಹಿನ್ನೆಲೆ

- ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ, ಮ್ಯಾನ್ಮಾರ್‌ನ ರಖಿನ್ ರಾಜ್ಯದಲ್ಲಿ ಹೊಸದಾಗಿ ಹಿಂಸಾಚಾರ ತಲೆದೋರಿದ ಬಳಿಕ 4.5 ಲಕ್ಷ ರೋಹಿಂಗ್ಯ ಮುಸ್ಲಿಮರು ಮ್ಯಾನ್ಮಾರ್‌ನ ರಖಿನ್ ರಾಜ್ಯದಿಂದ ಬಾಂಗ್ಲಾದೇಶಕ್ಕೆ 2017ರ ಆಗಸ್ಟ್‌ನಿಂದೀಚೆಗೆ ನುಸುಳಿದ್ದಾರೆ.
- ಅರಕನ್ ರೊಹಿಂಗ್ಯಾ ಸಾಲ್ವೇಶನ್ ಆರ್ಮಿಯ ಕಾರ್ಯಕರ್ತರು ಉತ್ತರ ಮ್ಯಾನ್ಮಾರ್‌ನ ರಖಿನ್ ರಾಜ್ಯದಲ್ಲಿ ಪೊಲೀಸ್ ಠಾಣೆಗಳ ಮೇಲೆ ದಾಳಿ ಮಾಡಿದ ಹಿನ್ನೆಲೆಯಲ್ಲಿ ಹಿಂಸಾಚಾರ ಆರಂಭವಾಗಿತ್ತು. ಈ ದಾಳಿಯ ಬಳಿಕ, ಮ್ಯಾನ್ಮಾರ್‌ನ ಸೇನಾ ಪಡೆ ಮುಸ್ಲಿಂ ರೋಹಿಂಗ್ಯಾ ಸಮುದಾಯದವರನ್ನು ಗುರಿ ಮಾಡಿ ಭೀಕರ ಕಾರ್ಯಾಚರಣೆ ಆರಂಭಿಸಿದೆ. ಇದರಿಂದಾಗಿ ನೆರೆಯ ಬಾಂಗ್ಲಾದೇಶಕ್ಕೆ ರೋಹಿಂಗ್ಯಾ ನಿರಾಶ್ರಿತರು ಸಾಮೂಹಿಕ ವಲಸೆ ಹೋಗುತ್ತಿದ್ದಾರೆ.

### ರೋಹಿಂಗ್ಯ

- ರೋಹಿಂಗ್ಯ ಎನ್ನುವುದು ಮುಸ್ಲಿಂ ಜನಾಂಗದಲ್ಲಿ ಬುಡಕಟ್ಟು ಜನರ ಸಮೂಹವಾಗಿದೆ. ಬಹುತೇಕ ಮುಸ್ಲಿಮರು ಇದರಲ್ಲಿದ್ದು, ಮುಖ್ಯವಾಗಿ ಮ್ಯಾನ್ಮಾರ್‌ನ ಪಶ್ಚಿಮ ರಖಿನ್ ರಾಜ್ಯದಲ್ಲಿ ವಾಸವಿದ್ದಾರೆ.

ಇವರು ಸುನ್ನಿ ಇಸ್ಲಾಂನ ಸೂಫಿ ಪಂಥವನ್ನು ಅನುಸರಿಸುತ್ತಾರೆ. ಇವರು ಮ್ಯಾನ್ಮಾರ್‌ನ ಪ್ರಬಲ ಬೌದ್ಧ ಧಾರ್ಮಿಕ, ಜನಾಂಗೀಯ ಮತ್ತು ಭಾಷಾಗುಂಪುಗಳಿಗಿಂತ ಭಿನ್ನ.

- ಇವರು ಬಂಗಾಳಿಯ ಉಪಭಾಷೆಯನ್ನು ಮಾತನಾಡುತ್ತಾರೆ. ಇದನ್ನು ಮ್ಯಾನ್ಮಾರ್‌ನಲ್ಲಿ ಸಾಮಾನ್ಯವಾಗಿ ಬರ್ಮಾ ಭಾಷೆ ಮಾತನಾಡುವ ಮಂದಿ ವಿರೋಧಿಸುತ್ತಾರೆ. ರೋಹಿಂಗ್ಯಾ ಸಮುದಾಯ ಅಕ್ರಮವಾಗಿ ವಲಸೆ ಬಂದ ಬಂಗಾಳಿ ವಲಸಿಗರು ಎನ್ನುವುದು ಮ್ಯಾನ್ಮಾರ್‌ನ ವಾದ. ಹಲವು ಶತಮಾನಗಳಿಂದ ಇವರು ರಖೀನ್ ಪ್ರದೇಶದಲ್ಲಿ ವಾಸಿಸುತ್ತಾ ಬಂದರೂ ಈ ತಪ್ಪುಕಲ್ಪನೆ ಮ್ಯಾನ್ಮಾರ್‌ನಲ್ಲಿದೆ.
- ಮ್ಯಾನ್ಮಾರ್ ಸರ್ಕಾರ ಈ ಜನರಿಗೆ ಪೌರತ್ವ ನೀಡಲು ನಿರಾಕರಿಸಿದ್ದು, ಇವರಿಗೆ ಯಾವುದೇ ಕಾನೂನುಬದ್ಧ ದಾಖಲೆಗಳು ಇಲ್ಲ. ಇದರಿಂದ ಯಾವುದೇ ದೇಶದ ಪೌರತ್ವದಿಂದ ಅವರು ವಂಚಿತರಾಗಿದ್ದಾರೆ. ಇವರ ಸ್ವತಂತ್ರ ಚಲನವಲನಗಳಿಗೆ ಕೂಡಾ ನಿರ್ಬಂಧವಿದೆ. ಸರ್ಕಾರಿ ಶಿಕ್ಷಣ ಹಾಗೂ ನಾಗರಿಕ ಸೇವಾ ಉದ್ಯೋಗ ಕ್ಷೇತ್ರದಲ್ಲೂ ಇವರಿಗೆ ಅವಕಾಶವಿಲ್ಲ. ರೋಹಿಂಗ್ಯ ಸಮುದಾಯವನ್ನು ವಿಶ್ವಸಂಸ್ಥೆ, ವಿಶ್ವದಲ್ಲೇ ಅತ್ಯಂತ ದಮನಕ್ಕೆ ಒಳಗಾದ ಸಮುದಾಯ ಎಂದು ಪರಿಗಣಿಸುತ್ತದೆ.

### 6. ಭಾರತಕ್ಕೆ ಭದ್ರತಾ ಮಂಡಳಿ ಸದಸ್ಯತ್ವ

### ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸದಸ್ಯತ್ವ ನೀಡಿಕೆಯನ್ನು ಬೆಂಬಲಿಸಿ ಎರಡು ನಿಲುವಳಿ ಮಂಡನೆಗೊಂಡಿವೆ. ವಿಶ್ವಂಸ್ಥೆಯ ವಿದೇಶಾಂಗ ವ್ಯವಹಾರಗಳ ಸಮಿತಿಯ ವೈಸ್ ರ್ಯಾಂಕಿಂಗ್ ಮೆಂಬರ್ ಆಮಿ ಬೆರಾ ಮತ್ತು ಭಾರತದ ಬಗೆಗಿನ ಕಾಂಗ್ರೆಸ್ಸನಲ್ ಸಮೂಹದ ಸಂಸ್ಥಾಪಕ, ಸಂಸದ ಫ್ರಾಂಕ್ ಪಲ್ಲೋನ್ ಪ್ರತ್ಯೇಕವಾಗಿ ಪ್ರಸ್ತಾವನೆಗಳನ್ನು ಮಂಡಿಸಿದರು.
- ವಿಶ್ವಸಂಸ್ಥೆಯ ಭದ್ರತಾ ಮಂಡಳಿ 1945ರಲ್ಲಿ ಇದ್ದ ಸ್ವರೂಪದಲ್ಲೇ ಇದೆ. ಆದರೆ, ಇದೇ ವೇಳೆ ವಿಶ್ವಸಂಸ್ಥೆಯ ಸದಸ್ಯರ ಸಂಖ್ಯೆ 51ರಿಂದ 200ಕ್ಕೆ ಏರಿಕೆಯಾಗಿದೆ. ಈ ಏರಿಕೆಗೆ ತಕ್ಕಂತೆ ಭದ್ರತಾ ಮಂಡಳಿಯ ಸದಸ್ಯರ ಸಂಖ್ಯೆ ಹೆಚ್ಚಾಗಿಲ್ಲ.

- ಅತ್ಯಂತ ಹಳೆಯ ಮತ್ತು ವಿಶ್ವದ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಹಾಗೂ ಅಮೆರಿಕಕ್ಕೆ ಸಮನಾದ ಮೌಲ್ಯಗಳನ್ನು ಭಾರತ ಹೊಂದಿದೆ.
- ಇತ್ತೀಚಿನ ದಿನಗಳಲ್ಲಿ ಉಭಯ ರಾಷ್ಟ್ರಗಳ ನಡುವಿನ ಭದ್ರತಾ ಸಹಕಾರ ಹೆಚ್ಚಾಗುತ್ತಿದೆ. ಜತೆಗೆ, ಇನ್ನೂ ಹಲವು ರಂಗಗಳಲ್ಲಿ ದ್ವಿಪಕ್ಷೀಯ ಪಾಲುದಾರಿಕೆಯೂ ಉತ್ತಮಗೊಳುತ್ತಿದೆ. ಆದ್ದರಿಂದ, ಭಾರತಕ್ಕೆ ಭದ್ರತಾ ಮಂಡಳಿಯ ಖಾಯಂ ಸದಸ್ಯತ್ವ ನೀಡಲು ಕಾಲ ಪರಿಪಕ್ವವಾಗಿದೆ ಎಂದು ಬೆರಾ ಅಭಿಪ್ರಾಯಪಟ್ಟರು.
- ದಕ್ಷಿಣ ಏಷ್ಯಾದಲ್ಲಿ ಶಾಂತಿ, ಸ್ಥಿರತೆ ಮತ್ತು ಅಭಿವೃದ್ಧಿ ವಿಷಯದಲ್ಲಿ ಭಾರತ ಅಮೆರಿಕದ ಅತ್ಯಂತ ನಂಬಲರ್ಹ ಪಾಲುದಾರ ರಾಷ್ಟ್ರವಾಗಿದೆ. ಸದ್ಯ ಭದ್ರತಾ ಮಂಡಳಿಯಲ್ಲಿ ಕೇವಲ ಐವರು ಸದಸ್ಯರಿದ್ದಾರೆ. ಹೀಗಾಗಿ ನಾವಿನ್ನೂ 1960ರ ದಶಕದಲ್ಲೇ ಇದ್ದೇವೇನೋ ಎಂಬ ಭಾವನೆ ಮೂಡಿಸುತ್ತಿದೆ. ಜಾಗತಿಕ ಅಭಿವೃದ್ಧಿ ಸಾಧನೆ ನಿಟ್ಟಿನಲ್ಲಿ ಭಾರತ ನೀಡುತ್ತಿರುವ ಕೊಡುಗೆಯನ್ನು ಪರಿಗಣಿಸಿ, ಭದ್ರತಾ ಮಂಡಳಿಯ ಸದಸ್ಯತ್ವ ನೀಡಬೇಕು ಎಂದು ಪ್ರತಿಪಾದಿಸಿದರು

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 1. ಭಾರತ್ ಕೆ ಕೌಶಲ್ ಜಾದೆ

### ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

### ಪ್ರಮುಖ ಸುದ್ದಿ

- ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಗ್ರಾಮೀಣ ಕೌಶಲಗಳ ವಿಭಾಗವು 'ಭಾರತ್ ಕೆ ಕೌಶಲ್ ಜಾದೆ ' ಕಾರ್ಯಕ್ರಮವನ್ನು ಏರ್ಪಡಿಸಿತ್ತು . ಇದು ಅಂತ್ಯೋದಯ ದಿವಾಸ್ 2017 ರ ಅಂಗವಾಗಿ ಪ್ರಮುಖ ಕುಶಲ ಕಾರ್ಯಕ್ರಮಗಳ ಫಲಾನುಭವಿಗಳನ್ನು ಗೌರವಿಸುವ ಕಾರ್ಯಕ್ರಮ.
- ಈ ಕಾರ್ಯಕ್ರಮದ ಮುಖ್ಯ ಉದ್ದೇಶ ವೆಂದರೆ ಕಲ್ಯಾಣ ಅಭಿವೃದ್ಧಿ ಕಾರ್ಯಕ್ರಮಗಳಾದ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನಾ(DDU-GKY) ಮತ್ತು ಗ್ರಾಮೀಣ ಸ್ವಯಂ ಉದ್ಯೋಗಿ ತರಬೇತಿ ಸಂಸ್ಥೆಗಳಿಗೆ (ಆರ್ಎಸ್ಇಟಿಐ) ಫಲಾನುಭವಿಗಳನ್ನು ಗೌರವಿಸುವ ಉದ್ದೇಶ ಹೊಂದಿದೆ.

### ಮುಖ್ಯ ಪರೀಕ್ಷೆಗಾಗಿ

ನಮ್ಮ ಐಎಎಸ್ ಅಕಾಡೆಮಿ
ವಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಈ ಕಾರ್ಯಕ್ರಮವು ಕ್ರೋಢೀಕರಣ ವೇದಿಕೆ 'ಕೌಶಲ್ ಪಾಂಜಿ' (ಕೌಶಲ್ಯ ನೋಂದಣಿ) ಬಿಡುಗಡೆಗೆ ಸಹ ಸಾಕ್ಷಿಯಾಗಿದೆ.
- ಸ್ವಯಂ ಸಹಾಯ ಗುಂಪು ಸದಸ್ಯರು, ಗ್ರಾಮ ಪಂಚಾಯತ್ ಕಾರ್ಯಕಾರಿಗಳು, ಬ್ಲಾಕ್ ಅಧಿಕಾರಿಗಳು, ಮತ್ತು ನೇರವಾಗಿ ಅಭ್ಯರ್ಥಿಗಳ ಮೂಲಕ ಅಭ್ಯರ್ಥಿಗಳನ್ನು ಸಜ್ಜುಗೊಳಿಸುವುದನ್ನು ಇದು ಸುಲಭಗೊಳಿಸುತ್ತದ.
- RSETIs and DDU-GKY ಪಾಲುದಾರರು ಕೌಶಲ್ ಪಾಂಜಿ ವೇದಿಕೆಯನ್ನು ಗ್ರಾಮೀಣ ಯುವಕರೊಂದಿಗೆ ಸಂಪರ್ಕ ಸಾಧಿಸಲುಬಳಸಬಹುದು .

- ಕೌಶಲ್ ಪಾಂಜಿಯು ಸಾಮಾಜಿಕ ಆರ್ಥಿಕ ಜಾತಿ ಗಣತಿ (Social Economic Caste Census-SECC 2011) ಗೆ ಸಂಪರ್ಕ ಕಲ್ಪಿಸಲಾಗಿದೆ ಇದರಿಂದ ರಾಜ್ಯಗಳ ಯೋಜನೆಗೆ ಸಹಾಯ

ಮಾಡುತ್ತದೆ ಮತ್ತು ಅವರ ರಾಜ್ಯದಲ್ಲಿನ ಸಾಮಾಜಿಕ-ಆರ್ಥಿಕ ವಿವರಗಳ ಆಧಾರದ ಮೇಲೆ ಸಜ್ಜುಗೊಳಿಸುವಿಕೆಯನ್ನು ಗುರಿಯಾಗಿರಿಸಿಕೊಳ್ಳುತ್ತದೆ.

### ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಬಗ್ಗೆ:

- ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು-ಜಿಕೆವೈ) ಅಂತ್ಯೋದಯ ದಿವಾಸ್ ಅನ್ನು ಸೆಪ್ಟೆಂಬರ್ 25, 2014 ರಂದು ಘೋಷಿಸಿತು.
- ಇದು ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ಮಿಷನ್ (ಎನ್‌ಆರ್‌ಎಲ್‌ಎಂ) ನ ಭಾಗವಾಗಿದೆ. ಗ್ರಾಮೀಣ ಬಡ ಕುಟುಂಬಗಳ ಆದಾಯಕ್ಕೆ ವೈವಿಧ್ಯತೆಯನ್ನು ಸೇರಿಸುವುದು ಮತ್ತು ಗ್ರಾಮೀಣ ಯುವಕರ ವೃತ್ತಿಜೀವನದ ಆಕಾಂಕ್ಷೆಗಳನ್ನು ಪೂರೈಸುವುದು ಇದರ ಮುಖ್ಯ ಗುರಿಯಾಗಿದೆ.
- ಜನಗಣತಿ 2011 ಪ್ರಕಾರ, ಭಾರತದ ಗ್ರಾಮೀಣ ಪ್ರದೇಶಗಳಲ್ಲಿ 15 ಮತ್ತು 35 ವರ್ಷಗಳ ನಡುವೆ 55 ಮಿಲಿಯನ್ ಸಮರ್ಥ ಕೆಲಸಗಾರರನ್ನು ಹೊಂದಿದೆ. ಅದೇ ಸಮಯದಲ್ಲಿ, ವಿಶ್ವವು 2020 ರ ಹೊತ್ತಿಗೆ . 57 ಮಿಲಿಯನ್ ಕೆಲಸಗಾರರು ಕೊರತೆ ಎದುರಿಸವ ನಿರೀಕ್ಷೆ ಇದೆ . ಭಾರತದ ಜನಸಂಖ್ಯೆ ಯು ಇದರ ಲಾಭಾಂಶವನ್ನು ಪಡೆಯ ಬಹುದಾಗಿದೆ. ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ(ಎನ್ ಎಸ್ ಡಿಸಿ) ವತಿಯಿಂದ ಯೋಜನೆಯ ಕಾರ್ಯರೂಪ ಹಾಗೂ ನಿರ್ವಹಣೆ ದೇಶದೆಲ್ಲೆಡೆ ನಡೆಯಲಿದೆ.
- ಅಂತಹ ಔಪಚಾರಿಕ ಶಿಕ್ಷಣ ಮತ್ತು ಮಾರುಕಟ್ಟೆ ಕೌಶಲ್ಯ ಕೊರತೆ, ಆಧುನಿಕ ಮಾರುಕಟ್ಟೆಯಲ್ಲಿ ಪೈಪೋಟಿ ಭಾರತದ ಗ್ರಾಮೀಣ ಜನತೆ ಮಾರುಕಟ್ಟೆಗೆ ಅಗತ್ಯ ವಿರುವ ಶಿಕ್ಷಣ ಮತ್ತು ಕೌಶಲ್ಯ ಕೊರತೆ ಎದಿರಿಸುತ್ತಿದೆ , DDU-GKYಈ ಸವಾಲುಗಲ್ಲನ್ನು ಎದಿರಿಸಲು ಗ್ರಾಮೀಣ ಜನತೆಗೆ ಸಹಾಯ ದ ಉದ್ದೇಶದಿಂದ ಜಾಗತಿಕ ಮಾನದಂಡಗಳಿಗೆ ಮಾನದಂಡ ಗಳಿಗೆ ಅನುಗುಣ ವಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ.
- ಇದು ಸ್ಕಿಲ್ ಇಂಡಿಯಾ ಅಭಿಯಾನದ ಒಂದು ಭಾಗವಾಗಿ, ಇದು ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ, ಸ್ಮಾರ್ಟ್ ಸಿಟೀಸ್ ಮತ್ತು ಸ್ಟಾರ್ಟ್-ಅಪ್ ಇಂಡಿಯಾ, ಸ್ಟ್ಯಾಂಡ್-ಅಪ್

ಇಂಡಿಯಾ ಶಿಬಿರಗಳಂತಹ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ಬೆಂಬಲಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

## 2. ದೇಶಾದ್ಯಂತ ಪ್ರಧಾನ್ ಮಂತ್ರಿ ಎಲ್‌ಪಿಜಿ ಪಂಚಾಯಿತಿಗೆ ಚಾಲನೆ

### ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

### ಪ್ರಮುಖ ಸುದ್ದಿ

- ಗ್ರಾಮೀಣ ಪ್ರದೇಶಗಳಿಗೆ ಅಡುಗೆ ಅನಿಲ ಸಂಪರ್ಕ ಕಲ್ಪಿಸುವ ಪ್ರಧಾನಮಂತ್ರಿ ಉಜ್ವಲ ಯೋಜನೆಯ ಭಾಗವಾಗಿ ಕೇಂದ್ರದಿಂದ ದೇಶಾದ್ಯಂತ ಎಲ್‌ಪಿಜಿ ಪಂಚಾಯಿತಿಗೆ ಚಾಲನೆ ಇಂದು ನೀಡಲಾಯಿತು.
- ಪ್ರಧಾನಮಂತ್ರಿ ಎಲ್‌ಪಿಜಿ ಪಂಚಾಯತ್ ಯೋಜನೆಯು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಡಿ ಬರಲಿದೆ ಇದರ ಮುಖ್ಯ ಉದ್ದೇಶ ವೆಂದರೆ ಇನ್ನೂ ಸಾಂಪ್ರದಾಯಿಕ ಇಂಧನವನ್ನು ಅಡುಗೆ ಉದ್ದೇಶಕ್ಕೆ ಬಳಸುತ್ತಿರುವ ಗ್ರಾಮೀಣ ಪ್ರದೇಶದಲ್ಲಿ ಎಲ್‌ಪಿಜಿ ಸಂಪರ್ಕವನ್ನು ಒದಗಿಸುವುದು.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮುಖ್ಯ ಪರೀಕ್ಷೆಗಾಗಿ

- ಎಲ್‌ಪಿಜಿ ಪಂಚಾಯತ್ ಯೋಜನೆಯಡಿ, ಎಲ್‌ಪಿಜಿ ಬಳಕೆದಾರರಲ್ಲಿ, ಸ್ವಚ್ಛ ಇಂಧನ ಬಳಕೆ ಮತ್ತು ಇದರ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಇದು ಅಡುಗೆ ಅನಿಲ ಬಳಕೆಯ ವೈಯಕ್ತಿಕ ಅನುಭವವನ್ನು ಹಂಚಿಕೊಳ್ಳಲು ಕೂಡಾ ಗ್ರಾಮೀಣ ಜನರಿಗೆ ವೇದಿಕೆ ಒದಗಿಸಲಿದೆ.
- ಸಾಂಪ್ರದಾಯಿಕವಾಗಿ ಬಳಸುವ ಸೆಗಣಿ, ಕಲ್ಲಿದ್ದಲು ಅಥವಾ ಮರವನ್ನು ಬಳಸುವುದಕ್ಕಿಂತ ಎಲ್‌ಪಿಜಿ ಬಳಸುವುದರಿಂದ ಏನು ಪ್ರಯೋಜನವಾಗುತ್ತದೆ ಎನ್ನುವುದನ್ನು ಇದು ವಿವರಿಸಲಿದೆ.

ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು, ಎನ್‌ಜಿಓ, ಆಶಾ ಕಾರ್ಯಕರ್ತರು ಮತ್ತು ಸಾಮಾಜಿಕ ಕಾರ್ಯಕರ್ತರ ಜತೆ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಸಂಪರ್ಕ ಕಲ್ಪಿಸಿ, ಇವರ ಬಗ್ಗೆ ಇರುವ ತಪ್ಪುಕಲ್ಪನೆಯನ್ನು ಹೋಗಲಾಡಿಸುವುದು ಇದರ ಉದ್ದೇಶವಾಗಿದೆ.

- ಈ ಯೋಜನೆಯಡಿ ದೇಶಾದ್ಯಂತ ಒಂದು ಲಕ್ಷ ಪಂಚಾಯತ್‌ಗಳನ್ನು ಆಯೋಜಿಸಲಾಗುತ್ತದೆ. ಇದು ಎಲ್‌ಪಿಜಿಯ ಸುರಕ್ಷಿತ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ, ವಿವಿಧ ಉಪನ್ಯಾಸಗಳನ್ನು ಆಯೋಜಿಸಲಿದೆ.
- ಇದರ ಜತೆಗೆ ಆರೋಗ್ಯ ಮತ್ತು ಪರಿಸರಕ್ಕೆ ಇದರಿಂದ ಆಗುವ ಪ್ರಯೋಜನಗಳು, ಮಹಿಳೆಯರ ಸಬಲೀಕರಣಕ್ಕೆ ಇದು ನೀಡುವ ಕೊಡುಗೆ ಮತ್ತಿತರ ಅಂಶಗಳ ಬಗ್ಗೆ ಜಾಗೃತಿ ಮೂಡಿಸಲಿದೆ.
- ಎಲ್‌ಪಿಜಿ ಪಂಚಾಯತ್, ಈಗಾಗಲೇ ಪಿಎಂಯುವೈ ಯೋಜನೆಯಡಿ ಎಲ್‌ಪಿಜಿ ಸಿಲಿಂಡರ್ ಪಡೆದ ಜನರು ಹಾಗೂ ಸರ್ಕಾರದ ನಡುವಿನ ಸಂವಾದ ವೇದಿಕೆಯಾಗಿ ಕಾರ್ಯನಿರ್ವಹಿಸಲಿದೆ. ಒಂದು ಪಂಚಾಯತ್‌ನಲ್ಲಿ ಸುತ್ತಮುತ್ತಲ ಪ್ರದೇಶಗಳು ಸುಮಾರು 100 ಎಲ್‌ಪಿಜಿ ಗ್ರಾಹಕರು ಪಾಲ್ಗೊಳ್ಳಲಿದ್ದಾರೆ.
- ಸುರಕ್ಷಿತ ಕ್ರಮಗಳು, ವಿತರಕರು ನೀಡುವ ಸೇವೆಯ ಗುಣಮಟ್ಟ, ಎಲ್‌ಪಿಜಿ ಸಿಲಿಂಡರ್‌ಗಳ ಲಭ್ಯತೆ ಮತ್ತಿತರ ವಿಷಯಗಳ ಬಗ್ಗೆ ಇದು ಚರ್ಚಿಸಲಿದೆ.

ನಮ್ಮ ಐಎಎಸ್ ಅಕಾಡೆಮಿ

### ಪ್ರಧಾನ ಮಂತ್ರಿ "ಉಜ್ವಲ" ಯೋಜನೆ ಎಂದರೇನು?

ನಮ್ಮೂರಿಂದ..... ದಿಲ್ಲಿ/ಮೈಸೂರಿಗೆ

- ಬಡತನ ರೇಖೆಗಿಂತ ಕೆಳಗೆ ಇರುವವರನ್ನು ಗಮನದಲ್ಲಿ ಇರಿಸಿಕೊಂಡು ಯೋಜನೆಯನ್ನು ಅನುಷ್ಠಾನ ಮಾಡಲಾಗಿದೆ. ಯೋಜನೆ ಕುಟುಂಬದ ವೆಚ್ಚವನ್ನು ಕಡಿಮೆ ಮಾಡುವುದು ಅಲ್ಲದೇ ಮಹಿಳೆಯರ ಆರೋಗ್ಯ ಸುಧಾರಣೆಯಲ್ಲಿ ಮಹತ್ತರ ಪಾತ್ರ ನಿರ್ವಹಣೆ ಮಾಡಲಿದೆ. ಜನಧನ ಖಾತೆಯ ಆಧಾರಲ್ಲಿ ಕುಟುಂಬದ ಮಹಿಳೆ ಸಬ್ಸಿಡಿ ಪಡೆದುಕೊಳ್ಳಲಿದ್ದಾಳೆ.
- ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಈ ಯೋಜನೆಯನ್ನು ಜಾರಿಗೆ ತಂದಿದೆ.

### ಯೋಜನೆಯ ಲಾಭಗಳು ಏನು?

- ದೇಶದ ಎಲ್ಲ ನಾಗರಿಕರಿಗೂ ಎಲ್ ಪಿಜಿ ಸಂಪರ್ಕ ಸಿಕ್ಕಿದಂತೆ ಆಗುತ್ತದೆ.
- ಮಹಿಳೆಯರ ಆರೋಗ್ಯ ಸೂಧಾರಣೆಯಲ್ಲಿ ಪ್ರಮುಖ ಪಾತ್ರ
- ಮಾಲಿನ್ಯ ನಿಯಂತ್ರಣ
- ಅಡುಗೆ ಮಾಡಲು ತೆಗೆದುಕೊಳ್ಳುತ್ತಿದ್ದ ಸಮಯದಲ್ಲಿ ಕಡಿತ
- ಗ್ರಾಮೀಣ ಯುವಕರಿಗೆ ಹೊಸ ಉದ್ಯೋಗ ಅವಕಾಶ
- ಬಿಪಿಎಲ್ ಕುಟುಂಬಕ್ಕೆ ಕೇಂದ್ರ ಸರ್ಕಾರದಿಂದ 1600 ರು. ಆಡಳಿತಾತ್ಮಕ ಸಹಾಯ ಧನವನ್ನು ಕೇಂದ್ರ ಸರ್ಕಾರ ನೀಡಲಿದೆ.

**3. ವಿಶ್ವಸಂಸ್ಥೆ ಸುಧಾರಣೆಗೆ ಮುಂದಾದ ಅಮೆರಿಕ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಭಾರತ ಸೇರಿದಂತೆ ಅನೇಕ ರಾಷ್ಟ್ರಗಳು ವಿಶ್ವಸಂಸ್ಥೆಯ ಸುಧಾರಣೆಗೆ ಒತ್ತಾಯಿಸುತ್ತಿವೆ. ಟ್ರಂಪ್ ನೇತೃತ್ವದ ಅಮೆರಿಕ ಸರ್ಕಾರದ ಪ್ರಮುಖ ಆದ್ಯತೆಗಳಲ್ಲಿ ವಿಶ್ವಸಂಸ್ಥೆ ಸುಧಾರಣೆಯು ಒಂದಾಗಿದೆ. ನ್ಯೂಯಾರ್ಕನಲ್ಲಿ ನಡೆದ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಈ ಕುರಿತು ಭಾರಿ ಚರ್ಚೆ ನಡೆದಿದೆ .
- ಇದು ವಿಶ್ವಸಂಸ್ಥೆಯ ೭೨ನೇ ಮಹಾಸಭೆಯಾಗಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧ್ಯಕ್ಷತೆಯಲ್ಲಿ ನಡೆದ ವಿಶ್ವಸಂಸ್ಥೆ ಆಡಳಿತ ಸುಧಾರಣಾ ಸಭೆಯಲ್ಲಿಯೂ ಸುಷ್ಮಾ ಭಾಗವಹಿಸಿದ್ದರು.
- ವಿಶ್ವಸಂಸ್ಥೆ ಪ್ರಧಾನಕಾರ್ಯದರ್ಶಿಯ ಅಧಿಕಾರ ವ್ಯಾಪ್ತಿ ಹೆಚ್ಚಳ ಸೇರಿದಂತೆ ಅನೇಕ ಸುಧಾರಣೆಗಳಿಗೆ ಭಾರತ ಸೇರಿದಂತೆ ೧೨೦ ರಾಷ್ಟ್ರಗಳು ಬೆಂಬಲಿಸಿವೆ. ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ನೇತೃತ್ವದಲ್ಲಿ ಕೆಲವು ಆಯ್ದ ದೇಶಗಳ ಸಭೆಯಲ್ಲಿಯೂ ಸುಷ್ಮಾ ಭಾಗವಹಿಸಿ ಹವಾಮಾನ ಬದಲಾವಣೆ, ಭಯೋತ್ಪಾದನೆ ನಿಗ್ರಹದ ಕುರಿತು ಚರ್ಚಿಸಿದ್ದಾರೆ.

### ಮುಖ್ಯ ಪರೀಕ್ಷೆಗಾಗಿ

### ಸುಧಾರಣೆ ಅಗತ್ಯ ಮತ್ತು ವಿಧಾನ

- ಇತ್ತೀಚಿನ ವರ್ಷಗಳಲ್ಲಿ ವಿಶ್ವಸಂಸ್ಥೆಯು ತನ್ನ ಉದ್ದೇಶಕ್ಕನುಗುಣವಾಗಿ ಪೂರ್ಣ ಸಾಮರ್ಥ್ಯ ಬಳಸಲಾಗುತ್ತಿಲ್ಲ. ಅಧಿಕಾರಶಾಹಿತ್ವ ಮತ್ತು ನಿರ್ವಹಣೆಯಲ್ಲಿನ ದೋಷಗಳು ಇದಕ್ಕೆ ಪ್ರಮುಖ ಕಾರಣಗಳಾಗಿವೆ.
- ಇಂದು ಸಮಸ್ಯೆ ನಿವಾರಿಸುವ ಬದಲು ಸಮಸ್ಯೆಗಳ ಹುಟ್ಟಿಗೆ ವಿಶ್ವಸಂಸ್ಥೆ ಕಾರಣವಾಗುತ್ತಿರುವಂತಿದೆ ಎಂದು ಟ್ರಂಪ್ ಅಭಿಪ್ರಾಯ ಪಟ್ಟಿದ್ದಾರೆ. ಈ ಹಿನ್ನಲೆಯಲ್ಲಿ ಸಾರ್ವಭೌಮತ್ವ ಮತ್ತು ಹೊಣೆಗಾರಿಕೆಗೆ ಎಂಬ ಮೂಲತತ್ವಗಳಡಿ ವಿಶ್ವಸಂಸ್ಥೆ ಸುಧಾರಣೆಗೆ ಟ್ರಂಪ್ ಸರ್ಕಾರ ಬದ್ಧವಾಗಿದೆ. ಅಮೇರಿಕಾದ ಈ ಕ್ರಮಕ್ಕೆ ಬಹುಪಾಲು ದೇಶಗಳು ಬೆಂಬಲ ಸೂಚಿಸಿವೆ.

### ಸಾರ್ವಭೌಮತೆ ತತ್ವ

- ಪ್ರಜೆಗಳ ಒಳಿತಿಗಾಗಿ ಕಾರ್ಯನಿರ್ವಹಿಸುವ ಸಾರ್ವಭೌಮ ರಾಷ್ಟ್ರಗಳ ಕೇಂದ್ರೀಯತೆಯನ್ನು (ಸ್ವಾತಂತ್ರ್ಯವನ್ನು) ಅಮೆರಿಕ ಪ್ರತಿಪಾದಿಸಿದೆ. ಯಾವುದೇ ರಾಷ್ಟ್ರದ ಆಂತರಿಕ ಸುವ್ಯವಸ್ಥೆಗೆ ಸ್ವಾತಂತ್ರ್ಯ ಆಧಾರಸ್ತಂಭವಾಗಿದೆ ಎನ್ನುವುದನ್ನು ಭಾರತವೂ ನಂಬಿದೆ.

### ಹೊಣೆಗಾರಿಕೆ ತತ್ವ

- ವಿಶ್ವಸಂಸ್ಥೆ ನಿರ್ವಹಣೆಯಲ್ಲಿ ಅಮೆರಿಕ ಬಹುಮುಖ್ಯ ಪಾತ್ರ ವಹಿಸುತ್ತಿದೆ. ವಿಶ್ವಸಂಸ್ಥೆ ಬಜೆಟಗೆ ಅಮೆರಿಕ ಬಹುದೊಡ್ಡ ಕೊಡುಗೆದಾರ ರಾಷ್ಟ್ರವಾಗಿದೆ. ಒಟ್ಟು ಬಜೆಟ್ ನಲ್ಲಿ ಶೇ.೨೫ರಷ್ಟು ಪಾಲು ಅಮೆರಿಕದ್ದೇ ಇರುತ್ತದೆ. ಪ್ರತ್ಯೇಕ ಶಾಂತಿಪಾಲನಾ ಬಜೆಟ್ ಗೆ ಶೇ.೨೮ ರಷ್ಟು ಕೊಡುಗೆ ಇದೆ. ಅಮೆರಿಕಕ್ಕೆ ಇದು ಹೆಚ್ಚಿನ ಹೊರೆಯಾಗಿದ್ದು, ನಿರ್ವಹಣಾ ವೆಚ್ಚದ ಸಮನಾದ ಹಂಚಿಕೆಯನ್ನು ಬಯಸುತ್ತಿದೆ. ಹೀಗಾಗಿ, ಈ ವರ್ಷದ ಕೊಡುಗೆಯಲ್ಲಿ ಕಡಿತ ಮಾಡಲು ನಿರ್ಧರಿಸಿದೆ.

### ಸುಧಾರಣೆಗಿರುವ ಸವಾಲುಗಳು

- ವಿಶ್ವಸಂಸ್ಥೆ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರುವುದೇ ಒಂದು ದೊಡ್ಡ ಸವಾಲಾಗಿದೆ. ವಿಶ್ವಸಂಸ್ಥೆಯ ರಚನಾ ಸ್ವರೂಪವೇ ಹಾಗಿದ್ದು, ಸಣ್ಣ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲೂ ಹಲವಾರು ರಾಷ್ಟ್ರಗಳು ಭಾಗವಹಿಸಬೇಕಾಗುತ್ತದೆ.
- ಈ ಪ್ರಕ್ರಿಯೆಯಲ್ಲಿ ಭಿನ್ನಾಭಿಪ್ರಾಯ ಉಂಟಾಗುವುದೇ ಹೆಚ್ಚು. ಉದಾಹರಣೆಗೆ, ವಿಶ್ವಸಂಸ್ಥೆ ಸುಧಾರಣಾ ಸಭೆಗೆ ಚೀನಾ ಮತ್ತು ರಷ್ಯಾ ಭಾಗವಹಿಸಿಯೇ ಇರಲಿಲ್ಲ.

### ಭಾರತದ ನಿಲುವುಗಳು

- ವಿಶ್ವಸಂಸ್ಥೆ ಸುಧಾರಣೆ ಅದರ ಸಚಿವಾಲಯಕ್ಕಷ್ಟೇ ಸೀಮಿತವಾಗಿದೆ. ವಿಶಾಲಾಧಾರಿತ ಹಾಗೂ ಸಮಗ್ರವಾಗಿರಬೇಕು.
- ಸುಧಾರಣೆಗಳು ವಿಶ್ವಸಂಸ್ಥೆಯ ಆಡಳಿತಕ್ಕೆ ಸಮಬಂಧಿಸದಂತೆ ತೊಡಕಾಗುವಂತಿರಬಾರದು.
- ಟ್ರಂಪ್ ಸರ್ಕಾರದ ವಿಶ್ವಸಂಸ್ಥೆ ಸುಧಾರಣಾ ಪ್ರಯತ್ನಕ್ಕೆ ಭಾರತದ ಪೂರ್ಣ ಬೆಂಬಲವಿದೆ.
- ಬದಲಾದ ಕಾಲಮಾನಕ್ಕೆ ತಕ್ಕಂತೆ ವಿಶ್ವಸಂಸ್ಥೆಯ ಕಾಯಂ ಸದಸ್ಯರು ಹಾಗೂ ತಾತ್ಕಾಲಿಕ ಸದಸ್ಯರ ಸಂಖ್ಯೆಯಲ್ಲೂ ಹೆಚ್ಚಳ ಮಾಡಬೇಕು.
- ಭಾರತವು ಶೀತಲ ಸಮರೋತ್ತರ ಕಾಲದಿಂದಲೂ ವಿಶ್ವಸಂಸ್ಥೆ ಸುಧಾರಣೆಗೆ ಒಲವು ತೋರುತ್ತಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಮ್ಮೂರಿನಿಂದ..... ಮಸ್ಸೂರಿಗೆ/ಮೈಸೂರಿಗೆ

## 4. ಪೌರ ಕಾರ್ಮಿಕರ ವಿರುದ್ಧ ಎಸ್ಮಾ ಅಸ್ತ್ರಕ್ಕೆ ಮುಂದಾದ ಕರ್ನಾಟಕ ಸರಕಾರ

### ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

### ಪ್ರಮುಖ ಸುದ್ದಿ

- ಕಸ ವಿಲೇವಾರಿ ಸ್ಥಗಿತಗೊಳಿಸಿ ಮುಷ್ಕರ ಆರಂಭಿಸಿರುವ ಗುತ್ತಿಗೆದಾರರು ಮತ್ತು ಪೌರ ಕಾರ್ಮಿಕರ ಮೇಲೆ ಕರ್ನಾಟಕ ಸರಕಾರವು ಎಸ್ಮಾ ಕಾಯಿದೆ ಜಾರಿಗೊಳಿಸಿದೆ.
- ಗುತ್ತಿಗೆ ಪೌರ ಕಾರ್ಮಿಕರಿಗೆ ಬಿಬಿಎಂಪಿ ವತಿಯಿಂದಲೇ ನೇರವಾಗಿ ವೇತನ ಪಾವತಿಸುವುದನ್ನು ವಿರೋಧಿಸಿ, ಗುತ್ತಿಗೆದಾರರು ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಿದ್ದಾರೆ. ಮುಷ್ಕರ

ಮುಂದುವರಿದರೆ ಸಮಸ್ಯೆ ಉಲ್ಬಣಿಸಲಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ನಗರಾಭಿವೃದ್ಧಿ ಇಲಾಖೆಯು ಎಸ್ಮಾ ಜಾರಿಗೊಳಿಸಿ ಅಧಿಸೂಚನೆ ಹೊರಡಿಸಿದೆ.

- ಬಿಬಿಎಂಪಿಯಿಂದ ನೇರವಾಗಿ ಮತ್ತು ಸರಬರಾಜುದಾರರು, ಗುತ್ತಿಗೆದಾರರ ಅಧೀನದಲ್ಲಿ ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿರುವ ಎಲ್ಲ ಪೌರ ಕಾರ್ಮಿಕರು, ಆಟೊ ಸಹಾಯಕರು, ಕಾಂಪ್ಯಾಕ್ಟರ್‌ಗಳಿಗೆ ಕಸ ತುಂಬುವವರು, ಚಾಲಕರು ತಕ್ಷಣವೇ ಜಾರಿಗೆ ಬರುವಂತೆ ಮುಂದಿನ ಒಂದು ವರ್ಷದವರೆಗೆ ಮುಷ್ಕರ ಹೂಡುವುದನ್ನು ನಿಷೇಧಿಸಲಾಗಿದೆ. ಈ ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

## ಮುಖ್ಯ ಪರೀಕ್ಷೆಗಾಗಿ

- ಎಸ್ಮಾ ಕಾಯಿದೆಯು ಕಾಯಂ ನೌಕರರು, ಗುತ್ತಿಗೆದಾರರು, ಹೊರ ಗುತ್ತಿಗೆ ಸಿಬ್ಬಂದಿ ಸೇರಿದಂತೆ ಎಲ್ಲರಿಗೂ ಅನ್ವಯವಾಗುತ್ತದೆ. ಗುತ್ತಿಗೆದಾರರು, ಪೌರ ಕಾರ್ಮಿಕರು, ಆಟೊ ಟಿಪ್ಪರ್ ಮತ್ತು ಕಾಂಪ್ಯಾಕ್ಟರ್‌ಗಳ ಚಾಲಕರು ತ್ಯಾಜ್ಯ ವಿಲೇವಾರಿ ಸ್ಥಗಿತಗೊಳಿಸಿ, ಮುಷ್ಕರ ಹೂಡಿದರೆ ಅಥವಾ ಕಸ ಸಾಗಣೆಗೆ ಅಡ್ಡಿಪಡಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.
- ಘನತ್ಯಾಜ್ಯ ನಿರ್ವಹಣೆಯನ್ನು ಕರ್ನಾಟಕ ಅಗತ್ಯ ಸೇವೆಗಳ ನಿರ್ವಹಣಾ ಕಾಯಿದೆ 2013 ಪ್ರಕಾರ ಅಗತ್ಯ ಸೇವೆ ಎಂದು ಪರಿಗಣಿಸಿ ಆದೇಶ ಹೊರಡಿಸಲಾಗಿದೆ. ಕರ್ನಾಟಕ ಅಗತ್ಯ ಸೇವೆಗಳ ನಿರ್ವಹಣಾ ಕಾಯಿದೆ 2013ರ ಕಲಂ 3ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯತೆಯನ್ನು ಕಾಪಾಡಿ, ಸಾರ್ವಜನಿಕರ ಆರೋಗ್ಯಕ್ಕೆ ಏರುಪೇರಾಗುವುದನ್ನು ತಡೆಗಟ್ಟಲು ಈ ಕ್ರಮ ಕೈಗೊಳ್ಳಲಾಗಿದೆ.
- 'ಬಿಎಂಪಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ಪೌರ ಕಾರ್ಮಿಕರಿಗೆ ಪಾಲಿಕೆಯಿಂದಲೇ ನೇರವಾಗಿ ವೇತನ ಪಾವತಿಸಲು ಸಚಿವ ಸಂಪುಟ ಸಭೆಯು ಅನುಮೋದನೆ ನೀಡಿದೆ. ಅಲ್ಲದೇ ಕಾರ್ಮಿಕರನ್ನು ಕಾಯಂಗೊಳಿಸಲು ತೀರ್ಮಾನಿಸಿದೆ. ಆದರೆ, ಇದಕ್ಕೆ ಗುತ್ತಿಗೆದಾರರು ಆಕ್ಷೇಪ ವ್ಯಕ್ತಪಡಿಸುತ್ತಿದ್ದು, ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಿದ್ದಾರೆ,''

## .ಏನಿದು ಎಸ್ಮಾ?

- 'ಅಗತ್ಯ ಸೇವೆಗಳ ನಿರ್ವಹಣಾ ಕಾಯಿದೆ'ಗೆ ಎಸ್ಮಾ ಎನ್ನಲಾಗುತ್ತದೆ. ಎಸ್ಮಾ ಕಾಯಿದೆಯನ್ನು ಉಲ್ಲಂಘಿಸಿ ಪ್ರತಿಭಟನೆ ನಡೆಸಿದರೆ, ಇಲ್ಲವೇ ಕೆಲಸ ಕಾರ್ಯಗಳಿಗೆ ಅಡ್ಡಿಪಡಿಸುವವರನ್ನು ವಾರೆಂಟ್ ಇಲ್ಲದೆ ಬಂಧಿಸಿ, ಜೈಲಿಗೆ ಕಳುಹಿಸಲಾಗುತ್ತದೆ.
- ''ಗುತ್ತಿಗೆದಾರರು ಕೆಲ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ತ್ಯಾಜ್ಯ ವಿಲೇವಾರಿಯನ್ನು ಸ್ಥಗಿತಗೊಳಿಸಿ ಮುಷ್ಕರ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಎಸ್ಮಾ ಕಾಯಿದೆಯನ್ನು ಜಾರಿಗೊಳಿಸಲಾಗಿದೆ. ಕಸ ವಿಲೇವಾರಿಗೆ ಪರ್ಯಾಯ ವ್ಯವಸ್ಥೆಯನ್ನೂ ಮಾಡಿಕೊಳ್ಳಲಾಗಿದೆ,''

SOURCE-http://pib.nic.in/newsite/PrintRelease.aspx?relid=171060

## 5. ಪ್ರಳಯ ಸಹಾಯಮ್

ಪ್ರಾಮುಖ್ಯತೆ -ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಾಗಿ

ಪ್ರಮುಖುಸುದ್ದಿ

- ಇತ್ತೀಚೆಗೆ ಹೈದರಾಬಾದ್‌ನ ಹುಸೇನ್ ಸಾಗರ್ ಸರೋವರದ ತೀರದಲ್ಲಿ ಮಾನವೀಯ ನೆರವು ಮತ್ತು ವಿಕೋಪ ಪರಿಹಾರ ಕಾರ್ಯಾಚರಣೆ 'ಪ್ರಳಯ ಸಹಾಯಮ್ 'ಕಾರ್ಯಕ್ರಮ ನಡೆಯಿತು.
- ಇದರ ಉದ್ದೇಶ ಮುಖ್ಯ ಉದ್ದೇಶವೆಂದರೆ ಮಾನವ ನಿರ್ಮಿತ ಮತ್ತು ಸಹಜ ಹವಾಮಾನ ಬದಲಾವಣೆ ಮತ್ತು ಪ್ರವಾಹ ಸೇರಿದಂತೆ ನಗರ ವಿಕೋಪಗಳ ಬಗ್ಗೆ ಜಾಗೃತಿ ಮೂಡಿಸುವುದು.
- ಇದು ರಾಷ್ಟ್ರೀಯ ವಿಪತ್ತು ಪರಿಹಾರ ಪಡೆ (ಎನ್‌ಡಿಆರ್‌ಎಫ್) ಮತ್ತು ಸಶಸ್ತ್ರಪಡೆಗಳ ಜಂಟಿ ಸಹಯೋಗದಲ್ಲಿ ನಡೆಯಿತು

ಮುಖ್ಯ ಪರೀಕ್ಷೆಗಾಗಿ .

- ಈ ಬಹುಏಜೆನ್ಸಿ ಕಾರ್ಯಾಚರಣೆಯು ಹೈದರಾಬಾದ್- ಸಿಕಂದರಾಬಾದ್ ನಗರ ಪ್ರವಾಹ ಪರಿಸ್ಥಿತಿಯನ್ನು ಪರಿಭಾವಿಸಿಕೊಂಡು ನಡೆದಿದೆ. ಇದು ಎಲ್ಲ ಏಜೆನ್ಸಿಗಳನ್ನು ಒಳಗೊಂಡಂತೆ ಸಾರ್ವಜನಿಕರಲ್ಲಿ ವಿಶ್ವಾಸ ವೃದ್ಧಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಿದೆ. ಇದರ ಜತೆಗೆ ವಿಕೋಪ ಪರಿಹಾರ ಏಜೆನ್ಸಿಗಳ ಸಾಮರ್ಥ್ಯ ವೃದ್ಧಿಪಡಿಸುವುದು ಇದರ ಉದ್ದೇಶ.

- ಈ ಕಾರ್ಯಾಚರಣೆಯಡಿ, ರಾಜ್ಯ ಸರ್ಕಾರದ ವಿವಿಧ ಏಜೆನ್ಸಿಗಳು, ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಎನ್‌ಡಿಆರ್‌ಎಫ್, ಸಿಐಎಸ್‌ಎಫ್ ಮತ್ತು ಸಶಸ್ತ್ರ ಪಡೆಗಳ ಏಜೆನ್ಸಿಗಳು ನಗರ ಪ್ರವಾಹ ಪರಿಸ್ಥಿತಿಯನ್ನು ನಿರ್ವಹಿಸುವ ಜಂಟಿ ಕಾರ್ಯಾಚರಣೆ ಕೈಗೊಂಡರು. ಭಾರತೀಯ ವಾಯುಪಡೆ ಹಾಗೂ ಸೇನಾ ವೈಮಾನಿಕ ಘಟಕಗಳು 17 ಹೆಲಿಕಾಪ್ಟರ್‌ಗಳನ್ನು, ಅತ್ಯಾಧುನಿಕ ಲಘು ಹೆಲಿಕಾಪ್ಟರ್ ಮತ್ತು ಚೇತಕ್ ಹೆಲಿಕಾಪ್ಟರ್‌ಗಳನ್ನು ವೈಮಾನಿಕ ಸ್ಥಳಾಂತರಕ್ಕೆ ಬಳಸಿಕೊಂಡಿವೆ. ಸಂಕಷ್ಟಕ್ಕೀಡಾದ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಒಯ್ಯುವ ಬಗೆಗಿನ ಕಾರ್ಯಾಚರಣೆಯನ್ನು ಪ್ರದರ್ಶಿಸಲಾಯಿತು.
- ವಿಶೇಷ ಪಡೆಗಳಾದ ಸೇನಾ ಕಮಾಂಡೊಗಳು ಮತ್ತು ನೌಕಾಪಡೆಯ ಸಾಗರ ಕಮಾಂಡೊಗಳು ಜಂಟಿಯಾಗಿ ಶೋಧ ಮತ್ತು ಪರಿಹಾರ ಕಾರ್ಯಾಚರಣೆಯನ್ನು ಪ್ರವಾಹಪೀಡಿತ ಕಾಲೋನಿಗಳಲ್ಲಿ ಕೈಗೊಂಡರು. ಎನ್‌ಡಿಆರ್‌ಎಫ್‌ನ ಶ್ವಾನದಳ ಹಾಗೂ ತೆಲಂಗಾಣ ರಾಜ್ಯ ಸರ್ಕಾರದ ಪೊಲೀಸ್ ಇಲಾಖೆ ಕೂಡಾ ಸಿಕ್ಕಿಹಾಕಿಕೊಂಡಿದ್ದ ಜನರ ಶೋಧ ಕಾರ್ಯಾಚರಣೆಯನ್ನು ಕೈಗೊಂಡರು.
- ಜಂಟಿ ಸಹಕಾರ ಕಾರ್ಯಕ್ರಮಗಳಲ್ಲಿ ರಾಜ್ಯ ಸರ್ಕಾರದ ತುರ್ತು ಕಾರ್ಯಾಚರಣೆ ವಿಭಾಗಗಳ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಮಾಡುವುದು ಇದರ ಉದ್ದೇಶವಾಗಿತ್ತು. ಇದರಲ್ಲಿ, ಪರಿಹಾರ ಕಾರ್ಯಾಚರಣೆಗಳು, ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸುವುದು, ವೈದ್ಯಕೀಯ ಚಿಕಿತ್ಸೆ ಒದಗಿಸುವುದು ಮತ್ತು ಅಗತ್ಯ ವಸ್ತುಗಳ ಪೂರೈಕೆಯಂಥ ಕಾರ್ಯಗಳನ್ನು ಕೂಡಾ ಬಹು ಏಜೆನ್ಸಿಗಳು ಸಮನ್ವಯ ಹಾಗೂ ದಕ್ಷವಾಗಿ ನಿರ್ವಹಿಸಿದವು.

- ಈ ಕಾರ್ಯಾಚರಣೆಯು ಭಾರತದ ಹವಾಮಾನ ಇಲಾಖೆಯ ಮುನ್ನೆಚ್ಚರಿಕೆ ವ್ಯವಸ್ಥೆಯ ಮಹತ್ವವನ್ನು ಕೂಡಾ ಬಿಂಬಿಸಿತು. ಇದರ ಜತೆಗೆ ರಾಷ್ಟ್ರೀಯ ದೂರಸಂವೇದಿ ಕೇಂದ್ರ (ಎನ್‌ಆರ್‌ಎಸ್‌ಸಿ) ಮತ್ತು ಭಾರತದ ರಾಷ್ಟ್ರೀಯ ಸಾಗರ ಮಾಹಿತಿ ಸೇವೆಗಳ ಕೇಂದ್ರ (ಐಎನ್‌ಸಿಓಐಎಸ್)ಗಳ ಮಹತ್ವವನ್ನು ಕೂಡಾ ಈ ಕಾರ್ಯಾಚರಣೆಯಲ್ಲಿ ಬಿಂಬಿಸಲಾಯಿತು.

### ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ ಬಗ್ಗೆ

- ಸಂವಿಧಾನದ ಕಾನೂನುಬದ್ದ ನಿಬಂಧನೆಗಳನ್ನು ವಿಪತ್ತು ನಿರ್ವಹಣಾ ಕಾಯಿದೆ ಮೂಲಕ .ನೈಸರ್ಗಿಕ ಮತ್ತು ಮಾನವ-ನಿರ್ಮಿತ ವಿಪತ್ತುಗಳಿಗೆ ವಿಶೇಷವಾದ ಪ್ರತಿಕ್ರಿಯೆಯ ಉದ್ದೇಶಕ್ಕಾಗಿ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ (ಎನ್ಡಿಆರ್ಎಫ್)ಯನ್ನು ರಚಿಸಲಾಗಿದೆ

### ಹಿನ್ನೆಲೆ:

- 1999 ರ ಒರಿಸ್ಸಾ ಸೂಪರ್ ಸೈಕ್ಲೋನ್ ಮತ್ತು 2001ರ ಗುಜರಾತ್ ಭೂಕಂಪನ ರೂಪದಲ್ಲಿ ಶೀಘ್ರವಾಗಿ ಎರಡು ರಾಷ್ಟ್ರೀಯ ವಿಕೋಪಗಳು ರಾಷ್ಟ್ರೀಯ ಮಟ್ಟದಲ್ಲಿ ಪರಿಣಾಮಕಾರಿ ಪ್ರತಿಕ್ರಿಯೆಯನ್ನು ಉಂಟುಮಾಡುವ ತಜ್ಞ ಪ್ರತಿಕ್ರಿಯೆಯ ಕಾರ್ಯವಿಧಾನವನ್ನು ಹೊಂದುವ ಅಗತ್ಯತೆಯನ್ನು ಅರಿತುಕೊಂಡಿವೆ.
- ಈ ಸಾಕ್ಷಾತ್ಕಾರವು 26 ಡಿಸೆಂಬರ್ 2005 ರಂದು ಡಿಎಮ್ ಆಕ್ಟ್ ಮೂಲಕ ಜಾರಿಗೆ ತರಲು ಕಾರಣವಾಯಿತು.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ(NDRF)ನ ಪಾತ್ರಗಳು

- ವಿಪತ್ತುಗಳ ಸಂದರ್ಭದಲ್ಲಿ ವಿಶೇಷ ಪ್ರತಿಕ್ರಿಯೆ.
- ಸನ್ನಿಹಿತ ವಿಪತ್ತು ಸಂದರ್ಭಗಳಲ್ಲಿ ಪೂರ್ವಭಾವಿಯಾಗಿ ನಿಯೋಜನೆ.
- ತನ್ನದೇ ಆದ ತರಬೇತಿ ಮತ್ತು ಕೌಶಲ್ಯಗಳನ್ನು ಪಡೆದುಕೊಳ್ಳುವುದು ಮತ್ತು ನಿರಂತರವಾಗಿ ನವೀಕರಿಸುವುದು .
- ರಾಜ್ಯ ಪ್ರತಿಕ್ರಿಯೆ ಪಡೆಗಳಿಗೆ ಮೂಲಭೂತ ಮತ್ತು ಕಾರ್ಯಾಚರಣೆಯ ಮಟ್ಟದ ತರಬೇತಿಯನ್ನು (ಪೋಲಿಸ್, ಸಿವಿಲ್ ಡಿಫೆನ್ಸ್ ಮತ್ತು ಹೋಮ್ ಗಾರ್ಡ್ಸ್) ಒದಗಿಸುವುದು
- ಸಮುದಾಯ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮ.
- ಸಾರ್ವಜನಿಕ ಜಾಗೃತಿ ಅಭಿಯಾನಗಳನ್ನು ಆಯೋಜಿಸುವುದು .

## 6. ಭಾರತಕ್ಕೆ ಬಂದ ಫ್ರಾನ್ಸ್ ಲೋಕೋಮೋಟಿವ್ ಇಂಜಿನ್

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ ಮಾತ್ರ

ಪ್ರಮುಖ ಸುದ್ದಿ

- ಅತ್ಯಧಿಕ ಅಶ್ವಶಕ್ತಿಯುಳ್ಳ ಲೋಕೋಮೋಟಿವಗಳನ್ನೂ ಆರಂಭಿಸುವ ಭಾರತದ ಕನಸು ನನಸಾಗುವ ಹಾದಿಯಲ್ಲಿದೆ. ಫ್ರಾನ್ಸ್ ನ ಆಲ್ ಸ್ಟಾಮ್ ಕಂಪನಿ ತಯಾರಿಸಿದ ೧೨ ಸಾವಿರ ಎಚ್ ಪಿ ಸಾಮರ್ಥ್ಯದ ರೈಲ್ವೆ ಇಂಜಿನ್ ನ ಮೊಟ್ಟಮೊದಲ ಮೇಲ್ಮೈ ಭಾಗ ಕೋಲ್ಕತ್ತಾ ಬಂದರಿಗೆ ಬಂದಿಳಿದಿದೆ. ಹಾಲಿ ಅಸ್ತಿತ್ವದಲ್ಲಿರುವ ಲೋಕೋಮೋಟಿವ್ ರೈಲುಗಳು ದುಪ್ಪಟ್ಟು ಸಾಮರ್ಥ್ಯವನ್ನು ಈ ವಿದ್ಯುಚ್ಚಾಲಿತ ರೈಲುಗಳು ಹೊಂದಿವೆ.
- ಫ್ರಾನ್ಸ್ ನ ಆಲ್ ಸ್ಟಾಮ್ ಕಂಪನಿ ಇವುಗಳನ್ನು ಪೂರೈಸುತ್ತಿದ್ದು, ೨೦೧೫ರಲ್ಲಿ ಈ ಕುರಿತು ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಮುಂದಿನ ೧೧ ವರ್ಷದೊಳಗೆ ಅಧಿಕ ಅಶ್ವಶಕ್ತಿಯುಳ್ಳ ೮೦೦ ರೇಲ್ವೆ ಇಂಜಿನ್ ಗಳನ್ನೂ ಪೂರೈಸುವುದಕ್ಕೆ ಒಪ್ಪಂದ ಏರ್ಪಟ್ಟಿದೆ. ಆದರೆ, ಮೊದಲ ೫ ಲೋಕೋಮೋಟಿವ್ಗಳು ಮಾತ್ರ ಫ್ರಾನ್ಸ್ ನಿಂದ ಪೂರೈಕೆಯಾಗಲಿವೆ, ಉಳಿದ ೭೯೫ ಇಂಜಿನ್ ಗಳನ್ನು ಮೇಕ್ ಇನ್ ಇಂಡಿಯಾ ಅಡಿಯಲ್ಲಿ ದೇಶದಲ್ಲೇ ಉತ್ಪಾದನೆ ಮಾಡಲಾಗುವುದು.
- ಇದು, ರೇಲ್ವೆ ವಲಯಕ್ಕೆ ಸಂಬಂಧಿಸಿದ ಮೊದಲ ಅತಿ ದೊಡ್ಡ ವಿದೇಶಿ ನೇರ ಬಂಡವಾಳ ಹೂಡಿಕೆ ಯೋಜನೆಯಾಗಿದೆ. ಯೋಜನೆಯ ಒಟ್ಟು ಮೊತ್ತ ೨೩ ಸಾವಿರ ಕೋಟಿ ರೂ. ಇದರ ಅಡಿಯಲ್ಲಿ, ಬಿಹಾರದ ಮಾಧೇಪುರದಲ್ಲಿ ಲೋಕಮೋಟಿವ್ ನಿರ್ಮಾಣ ಘಟಕ, ಉತ್ತರಪ್ರದೇಶದ ಸಹರಾನ್ ಪುರ ಹಾಗೂ ಮಹಾರಾಷ್ಟ್ರದ ನಾಗಪುರದಲ್ಲಿ ನಿರ್ವಹಣಾ ಘಟಕ ಸ್ಥಾಪಿಸಲಾಗುವುದು. ಈ ರೈಲ್ವೆಯ ಪರೀಕ್ಷಾರ್ಥ ಪ್ರಯೋಗ ಮುಂದಿನ ಫೆಬ್ರವರಿಯೊಳಗೆ ಆರಂಭವಾಗಲಿದೆ. ಇದು ಗಂಟೆಗೆ ೧೨೦ ಕಿಮೀ ವೇಗದಲ್ಲಿ ಸಂಚರಿಸಲಿದೆ.
- ಪ್ರಸ್ತುತ, ಭಾರತದಲ್ಲಿ ೬ ಸಾವಿರ ಎಚ್ ಪಿ ಸಾಮರ್ಥ್ಯದ ಇಂಜಿನ್ ಅನ್ನು ಬಳಕೆ ಮಾಡಲಾಗುತ್ತಿದೆ. ೨೦೨೦ರೊಳಗೆ ೩೫, ೨೦೨೧ರೊಳಗೆ ೬೦, ನಂತರ ೮೦೦ ಗುರಿ ತಲುಪುವವರೆಗೆ ಪ್ರತಿವರ್ಷ ೧೦೦ ಇಂಥ ರೈಲುಗಳ ಸಂಚಾರ ಆರಂಭಿಸುವುದು ಕೇಂದ್ರದ ಉದ್ದೇಶ.

## 7. CNR ರಾವ್ ಗೆ ವಾನ್ ಹಿಪ್ಪಲ್ ಪ್ರಶಸ್ತಿ

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆ ಗಾಗಿ

ಪ್ರಮುಖ ಸುದ್ದಿ

- ಅಮೇರಿಕಾ ಮೂಲದ ಮೆಟೀರಿಯಲ್ಸ್ ಸಂಶೋಧನಾ ಸಂಸ್ಥೆ ನೀಡುವ ಪ್ರತಿಷ್ಠಿತ ವಾನ್ ಹಿಪ್ಪಲ್ ಪ್ರಶಸ್ತಿಗೆ ಭಾರತದ ಹಿರಿಯ ವಿಜ್ಞಾನಿ ಹಾಗೂ ಭಾರತರತ್ನ ಪುರಸ್ಕೃತ ಪ್ರೊ. ಸಿ.ಎನ್. ಆರ್. ರಾವ್ ಪಾತ್ರರಾಗಿದ್ದಾರೆ. ಭೌತದ್ರವ್ಯ ಕ್ಷೇತ್ರದ ಸಂಶೋಧನೆಗೆ ರಾವ್ ನೀಡಿರುವ ಕೊಡುಗೆ ಆಧರಿಸಿ ಈ ಪ್ರಶಸ್ತಿ ಸಂದಿದೆ.
- ಈ ಮೂಲಕ, ಈ ಪ್ರಶಸ್ತಿಯನ್ನು ಪಡೆಯುತ್ತಿರುವ ಏಷ್ಯಾದ ಮೊದಲ ವಿಜ್ಞಾನಿ ಎನ್ನುಬ ಹೆಗ್ಗಳಿಕೆ ರಾವ್ ಅವರದ್ದಾಗಿದೆ.
- ಭಾರತದ ಭೌತದ್ರವ್ಯ ಸಂಶೋಧನಾ ಸಂಸ್ಥೆಯನ್ನು ರಾವ್ ೧೯೮೯ರಲ್ಲಿ ಸ್ಥಾಪಿಸಿದ್ದು, ಭೌತದ್ರವ್ಯ ಕ್ಷೇತ್ರದ ಸಂಶೋಧನೆಗೆ ಇದು ಮೀಸಲಾಗಿದೆ. ನ್ಯಾನೋ ಮಟೀರಿಯಲ್ಸ್, ಗ್ರಾಫೀನ್, ೨ಡಿ ಮೆಟೀರಿಯಲ್ಸ್, ಅಧಿವಾಹಕತೆ ಹಾಗೂ ಬೃಹತ್ ಕಾಂತ ನಿರೋಧಕ ಕ್ಶೆತ್ರಗಳಲ್ಲಿ ರಾವ್ ಅಪಾರ ಸಂಶೋಧನೆ ಕೈಗೊಂಡಿದ್ದಾರೆ.
- ನವೆಂಬರ್ ೨೯ರಂದು ಬೋಸ್ಟನ್ ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುವುದು. ವಾನ್ ಹಿಪ್ಪಲ್ ಪ್ರಶಸ್ತಿಯು ನಗದು, ಪ್ರಮಾಣಪತ್ರ ಹಾಗೂ ಟ್ರೋಫಿಯನ್ನು ಒಳಗೊಂಡಿದೆ

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**8. ಎಸ್ ಎಸ್ ಪಿಗೆ ಯುಎನ್ ಈಕ್ವೆಟರ್ ಪ್ರಶಸ್ತಿ**

ಪ್ರಾಮುಖ್ಯತೆ -ಪ್ರಿಲಿಮ್ಸ್ ಪರೀಕ್ಷೆಗಾಗಿ

ಪ್ರಮುಖ ಸುದ್ದಿ

- ಪುಣೆ ಮೂಲದ ಸ್ವಯಂ ಶಿಕ್ಷಣ್ ಪ್ರಯೋಗ ಎನ್ನುವ ಸರ್ಕಾರೇತರ ಸಂಸ್ಥೆ (ಎಸ್ ಎಸ್ ಪಿ)ಗೆ ವಿಶ್ವಸಂಸ್ಥೆಯ ಈಕ್ವೆಟರ್ ಪ್ರಶಸ್ತಿ ಪ್ರಧಾನ ಮಾಡಲಾಗಿದೆ. ಮಹಿಳಾ ಕೃಷಿಕರಿಗಾಗಿ ಕೆಲಸ ಮಾಡುತ್ತಿರುವ ಎಸ್ ಎಸ್ ಪಿ, ಇದುವರೆಗೆ ೨೦ ಸಾವಿರಕ್ಕೂ ಅಧಿಕ ಮಹಿಳಾ ಕೃಷಿಕರಿಗೆ ಸಹಾಯ ಮಾಡಿದೆ.

- ಮಹಾರಾಷ್ಟ್ರದ ಮರಾಠವಾಡ ವಲಯದ ಮಹಿಳಾ ಕೃಷಿಕರು ಈ ಸಂಸ್ಥೆಯ ಸಹಕಾರದೊಂದಿಗೆ ಬಡತನದಿಂದ ಮುಕ್ತಿ ಪಡೆದು, ಸ್ವಾವಲಂಬಿಯಾಗಿದ್ದರೆ. ಇತ್ತೀಚೆಗಷ್ಟೇ ಭಾರತದ ನೀತಿ ಆಯೋಗದ ಪ್ರಶಸ್ತಿಗೆ ಪಾತ್ರರಾದ ಕಮಲ್ ಕುಂಭರ್ ಹಾಗೂ ಸಂಸ್ಥೆಯ ಗೋದಾವರಿ ಡಾಂಗೆ ವಿಶ್ವಸಂಸ್ಥೆ ಅಧಿವೇಶನದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಸ್ವೀಕರಿಸಿದರು.
- ಎಸ್ ಎಸ್ ಪಿ ಸಂಸ್ಥೆಯ ಪ್ರತಿಕೂಲ ಹವಾಮಾನದಲ್ಲಿಯೂ ಬೆಳೆಯುವಂಥ ಕೃಷಿ ಪದ್ದತಿಗಳನ್ನು ಕಿರು ಜಮೀನು ಹೊಂದಿರುವ ಮಹಿಳೆಯರಿಗೆ ಪರಿಚಯಿಸಿಕೊಟ್ಟು ಆಹಾರ ಭದ್ರತೆ, ಆದಾಯ ಭದ್ರತೆಗೆ ಕಾರಣವಾಗಿದೆ. ಕಳೆದ ವರ್ಷವೂ ಈ ಸಂಸ್ಥೆ ವಿಶ್ವಸಂಸ್ಥೆ ಹವಾಮಾನ ಬದಲಾವಣೆ ವಿಭಾಗದ ಪ್ರಶಸ್ತಿಗೆ ಪಾತ್ರವಾಗಿತ್ತು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ